ಹುಬ್ಬಳ್ಳಿ

ಶನಿವಾರ, 20 ಜೂನ್ 2026

ಸಂಪುಟ 16, ಸಂಚಿಕೆ 87, ಪುಟಗಳು 12

■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ

₹5

RNI No.KARKAN/2011/64413

hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಫುಟ್‌ಪಾತ್‌ನಲ್ಲಿ ನಡೆ ಮೂಲಭೂತ ಹಕ್ಕು | ೦೭ | ಇಂದು ಬಂಗಾಳಕ್ಕೆ ಪ್ರಧಾನಿ ಮೋದಿ | ೦೭ | ಟ್ರಂಪ್‌ಗೆ ಮೆಲೋನಿ ಛೀಮಾರಿ | ೦೭

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಮಘೆ

ದಿನದ ಮಾತು

ಒಬ್ಬನಲ್ಲಿ ನೆಲೆಸಿರುವ ಉತ್ಸಾಹವೇ ಅವನ ಸ್ಥಿರವಾದ ಆಸ್ತಿ ಆಗುತ್ತದೆ.

▲ ತಿರುವಳ್ಳುವರ್

ಸಂಸ್ಕಾರ ಬಯಸುವ ವಿಶುದ್ಧ ಪೂರ್ಣ ಪರಿಪೂರ್ಣ

• ಪೂರ್ಣಪ್ರಜ್ಞ ಬೇಲೂರು

• ಪುಟ ೬

ಕಿರುಸುದ್ದಿ

ಟೆಲಿಗ್ರಾಮ್ ನಿಷೇಧವನ್ನು ಎತ್ತಿಹಿಡಿದ ದಿಲ್ಲಿ ಹೈಕೋರ್ಟ್

• **ಹೊಸದಿಲ್ಲಿ:** ನೀಟ್-ಯುಜಿ ಮರುಪರೀಕ್ಷೆ ಹಿನ್ನೆಲೆಯಲ್ಲಿ ಜೂ.22ರವರೆಗೆ ಟೆಲಿಗ್ರಾಮ್ ಮೇಲೆ ಕೇಂದ್ರ ಸರ್ಕಾರ ಹೇರಿದ್ದ ತಾತ್ಕಾಲಿಕ ನಿಷೇಧವನ್ನು ದಿಲ್ಲಿ ಹೈಕೋರ್ಟ್ ಶುಕ್ರವಾರ ಎತ್ತಿಹಿಡಿದಿದೆ. ಟೆಲಿಗ್ರಾಮ್ ಸಲ್ಲಿಸಿದ್ದ ದೂರನ್ನು ದಿಲ್ಲಿ ನ್ಯಾಯಪೀಠ ತಿರಸ್ಕರಿಸಿದೆ. ಜೂ.30ರವರೆಗೆ ಮೆಸೇಜ್ ಎಡಿಟಿಂಗ್ ಸೌಲಭ್ಯ ನಿರ್ಬಂಧಿಸಲು ಕೇಂದ್ರ ಸರ್ಕಾರ ಆದೇಶಿಸಿತ್ತು. ಕೇಂದ್ರ ಸರ್ಕಾರ ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 69ಎ ಅನ್ವಯದಲ್ಲಿ ಟೆಲಿಗ್ರಾಮ್ ಮೇಲೆ ನಿಷೇಧ ಹೇರಿದ ಪ್ರಕ್ರಿಯೆ ನ್ಯಾಯಬದ್ಧವಾಗಿದೆ ಎಂದು ನ್ಯಾಯಮೂರ್ತಿ ತೇಜಸ್ ಕರಿಯಾ ಅವರ ನೇತೃತ್ವದ ನ್ಯಾಯಪೀಠ ಹೇಳಿದೆ.

ಪ್ರತಿ ತಿಂಗಳು ಸಭೆ ನಡೆಸಿ ಸಚಿವ ಡಾ.ಯತೀಂದ್ರ

• ಪುಟ ೫

ಅಯೋಧ್ಯೆ ದೇಣಿಗೆ ನಿಧಿ: ತಪ್ಪಿತಸ್ಥರಿಗೆ ಶಿಕ್ಷೆ ಖಚಿತ

• ಪುಟ ೭

ಜಪಾನ್‌ನಲ್ಲಿ 5 ದಿನಗಳ ಭಗವದ್ಗೀತಾ ಮಹೋತ್ಸವ

• ಪುಟ ೭

ಸಮರತಂತ್ರ ಸಾಧನಗಳ ಅರ್ಹತೆಯಲ್ಲಿ ರಾಜಿಯಿಲ್ಲ

• ಪುಟ ೭

ಇಬ್ಬರು ಶಂಕಿತ ಉಗ್ರ ಸಹಚರರ ಬಂಧನ

• ಪುಟ ೭

ಭಾರತೀಯ ಸಂಸ್ಕೃತಿಯ ಉಡುಗೊರೆ ನೀಡಿದ ಮೋದಿ

• ಪುಟ ೭



ನೀಟ್ ಮರುಪರೀಕ್ಷೆ, ಸಂಪೂರ್ಣ ಸುರಕ್ಷತೆ

• ಪುಟ ೭

ಸುದ್ದಿ ಸಮಗ್ರ

ಗೃಹಲಕ್ಷ್ಮಿಯರಿಗೆ ಧ್ವನಿ ಸಂದೇಶ | ಅನ್ಯರಾಜ್ಯ ಖಾತೆಗೆ ತಡೆ: ಸಿಎಂ

ರಾಜ್ಯದವರಿಗೇ ಗ್ಯಾರಂಟಿ

• **ಬೆಂಗಳೂರು:** ಗೃಹಲಕ್ಷ್ಮಿ ಹಣ ಫಲಾನುಭವಿಗಳ ಖಾತೆಗೆ ಜಮೆಯಾದ ತಕ್ಷಣ ಅವರ ಮೊಬೈಲ್‌ಗೆ ವಾಯ್ಸ್ ಮೆಸೇಜ್ ಮೂಲಕ ಖಚಿತಪಡಿಸಬೇಕು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ತಮ್ಮ ಅಧ್ಯಕ್ಷತೆಯಲ್ಲಿ ವಿಧಾನಸೌಧದ ಜರುಗಿದ ಗ್ಯಾರಂಟಿ ಯೋಜನೆಗಳ ಪರಿಶೀಲನಾ ಸಭೆ ನಡೆಸಿದ ಅವರು, ಫಲಾನುಭವಿಗಳ ಬ್ಯಾಂಕ್ ಖಾತೆಗಳು ಕರ್ನಾಟಕ ರಾಜ್ಯದಲ್ಲಿ ಮಾತ್ರ ಇರಬೇಕು. ಇತರೆ ರಾಜ್ಯಗಳಲ್ಲಿರುವ ಖಾತೆಗಳಿಗೆ ಹಣ ಹೋಗುತ್ತಿರುವುದು ಪತ್ತೆಯಾಗಿದೆ. ಇವುಗಳಿಗೆ ತಡೆ ಹಾಕಬೇಕು. ನಮ್ಮ ರಾಜ್ಯದ ಯೋಜನೆಗಳು ನಮ್ಮ



ರಾಜ್ಯದ ಫಲಾನುಭವಿಗಳಿಗೆ ಮಾತ್ರ ಸಿಗಬೇಕು. ಇತರೆ ರಾಜ್ಯದ ಮತದಾರರಿಗೆ ಯೋಜನೆಯ ಲಾಭ ಆಗುತ್ತಿದೆ. ಇದನ್ನು ತಡೆಯಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು. ಸಭೆಯಲ್ಲಿ ಸಚಿವರಾದ ಕೆ.ಎಚ್.ಮುನಿಯಪ್ಪ, ಕೆ.ಜೆ. ಜಾರ್ಜ್, ಪ್ರಿಯಾಂಕ್ ಖರ್ಗೆ, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಇದ್ದರು.

ಎಜಿ ವರದಿ ಬಗ್ಗೆ ಚರ್ಚೆ: ಒಂದೇ ಖಾತೆಯಲ್ಲಿ ಹಲವು ಫಲಾನುಭವಿಗಳು ಗೃಹಲಕ್ಷ್ಮಿ ಹಣ ಪಡೆಯುತ್ತಿದ್ದಾರೆ. ಮೂರು ಲಕ್ಷ ಕಂತುಗಳಲ್ಲಿ ಒಟ್ಟು 60 ಕೋಟಿ ರೂ. ಹೋಗಿದೆ ಎನ್ನುವ ಬಗ್ಗೆ ಎಜಿ ಅವರ ವರದಿ ಬಂದಿದೆ. ಒಬ್ಬರೇ ಹಲವು ಖಾತೆಗಳನ್ನು ನೋಂದಾಯಿಸಿರುವುದನ್ನು ಎಜಿ ವರದಿಯಲ್ಲಿ ಉಲ್ಲೇಖವಾಗಿದೆ. ಹಿಂದೆ ಪಡೆದ ಅರ್ಜಿಗಳಲ್ಲಿ ಉಲ್ಲೇಖವಾಗಿರುವ ಅಂಶಗಳ ನೈಜತೆ ಬಗ್ಗೆ ಪರಿಶೀಲನೆ ನಡೆಸದಿರುವ ಬಗ್ಗೆ ಪ್ರಸ್ತಾಪಿಲಾಯಿತು. ಶಕ್ತಿ ಯೋಜನೆಯು ಮೇ ಅಂತ್ಯದವರೆಗೆ 763 ಕೋಟಿ ಟ್ರಿಪ್ ಯೋಜನೆಯ ಫಲಾನುಭವಿಗಳಾಗಿದ್ದು, ಅವರಿಗೆ ವಿನಿಯೋಗಿಸಲಾದ ಟಿಕೆಟ್ ಮೌಲ್ಯ 20047.69 ಕೋಟಿ ರೂ.ಗಳು. ➡ಪುಟ ೪

> ಅನುಕೂಲಸ್ಥರು ಯಾರಾದರೂ ಗ್ಯಾರಂಟಿ ಯೋಜನೆಗಳನ್ನು ಸ್ವಯಂಪ್ರೇರಿತವಾಗಿ ಬಿಟ್ಟುಕೊಡುವ ಮೂಲಕ ಇತರೆ ಅರ್ಹ ಫಲಾನುಭವವಿಗಳಿಗೆ ನೆರವಾಗಲು ಮುಂದಾದರೆ ಅಂತಹವರನ್ನು ಪ್ರೋತ್ಸಾಹಿಸಬೇಕು.
>
> ■ **ಡಿ.ಕೆ.ಶಿವಕುಮಾರ್**, ಮುಖ್ಯಮಂತ್ರಿ



ಸಭೆಯ ಮುಖ್ಯಾಂಶ

1. ಎಸ್‌ಐಆರ್ ಸಂದರ್ಭದಲ್ಲಿ ಫಲಾನುಭವಿಗಳು ತಮ್ಮ ಹೆಸರು ಬಿಟ್ಟು ಹೋಗದಂತೆ ನೋಡಿಕೊಳ್ಳಬೇಕು.
2. ಅನ್ನಭಾಗ್ಯ ಯೋಜನೆಯಲ್ಲಿ 11561 ಕೋಟಿ ರೂ.ಗಳನ್ನು ಡಿಬಿಟಿ ಮೂಲಕ ಫಲಾನುಭವಿಗಳ ಖಾತೆಗೆ ವರ್ಗಾವಣೆ
3. ಜುಲೈ 2023ರಿಂದ ಡಿಸೆಂಬರ್ 2024ರವರೆಗೆ ಒಟ್ಟು 72,02,33,970 ಫಲಾನುಭವಿಗಳಿಗೆ ಒಟ್ಟು 11561.05 ಕೋಟಿ ರೂ.ಗಳನ್ನು ಡಿಬಿಟಿ ಮೂಲಕ ವರ್ಗಾವಣೆ
4. 2025ನೇ ಫೆಬ್ರವರಿಯಿಂದ ಇಲ್ಲಿಯವರೆಗೆ ಒಟ್ಟು 4,44,67,942 ಫಲಾನುಭವಿಗಳಿಗೆ ಪ್ರತಿ ತಿಂಗಳು ಅನ್ನಭಾಗ್ಯ ಯೋಜನೆಯಲ್ಲಿ ಹೆಚ್ಚುವರಿಯಾಗಿ 5 ಕೆಜಿ ಅಕ್ಕಿ ವಿತರಣೆ
5. ಕಾಳಸಂತೆಯಲ್ಲಿ ಅನ್ನಭಾಗ್ಯ ಅಕ್ಕಿ ಅಕ್ರಮ ಮಾರಾಟವಾಗುತ್ತಿರುವುದನ್ನು ತಡೆಯಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು.

ನೈಜ ಫಲಾನುಭವಿಗಳಿಗೆ ತೊಂದರೆ ಆಗಬಾರದು

ಮೃತಪಟ್ಟಿರುವ ಫಲಾನುಭವಿಗಳಿಗೂ ಗೃಹಲಕ್ಷ್ಮಿ ಹಣ ಹೋಗುತ್ತಿರುವುದನ್ನು ಪತ್ತೆಯಾಗಿದೆ. ಈ ರೀತಿ ದುರುಪಯೋಗ ಆಗಬಾರದು. ಹಲವು ಫಲಾನುಭವಿಗಳು ಬ್ಯಾಂಕ್ ಸಾಲ ಪಡೆದಿರುತ್ತಾರೆ. ಸಾಲದ ಖಾತೆಗೆ ಗೃಹಲಕ್ಷ್ಮಿ ಹಣ ಹೋದ ತಕ್ಷಣ ಆ ಹಣ ಸಾಲದ ಮೊತ್ತಕ್ಕೆ ಜಮೆ ಆಗಿಬಿಡುತ್ತದೆ. ಆದ್ದರಿಂದ ಅಂತಹ ಫಲಾನುಭವಿಗಳು ಖಾತೆ ಬದಲಾಯಿಸಿರುತ್ತಾರೆ. ಇಂತಹ ಫಲಾನುಭವಿಗಳಿಗೆ ತೊಂದರೆ ಆಗಬಾರದು ಎಂದು ಸಿಎಂ ಸೂಚಿಸಿದರು. ಗೃಹಜ್ಯೋತಿ ಗ್ಯಾರಂಟಿ ಯೋಜನೆ ಜಾರಿ ಆಗುವಾಗ ಹೆಚ್ಚಿನ ದುರುಪಯೋಗ ಆಗದ ಹಾಗೆ ಎಚ್ಚರಿಕೆ ವಹಿಸಿದ್ದರು. ಇದೇ ಎಚ್ಚರಿಕೆ ಇತರೆ ಯೋಜನೆಗಳಲ್ಲೂ ಅನುಸರಿಸಿದ್ದರೆ, ದುರುಪಯೋಗದ ಪ್ರಮಾಣ ಕಡಿಮೆ ಆಗುತ್ತಿತ್ತು ಎಂದು ಡಿಕೆಶಿ ಅಭಿಪ್ರಾಯಪಟ್ಟರು. ➡ಪುಟ ೪

ಗೃಹಲಕ್ಷ್ಮಿ | ಗೃಹ ಜ್ಯೋತಿ

ಪರಿಷತ್ ಚುನಾವಣೆಯಲ್ಲಿ ಅಡ್ಡಮತದಾನ

ಸತ್ಯಾಸತ್ಯತೆ ತಿಳಿಯಲು ತಂಡ ರಚಿಸಿದ ಬಿಜೆಪಿ

• **ಬೆಂಗಳೂರು:** ವಿಧಾನ ಪರಿಷತ್‌ನ ಏಳು ಸ್ಥಾನಗಳಿಗೆ ದ್ವೈವಾರ್ಷಿಕ ಚುನಾವಣೆಯಲ್ಲಿ ಗುರುವಾರ ನಡೆದ ಮತದಾನ ಪ್ರಕ್ರಿಯೆಯಲ್ಲಿ ಬಿಜೆಪಿ ಶಾಸಕರು ಅಡ್ಡ ಮತದಾನ ನಡೆಸಿರುವ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ರಾಜ್ಯ ಬಿಜೆಪಿ, ಅಡ್ಡ ಮತದಾನದ ಸತ್ಯಾಸತ್ಯತೆ ಮತ್ತು ವಾಸ್ತವಿಕತೆಯನ್ನು ತಿಳಿಯಲು ತಂಡ ರಚಿಸಿದೆ.

ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ, ರಾಜ್ಯ ಉಪಾಧ್ಯಕ್ಷ ಎನ್. ಮಹೇಶ್ ಮತ್ತು ಶಾಸಕ ಮಹೇಶ್ ಟೆಂಗಿನಕಾಯಿ ಅವರನ್ನೊಳಗೊಂಡ ತಂಡ ರಚಿಸಿ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಆದೇಶ ಹೊರಡಿಸಿದ್ದಾರೆ. ಈ ತಂಡವು ಅಡ್ಡ ಮತದಾನಕ್ಕೆ ಸಂಬಂಧಿಸಿದಂತೆ ಸಮಗ್ರ ವರದಿಯನ್ನು ಜೂ.25ರೊಳಗೆ ನೀಡಲು ವಿಜಯೇಂದ್ರ ಸೂಚಿಸಿದ್ದಾರೆ.



> ಬಿಜೆಪಿ ಟಿಕೆಟ್‌ನಲ್ಲಿ ಗೆದ್ದು ಚುನಾವಣೆಯಲ್ಲಿ ಈ ರೀತಿ ಮತದಾನ ಮಾಡುತ್ತಾರೆ ಎಂದರೆ ಅವರಿಗೆ ಗೆರೆ ಎಳೆಯುವ ಕೆಲಸವನ್ನು ಪಕ್ಷ ಮಾಡಲಿದೆ. ಎಲ್ಲಕ್ಕೂ ಒಂದು ಮಿತಿ ಇದೆ. ಬಿಜೆಪಿಯಲ್ಲಿನ ಸಣ್ಣಪುಟ್ಟ ಗೊಂದಲದಿಂದಾಗಿ ಕಾರ್ಯಕರ್ತರು ಬೇಸತ್ತಿದ್ದಾರೆ. ಈಗ ಇಂತಹ ಬೆಳವಣಿಗೆ ನಡೆದಿದೆ. ಇದರಿಂದ ನೋವಾಗಿದೆ.
>
> ■ **ಬಿ.ವೈ.ವಿಜಯೇಂದ್ರ**, ಬಿಜೆಪಿ ರಾಜ್ಯಾಧ್ಯಕ್ಷ

ಮೊದಲೇ ತಿಳಿದಿತ್ತು: ಎಚ್ಡಿಕೆ

• **ಬೆಂಗಳೂರು:** ವಿಧಾನಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ನಡೆಯುತ್ತದೆ ಎಂಬುದು ಮೊದಲೇ ತಿಳಿದಿತ್ತು. ಆದರೆ, ಇದರಿಂದ ನಾನು ವಿಚಲಿತನಾಗಿಲ್ಲ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ತಿಳಿಸಿದರು.

ಮುಂದಿನ ವಾರ ಹೈಕಮಾಂಡ್ ಭೇಟಿ: ಆರ್.ಅಶೋಕ್

• **ಬೆಂಗಳೂರು:** ಮುಂದಿನ ವಾರ ಬಂದು ಭೇಟಿ ಮಾಡುವಂತೆ ಕೇಂದ್ರದ ನಾಯಕರು ಸೂಚಿಸಿದ್ದಾರೆ. ಆ ಸಮಯದಲ್ಲಿ ವರದಿ ನೀಡುತ್ತೇವೆ. ಅಡ್ಡ ಮತದಾನ ಮಾಡಿದವರು ಮುಂದೆ ಶಾಸಕರಾಗದಂತೆ ನೋಡಿಕೊಳ್ಳುತ್ತೇವೆ ಎಂದು ವಿಪಕ್ಷ ನಾಯಕ ಆರ್. ಅಶೋಕ್ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಡ್ಡ ಮತದಾನ ಮಾಡಿದ್ದು ಯಾರೆಂದು ತಿಳಿಯಲು ಸ್ವಲ್ಪ ಸಮಯ ಬೇಕಾಗುತ್ತದೆ. ಕೆಲವರು ಹಣ ಪಡೆದು ಮತ ಚಲಾಯಿಸಿದ್ದಾರೆ. ಕೋಟ್ಯಂತರ ಹಣ ಹಾಗೂ ಅನುದಾನದ ವಿಚಾರ ಹೊರಬರಲಿದೆ. ಅಡ್ಡ ಮತದಾನ ಮಾಡಿರುವುದರ ಬಗ್ಗೆ ಹಲವು ಮಾಹಿತಿ ಬಂದಿದೆ. ಈ ಬಗ್ಗೆ ಸಮಿತಿ ರಚಿಸಿದ್ದು, ಸತ್ಯ ಹೊರಬರಲಿದೆ. ಪಕ್ಷಕ್ಕೆ ಚೂರಿ ಹಾಕಿದ ಖದೀಮರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದರು. ಮತದಾನದ ಸಮಯದಲ್ಲಿ ಯಾರು ಎಲ್ಲಿದ್ದರು, ಯಾರು ಯಾರೊಂದಿಗೆ ಮಾತಾಡಿದ್ದರು ಎಂಬ ಮಾಹಿತಿ ಸಂಗ್ರಹಿಸಲಾಗುತ್ತಿದೆ. ➡ಪುಟ ೪

ಕರ್ನಾಟಕದ ವಿರುದ್ಧ ಅಸೆಂಬ್ಲಿಯಲ್ಲಿ ಸರ್ವಾನುಮತ ನಿರ್ಣಯ

ಮೇಕೆದಾಟುಗೆ ತ.ನಾಡು ಅಡ್ಡಗಾಲು

• **ಚೆನ್ನೈ:** ಬೆಂಗಳೂರು ನಗರದ ಕುಡಿಯುವ ನೀರಿನ ಅಗತ್ಯ ಪೂರೈಸುವ ಉದ್ದೇಶದ ಕರ್ನಾಟಕದ ಮಹತ್ವಾಕಾಂಕ್ಷಿ ಮೇಕೆದಾಟು ಸಮತೋಲನ ಜಲಾಶಯ ಯೋಜನೆಗೆ ತಮಿಳುನಾಡು ಮತ್ತೊಮ್ಮೆ ಅಡ್ಡಗಾಲು ಹಾಕಿದೆ. ಯೋಜನೆ ವಿರೋಧಿಸಿ ತಮಿಳುನಾಡು ವಿಧಾನಸಭೆ ಶುಕ್ರವಾರ ಸರ್ವಾನುಮತ ನಿರ್ಣಯ ಅಂಗೀಕರಿಸಿದೆ.



ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಮಂಡಿಸಿದ ನಿರ್ಣಯಕ್ಕೆ ವಿರೋಧ ಪಕ್ಷದ ನಾಯಕ ಉದಯನಿಧಿ ಸ್ಟಾಲಿನ್, ಎಐಎಡಿಎಂಕೆ ಮುಖ್ಯಸ್ಥ ಎಡಪ್ಪಾಡಿ ಕೆ. ಪಳನಿಸ್ವಾಮಿ ಸೇರಿದಂತೆ ಎಲ್ಲ ಪಕ್ಷಗಳ ಸದಸ್ಯರು ಬೆಂಬಲ ವ್ಯಕ್ತಪಡಿಸಿದರು. ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಯೋಜನೆ ಅನುಷ್ಠಾನಕ್ಕೆ ಮುಂದಾಗಿದ್ದರೂ, ತಮಿಳುನಾಡು ಕಾಂಗ್ರೆಸ್ ಘಟಕ ನಿರ್ಣಯವನ್ನು ಬೆಂಬಲಿಸಿರುವುದು ಗಮನ ಸೆಳೆದಿದೆ. ಕಾವೇರಿ ನದಿಗೆ ಅಡ್ಡಲಾಗಿ ಮೇಕೆದಾಟುವಿನಲ್ಲಿ ಅಣೆಕಟ್ಟು ನಿರ್ಮಿಸಲು ಕರ್ನಾಟಕ ಸರ್ಕಾರ ಏಕಪಕ್ಷೀಯವಾಗಿ ಪ್ರಯತ್ನಿಸುತ್ತಿದೆ. ➡ಪುಟ ೪

ಯಾವುದೇ ಅನುಮತಿ ನೀಡದಂತೆ ಕೇಂದ್ರಕ್ಕೆ ತ.ನಾಡು ಒತ್ತಾಯ




> ಮೇಕೆದಾಟು ವಿಚಾರದ ಬಗ್ಗೆ ನ್ಯಾಯಾಲಯ ನಿರ್ದೇಶನ ನೀಡಿದೆ. ಸುಪ್ರೀಂ ಕೋರ್ಟ್ ತ್ರಿಸದಸ್ಯ ಪೀಠ ತೀರ್ಪು ಬಂದ ಬಳಿಕ ಮತ್ತೇನಿದೆ? ಕರ್ನಾಟಕ 177 ಟಿಎಂಸಿ ನೀರು ಬಿಡಬೇಕು ಎಂದು ನೀಡಿದ ನಿರ್ದೇಶನವನ್ನು ನಾವು ಒಪ್ಪಿಕೊಂಡಿಲ್ಲವೆ.
>
> ■ **ಡಿ.ಕೆ.ಶಿವಕುಮಾರ್**, ಮುಖ್ಯಮಂತ್ರಿ

ಪಿಎಂ-ವಿಕಸಿತ ಭಾರತ ಉದ್ಯೋಗ ಯೋಜನೆಗೆ ವೇಗ: ಮೋದಿ

70 ಲಕ್ಷಕ್ಕೂ ಹೆಚ್ಚು ಯುವಕರಿಗೆ ನೌಕರಿ

• **ಹೊಸದಿಲ್ಲಿ:** ಪಿಎಂ-ವಿಕಸಿತ ಭಾರತ್ ಉದ್ಯೋಗ ಯೋಜನೆಯಲ್ಲಿ (ಪಿಎಂ-ವಿಬಿಆರ್‌ವೈ) ದೇಶಾದ್ಯಂತ ಇದುವರೆಗೆ 70 ಲಕ್ಷಕ್ಕೂ ಹೆಚ್ಚು ಜನರಿಗೆ ಉದ್ಯೋಗ ಲಭಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ತಿಳಿಸಿದರು. ಇದೇ ವೇಳೆ 15 ಲಕ್ಷ ಹೊಸ ಉದ್ಯೋಗ ಸೃಷ್ಟಿಗೆ ಉತ್ತೇಜನ ನೀಡುವ ಉದ್ದೇಶದಿಂದ 2,400 ಕೋಟಿ ರೂ. ಪ್ರೋತ್ಸಾಹಧನವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ನೇರ ಲಾಭ ವರ್ಗಾವಣೆ (ಡಿಬಿಟಿ) ಮೂಲಕ ಜಮಾ ಮಾಡಿದರು.

ಕಳೆದ ವರ್ಷದ ಆಗಸ್ಟ್‌ನಲ್ಲಿ ಆರಂಭವಾದ ಈ ಯೋಜನೆ ಮೊದಲ ಬಾರಿಗೆ ಉದ್ಯೋಗ ಪಡೆಯುವ ಯುವಕರಿಗೆ ನೆರವು ನೀಡುವುದರ ಜತೆಗೆ ವಿವಿಧ ಕ್ಷೇತ್ರಗಳಲ್ಲಿ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ವಿಸ್ತರಿಸುವ ಗುರಿ ಹೊಂದಿದೆ. ➡ಪುಟ ೪



- ಫಲಾನುಭವಿಗಳ ಖಾತೆಗೆ 2,400 ಕೋಟಿ ರೂ. ಪ್ರೋತ್ಸಾಹಧನ ಜಮೆ
- 15 ಲಕ್ಷ ಹೊಸ ಉದ್ಯೋಗ ಸೃಷ್ಟಿಗೆ ಉತ್ತೇಜನ
- ಸಾಮಾಜಿಕ ಭದ್ರತೆಯ ವ್ಯಾಪ್ತಿ ವಿಸ್ತರಣೆ

ಭಾರತ ತಲುಪಿದ ದಿಶಾ ಹಡಗು

• **ಹೊಸದಿಲ್ಲಿ:** ಮಾಲ್ಟಾ ಧ್ವಜ ಹೊಂದಿರುವ ದ್ರವೀಕೃತ ನೈಸರ್ಗಿಕ ಅನಿಲ(ಎಲ್‌ಎನ್‌ಜಿ) ಸಾಗಣೆ ಹಡಗು ದಿಶಾ ಶುಕ್ರವಾರ ಬೆಳಗ್ಗೆ ಗುಜರಾತ್‌ನ ದಹೇಜ್ ಬಂದರಿಗೆ ಸುರಕ್ಷಿತವಾಗಿ ತಲುಪಿದೆ. ಹಡಗು ಪೆಟ್ರೋನೆಟ್ ಎಲ್‌ಎನ್‌ಜಿ ಜೆಟ್ಟಿಯಲ್ಲಿ ಯಶಸ್ವಿಯಾಗಿ ಲಂಗರು ಹಾಕಿರುವುದಾಗಿ ಭರೂಚ್ ಬಂದರು ಪ್ರಾಧಿಕಾರ ತಿಳಿಸಿದೆ. 62,370 ಮೆಟ್ರಿಕ್ ಟನ್ ಎಲ್‌ಎನ್‌ಜಿ ಸಾಗಿಸುತ್ತಿದ್ದ ದಿಶಾ ಹಡಗು, ಪಶ್ಚಿಮ ಏಷ್ಯಾದಲ್ಲಿನ ಉದ್ವಿಗ್ನ ಪರಿಸ್ಥಿತಿಯ ನಡುವೆಯೂ ಹಾರ್ಮುಜ್ ಜಲಸಂಧಿಯನ್ನು ಯಶಸ್ವಿಯಾಗಿ ದಾಟಿ ಭಾರತಕ್ಕೆ ತಲುಪಿರುವುದು ಮಹತ್ವದ ಬೆಳವಣಿಗೆಯಾಗಿದೆ. ಗುಜರಾತ್‌ನ ದಹೇಜ್‌ನಲ್ಲಿರುವ ಎಲ್‌ಎನ್‌ಟಿ ಟರ್ಮಿನಲ್ ಪ್ರಮುಖ ಅನಿಲ ಆಮದು ಕೇಂದ್ರಗಳಲ್ಲಿ ಒಂದಾಗಿದೆ. ಆಮದು ಮಾಡಿಕೊಂಡ ಎಲ್‌ಎನ್‌ಜಿಯನ್ನು ಕೈಗಾರಿಕೆಗಳು, ವಿದ್ಯುತ್ ಉತ್ಪಾದನಾ ಘಟಕಗಳು, ದೇಶೀಯ ಬಳಕೆಯಲ್ಲಿ ಬಳಸಲು ವಿವಿಧ ರಾಜ್ಯಗಳಿಗೆ ವಿತರಿಸಲಾಗುತ್ತದೆ. ➡ಪುಟ ೪

ಹಾರ್ಮುಜ್ ದಾಟಿ ಸುರಕ್ಷಿತವಾಗಿ ಬಂದ ಎಲ್‌ಎನ್‌ಜಿ ಹಡಗು

ಬೆಂಗಳೂರಿನಲ್ಲಿ ವಿಶ್ವ ದಾಖಲೆಯ ಕಾರ್ಯಕ್ರಮ

ಹಸಿರೀಕರಣಕ್ಕಾಗಿ 15 ಲಕ್ಷ ಸಸಿ

• **ಬೆಂಗಳೂರು:** ರಾಜ್ಯ ಸರ್ಕಾರವು ಬೆಂಗಳೂರಿನಲ್ಲಿ ಇದುವರೆಗೆ ಕೈಗೊಳ್ಳಲಾದ ಅತಿದೊಡ್ಡ ನಗರ ಹಸಿರೀಕರಣ ಕಾರ್ಯಕ್ರಮಗಳಲ್ಲಿ 15 ಲಕ್ಷ ಸಸಿಗಳನ್ನು ನೆಡುವ



ಕಾರ್ಯಕ್ರಮವೂ ಒಂದಾಗಿದ್ದು, ಇದು ವಿಶ್ವ ದಾಖಲೆಯಾಗಲಿದೆ, ನಗರದ ಪ್ರತಿಯೊಬ್ಬ ನಾಗರಿಕರೂ ಈ ಐತಿಹಾಸಿಕ ಅಭಿಯಾನದ ಪಾಲುದಾರರಾಗಬೇಕು ಎಂದು ಬಿಡಿಎ ಅಧ್ಯಕ್ಷ, ಶಾಸಕ ಎನ್.ಎ.ಹ್ಯಾರಿಸ್ ತಿಳಿಸಿದರು.

ಖಾಸಗಿ ಹೋಟೆಲ್‌ನಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಇದೇ 27ರಂದು ನಾಡಪ್ರಭು ಕೆಂಪೇಗೌಡ ಜಯಂತಿಯ ಅಂಗವಾಗಿ ನಗರದಾದ್ಯಂತ 15 ಲಕ್ಷ ಸ್ಥಳೀಯ ಸಸಿಗಳನ್ನು ನೆಡುವ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಟೊಂಕಕಟ್ಟಿನಿಂತಿದ್ದೇವೆ. ಈ ಅಭಿಯಾನವು ಪರಿಸರ ಸುಸ್ಥಿರತೆಯತ್ತ ಬೆಂಗಳೂರಿನ ಬದ್ಧತೆಯನ್ನು ಮತ್ತಷ್ಟು ಬಲಪಡಿಸುತ್ತದೆ ಎಂದು ತಿಳಿಸಿದರು.

15 ಲಕ್ಷ ಸಸಿಗಳ ನೆಡುವ ಈ ಬೃಹತ್ ಕಾರ್ಯಕ್ರಮವು ಬೆಂಗಳೂರಿನ ಹಸಿರು ಹೊದಿಕೆಯನ್ನು ವಿಸ್ತರಿಸುವುದು, ನಗರ ಉಷ್ಣತೆಯ ಪರಿಣಾಮವನ್ನು ತಗ್ಗಿಸುವುದು. ➡ಪುಟ ೪



> ಬಿಡಿಎ ವತಿಯಿಂದ 15 ಲಕ್ಷ ಸ್ಥಳೀಯ ಸಸಿಗಳನ್ನು ನೆಡುವುದು ಕೇವಲ ಸಸಿ ನೆಡುವ ಕಾರ್ಯಕ್ರಮವಲ್ಲ; ಇದು ನಮ್ಮ ನಗರದ ಪರಿಸರ ಭವಿಷ್ಯವನ್ನು ಸುರಕ್ಷಿತಗೊಳಿಸುವ ಜನಾಂದೋಲನವಾಗಿದೆ. 15 ಲಕ್ಷ ಸ್ಥಳೀಯ ಸಸಿಗಳ ನೆಡುವ ಮೂಲಕ ನಾವು ಭವಿಷ್ಯದ ಪೀಳಿಗೆಗಳಿಗೆ ಶಾಶ್ವತ ಹಸಿರು ಪರಂಪರೆಯನ್ನು ನಿರ್ಮಿಸುತ್ತಿದ್ದೇವೆ.
>
> ■ **ಎನ್.ಎ.ಹ್ಯಾರಿಸ್**, ಬಿಡಿಎ ಅಧ್ಯಕ್ಷ, ಶಾಸಕ

ಮೋದಿ ವಿದೇಶ ಪ್ರವಾಸ ಅತ್ಯಂತ ಫಲಪ್ರದ: ಬಿಜೆಪಿ

• **ಹೊಸದಿಲ್ಲಿ:** ಪ್ರಧಾನಿ ನರೇಂದ್ರ ಮೋದಿಯವರ ಇತ್ತೀಚಿನ ಫ್ರಾನ್ಸ್ ಮತ್ತು ಸ್ಲೊವಾಕಿಯಾ ಪ್ರವಾಸವನ್ನು ಬಿಜೆಪಿ ಅತ್ಯಂತ ಫಲಪ್ರದ ಎಂದು ಬಣ್ಣಿಸಿದ್ದು, ಅದರ ಸಕಾರಾತ್ಮಕ ಹಾಗೂ ದೂರಗಾಮಿ



ಪರಿಣಾಮಗಳು ಮುಂದಿನ ದಿನಗಳಲ್ಲಿ ಭಾರತದಲ್ಲಿ ಸ್ಪಷ್ಟವಾಗಿ ಗೋಚರಿಸಲಿವೆ ಎಂದು ತಿಳಿಸಿದೆ. ಬಿಜೆಪಿ ರಾಷ್ಟ್ರೀಯ ವಕ್ತಾರ ಸುಧಾಂಶು ತ್ರಿವೇದಿ ಮಾತನಾಡಿ, ಈ ಪ್ರವಾಸವು ಭಾರತದ ಆರ್ಥಿಕ ಬೆಳವಣಿಗೆ, ತಂತ್ರಜ್ಞಾನ, ಬಾಹ್ಯಾಕಾಶ, ಕೌಶಲ್ಯಾಭಿವೃದ್ಧಿ ಕ್ಷೇತ್ರಗಳಿಗೆ ಹೊಸ ದಿಕ್ಕು ನೀಡಿದೆ ಎಂದರು. ಪೂರ್ವ ಯುರೋಪಿನ ಸ್ಲೊವಾಕಿಯಾ ಜತೆ ಮಹತ್ವದ ಸಂಬಂಧ ಸ್ಥಾಪನೆ ಆಗಿರುವುದು ಬಹುಆಯಾಮದ ಸಾಧನೆ ಎಂದರು. ➡ಪುಟ ೪

ಕಿರುಸುದ್ದಿ



ಹುಬ್ಬಳ್ಳಿ: ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ 8ನೇ ಸಮ್ಮೇಳನದಲ್ಲಿ ಸಮಾಜಸೇವೆ, ವಿವಿಧ ಕ್ಷೇತ್ರಗಳಲ್ಲಿ ಸಲ್ಲಿಸಿರುವ ಸೇವೆ ಗುರುತಿಸಿ ಡಾ. ರಮೇಶ್ ಮಹಾದೇವಪ್ಪನವರಿಗೆ ಚುಟುಕು ಚೇತನ ಗೌರವ ಪ್ರಶಸ್ತಿ ಪ್ರದಾನ.

ಸಂವಾದ ಸಭೆ ಇಂದು

ಹುಬ್ಬಳ್ಳಿ: ಹೆಸ್ಕಾಂನ ವಿಭಾಗ ಹಾಗೂ ಉಪವಿಭಾಗ ಕಚೇರಿಗಳಲ್ಲಿ ಜೂ.20ರಂದು ಮಧ್ಯಾಹ್ನ 3ಕ್ಕೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಅಧ್ಯಕ್ಷತೆಯಲ್ಲಿ ವಿದ್ಯುತ್ ಗ್ರಾಹಕರ ಸಂವಾದ ಸಭೆ ಆಯೋಜಿಸಲಾಗಿದೆ.

ಕೇಶ್ವಾಪುರದ ಶಿವಗಂಗಾ ಬಡಾವಣೆಯ ಹೆಸ್ಕಾಂ ಕಚೇರಿ, ಪಿಬಿಚ್ ಕಾಂಪೌಂಡ್‌ನ ತಬೀಬ್ ಲ್ಯಾಂಡ್ ಹೆಸ್ಕಾಂ ಕಚೇರಿ, ಗೋಕುಲ ರಸ್ತೆಯ ಉದ್ಯಮ ನಗರದ ಹೆಸ್ಕಾಂ ಕಚೇರಿ ಹಾಗೂ ನವನಗರದ ಉಪ- ವಿಭಾಗದ ಕಚೇರಿಗಳಲ್ಲಿ ಸಭೆಗಳು ನಡೆಯಲಿದ್ದು, ಗ್ರಾಹಕರು, ಸಾರ್ವಜನಿಕರು ಪಾಲ್ಗೊಂಡು ತಮ್ಮ ವಿದ್ಯುತ್ ಸಂಬಂಧಿತ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು ಎಂದು ಹೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಇಂದು ನಾಟಕ ಪ್ರದರ್ಶನ

ಧಾರವಾಡ: ಬಂಧಿಗಳಿಂದ ಅಭಿನಿಸಿದ ತಲೆದಂಡ ನಾಟಕ ಪ್ರದರ್ಶನ ಹಾಗೂ ಅನಕ್ಷರಸ್ಥ ಬಂಧಿಗಳಿಗೆ ಸಾಕ್ಷರತಾ ಕಾರ್ಯಕ್ರಮ ಮತ್ತು ಕಲಿಕಾ ಸಾಮಗ್ರಿ ವಿತರಣೆ ಸಮಾರಂಭ ಜೂ.20ರಂದು ಸಂಜೆ 4ಕ್ಕೆ ನಗರದ ಕೇಂದ್ರ ಕಾರಾಗೃಹದ ಗಾಂಧಿ ಭವನದಲ್ಲಿ ಜರುಗಲಿದೆ. ಜಿಲ್ಲಾಧಿಕಾರಿ ಸ್ನೇಹಲ್ ನಾಟಕ ಪ್ರದರ್ಶನ, ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷ ಎನ್.ವಿ.ವಿಜಯ್ ಸಾಕ್ಷರತಾ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ಕಾರಾಗೃಹದ ಉಪಮಹಾನಿರೀಕ್ಷಕ ಎಂ.ಸೋಮಶೇಖರ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಅಲ್ಲಪ್ಪ ಬಡಿಗೇರ, ರಂಗಾಯಣ ನಿರ್ದೇಶಕ ಝುಕೀರ್ ನದಾಫ್ ಸೇರಿದಂತೆ ಅನೇಕರು ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಸಂಗೀತ ಕಾರ್ಯಕ್ರಮ ನಾಳೆ

ಧಾರವಾಡ: ವಿಶ್ವ ಸಂಗೀತ ದಿನದ ಪ್ರಯುಕ್ತ ನಗರದ ಪದ್ಮಶ್ರೀ ಸಂಗೀತ ಪ್ರತಿಷ್ಠಾನ ವತಿಯಿಂದ ಜೂ.21ರಂದು ಹೊಸ ಬಸ್ ನಿಲ್ದಾಣದ ಸಮೀಪದ ಗಾಂಧಿಭವನದಲ್ಲಿ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಪ್ರತಿಷ್ಠಾನದ ಸಂಸ್ಥಾಪಕಿ ಭಾರ್ಗವಿ ಕುಲಕರ್ಣಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಮಧ್ಯಾಹ್ನ 4.30 ಗಂಟೆಗೆ ಸಂಗೀತ ಕಾರ್ಯಕ್ರಮ ಆರಂಭವಾಗಲಿದ್ದು, ಮಾಜಿ ಶಾಸಕ ಅಮೃತ ದೇಸಾಯಿ ಉದ್ಘಾಟಿಸುವರು. ಹು-ಧಾ ಮಹಾನಗರ ಪಾಲಿಕೆ ಸದಸ್ಯೆ ಅನಿತಾ ಚಳಗೇರಿ, ಪಾಲಿಕೆ ಸಹಾಯಕ ಆಯುಕ್ತ ಅರವಿಂದ ಜಮಖಂಡಿ, ಪಂಡಿತ ಪ್ರಸನ್ನ ಗುಡಿ ಪಾಲ್ಗೊಳ್ಳುವರು ಎಂದರು. ಕಲಾವಿದೆ ನೂರ್ ಜಹಾನ್ ನದಾಫ್ ಸಿತಾರ ವಾದನ ಹಾಗೂ ಪ್ರತಿಷ್ಠಾನದ ಮಕ್ಕಳು ಗಾಯನ ಪ್ರಸ್ತುತಪಡಿಸುವರು ಎಂದರು.

ಜೂ.24ಕ್ಕೆ ಪೂರ್ವಭಾವಿ ಸಭೆ

ಹುಬ್ಬಳ್ಳಿ: ತಾಲೂಕು ಆಡಳಿತದಿಂದ ಡಾ.ಫ.ಗು. ಹಳಕಟ್ಟಿ ಅವರ ಜಯಂತಿಯನ್ನು ಆಚರಿಸಲಿದ್ದು, ಈ ಹಿನ್ನೆಲೆಯಲ್ಲಿ ಜೂನ್ 24ರಂದು ಸಂಜೆ 4 ಗಂಟೆಗೆ ತಹಶೀಲ್ದಾರ ಕಾರ್ಯಾಲಯದ ಸಭಾಭವನದಲ್ಲಿ ಜಯಂತಿ ಪೂರ್ವಭಾವಿ ಸಭೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ತಹಶೀಲ್ದಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅವಧಿ ವಿಸ್ತರಣೆ

ನವಲಗುಂದ: ಪ್ರಧಾನ ಮಂತ್ರಿ ಆವಾಸ ಯೋಜನೆ 2.0 (ನಗರ) ಯೋಜನೆಯಡಿ (ಕಚ್ಚಾ ಮನೆ ಹೊಂದಿರುವ) ವಸತಿ ರಹಿತ ಮತ್ತು ನಿವೇಶನ ರಹಿತ ಕುಟುಂಬಗಳಿಗೆ ಅರ್ಜಿ ಸಲ್ಲಿಸುವ ಅವಧಿಯನ್ನು 30-06-2026 ರ ವರೆಗೆ ವಿಸ್ತರಿಸಲಾಗಿದೆ ಎಂದು ಪುರಸಭೆ ಮುಖ್ಯಾಧಿಕಾರಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಯನ್ನು ಕಚೇರಿ ವೇಳೆಯಲ್ಲಿ ವಸತಿ ಶಾಖೆಯಿಂದ ಪಡೆದುಕೊಳ್ಳಬಹುದಾಗಿದೆ ಎಂದಿದ್ದಾರೆ.

ಉದ್ಘಾಟನೆ ನಾಳೆ

ಧಾರವಾಡ: ನಗರದ ಯಾಲಕ್ಕಿ ಶೆಟ್ಟರ ಕಾಲೊನಿ ಪುರಂದರ ಮಂಟಪದ ರಾಘವೇಂದ್ರ ಮಠದ ಸಭಾಭವನದಲ್ಲಿ ಜೂ.21ರಂದು ಕಾಮಧೇನು ಸಂಸ್ಥೆ ಉದ್ಘಾಟನಾ ಸಮಾರಂಭ ನಡೆಯಲಿದೆ ಎಂದು ಸಂಸ್ಥೆ ಅಧ್ಯಕ್ಷ ಕಿಶನ್‌ರಾವ್ ಕುಲಕರ್ಣಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಸಂಜೆ 5 ಗಂಟೆಗೆ ಕಾರ್ಯಕ್ರಮ ಆರಂಭವಾಗಲಿದೆ. ಮೇಯರ್ ಜ್ಯೋತಿ ಪಾಟೀಲ ಅವರು ಸಂಸ್ಥೆಯ ಉದ್ಘಾಟನೆ ನೆರವೇರಿಸುವರು.

ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕುಮಾರ ಬೆಕ್ಕೇರಿ, ಪುರದರ ಮಂಟಪದ ಧರ್ಮದರ್ಶಿ ಸಿ.ನಾಗರಾಜ, ವಕೀಲ ಕಲ್ಮೇಶ ಹಾವೇರಿಪೇಟ್, ಕಲಾ ಸಂಗಮ ಸಂಸ್ಥೆಯ ಅಧ್ಯಕ್ಷ ಪ್ರಭು ಹಂಚಿನಾಳ ಹಾಗೂ ಆರ್.ಡಿ.ಕುಲಕರ್ಣಿ ಪಾಲ್ಗೊಳ್ಳುವರು ಎಂದರು. ವಕೀಲ ಕಲ್ಮೇಶ ಹಾವೇರಿಪೇಟ್ ಮಾತನಾಡಿ, ರಾಜೇಂದ್ರ ಎಚ್. ನಾಯಕ (ಮುಸ್ತಿ) ಅವರಿಂದ ಸಂಗೀತ, ಕಲಾವಿದ ಅನಂತ ದೇಶಪಾಂಡೆ ಅವರಿಂದ ಬೇಂದ್ರೆ ದರ್ಶನ ಕಾರ್ಯಕ್ರಮ ನಡೆಯಲಿದೆ ಎಂದರು. ಕಲಾವಿದ ಪ್ರಭು ಹಂಚಿನಾಳ, ಆನಂದ ಜೋಶಿ ಅರವಿಂದ ಮುಳಗುಂದ, ಎನ್.ಎಸ್.ಪಾಟೀಲ ಇದ್ದರು.



ಹುಬ್ಬಳ್ಳಿ: ಇಲ್ಲಿಯ ಗೋಕುಲ ರಸ್ತೆಯಲ್ಲಿರುವ ಸಂಜೀವಿನಿ ಆಯುರ್ವೇದ ವೈದಕೀಯ ಮಹಾವಿದ್ಯಾಲಯದಲ್ಲಿ ಅಂತರಾಷ್ಟ್ರೀಯ ಯೋಗ ದಿನದ ಅಂಗವಾಗಿ ಜಾಗೃತಿ ಜಾಥಾ ನಡೆಯಿತು. ಮಹಾವಿದ್ಯಾಲಯದ 300 ವಿದ್ಯಾರ್ಥಿ, ವಿದ್ಯಾರ್ಥಿನಿಯರು, ಪ್ರಾಧ್ಯಾಪಕರು, ಆಸ್ಪತ್ರೆಯ ಸಿಬ್ಬಂದಿ ಪಾಲ್ಗೊಂಡಿದ್ದರು. ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಚರಂತಯ್ಯ ಹಿರೇಮಠ ಅವರು ಚಾಲನೆ ನೀಡಿದರು.

ನಿಯಮ ಮೀರಿದರೆ ಲೈಸನ್ಸ್ ರದ್ದುಗೊಳಿಸಿ

ಹುಬ್ಬಳ್ಳಿ: ರಸಗೊಬ್ಬರ ಪೂರೈಕೆಯಲ್ಲಿ ರೈತರಿಗೆ ನಿರಂತರವಾಗಿ ಮೋಸ ಮಾಡಲಾಗುತ್ತಿದೆ. ಯೂರಿಯಾ ಹಾಗೂ ಡಿಎಪಿ ರಸಗೊಬ್ಬರವನ್ನು ಎಂಆರ್‌ಪಿ ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡಲಾಗುತ್ತಿದೆ 2 ಸಾವಿರ ಕೋಟಿ ರೈತರ ಹಣ ಲೂಟಿ ಹೊಡೆದಿದೆ ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ರಘುಪತಿ ಭಟ್ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ರಸಗೊಬ್ಬರ ಕೃತಕ ಅಭಾವ ಸೃಷ್ಟಿಸಲಾಗುತ್ತಿದೆ. ಇದಕ್ಕೆ ಕಡಿವಾಣ ಹಾಕಬೇಕು. ಸರ್ಕಾರ ತಕ್ಷಣ ಅಗತ್ಯ ರಸಗೊಬ್ಬರ ಪೂರೈಸಬೇಕು. ಯೂರಿಯಾ, ಡಿಎಪಿ ರಸಗೊಬ್ಬರಕ್ಕೆ ಸಬ್ಸಿಡಿ ಇದ್ದರೂ ಹೆಚ್ಚಿನ ಬೆಲೆ ಪಡೆಯಲಾಗುತ್ತಿದೆ. ಯೂರಿಯಾ 350, ಡಿಎಪಿ 2100 ರೂಗಳವರೆಗೆ ಮಾರಾಟ ಮಾಡಲಾಗುತ್ತಿದೆ. 21 ಲಕ್ಷ ಟನ್ ಗೊಬ್ಬರವಿದೆ ಎಂದು ಹೇಳಿದರೂ ಕೃತಕ ಅಭಾವ ಉಂಟು ಮಾಡಲಾಗುತ್ತಿದೆ. ರಸಗೊಬ್ಬರದ ಜೊತೆಗೆ ಲಿಂಕ್ ಪ್ರೊಡೆಕ್ಟ್‌ಗೆ ಬಲವಂತವಾಗಿ ಮಾರುವುದನ್ನು ನಿಲ್ಲಿಸಬೇಕು. ನಿಯಮಗಳನ್ನು ಮೀರಿದ ಡೀಲರ್ಸ್‌ಗಳ ಲೈಸನ್ಸ್ ರದ್ದುಗೊಳಿಸಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಘಟಕದ ಅಧ್ಯಕ್ಷ ಶಿವು ಜಿ.ಎಂ., ಮಂಜುನಾಥ ಹಿರೇಮಠ, ದಾದಾಪೀರ ಧಾರವಾಡ, ಅರುಣಕುಮಾರ ಪಾಟೀಲ ಸೇರಿದಂತೆ ಇತರರು ಇದ್ದರು.



ಧಾರವಾಡ: ಟಾಟಾ ಕಂಪನಿಗೆ ವಿದ್ಯುತ್ ಸರಬರಾಜು ಪರವಾನಗಿ ಸಂಪೂರ್ಣ ತಿರಸ್ಕರಿಸಲು ಆಗ್ರಹಿಸಿ ಅಖಿಲ ಭಾರತ ರೈತ ಕೃಷಿ ಕಾರ್ಮಿಕರ ಸಂಘಟನೆ ಕಾರ್ಯಕರ್ತರು ಧಾರವಾಡ ಜಿಲ್ಲಾಧಿಕಾರಿ ಕಚೇರಿ ಮುಂದೆ ಧರಣಿ ನಡೆಸಿ, ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಫಲಾನುಭವಿಗಳಿಗೆ ಪ್ರೋತ್ಸಾಹ ಧನ ವಿತರಣೆ | ಟೆಂಗಿನಕಾಯಿ ಅಭಿಮತ

ಲಕ್ಷಾಂತರ ಜನರ ಬದುಕಿಗೆ ಬೆಳಕು

ಹುಬ್ಬಳ್ಳಿ: ದೇಶದಲ್ಲಿ ಪ್ರಧಾನಿ ಮೋದಿ ಅವರು ಸಾಕಷ್ಟು ಉತ್ತಮ ಯೋಜನೆಗಳ ಜಾರಿಗೆ ತಂದಿದ್ದರಿಂದ ದಶಕದಲ್ಲಿ ಸಾಕಷ್ಟು ಉದ್ಯೋಗ ಸೃಷ್ಟಿಯಾಗಿವೆ ಎಂದು ಶಾಸಕ ಮಹೇಶ ಟೆಂಗಿನಕಾಯಿ ತಿಳಿಸಿದರು.

ಶುಕ್ರವಾರ ಇಲ್ಲಿಯ ವಿದ್ಯಾನಗರ ಬಿವಿಬಿ ಕಾಲೇಜ್ ಆವರಣದ ದೇಶಪಾಂಡೆ ಫೌಂಡೇಷನ್ ಸಭಾಂಗಣದಲ್ಲಿ ಇಪಿಎಫ್‌ಒ ವತಿಯಿಂದ ಆಯೋಜಿಸಿದ್ದ ಪ್ರಧಾನ ಮಂತ್ರಿ ವಿಕಸಿತ ಭಾರತ ರೋಜಗಾರ ಯೋಜನೆಯ (ಪಿಎಂವಿಬಿಆರ್ ವೈ) ಫಲಾನುಭವಿಗಳಿಗೆ ಪ್ರೋತ್ಸಾಹ ಧನ ವಿತರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಕೇಂದ್ರ ಸರ್ಕಾರ ದೇಶದ ಯುವಕರಿಗೆ ಉದ್ಯೋಗ ನೀಡುವಲ್ಲಿ ಎಲ್ಲ ಸಹಕಾರ ನೀಡುತ್ತ ಬಂದಿದೆ. ಪ್ರಧಾನಿಮಂತ್ರಿ ವಿಕಸಿತ ಭಾರತ ಉದ್ಯೋಗ ಯೋಜನೆ (ಪಿಎಂವಿಬಿಆರ್‌ವೈ) ಮೂಲಕ ಲಕ್ಷಾಂತರ ಜನರ ಬದುಕಿಗೆ ಹಾಗೂ ಅವರ ಕುಟುಂಬಕ್ಕೆ ಬೆಳಕಾಗಿದೆ ಎಂದರು. ಉತ್ತರ ಕರ್ನಾಟಕ ಭಾಗದ ವಾಣಿಜ್ಯ ಕೇಂದ್ರವಾದ ಹುಬ್ಬಳ್ಳಿಯಲ್ಲಿ ಕೈಗಾರಿಕಾ ಕ್ಷೇತ್ರ ಬಹಳಷ್ಟು ಅಭಿವೃದ್ಧಿಯಾಗುತ್ತಿದೆ. ಇಲ್ಲಿ ಪಿಎಫ್ ಕಚೇರಿಯಿಂದ ಸಮಾರಂಭ ಏರ್ಪಡಿಸಿದ್ದು ಶ್ಲಾಘನೀಯ ಎಂದರು.



ಈ ವರೆಗೆ 1.09 ಕೋಟಿ ಉದ್ಯೋಗ ಸೃಷ್ಟಿ

2025ರ ಆಗಸ್ಟ್ 15ರಂದು ಪ್ರಾರಂಭವಾದ ಪಿಎಂವಿಬಿಆರ್ ವೈ ಅಡಿ ಉದ್ಯೋಗದಾತರು ಹಾಗೂ ಫಲಾನುಭವಿಗಳ ನಡುವೆ ಸಂವಹನ ಸುಗಮಗೊಳಿಸಲಾಗುತ್ತಿದೆ. ಇದರಿಂದಾಗಿ ಈವರೆಗೆ ದೇಶದಲ್ಲಿ 1.09 ಕೋಟಿ ಉದ್ಯೋಗ ಸೃಷ್ಟಿಯಾಗಿ ಅವರೆಲ್ಲ ಯೋಜನೆ ವ್ಯಾಪ್ತಿಗೆ ಒಳಪಟ್ಟಿದ್ದಾರೆ. ಎರಡು ವರ್ಷದ ಅವಧಿಯಲ್ಲಿ ಒಟ್ಟು 3.5 ಕೋಟಿಗೂ ಹೆಚ್ಚು ಉದ್ಯೋಗ ಸೃಷ್ಟಿಸಲು ಯೋಜನೆಯಡಿ ಪ್ರೋತ್ಸಾಹ ನೀಡಲಾಗುತ್ತಿದೆ.

ದೇಶಪಾಂಡೆ ಸ್ಕಿಲ್ಲಿಂಗ್ ಸೆಂಟರ್‌ನ ಪಿ.ಎನ್. ನಾಯಕ ಮಾತನಾಡಿ, ಯುವತಿಯರಿಗೆ ಉದ್ಯೋಗ ಗಿಟ್ಟಿಸಿಕೊಳ್ಳಲು ಅಗತ್ಯ ಕೌಶಲ ಒದಗಿಸುವಲ್ಲಿ ಫೌಂಡೇಷನ್ ಸಹಕಾರ ನೀಡುತ್ತಿದೆ. ಇದರಿಂದ ಅನೇಕರಿಗೆ ಅನುಕೂಲವಾಗಿದೆ ಎಂದರು.

ದೆಹಲಿಯ ವಿಜ್ಞಾನ ಭವನದಿಂದ ಪ್ರಧಾನಿ ನರೇಂದ್ರ ಮೋದಿ ಅವರು ಉದ್ಘಾಟಿಸಿದ ಕಾರ್ಯಕ್ರಮದ ನೇರ ಪ್ರಸಾರ ಮಾಡಲಾಯಿತು. ಜಿಲ್ಲಾಧಿಕಾರಿ ಸ್ನೇಹಲ್ ಆರ್., ಮೇಯರ್ ಜ್ಯೋತಿ ಪಾಟೀಲ, ಇಪಿಎಫ್‌ಒ ವಲಯ ಕಚೇರಿ ಅಧಿಕಾರಿ ಶಶಿಕುಮಾರ, ವಿಮಾನ ನಿಲ್ದಾಣ ನಿರ್ದೇಶಕ ರೂಪೇಶಕುಮಾರ, ಕೆಸಿಸಿಐ ಗೌರವ ಕಾರ್ಯದಶಿರ್ ಉದಯ ರೇವಣಕರ ವೇದಿಕೆಯಲ್ಲಿದ್ದರು. ಪಿಎ ಕಚೇರಿ ಅಕೌಂಟ್ಸ್ ಆಫೀಸರ್ ಮಂಜುನಾಥ ಜೆ.ಎ. ನಿರ್ವಹಿಸಿದರು.

ಪ್ರೋತ್ಸಾಹ ನೆರವು

ದೇಶಪಾಂಡೆ ಸ್ಕಿಲ್ಲಿಂಗ್‌ನಲ್ಲಿ ಟ್ರೇನರ್ ಆಗಿ ಕೆಲಸ ಮಾಡುತ್ತಿದ್ದು, ಪಿಎಂ ವಿಬಿಆರ್ ವೈ ಅಡಿ ಪಡೆದ ಪ್ರೋತ್ಸಾಹ ಧನವು ನನಗೆ ಬಹಳ ಅನುಕೂಲವಾಗಿದೆ. ಬಡ ರೈತ ಕುಟುಂಬದಿಂದ ಬಂದಿರುವ ನನಗೆ ಉದ್ಯೋಗದ ಜೊತೆ ಪ್ರೋತ್ಸಾಹ ಸಿಕ್ಕಿರುವುದಕ್ಕೆ ಬಹಳ ನೆರವಾಯಿತು ಎಂದು ಯೋಜನೆ ಫಲಾನುಭವಿ ಭವಾನಿ ತಿಳಿಸಿದರು.

> ದೇಶದ 15 ಲಕ್ಷ ಲಾನುಭವಿಗಳಿಗೆ ಉದ್ಯೋಗ ಅವಕಾಶ ಸಿಕ್ಕಿದೆ. ಪ್ರಧಾನಿ ನರೇಂದ್ರ ಮೋದಿ ಅವರು 2400 ಕೋಟಿ ರೂ. ಪ್ರೋತ್ಸಾಹ ಧನವನ್ನು ವಿತರಣೆ ಮಾಡಿದ್ದಾರೆ. ಪಿಎಫ್ ಪ್ರಾದೇಶಿಕ ಕಚೇರಿ ವ್ಯಾಪ್ತಿಯಲ್ಲಿ 7 ಸಾವಿರಕ್ಕೂ ಹೆಚ್ಚು ಉದ್ಯೋಗದಾತರು ಯೋಜನೆ ಅಡಿ ಬಂದಿದ್ದಾರೆ.
>
> ■ ಅಶುತೋಷ, ಪಿಎಫ್ ಪ್ರಾದೇಶಿಕ ಆಯುಕ್ತ

ಮಹಾರಾಣಾ ಪ್ರತಾಪ್ ಸಿಂಹರ ಜಯಂತ್ಯುತ್ಸವ ಬಮ್ಮಿಗಟ್ಟಿಯಲ್ಲಿ ಪ್ರತಿಭಾವಂತರಿಗೆ ಸನ್ಮಾನ



ಕಲಘಟಗಿ: ತಾಲೂಕಿನ ಬಮ್ಮಿಗಟ್ಟಿ ಗ್ರಾಮದ ಶ್ರೀ ಸತ್ಯಮ್ಮಾದೇವಿ ದೇವಸ್ಥಾನದಲ್ಲಿ ಕ್ಷತ್ರಿಯ ರಜಪೂತ ಸಮಾಜದ ವತಿಯಿಂದ ಮಹಾರಾಣಾ ಪ್ರತಾಪ್ ಸಿಂಹರ 486ನೇ ಜಯಂತ್ಯುತ್ಸವದ ಅಂಗವಾಗಿ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಸಾಧಕ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಬಿಜೆಪಿ ಧಾರವಾಡ ಜಿಲ್ಲಾ ಗ್ರಾಮೀಣ ಅಧ್ಯಕ್ಷ ನಿಂಗಪ್ಪ ಸುತಗಟ್ಟಿ ಮಾತನಾಡಿ, ಮಹಾರಾಣಾ ಪ್ರತಾಪ್ ಸಿಂಹರ ತತ್ವಾದರ್ಶ ಸರ್ವರೂ ಪಾಲಿಸಿ ಎಂದು ಹೇಳಿದರು.

ಮಹಾವೀರ, ಧರ್ಮನಿಷ್ಠ, ಕ್ಷೇತ್ರ ಧರ್ಮ ಪರಿಪಾಲಕ, ರಘುವಂಶದ ಪರಾಕ್ರಮಿ, ರಾಷ್ಟ್ರ ಪ್ರೇಮಿ ಎಂಬ ಬಿರುದಾವಳಿಗಳಿಂದ ಹೆಸರುವಾಸಿಯಾಗಿದ್ದರು. ಅಕ್ಬರನ ಅಧೀನತೆ ಒಪ್ಪಿಕೊಳ್ಳದೆ ಸ್ವಾಭಿಮಾನದಿಂದ ಬದುಕಿದವರು. ಹಲ್ದಿಘಾಟ್ ಯುದ್ಧ ಅವರ ಸಾಹಸಕ್ಕೆ ಸಾಕ್ಷಿಯಾಗಿದೆ ಎಂದರು.

ಗ್ರಾಮದ ಹಿರಿಯ ಬಸಪ್ಪ ಟವಳಿ ಮಾತನಾಡಿ, ವೀರರ ಚರಿತ್ರೆ ತಿಳಿದುಕೊಳ್ಳುವುದರ ಜೊತೆಗೆ ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಾವೆಲ್ಲ ನಡೆಯೋಣ. ದೇಶದ ಹಿತಸಕ್ತಿಗಾಗಿ ಅನೇಕರು ತಮ್ಮ ಪ್ರಾಣವನ್ನೇ ತೆತ್ತಿದ್ದಾರೆ. ಮಹಾರಾಣಾ ಪ್ರತಾಪ್ ಸಿಂಹರ ಧೈರ್ಯ ಎಲ್ಲರಿಗೂ ಮಾದರಿ ಎಂದರು. ಗ್ರಾಮಲೆಕ್ಕಾಧಿರಿ ಅಜಿತ ಹಜೇರಿ, ಪೊಲೀಸ್ ಪೇದೆ ಪ್ರಶಾಂತ ಬೈರಾಗಿ ನಿರೂಪಿಸಿದರು. ಮಲ್ಲೇಶಪ್ಪ ಮುಕ್ಕಣ್ಣವರ ಸ್ವಾಗತಿಸಿದರು. ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಹನುಮಂತಸಿಂಗ ಹಜೇರಿ ಅವರನ್ನು ಸನ್ಮಾನಿಸಲಾಯಿತು. ತಾಲೂಕು ಬಿಜೆಪಿ ಅಧ್ಯಕ್ಷ ಯಲ್ಲಾರಿ ಶಿಂಧೆ, ಉಪಾಧ್ಯಕ್ಷ ಪರಶುರಾಮಸಿಂಗ ರಜಪೂತ, ಗ್ರಾಪಂ ಮಾಜಿ ಅಧ್ಯಕ್ಷ ಸುರೇಶ ರಾಯ್ಕರ, ಮಂಜುನಾಥ ಧೂಳಿಕೊಪ್ಪ, ಮಾಜಿ ಉಪಾಧ್ಯಕ್ಷೆ ತುಳಸಮ್ಮ ಮುಗದ, ಬಾಲಜಿಸಿಂಗ ಪಾಂಡೆ, ದೇವಂದ್ರಸಿಂಗ ಹಜೇರಿ, ಎಸ್‌ಡಿಎಂಸಿ ಅಧ್ಯಕ್ಷ ಮಹೇಶ ಲಕ್ಕಣ್ಣವರ, ನಾರಾಯಣಸಿಂಗ ಹಜೇರಿ, ಜಯಸಿಂಗ ದೊಡ್ಡವಾಡ, ಚಂದ್ರುಸಿಂಗ ಮುಗದ, ಮಲ್ಲೇಶಪ್ಪ ಧಾರವಾಡ, ಚನ್ನಬಸಪ್ಪ ಮಾಚಾರಪುರ, ಉಳವಯ್ಯ ಕಂಬಿ, ಸೇರಿದಂತೆ ಮತ್ತಿತರರು ಇದ್ದರು.

▸▸ ಗ್ರಾಮದಲ್ಲಿ ಮಹಾರಾಣಾ ಪ್ರತಾಪ್ ಸಿಂಹರ ಅದ್ದೂರಿ ಭಾವಚಿತ್ರದ ಮೆರವಣಿಗೆ



ಧಾರವಾಡ: ಗೋವಾದಲ್ಲಿ ನಡೆದ 26ನೇ ರಾಷ್ಟ್ರೀಯ 7-ಎ-ಸೈಡ್ ಫುಟ್ಬಾಲ್ ಚಾಂಪಿಯನಶಿಫ್ ಸ್ಪರ್ಧೆಯಲ್ಲಿ ಧಾರವಾಡ ಜೆಎಸ್ಎಸ್ ಮಂಜುನಾಥೇಶ್ವರ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿ ಸೃಜನ್ ಆರ್ ಶಿರಕೋಳ ಕರ್ನಾಟಕ ತಂಡ ಪ್ರತಿನಿಧಿಸಿದ್ದು, ಸ್ಪರ್ಧೆಯಲ್ಲಿ ಕರ್ನಾಟಕ ತಂಡ ಚಾಂಪಿಯನ್ ಪಟ್ಟ ಅಲಂಕರಿಸಿದೆ. ಕ್ರೀಡಾಪಟು ಸಾಧನೆಗೆ ಸಂಸ್ಥೆ ಕಾರ್ಯದರ್ಶಿ ಡಾ.ಅಜಿತ ಪ್ರಸಾದ, ಆಡಳಿತಾಧಿಕಾರಿ ಅರಿಹಂತ ಪ್ರಸಾದ, ಮಹಾವೀರ ಉಪಾದ್ಯೆ, ಪ್ರಾಚಾರ್ಯೆ ತ್ರಿವೇಣಿ ಆರ್, ಸಿಬ್ಬಂದಿ ಹರ್ಷವ್ಯಕ್ತಪಡಿಸಿದ್ದಾರೆ.

ಮಕ್ಕಳು ಟಿವಿ, ಮೊಬೈಲ್ ಬಿಟ್ಟು ಪಠ್ಯೇತರ ಚಟುವಟಿಕೆಯಲ್ಲಿ ತೊಡಗಲಿ

ಹುಬ್ಬಳ್ಳಿ: ಉಳ್ಳವರು ಬಡವರ ಪರ ಕಾಳಜಿ ವಹಿಸುವ ನಿಟ್ಟಿನಲ್ಲಿ ಬಡ ಮಕ್ಕಳ ಶಿಕ್ಷಣಕ್ಕೆ, ಸರ್ಕಾರಿ ಶಾಲೆಯ ಅಭಿವೃದ್ಧಿಗೆ ಕೊಡುಗೆ ನೀಡುವ ಕಾರ್ಯ ಮಾಡಬೇಕು. ಮಕ್ಕಳು ಕೂಡ ಆಧುನಿಕ ಯುಗದಲ್ಲಿ ಮೊಬೈಲ್, ಟಿವಿಯನ್ನು ಬಿಟ್ಟು ಓದುವುದು, ಪಠ್ಯೇತರ ಚಟುವಟಿಕೆಯಲ್ಲಿ ಹೆಚ್ಚು ತೊಡಗಬೇಕು ಎಂದು ಈಶ್ವರಿ ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷ ಹಾಗೂ ಸಮಾಜ ಸೇವಕ ಸಂತೋಷ ವೇರ್ಣೇಕರ್ ಹೇಳಿದರು.

ಇಲ್ಲಿಯ ನಾಗಶೆಟ್ಟಿಕೊಪ್ಪದ ಸರ್ಕಾರಿ ಪ್ರೌಢಶಾಲೆ ನಂಬರ್ 15ರಲ್ಲಿ ಶ್ರೀ ಸದ್ಗುರು ಕಲಾಕ್ಷೇತ್ರ, ರಂಗ ವರ್ಣಿಕ ರಂಗ ಶಾಲೆ ವತಿಯಿಂದ ಮಕ್ಕಳಿಗೆ ಆಯೋಜಿಸಿದ್ದ 40 ದಿನಗಳ ರಜಾ ರಂಗ ಮಜಾ 2026 ಅಭಿನಯ ತರಬೇತಿ ಶಿಬಿರದ ಸಮಾರೋಪ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ಖಾಸಗಿ ಶಾಲೆಗಳಿಗಿಂತ ಶ್ರೀಮಂತರು ಸರ್ಕಾರಿ ಶಾಲೆಗಳ ಹಾಗೂ ಮಕ್ಕಳ ಅಭಿವೃದ್ಧಿಗೆ ಕೊಡುಗೆ ನೀಡಬೇಕು. ಅಂದಾಗ ಬಡ ಮಕ್ಕಳಿಗೂ ಕೂಡ ಉತ್ತಮ ಶಿಕ್ಷಣ, ಸೌಲಭ್ಯ ದೊರೆತು ಸಮಾಜದಲ್ಲಿ ಸುಧಾರಣೆಯಾಗುತ್ತದೆ ಎಂದು ಹೇಳಿದರಲ್ಲದೆ, ಸ್ವತಃ ತಾವು 10 ಮಕ್ಕಳನ್ನು ದತ್ತು ಪಡೆಯುವ ಮೂಲಕ ಅವರ ಶಿಕ್ಷಣದ ಜವಾಬ್ದಾರಿ ತೆಗೆದುಕೊಂಡರು.

ಸರ್ವಧರ್ಮ ಸಮಾಜ ಸೇವಕ ರಮೇಶ್ ಮಾದೇವಪ್ಪನವರ್, ಹಿರಿಯ ಪತ್ರಕರ್ತ ಗಣಪತಿ ಗಂಗೊಳ್ಳಿ ಮಾತನಾಡಿ, ಸರ್ಕಾರಿ ಶಾಲೆ ಮಕ್ಕಳು ಕೂಡ ಉತ್ತಮ ಪ್ರತಿಭೆಗಳಿರುತ್ತವೆ. ಅವುಗಳನ್ನು ಗುರುತಿಸುವ ಕಾರ್ಯ ಸಮಾಜ ಮಾಡಬೇಕಿದೆ ಎಂದರು.



ಉಮೇಶ ಸೋಮನಗೌಡ, ಗುರುನಗೌಡ ಪಾಟೀಲ, ಜಗದೀಶ ಹೀರೆಮಠ, ಎಸ್.ಎಂ.ಪವಾರ್, ಫಕೀರೇಶ ಬಡಿಗೇರ, ವಿರೂಪಾಕ್ಷ ಕಟ್ಟಿಮನಿ, ಮಹಾದೇವ ಮೆಣಸಿನಕಾಯಿ ಸೇರಿದಂತೆ ಮಕ್ಕಳು ಉಪಸ್ಥಿತರಿದ್ದರು.



ಅಳ್ನಾವರ: ಹಿಂದೂ ಧರ್ಮ ಮತ್ತು ಹಿಂದೂ ದೇವತೆಗಳ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡುತ್ತಿರುವ ಪ್ರೊ. ಕೆ.ಎಸ್.ಭಗವಾನ ಅವರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಅಳ್ನಾವರದಲ್ಲಿ ಹಿಂದೂ ಪರ ಕಾರ್ಯಕರ್ತರು ತಹಶೀಲ್ದಾರ್ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಅಭಿವೃದ್ಧಿಗೆ ರಾಸಾಯನಿಕ ವಿಜ್ಞಾನಿಗಳ ಪಾತ್ರ ಮುಖ್ಯ: ಕೆ.ಚಿತ್ತರಂಜನ್

ಧಾರವಾಡ: ಹವಾಮಾನ ಬದಲಾವಣೆ, ಇಂಧನ ಭದ್ರತೆ, ಪರಿಸರ ರಕ್ಷಣೆ ಹಾಗೂ ಸುಸ್ಥಿರ ಕೈಗಾರಿಕಾ ಅಭಿವೃದ್ಧಿಗೆ ಜಾಗತಿಕ ಸವಾಲು ಎದುರಿಸುವಲ್ಲಿ ರಾಸಾಯನಿಕ ವಿಜ್ಞಾನಿಗಳ ಪಾತ್ರ ನಿರ್ಣಾಯಕ ಎಂದು ಎಂಜಿನಿಯರ್ ಕೆ.ಚಿತ್ತರಂಜನ್ ಹೇಳೀದರು.

ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಕೆಮಿಕಲ್ ಎಂಜಿನಿಯರ್ಸ್ ಸಹಯೋಗದಲ್ಲಿ ನಗರದ ಮಂಜುನಾಥೇಶ್ವರ ಅಭಿಯಾಂತ್ರಿಕ-ತಾಂತ್ರಿಕ ಮಹಾವಿದ್ಯಾಲಯದಲ್ಲಿ ನಡೆದ ಕೆಮಿಕಲ್ ಎಂಜನಿಯರಿಂಗ್ ಸುಸ್ಥಿರ ವಿಧಾನಗಳು ಕಾರ್ಯಾಗಾರದಲ್ಲಿ ಮಾತನಾಡಿದರು. ಸುಸ್ಥಿರತೆಯು ಸವಾಲಿಗಳು ಜೊತೆಗೆ ಹೊಸ ಅವಕಾಶಗಳನ್ನು ಒದಗಿಸುತ್ತದೆ. ಈ ಸುಸ್ಥಿರ ಬೆಳವಣಿಗೆಯನ್ನು ಸಾಧಿಸಲು ನಾವೀನ್ಯತೆ, ಸಂಪನ್ಮೂಲ ದಕ್ಷತೆ ಹಾಗೂ ಜವಾಬ್ದಾರಿಯುತ ತಾಂತ್ರಿಕ ಪ್ರಗತಿ ಬಹಳಷ್ಟು ಪ್ರಾಮುಖ್ಯತೆ ಹೊಂದಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಎಸ್‌ಡಿಎಂ ಸೊಸೈಟಿ ಕಾರ್ಯದರ್ಶಿ ವಿ. ಜೀವಂದರಕುಮಾರ್ ಮಾತನಾಡಿ, ಉದಯೋನ್ಮುಖ ತಾಂತ್ರಿಕ ಮತ್ತು ಸಾಮಾಜಿಕ ಸವಾಲುಗಳನ್ನು ಎದುರಿಸುವಲ್ಲಿ ಅಧ್ಯಾಪಕರಿಗೆ ನಿರಂತರ ಕಲಿಕೆ ಮತ್ತು ಸಾಮರ್ಥ್ಯ ವೃದ್ಧಿಯ ಅಗತ್ಯವಿದೆ ಎಂದರು. ಎಸ್‌ಡಿಎಂ ಎಂಜಿನಿಯರಿಂಗ್ ಕಾಲೇಜಿನ ಪ್ರಾಚಾರ್ಯ ಡಾ. ರಮೇಶ ಚಕ್ರಸಾಲಿ ಮಾತನಾಡಿ, ಸುಸ್ಥಿರ ವಿಧಾನಗಳ ಕುರಿತು ಜ್ಞಾನವೃದ್ಧಿ ಮತ್ತು ನಾವೀನ್ಯತೆಗಳಿಗೆ ಈ ಕಾರ್ಯಾಗಾರ ಅವಕಾಶ ಒದಗಿಸಿದೆ. ಗುರಿ ಸಾಧನೆಗೆ ಒತ್ತು ನೀಡುವಂತೆ ತಿಳಿಸಿದರು. ಡಾ.ಲೋಕೇಶ್ವರಿ ನವಲಗುಂದ, ಡಾ.ಶಿವಾನಂದ ವೈ, ಡಾ.ಕೇಶವ ಜೋಶಿ, ಪ್ರೊ. ಎಚ್.ಎಸ್.ಅಶೋಕ, ಡಾ.ರಶ್ಮಿ ಎಸ್.ಎಚ್., ಸುಹಾಸನಿ, ಡಾ.ಸಿ.ಟಿ. ಪುಟ್ಟಸ್ವಾಮಿ, ಡಾ. ವಿನಾಯಕ ಶೇಠ್, ಸಂಜಯ್ ವೇಣುಗೋಪಾಲ, ಡಾ. ಕೃಷ್ಣ ಕುಲಕರ್ಣಿ ಇದ್ದರು.



ಸಲೀಂ ಅಹ್ಮದ್‌ಗೆ ಸಚಿವ ಸ್ಥಾನ ನೀಡಲು ಆಗ್ರಹ

ಹುಬ್ಬಳ್ಳಿ: ವಿಧಾನ ಪರಿಷತ್ ಸದಸ್ಯ ಸಲೀಂ ಅಹ್ಮದ್ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಆಗ್ರಹಿಸಿ ಅವರ ಬೆಂಬಲಿಗರು ಹಾಗೂ ಅಭಿಮಾನಿಗಳು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಶುಕ್ರವಾರ ಇಲ್ಲಿಯ ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಸಲೀಂ ಅಹಮದ್ ಅವರಿಗೆ ಸಚಿವ ಸ್ಥಾನ ನೀಡಲೇಬೇಕು ಎಂದು ಘೋಷಣೆ ಕೂಗಿದರು. ಅವರ ಭಾವಚಿತ್ರ ಹಿಡಿದು ಕೆಲ ಸಮಯ ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ಸಲೀಂ ಅಹ್ಮದ್ ಅವರು ಪಕ್ಷ ಸಂಘಟನೆ, ಸಾಮಾಜಿಕ ಸೇವೆ ಹಾಗೂ ಸಾರ್ವಜನಿಕ ಜೀವನದಲ್ಲಿ ಅಪಾರ ಅನುಭವ ಹೊಂದಿದ್ದು ಪಕ್ಷದ ಬೆಳವಣಿಗೆಗೆ ಮಹತ್ವದ ಕೊಡುಗೆ ನೀಡಿದ್ದಾರೆ. ಅವರ ಅನುಭವ, ಸಂಘಟನಾ ಸಾಮರ್ಥ್ಯ ಮತ್ತು ನಿಷ್ಠೆಯನ್ನು ಪರಿಗಣಿಸಿ ಅಲ್ಪಸಂಖ್ಯಾತರ ಕೋಟಾದಲ್ಲಿ ಅವರಿಗೆ ಈ ಬಾರಿ ಸಚಿವ ಸಂಪುಟದಲ್ಲಿ ಅವಕಾಶ ನೀಡಬೇಕು ಎಂದು ಒತ್ತಾಯಿಸಿದರು.



ಉತ್ತರ ಕರ್ನಾಟಕ ಭಾಗದಲ್ಲಿ ಅಲ್ಪಸಂಖ್ಯಾತ ಸಮುದಾಯವು ಸತತವಾಗಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುತ್ತಾ ಬಂದಿದೆ. ಆದಾಗ್ಯೂ, ಎರಡು ದಶಕದಿಂದ ಈ ಭಾಗದ ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯಕ್ಕೆ ರಾಜ್ಯ ಸಚಿವ ಸಂಪುಟದಲ್ಲಿ ಪ್ರಾತಿನಿಧ್ಯ ದೊರೆತಿಲ್ಲ ಬೇಸರ ವ್ಯಕ್ತಪಡಿಸಿದರು. ಕಾಂಗ್ರೆಸ್ ಮುಖಂಡ ಶಹಜಮಾನ್ ಮುಜಾಹೀದ್ ಮಾತನಾಡಿದರು. ಎಸ್.ಡಿ. ಮಕಾಂದರ್, ಇನಾಯಿತ್ ಖಾನ್ ಪಠಾಣ್, ಫರ್ವೇಜ್ ಬ್ಯಾಹಟ್ಟಿ, ರಶೀದ್ ಶೇಖ್, ಇಮ್ತಾಯಿಜ್‌ಕುಮಟಾಕರ, ಇರ್ಷಾದ್ ಕುಸುಗಲ್, ಮುಜೀಬ್ ಮಕಾಂದರ್, ಜಾಕೀರ್ ಖದೀಬ್ ಇದ್ದರು.

ಕುಂದಗೋಳದಲ್ಲಿ ಮಳೆಗಾಗಿ ಪ್ರಾರ್ಥನೆ

ಕುಂದಗೋಳ: ಕಳೆದ ಹಲವಾರು ದಿನಗಳಿಂದ ಮಳೆ ಇಲ್ಲದೆ ಬೆಳೆಗಳು ಒಣಗುತ್ತಿದ್ದು, ನೀರು ಕಾಣದಾಗಿರುವ ಹಿನ್ನೆಲೆಯಲ್ಲಿ ಮಹಿಳೆಯರು ಗುರ್ಜಿ ಮೂಲಕ ಮಳೆಗಾಗಿ ಮೊರೆ ಇಟ್ಟರು.

ಗುರ್ಜಿ ಗುರ್ಜಿ ಎಲ್ಲಾಡಿ ಬಂದೆ, ಹಳ್ಳ-ಕೊಳ್ಳ ತೇಲಾಡಿ ಬಂದೆ, ಬಾ ಬಾ ಮಳೆಯೇ, ಸುರಿಮಳೆಯೇ.... ಎಂಬ ಹಾಡಿನೊಂದಿಗೆ ಮನೆ ಮನೆಗೆ ತೆರಳಿದ ಗುರ್ಜಿಗೆ ಪೂಜೆ ಸಲ್ಲಿಸಿದ ಭಕ್ತರು ಗುರ್ಜಿ ಮೇಲೆ ನೀರು ಹಾಕಿ, ಲಘು ಪ್ರಸಾದ ವಿತರಿಸುವ ಈ ಆಚರಣೆ, ಪಟ್ಟಣದ ಗಂಗಾಧರೇಶ್ವರ ದೇಗುಲದಿಂದ ಆರಂಭವಾದ ಗುರ್ಜಿ ಪೂಜೆಯು ಭಜಂತ್ರಿ ಓಣಿ, ಹನಸಿ ಓಣಿ, ಮರಿಯಮ್ಮನ ಗುಡಿ ಓಣಿ, ಹಿರೇಮಠ ಓಣಿ, ಕರೋಗಲ್ ಓಣಿ ಹಾಗೂ ಬೀಡನಾಳ ಪ್ಲಾಟ್ ಸೇರಿದಂತೆ ವಿವಿಧೆಡೆ ಜರುಗಿತು. ಪ.ಪಂ ಮಾಜಿ ಅಧ್ಯಕ್ಷೆ ಎಲ್ಲವ್ವ ಭಜಂತ್ರಿ, ಈರಮ್ಮ ಹಡಪದ, ಸುನಂದ ಭಜಂತ್ರಿ, ಅನಸವ್ವ ಹರುಕುಣಿ, ನಿರ್ಮಲ ಹಡಪದ, ಕವಿತಾ ಸುರೇಬಾನ, ಪಾರವ್ವ ಹರ್ಕುಣಿ, ಮಾದೇವಿ ಹಡಪದ, ಚನ್ನಬಸಮ್ಮ ಹಡಪದ ಸೇರಿದಂತೆ ಅನೇಕರಿದ್ದರು.



ಸಾವಯವ ಬೆಳೆಗಳು ಆರೋಗ್ಯಕ್ಕೆ ಉತ್ತಮ: ಸಂಕನೂರ

ಹುಬ್ಬಳ್ಳಿ: ಇಲ್ಲಿಯ ಗೋಕುಲ ರಸ್ತೆ ಅರ್ಬನ್ ಓಯಾಸಿಸ್ ಮಾಲ್‌ನಲ್ಲಿ ಸಹಜ ಸಮೃದ್ಧಿ ಸಂಸ್ಥೆ ವತಿಯಿಂದ ಏರ್ಪಡಿಸಿದ್ದ ಮೂರು ದಿನಗಳ ಹಲಸು ಮೇಳಕ್ಕೆ ಶುಕ್ರವಾರ ಚಾಲನೆ ದೊರೆಯಿತು. ಜನ ಸೇವಾ ಬ್ಯಾಂಕ್ ಮುಖ್ಯಸ್ಥ ಎ.ವಿ. ಸಂಕನೂರ ಅವರು ಚಾಲನೆ ನೀಡಿದರು.

12 ಕ್ಕೂ ಹೆಚ್ಚು ತಳಿಯ ಹಲಸು ಪ್ರದರ್ಶನ: ಹಲಸು ಮೇಳದಲ್ಲಿ ಏಕಾದಶಿ, ಬಿಕ್ಕೆ, ಕಪ್ಪುಚುಕ್ಕೆ, ಹಸಿರು ಹಲಸು, ಸಕ್ಕರಾಯ ಪಟ್ಟಣ, ನಂಜು, ಗಮ್‌ಲೆಸ್, ಏಲಕ್ಕಿ, ಬೆಟ್ಟದ ಹಲಸು, ಗೊಂಚಲು, ರುದ್ರಾಕ್ಷಿ, ಕೇಸರಿ, ಚನ್ನರಾಯ ಪಟ್ಟಣ, ಪಲ್ಯದ ಹಾಗೂ ಪುಟ್ಟ ಹಲಸು ಎಂಬ 12ಕ್ಕೂ ಹೆಚ್ಚು ತಳಿಯ ಹಲಸಿನ ಹಣ್ಣುಗಳ ಮಾರಾಟಕ್ಕೆ ಇರಿಸಲಾಗಿದೆ. ಇವುಗಳಲ್ಲಿ ಚಂದ್ರ ಹಲಸನ್ನು ಹೆಚ್ಚಿನ ಜನ ಖರೀದಿ ಮಾಡುತ್ತಿರುವುದು ಕಂಡು ಬಂತು. ಇನ್ನೂ ವಿವಿಧ ಬಗೆಯ ತೋತಾಪುರಿ ಮಾವಿನ ಹಣ್ಣುಗಳು ಗ್ರಾಹಕರ ಗಮನ ಸೆಳೆದವು. ಮೇಳದಲ್ಲಿ ಸಾವಯವ ಬೀಜಗಳು, ಸಿರಿಧಾನ್ಯ ಆಹಾರ ಪದಾರ್ಥಗಳು, ಕುರುಕಲು ತಿಂಡಿಗಳು ಮಾರಾಟಕ್ಕೆ ಲಭ್ಯವಿವೆ. ಜನ ಸೇವಾ ಬ್ಯಾಂಕ್ ಮುಖ್ಯಸ್ಥ ಎ.ವಿ. ಸಂಕನೂರ ಮಾತನಾಡಿ, ಸಾವಯವ ಬೆಳೆಗಳು ಆರೋಗ್ಯಕ್ಕೆ ಉತ್ತಮ. ಇಂತಹ ಬೆಳೆಗಳು ಮಾರುಕಟ್ಟೆಗೆ ಬರಬೇಕಿದ್ದು, ದಲ್ಲಾಳಿಗಳ ಹಾವಳಿ ಕಡಿಮೆಯಾಗಿ ನೇರವಾಗಿ ರೈತರಿಗೆ ಯೋಗ್ಯ ದರ ಸಿಗಬೇಕು ಎಂದರು. ಸಹಜ ಸಮೃದ್ಧಿ ಸಂಸ್ಥೆಯ ಮುಖ್ಯಸ್ಥ ಮಲ್ಲಿಕಾರ್ಜುನ ಹೊಸಪಾಳ್ಯ ಮಾತನಾಡಿ, ದೇಶ ಸೇರಿದಂತೆ ವಿದೇಶದ ಸುಮಾರು 12 ಬಗೆಯ ವಿವಿಧ ಹಲಸಿನ ತಳಿಗಳನ್ನು ಇಲ್ಲಿ ಮಾರಾಟ ಮತ್ತು ಪ್ರದರ್ಶನಕ್ಕೆ ಇಡಲಾಗಿದೆ. ಹಲಸಿನ ಮೇಳ ಮಾಡುವುದರ ಜೊತೆ ಜೊತೆಗೆ ಹಲಸು ಕೃಷಿಯ ಬಗ್ಗೆ ರೈತರಿಗೆ ಮಾರ್ಗದರ್ಶನ ಮಾಡಲಾಗುತ್ತಿದೆ ಎಂದರು. ಅರ್ಬನ್ ಓಯಾಸಿಸ್ ಮಾಲ್‌ನ ವ್ಯವಸ್ಥಾಪಕ ರಮೇಶ ಇಂದೂರ, ದೇಸಿ ಬೀಜ ತಳಿಗಳ ಪೋಷಕಿ ಸೀಮಾ ಪ್ರಸಾದ್, ಶರಣಗೌಡ ಬಿರಾದಾರ ಇದ್ದರು.



ಜಿಲ್ಲೆಯ ಅನ್ನದಾತ ಕಂಗಾಲು | ವರುಣದೇವನ ಕೃಪೆಗೆ ಪ್ರಾರ್ಥನೆ

ಬಾರದ ಮಳೆ; ಬಾಡಿದ ಬೆಳೆ!

ಮಹಾಂತೇಶ ಕಣವಿ

ಧಾರವಾಡ: ಮೃಗಶಿರ ನಕ್ಷತ್ರ ಬರಿಗೈಲಿ ಬಂದು ಜಿಲ್ಲೆಯ ರೈತ ಕುಲದಲ್ಲಿ ನಿರಾಶೆ ಮೂಡಿಸಿದೆ. ಮುಂಗಾರು ಹಂಗಾಮಿನ ಆರಂಭದಲ್ಲೇ ವರುಣನ ಅವಕೃಪೆಯಿಂದ ಜಿಲ್ಲೆಯಲ್ಲಿ ಬಿತ್ತನೆ ಮಾಡಿದ್ದ ಬೆಳೆಗಳು ಹೊಲದಲ್ಲಿ ಬಾಡುತ್ತಿದ್ದು, ರೈತರು ಕಣ್ಣೀರು ಹಾಕುವಂತಾಗಿದೆ.

ಮುಂಗಾರು ನಿರೀಕ್ಷೆ ಹುಸಿ: ರೋಹಿಣಿ ನಕ್ಷತ್ರದ ಕೊನೆಯಲ್ಲಿ ಬಿದ್ದ ಅಲ್ಪಸ್ವಲ್ಪ ಮಳೆ ನಂಬಿ ಜಿಲ್ಲೆಯ ಅಣ್ಣಿಗೇರಿ, ನವಲಗುಂದ, ಕಲಘಟಗಿ, ಅಳ್ನಾವರ ಮತ್ತು ಧಾರವಾಡ ಗ್ರಾಮೀಣ ಭಾಗದ ರೈತರು ಭೂಮಿಯನ್ನು ಹದಗೊಳಿಸಿ, ಅತ್ಯಂತ ಉತ್ಸಾಹದಿಂದ ಬಿತ್ತನೆ ಕಾರ್ಯ ಮುಗಿಸಿದ್ದರು.

ಸದ್ಯ ಶೇ.40ರಷ್ಟು ಬಿತ್ತನೆ: ಜಿಲ್ಲೆಯಲ್ಲಿ 2.82 ಲಕ್ಷ ಹೆಕ್ಟೇರ್ ಬಿತ್ತನೆ ಗುರಿ ಪೈಕಿ ಕೃಷಿ ಇಲಾಖೆ ವರದಿ ಪ್ರಕಾರ ಶೇ.80ರಷ್ಟು ಬಿತ್ತನೆ ಆಗಿದೆ. ಆದರೆ, ವಾಸ್ತವದಲ್ಲಿ ಶೇ.40ರಷ್ಟು ಬಿತ್ತನೆ ಕಾರ್ಯ ಮುಗಿದಿದೆ. ಹೆಸರು, ಉದ್ದು, ಸೋಯಾಬಿನ್, ಜೋಳದ ಬಿತ್ತನೆಯು ಭರದಿಂದ ನಡೆದಿತ್ತು.

ರೈತರೊಡನೆ ಜೂಜಾಟ: ಜೂನ್ ಆರಂಭದಲ್ಲಿ ಬರಬೇಕಿದ್ದ ಮೃಗಶಿರ ಮಳೆ ಸಂಪೂರ್ಣವಾಗಿ ಕೈಕೊಟ್ಟಿದೆ. ಮೃಗಶಿರ ಮಳೆ ಬಂದರೆ, ಮೃಗವೂ ತೃಪ್ತಿಯಾಗಲಿದೆ ಎಂಬ ನಾಣ್ಣುಡಿ ಜನಜನಿತ. ಆದರೆ, ಈ ಬಾರಿಯ ಮುಂಗಾರು ಮಾನ್ಸೂನ್ ರೈತರೊಡನೆ ಜೂಜಾಟ ಆಡುತ್ತಿದೆ.



ಜಿಲ್ಲೆಯಲ್ಲಿ ಶೇ.80ರಷ್ಟು ಬಿತ್ತನೆ ಆಗಿದೆ. ಬೆಳೆಯೂ ಉತ್ತಮವಾಗಿದೆ. ಸದ್ಯ ಮಳೆ ಬೇಕಿದೆ. ಹತ್ತಿರದ ನೀರಾವರಿ ರೈತರ ಹಾಗೂ ಕೃಷಿ ಹೊಂಡದ ಸಹಾಯದಿಂದ ಬೆಳೆ ಉಳಿಸಿಕೊಳ್ಳಬೇಕು. ಜೊತೆಗೆ ಕೃಷಿ ವಿಜ್ಞಾನಿಗಳ ಸಲಹೆ ಪಡೆಯಬೇಕು.

■ ಮಂಜುನಾಥ ಅಂತರವಳ್ಳಿ, ಜಂಟಿ ನಿರ್ದೇಶಕರು ಜಿಲ್ಲಾ ಕೃಷಿ ಇಲಾಖೆ-ಧಾರವಾಡ

ಒಣಗಿದ ಬೆಳೆಗಳು: ಮಾರ್ಚ್, ಏಪ್ರೀಲ್ ಹಾಗೂ ಮೇ ತಿಂಗಳ ಅತ್ಯಕ್ಕೆ ವಾಡಿಕೆ 120.4 ಮಿಮೀ ಮಳೆಯ ಪೈಕಿ 213 ಮಿಮೀ ಮಳೆ ಸುರಿದಿದೆ. ಹೀಗಾಗಿ ಮೇ ಕೊನೆಗೆ ಬಿತ್ತನೆ ಕಾರ್ಯ ಮಾಡಿದ್ದು, ಜೂನ್ ತಿಂಗಳಲ್ಲಿ ಬಾರದ ಮಳೆಯಿಂದಾಗಿ ಬೆಳೆ ಎಲ್ಲವೂ ಒಣಗುತ್ತಿದೆ.

ಬಿತ್ತನೆ ಮಾಡಿದ ಬೀಜಗಳು ಮೊಳಕೆಯೊಡೆದು ಕೇವಲ ನಾಲ್ಕೈದು ಇಂಚು ಬೆಳೆ ಬೆಳೆಯುವಷ್ಟರಲ್ಲೇ ಪ್ರಖರ ಬಿಸಿಲು ಆರಂಭವಾಗಿದೆ. ಜತೆಗೆ ಮಣ್ಣಿನಲ್ಲಿ ತೇವಾಂಶ ಸಂಪೂರ್ಣವಾಗಿ ಆರಿದ್ದು, ಎಳೆಯ ಸಸಿಗಳು ಒಣಗುತ್ತಿದ್ದು, ರೈತರಲ್ಲಿ ಆತಂಕ ಮೂಡಿಸಿದೆ.

ಧಾರವಾಡ ಜಿಲ್ಲೆಯ ಕಪ್ಪು ಮಣ್ಣಿನ ಒಡಲು ಸದ್ಯ ಮಳೆಗಾಗಿ ಚಾತಕ ಪಕ್ಷಿಯಂತೆ ಕಾಯುತ್ತಿದೆ. ಆಕಾಶದಲ್ಲಿ ಮೋಡಗಳು ಕವಿಯುತ್ತಿದ್ದರೂ ಮಳೆ ಸುರಿಯುತ್ತಿಲ್ಲ. ಜಿಲ್ಲೆಯ ಅನ್ನದಾತ 'ಬಾರೋ ಮಳೆರಾಯ' ಎಂದು ಆಕಾಶದತ್ತ ಮುಖ ಮಾಡಿ ಪ್ರಾರ್ಥಿಸುತ್ತಿದ್ದಾನೆ.

ಮರು ಬಿತ್ತನೆಯ ಭೀತಿ: ಇನ್ನೆರಡು ದಿನಗಳಲ್ಲಿ ಮಳೆ ಬರದಿದ್ದರೆ ಕೈಗೆ ಬಂದ ಬೆಳೆ ಸಂಪೂರ್ಣ ನಾಶವಾಗಲಿದೆ. ಅಲ್ಲದೇ, ರೈತರು ಸಾಲ ಸೂಲ ಮಾಡಿ ಮತ್ತೆ ಮರು ಬಿತ್ತನೆ ಮಾಡಬೇಕಾದ ದುಸ್ಥಿತಿ ಎದುರಾಗಲಿದೆ ಎಂದು ರೈತ ರವಿ ಬೊಬ್ಬಕ್ಕನವರ ಅಂಬೋಣ.

ರೈತರ ಅಳಲು

ಬ್ಯಾಂಕಿನಾಗ ಸಾಲ ಮಾಡಿ, ಬಿತ್ತನೆ ಬೀಜ-ಗೊಬ್ಬರ ತಂದು ಬಿತ್ತಿದ್ದೇವು. ಮೃಗಶಿರ ಮಳೆ ಚಲೋ ಆಗ್ತದ ಅನ್ಕೊಂಡಿದ್ವಿ, ಆದ್ರೆ ಬಿಸಿಲಿಗೆ ಮಣ್ಣು ಒಣಗಿ ಸಸಿಗಳೆಲ್ಲ ಕಣ್ಣೆದುರೇ ಕರಗಿ ಹೋಗ್ತಿವೆ. ದೇವ್ರು ನಮ್ ಕಣ್ಣು ಒರೆಸಬೇಕು ಎನ್ನುತ್ತಾರೆ ಅಣ್ಣಿಗೇರಿ ರೈತ ಮಲ್ಲಪ್ಪ.

ದಿಗಂತ ವಿಶೇಷ

ಮುಂದುವರಿದ ಬಿಸಿಗಾಳಿ | ಆತಂಕದಲ್ಲಿ ಅನ್ನದಾತ

ಕೈಕೊಟ್ಟ ಮಳೆ: ಕೃಷಿ ಚಟುವಟಿಕೆ ಕುಂಠಿತ

ರವೀಂದ್ರ, ನಂದಪ್ಪನವರ

ಮುದ್ದೇಬಿಹಾಳ: ಜೂನ್ ಪ್ರಾರಂಭದಲ್ಲಿ ಅಲ್ಪ ಸ್ವಲ್ಪ ಮಳೆಯಾಗಿ ರೈತರಿಗೆ ನಿರೀಕ್ಷೆ ಹುಟ್ಟಿಸಿದ್ದ ರೋಹಿಣಿ ಮಳೆ ನಂತರದಲ್ಲಿ ಸ್ತಬ್ಧವಾಗಿ, ಕೃಷಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದ ರೈತರಿಗೆ ನಿರಾಶೆ ಆಗಿದೆ. ಹೊಲದಲ್ಲಿ ರಂಟೆ ಕುಂಟೆ ಹೊಡೆದು, ಟ್ರ್ಯಾಕ್ಟರ್ ಬಾಡಿಗೆ ಪಡೆದು ಮುಂಗಾರಿ ಬಿತ್ತನೆ ಮಾಡಲು ಸಾಧ್ಯವಾಗದೆ ಬೇಸಿಗೆಯ ಬಿಸಿಗಾಳಿ ವಾತಾವರಣ ತಾಲೂಕಿನಲ್ಲಿ ಮುಂದುವರಿದಿದೆ.

ಬೇಸಿಗೆ ಕಳೆದು ಮೃಗಶಿರ ಮಳೆಗೆ ವಾತಾವರಣ ತಂಪಾಗುತ್ತದೆ. ಒಣ ಬೇಸಾಯ ಆಧರಿತ ಭೂಮಿಗೆ ಒಂದೆರಡು ಮಳೆಯಾದರೆ, ಜಮೀನು ಸ್ವಚ್ಛಗೊಳಿಸಿ ಬೀಜ ಗೊಬ್ಬರ ಖರೀದಿಯ ನಿರೀಕ್ಷೆಯಲ್ಲಿದ್ದ ರೈತರು ನಿರಾಶರಾಗಿದ್ದು, ವಾಡಿಕೆಗಿಂತ ಹೆಚ್ಚು ಬಿಸಿ ಗಾಳಿಯ ವಾತಾವರಣ ಇದೆ.

ಅಂತರ್ಜಲ ಕುಸಿತ ಹಾಗೂ ಕಡಿಮೆ ಮಳೆಯಿಂದ ಭೂಮಿಯ ತಾಪ ಇನ್ನಷ್ಟು ಹೆಚ್ಚು ಹೋಗುತ್ತಿದೆ. ಜೂನ್ ಮಧ್ಯ ಭಾಗದಲ್ಲಿ ಮಳೆಗಾಲ ಕಡಿಮೆಯಾಗುವ ಹವಾಮಾನ ವರದಿಗಳು ಬರುತ್ತಿದ್ದಂತೆ ಬಿತ್ತನೆಗೆ ಬೀಜ ಗೊಬ್ಬರ ಸಂಗ್ರಹಿಸುವ ದಾವಂತದಲ್ಲಿ ಇದ್ದ ರೈತರು ಏನು ಮಾಡಬೇಕು ಎಂದು ತೋಚದೆ ಕೃಷಿ ಚಟುವಟಿಕೆಗಳು ಕಡಿಮೆಯಾಗುತ್ತಿವೆ.



ಹವಾಮಾನ ವರದಿಯ ಪ್ರಕಾರ ತಿಂಗಳಾಂತ್ಯದಲ್ಲಿ ಮಳೆ ಬರುವ ಸೂಚನೆ ಇದ್ದು, ಮುಂಗಾರು ಬಿತ್ತನೆ ಮಾಡಬೇಕು ಹೆಸರು ಕಾಳು ಆಡಿಕಾಳು ಬೆಳೆಯಬೇಕು ಎಂಬ ರೈತರ ನಿರೀಕ್ಷೆ ಈ ಬಾರಿಯೂ ಹುಸಿಯಾಗಿದೆ. ಕೆಲವು ಕಡೆ ಬೀಜ ಚಿಗುರು ಒಡೆಯುವ ಮತ್ತು ಫಸಲು ಸರಿಯಾಗಿ ಬೆಳೆದು ಫಲ ಕೊಡುವ ಸಮಸ್ಯೆ ಕೂಡ ಎದುರಾಗುವ ಲಕ್ಷಣಗಳು ಕಂಡುಬಂದಿವೆ.

ಇನ್ನೊಂದು ಕಡೆ ತಾಲೂಕಿನ ಕಾಲು ಭಾಗದಲ್ಲಿ ಕಬ್ಬು, ತರಕಾರಿ ನೀರಾವರಿ ಚಟುವಟಿಕೆಗಳು ಕಾಲುವೆ ನೀರು ಅವಲಂಬಿಸಿ ನಡೆಯಬೇಕಾಗಿದೆ. ಮಳೆ ಕಡಿಮೆ ಇರುವುದರಿಂದ ಆಲಮಟ್ಟಿ ಎಡದಂಡೆ ಕಾಲುವೆಗೆ ಕೇವಲ ಕೆಲವು ದಿನಗಳಿಂದ ನೀರು ಬಿಟ್ಟಿಲ್ಲ. ಇದರಿಂದ ಜನ ಜಾನುವಾರುಗಳಿಗೂ ತೊಂದರೆ ತಪ್ಪಿಲ್ಲ. ಉಳಿದಂತೆ ಚಿಮ್ಮಲಗಿ ನಾಗರಬೆಟ್ಟ ನೀರಾವರಿ ಯೋಜನೆಗಳು ಹಣಕಾಸಿನ ನೆರವಿಗೆ ಬಾಯಿ ತೆರೆಯುತ್ತಿವೆ. ಒಟ್ಟಿನಲ್ಲಿ ಒಣ ಬೇಸಾಯ ಆಧರಿತ ರೈತರ ಬದುಕು ಮಳೆಯೊಂದಿಗಿನ ಜೂಜಾಟ ಎಂಬಂತೆ ಆಗಿದೆ.

ಸೂರ್ಯಕಾಂತಿ, ತೊಗರಿ, ಕಡಲೆ ಬೀಜ ದಾಸ್ತಾನು ಮಾಡಿಕೊಂಡಿದ್ದೇವೆ. ಭೂಮಿ ಉಷ್ಣಾಂಶ ಇರುವುದರಿಂದ ಇನ್ನಷ್ಟು ಮಳೆಯಾದರೆ ರೈತರು ಬಿತ್ತನೆ ಮಾಡುವುದು ಒಳ್ಳೆಯದು. ನಾಲವಾಡ ಭಾಗದಲ್ಲಿ ಸ್ವಲ್ಪ ಮಳೆಯಾಗಿದೆ. ಆದರೂ ಇನ್ನೊಮ್ಮೆ ಮಳೆ ಆದ ಮೇಲೆ ಬಿತ್ತನೆ ಬೀಜ ನಾಟಿ ಒಡೆಯುತ್ತದೆ. ರೈತರು ಜುಲೈ ಮಧ್ಯ ಭಾಗದವರೆಗೆ ಬಿತ್ತನೆಗೆ ಅವಕಾಶ ಇರುವುದರಿಂದ ಕಾಯುವುದು ಉತ್ತಮ.

■ ಎಸ್.ಡಿ.ಭಾವಿಕಟ್ಟಿ, ಕೃಷಿ ಇಲಾಖೆ ಸಹಾಯಕ ನಿರ್ದೇಶಕರು

ಬೇಗ ಬಿತ್ತನೆ ಮಾಡಿ ಮುಂಗಾರು ಫಸಲು ತೆಗೆಯಬೇಕು ಮತ್ತು ಹಿಂಗಾರು ಫಸಲು ಕೈ ಹಿಡಿಯಬೇಕು ಎಂಬ ನಿರೀಕ್ಷೆ ಹವಾಮಾನ ವಿಪರೀತದಿಂದ ರೈತರನ್ನು ತೀವ್ರ ಸಂಕಷ್ಟಕ್ಕೆ ಗುರಿ ಮಾಡಿದ್ದು, ರೈತ ಬೆಳೆದರೆ ನಾಡಿಗೆ ಅನ್ನ ಇಲ್ಲದಿದ್ದರೆ ಹಿಂದುಳಿದ ಈ ಭಾಗಕ್ಕೆ ವ್ಯಾಪಾರ, ವಹಿವಾಟು ಕೂಡ ಕುಂಠಿತವಾಗುವ ಲಕ್ಷಣಗಳು ಕಂಡು ಬರುತ್ತಿವೆ. ಇದಕ್ಕೆ ಸರ್ಕಾರ ಮತ್ತು ಕೃಷಿ ಇಲಾಖೆಯ ಅಧಿಕಾರಿಗಳ ಕೊಡುವ ಪರಿಹಾರವೇನು ಎಂಬುದನ್ನು ಕಾದು ನೋಡಬೇಕಿದೆ.

ಕಿರುಸುದ್ದಿ

ಭಾರತ ಬುದ್ಧಶ್ರೀ ರಾಷ್ಟ್ರೀಯ ಪ್ರಶಸ್ತಿ ಪ್ರದಾನ



ತಾಳಿಕೋಟಿ: ಕರ್ನಾಟಕ ಜನತಾ ಸೇನಾ ದಳ ಬೆಂಗಳೂರು ಸಂಘಟನೆಯ ವತಿಯಿಂದ ನಗರದ ಕನ್ನಡ ಭವನದ ನಯನ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಸಂಗಮ ಸಮಾವೇಶದಲ್ಲಿ ಸಾಧಕರಾದ ನಜೀರ್ ಅಹ್ಮದ್ ಚೋರಗಸ್ತಿ ಅವರಿಗೆ ಪ್ರತಿಷ್ಠಿತ ಭಾರತ ಬುದ್ಧಶ್ರೀ ರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಮ ಸಮಾಜದ ನಿರ್ಮಾಣಕ್ಕಾಗಿ ಶ್ರಮಿಸಿದ ಮಹಾ ಸುಧಾರಕರಾದ ಬುದ್ಧ, ಬಸವಣ್ಣ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿ ಅಂಗವಾಗಿ ಈ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಕರುನಾಡ ಮಣ್ಣಿನಲ್ಲಿ ನಜೀರ್ ಅಹ್ಮದ್ ಅವರು ತೋರಿದ ಅಪ್ರತಿಮ ಸಾಧನೆ ಮತ್ತು ಸಮಾಜಮುಖಿ ಕಾರ್ಯಗಳನ್ನು ಗುರುತಿಸಿ, ಸಂಘಟನೆಯು ಈ ಗೌರವ ನಮನ ಸಲ್ಲಿಸಿದೆ. ಕಾರ್ಯಕ್ರಮದ ನೇತೃತ್ವವನ್ನು ವಹಿಸಿದ್ದ ಕರ್ನಾಟಕ ಜನತಾ ಸೇನಾ ದಳದ ಗೌರವಾಧ್ಯಕ್ಷರು, ಪತ್ರಕರ್ತರು ಹಾಗೂ ಚಲನಚಿತ್ರ ತಂತ್ರಜ್ಞರಾದ ಡಾ. ಕೆಂಚನೂರು ಶಂಕರ ಮತ್ತು ರಾಜ್ಯ ಅಧ್ಯಕ್ಷ ಎಚ್.ಸದಾಶಿವ ಅವರು ಪ್ರಶಸ್ತಿ ಪತ್ರ ನೀಡಿ ಸನ್ಮಾನಿಸಿದರು. ಸಮಾರಂಭದಲ್ಲಿ ನಾಡಿನ ಪ್ರಮುಖರು ಹಾಗೂ ಸಂಘಟನೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

4 ಲಕ್ಷ ರೂ.ಮೌಲ್ಯದ ಆಭರಣ ಕಳ್ಳತನ

ಹಾವೇರಿ: ಮನೆಯ ದೇವರ ಕೋಣೆಯಲ್ಲಿಟ್ಟಿದ್ದ ಸುಮಾರು 4 ಲಕ್ಷ ರೂ.ಮೌಲ್ಯದ ಬೆಲೆ ಬಾಳುವ ನೆಕ್ಲೆಸ್‌ನ್ನು ಕಳ್ಳತನ ಮಾಡಿದ ಆರೋಪದಡಿ ಇಬ್ಬರ ವಿರುದ್ಧ ಠಾಣೆಯಲ್ಲಿ ದೂರು ದಾಖಲಾಗಿರುವ ಘಟನೆ ನಡೆದಿದೆ. ಹಾವೇರಿ ತಾಲೂಕು ಹೊಸಳ್ಳಿ ಗ್ರಾಮದಲ್ಲಿ ವಾಸವಿರುವ ಸವಣೂರು ತಾಲೂಕು ಕರಡಿ ಗೋನಾಳ ಗ್ರಾಮದ ಮಲ್ಲಿಕ್ ಅಲಿಯಾಸ್ ಮುಬಾರಕ್ ಮುಜಾವರ ಹಾಗೂ ಸಾಹಿಲ್ ತೀರ್ಥ ಎಂಬುವವರ ವಿರುದ್ಧ ದೇವಿಹೊಸೂರಿನ ರಝಿಯಾ ಬಂಕಾಪೂರ ದೂರು ದಾಖಲಿಸಿದ್ದಾರೆ. ಆರೋಪಿತರು ಹೊಸಳ್ಳಿ ಗ್ರಾಮದಲ್ಲಿರುವ ದೂರುದಾರಳ ತಂದೆ ಮಾಬುಬಲಿ ನರಗುಂದ ಇವರ ಮನೆಯ ದೇವರ ಕೋಣೆಯ ಬಾಗಿಲು ತೆರೆದು, ಬ್ಯಾಗ್‌ನಲ್ಲಿಟ್ಟಿದ್ದ 4 ಲಕ್ಷ ರೂ.ಬೆಲೆಬಾಳುವ ನೆಕ್ಲೆಸ್‌ನ್ನು ಕಳುವು ಮಾಡಿದ್ದಾರೆಂದು ಎಫ್‌ಐಆರ್‌ನಲ್ಲಿ ತಿಳಿಸಿದೆ. ಹಾವೇರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣದಾಖಲಾಗಿದೆ.

ಚಿನ್ನಾಭರಣ ದೋಚಿ ಪರಾರಿ

ಹಾವೇರಿ: ತಾಲೂಕಿನ ಅಗಡಿ ಗ್ರಾಮದಲ್ಲಿ ಮನೆಗೆ ಹಾಕಿದ್ದ ಕೀಲಿ ಮುರಿದು ಒಳಗೆ ನುಗ್ಗಿರುವ ಕಳ್ಳರು ನಗದು ಹಾಗೂ ಚಿನ್ನಾಭರಣವನ್ನು ಕಳ್ಳತನ ಮಾಡಿಕೊಂಡು ಪರಾರಿಯಾಗಿದ್ದಾರೆ. ಅಗಡಿ ಆನಂದವನ ಪ್ಲಾಟ್‌ನ ನಿವಾಸಿ ದ್ಯಾಮಕ್ಕ ಮಹಾಂತೇಶ ಕಟ್ಟಿಕೇರ ಎಂಬುವವರಿಗೆ ಸೇರಿದ ಮನೆಯಲ್ಲಿ ಕಳ್ಳತನ ನಡೆದಿದೆ. ಅಪರಿಚಿತ ಕಳ್ಳರು ಮನೆಗೆ ಹಾಕಿದ್ದ ಬೀಗವನ್ನು ಮುರಿದು ಒಳಗೆ ನುಗ್ಗಿ, ಮನೆಯಲ್ಲಿಟ್ಟಿದ್ದ 75 ಸಾವಿರ ನಗದು, 30 ಸಾವಿರ ಕಿಮ್ಮತ್ತಿನ ಬಂಗಾರದ ಎಂಗ್ಡ್ಯಾನ್ಸ್, 20 ಸಾವಿರ ಬೆಲೆಬಾಳುವ ಕಾಲು ಚೈನ್, 15 ಸಾವಿರ ಬೆಲೆಬಾಳುವ ಮಿಕ್ಸರ್, ಟೇಬಲ್ ಫ್ಯಾನ್, ಸಿಲ್ಲಿಂಗ್ ಫ್ಯಾನ್‌ನ್ನು ಕಳ್ಳತನ ಮಾಡಿಕೊಂಡು ಹೋಗಿದ್ದಾರೆಂದು ದೂರಿನಲ್ಲಿ ತಿಳಿಸಿದೆ. ಹಾವೇರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಳೆ ವಿಶ್ವ ಯೋಗ ದಿನ ಆಚರಣೆ

ಹುಬ್ಬಳ್ಳಿ: ಜೂನ್ 21ರ ವಿಶ್ವಯೋಗ ದಿನ ಆಚರಣೆಯ ಅಂಗವಾಗಿ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಪ್ರೇರಿತ ಕ್ಷಮತಾ ಸೇವಾ ಸಂಸ್ಥೆ ಹಾಗೂ ಧನ್ಯೋಸ್ಮಿ ಯೋಗ ಕೇಂದ್ರದ ಸಹಯೋಗದಲ್ಲಿ

ವಿಶ್ವ ಯೋಗ ದಿನವನ್ನು ಜೂ.21ರಂದು ಬೆಳಗ್ಗೆ 6.15ಕ್ಕೆ ದೇಶಪಾಂಡೆ ನಗರದ ಕರ್ನಾಟಕ ಜಿಮ್ ಖಾನ್ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಳೆದ 8 ವರ್ಷಗಳಿಂದಲೂ ಸಚಿವ ಪ್ರಹ್ಲಾದ ಜೋಶಿಯವರು ತಮ್ಮ ಕ್ಷಮತಾ ಸೇವಾ ಸಂಸ್ಥೆಯ ಮೂಲಕ ಅಂತಾರಾಷ್ಟ್ರೀಯ ಯೋಗದಿನವನ್ನು ಪ್ರತಿ ಬಾರಿಯೂ ವೈಶಿಷ್ಟ್ಯ ಪೂರ್ಣವಾಗಿ ಆಚರಿಸುತ್ತಾ ಬಂದಿದ್ದು, ಈ ಬಾರಿಯೂ ನಗರದಲ್ಲಿ ವಿಶ್ವ ಯೋಗದಿನವನ್ನು ಬೃಹತ್ ಮಟ್ಟದಲ್ಲಿ ಆಚರಿಸಲು ಸಿದ್ಧತೆ ನಡೆಸಿದ್ದಾರೆ. ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಸದಸ್ಯ ಲಿಂಗರಾಜ ಪಾಟೀಲ, ಖ್ಯಾತ ದಂತ ವೈದ್ಯ ಡಾ. ನೀಲಕಮಲ್ ಹಳ್ಳೂರ ಆಗಮಿಸಲಿದ್ದಾರೆ. ಕ್ಷಮತಾ ಸಂಚಾಲಕ ಗೋವಿಂದ ಜೋಶಿ ಹಾಗೂ ಧನ್ಯೋಸ್ಮಿ ಯೋಗ ಕೇಂದ್ರದ ಯೋಗ ಗುರು ವಿನಾಯಕ ತೆಲಗೇರಿ ಉಪಸ್ಥಿತರಿರುವರು.

ಧನ್ಯೋಸ್ಮಿ ಯೋಗ ಕೇಂದ್ರದ ಯೋಗಗುರು ವಿನಾಯಕ ತಲಗೇರಿ ಅವರು ಈ ಯೋಗ ಶಿಬಿರ ನಡೆಸಿಕೊಡಲಿದ್ದು ಸ್ತ್ರೀಯರು, ಪುರುಷರು ಹಾಗೂ ಎಲ್ಲ ವಯೋಮಿತಿಯವರು ಶಿಬಿರದಲ್ಲಿ ಭಾಗವಹಿಸಬಹುದಾಗಿದೆ. ಯೋಗಾಸಕ್ತರು ಬೆಳಿಗ್ಗೆ 6 ಗಂಟೆಗೆ ಸಭಾಂಗಣದಲ್ಲಿ ಹಾಜರಿರಬೇಕು. ಯೋಗಮ್ಯಾಟ್ ಅಥವಾ ಚಿಕ್ಕ ಜಮಖಾನ ತರಬೇಕು ಎಂದು ಕ್ಷಮತಾ ಸಂಸ್ಥೆ ಸಂಚಾಲಕ ಗೋವಿಂದ ಜೋಶಿ ಹಾಗೂ ಧನ್ಯೋಸ್ಮಿ ಸಂಸ್ಥೆಯ ಯೋಗ ಗುರು ವಿನಾಯಕ ತಲಗೇರಿ ತಿಳಿಸಿದ್ದಾರೆ.

ಬಾಲ್ಯವಿವಾಹ ತಡೆದ ಅಧಿಕಾರಿಗಳು

ಖಾನಾಪುರ: ತಾಲೂಕಿನ ಗ್ರಾಮವೊಂದರಲ್ಲಿ ಶುಕ್ರವಾರ ನಿಗದಿಯಾಗಿದ್ದ ಬಾಲ್ಯವಿವಾಹದ ಬಗ್ಗೆ ಮಾಹಿತಿ ದೊರೆಯುತ್ತಲೇ ಕಾರ್ಯಪ್ರವೃತ್ತರಾದ ಶಿಶು ಅಭಿವೃದ್ಧಿ ಯೋಜನಾಧಿಕಾರಿ ವಿಕ್ರಮ ಕೆ.ಬಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಿಬ್ಬಂದಿ ಹಾಗೂ ಸ್ಥಳೀಯ ಪೊಲೀಸರ ಸಹಾಯದೊಂದಿಗೆ ಗ್ರಾಮಕ್ಕೆ ತೆರಳಿ ಬಾಲ್ಯವಿವಾಹ ತಡೆಯುವಲ್ಲಿ ಸಫಲರಾಗಿದ್ದಾರೆ.

ಬೆಳಗಾವಿಯ ಸ್ಪಂದನಾ ಸ್ವಸಹಾಯ ಸಂಸ್ಥೆಗೆ ಶುಕ್ರವಾರ ಬಾಲ್ಯವಿವಾಹದ ಬಗ್ಗೆ ಮಾಹಿತಿ ಬಂದಿತ್ತು. ಸಂಸ್ಥೆಯಿಂದ ಈ ಮಾಹಿತಿಯನ್ನು ಶಿಶು ಅಭಿವೃದ್ಧಿ ಅಧಿಕಾರಿಗೆ ರವಾನಿಸಲಾಗಿತ್ತು. ಮಾಹಿತಿಯ ಜಾಡು ಹಿಡಿದು ಸಾಮಾನ್ಯರಂತೆ ಮದುವೆ ನಡೆಯುತ್ತಿದ್ದ ಸ್ಥಳ ಪ್ರವೇಶಿಸಿದ ಅವರು ಬಾಲಕಿಯ ಪೋಷಕರನ್ನು ಸಂಪರ್ಕಿಸಿ ಅವರು ಮಾಡುತ್ತಿರುವ ಬಾಲ್ಯವಿವಾಹದ ಬಗ್ಗೆ ಮತ್ತು ಈ ಮದುವೆಗೆ ಇರುವ ಕಾನೂನಿನ ಅಡೆತಡೆಗಳು ಮತ್ತು ಮದುವೆ ನಡೆದ ಬಳಿಕ ಉಂಟಾಗುವ ಕಾನೂನು ಕ್ರಮಗಳ ಬಗ್ಗೆ ವಿವರಿಸಿದರು.

ಬಾಲ್ಯವಿವಾಹದ ಬಗ್ಗೆ ಪೋಷಕರಿಗೆ ಮನವರಿಕೆ ಮಾಡಿಸಿದ ಅಧಿಕಾರಿಗಳು ಸ್ವಯಂ ಪ್ರೇರಣೆಯಿಂದ ಮದುವೆ ನಿಲ್ಲಿಸುವಂತೆ ತಿಳಿ ಹೇಳಿದರು. ನಂತರ ಮದುವೆಗೆ ಆಗಮಿಸಿದ್ದ ಹಿರಿಯರ ಸಭೆ ನಡೆಸಿ ಸರ್ವಾನುಮತದಿಂದ ಮದುವೆ ನಿಲ್ಲಿಸಲಾಯಿತು. ಬಾಲಕಿ ಪ್ರಾಪ್ತ ವಯಸ್ಸು ತಲುಪುವವರೆಗೆ ಮದುವೆ ಮಾಡದಂತೆ ಪೋಷಕರಿಂದ ಮುಚ್ಚಳಿಕೆ ಬರೆಸಿಕೊಂಡ ಅಧಿಕಾರಿಗಳು ಮತ್ತು ಪೊಲೀಸರು ಬಾಲ್ಯವಿವಾಹಕ್ಕೆ ಕಡಿವಾಣ ಹಾಕಿ ಸ್ಥಳದಿಂದ ತೆರಳಿದರು ಎಂದು ಮೂಲಗಳು ತಿಳಿಸಿವೆ.

ಬಾವಿಯಲ್ಲಿ ಮಹಿಳೆಯ ಶವ ಪತ್ತೆ: ಕೊಲೆ ಶಂಕೆ

ಕಲಬುರಗಿ: ತಾಲೂಕಿನ ಮೇಳಕುಂದಾ ಕೆ.ಗ್ರಾಮದಲ್ಲಿ ಬಾವಿಯಲ್ಲಿ ಮಹಿಳೆಯ ಶವ ಪತ್ತೆಯಾಗಿರುವ ಘಟನೆ ಬೆಳಕಿಗೆ ಬಂದಿದ್ದು, ಪ್ರಕರಣಕ್ಕೆ ಹೊಸ ತಿರುವು ಸಿಕ್ಕಿದೆ.

ಮೃತ ಮಹಿಳೆಯನ್ನು ಲಕ್ಷ್ಮೀ ಅಂಬಣ್ಣಾ ಕುಂಬಾರ (30) ಎಂದು ಗುರುತಿಸಲಾಗಿದೆ. ಅವರು ಬೀದರ್ ಜಿಲ್ಲೆಯ ಬಾಲ್ಕಿ ತಾಲೂಕಿನ ಮಾಲ್ಚಾಪುರ ಗ್ರಾಮದ ನಿವಾಸಿಯಾಗಿದ್ದು, ಸುಮಾರು ಹತ್ತು ವರ್ಷಗಳ ಹಿಂದೆ ಮೇಳಕುಂದಾ ಕೆ.ಗ್ರಾಮದ ಅಂಬಣ್ಣಾ ಕುಂಬಾರ ಅವರನ್ನು ವಿವಾಹವಾಗಿದ್ದರು. ಕುಟುಂಬಸ್ಥರ ಆರೋಪದ ಪ್ರಕಾರ, ಅಂಬಣ್ಣಾ ಕುಂಬಾರ ಅವರು ಮೊದಲ ಮದುವೆಯಾಗಿರುವ ವಿಷಯವನ್ನು ಮುಚ್ಚಿಟ್ಟು ಲಕ್ಷ್ಮೀ ಅವರನ್ನು ಎರಡನೇ ಮದುವೆಯಾಗಿದ್ದರು. ಮೊದಲ ಪತ್ನಿ ಮನೆಯಿಂದ ದೂರವಾದ ಬಳಿಕ ಲಕ್ಷ್ಮೀ ಅವರೊಂದಿಗೆ ದಾಂಪತ್ಯ ಜೀವನ ನಡೆಸುತ್ತಿದ್ದರು. ಆದರೆ ಇತ್ತೀಚೆಗೆ ಮೊದಲ ಪತ್ನಿ ಮರಳಿ ಮನೆಗೆ ಬಂದ ಬಳಿಕ ಲಕ್ಷ್ಮೀ ಅವರಿಗೆ ನಿರಂತರ ಕಿರುಕುಳ ನೀಡಲಾಗುತ್ತಿತ್ತು ಎಂದು ಆರೋಪಿಸಲಾಗಿದೆ.



ನಿನ್ನೆ ಲಕ್ಷ್ಮೀ ಅವರನ್ನು ಹೊಡೆದು ಕೊಲೆ ಮಾಡಿ ಬಳಿಕ ಶವವನ್ನು ಬಾವಿಗೆ ಎಸೆದಿದ್ದಾರೆ ಎಂದು ಮೃತ ಮಹಿಳೆಯ ಕುಟುಂಬಸ್ಥರು ಗಂಭೀರ ಆರೋಪ ಮಾಡಿದ್ದಾರೆ. ಘಟನೆಯ ಕುರಿತು ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮಹಿಳೆಯ ಸಾವಿನ ನಿಖರ ಕಾರಣ ಹಾಗೂ ಕುಟುಂಬಸ್ಥರ ಆರೋಪಗಳ ಕುರಿತು ತನಿಖೆ ಮುಂದುವರಿದಿದೆ.

ವೃದ್ಧ ದಂಪತಿಗೆ ವಂಚನೆ: ಮಗಳು, ಅಳಿಯನ ವಿರುದ್ಧ ದೂರು

ಅಂಕೋಲಾ: ಆರೈಕೆಯ ನೆಪದಲ್ಲಿ ತಮ್ಮ ಮನೆಯಲ್ಲಿ ಇರಿಸಿಕೊಂಡು ವಿವಿಧ ಬ್ಯಾಂಕ್ ಖಾತೆಗಳಿಂದ ಲಕ್ಷಾಂತರ ರೂಪಾಯಿ ಹಣ ತೆಗೆದು ಮೋಸ ಮಾಡಿರುವುದಾಗಿ ವೃದ್ಧ ದಂಪತಿ ಸ್ವತಃ ತಮ್ಮ ಮಗಳು ಮತ್ತು ಅಳಿಯನ ಮೇಲೆ ದೂರು ದಾಖಲಿಸಿದ್ದು, ಕೃತ್ಯಕ್ಕೆ ಪ್ರಚೋದನೆ ನೀಡಿರುವ ಅಳಿಯನ ಅಕ್ಕನ ಮೇಲೂ ದೂರು ದಾಖಲಿಸಲಾಗಿದೆ.

ನ್ಯಾಯಾಲಯದಲ್ಲಿ ದಾಖಲಿಸಿರುವ ದೂರಿಗೆ ಸಂಬಂಧಿಸಿದಂತೆ ನ್ಯಾಯಾಲಯದ ನಿರ್ದೇಶನದ ಮೇರೆಗೆ ಅಂಕೋಲಾ ಪೊಲೀಸರು ತೆಂಕಣಕೇರಿ ಪೂಜಗೇರಿ ರಸ್ತೆಯ ನಿವಾಸಿ ನಾಗಶ್ರೀ ನಾಯ್ಕ, ಸೂರಜ ನಾಯ್ಕ ಮತ್ತು ಶೀತಲ್ ಎನ್ನುವವರ ಮೇಲೆ ಪ್ರಕರಣ ದಾಖಲಿಸಿದ್ದಾರೆ.

ತಾಲೂಕಿನ ತೆಂಕಣಕೇರಿಯ ಬೊಮ್ಮಯ್ಯ ದೇವಾಲಯದ ಸಮೀಪದ ನಿವಾಸಿಗಳಾದ ಗುಲಾಬಿ ಪಾಂಡುರಂಗ ನಾಯ್ಕ(70) ಪಾಂಡುರಂಗ ಚಾಕು ನಾಯ್ಕ(75) ಇವರು ತಮ್ಮ ಮಗಳು ಮತ್ತು ಅಳಿಯನ ಮೇಲೆ ದೂರು ದಾಖಲಿಸಿದ್ದು ತಮ್ಮ ಮಗಳು ನಾಗಶ್ರೀಯನ್ನು ಸಮೀಪದ ನಿವಾಸಿ ಸೂರಜ್ ಅರವಿಂದ ನಾಯ್ಕ ಎನ್ನುವವರ ಜೊತೆಗೆ 2022 ರಲ್ಲಿ ಮದುವೆ ಮಾಡಿದ್ದು ಸಮೀಪದಲ್ಲೇ ಮನೆ ಇರುವುದರಿಂದ ಆಗಾಗ ಬಂದು ಪ್ರೀತಿ ವಿಶ್ವಾಸದಿಂದ ಮಾತನಾಡಿಸುತ್ತಿದ್ದ ಮಗಳು ಮತ್ತು ಅಳಿಯ ಆರೈಕೆಯ ನೆಪದಲ್ಲಿ 2022ರ ನವೆಂಬರ್ 13ರಂದು ಅವರ ಮನೆಗೆ ಕರೆಸಿಕೊಂಡಿದ್ದು ಮನೆಯಲ್ಲಿ ಇದ್ದ ಸಂದರ್ಭವನ್ನು ದುರುಪಯೋಗಪಡಿಸಿಕೊಂಡು ಮೊಬೈಲ್ ಫೋನ್ ಮತ್ತು ಎ.ಟಿ.ಎಂ ಕಾರ್ಡ್ ಬಳಸಿ ಪಾಂಡುರಂಗ ನಾಯ್ಕ ಮತ್ತು ಲತಾ ನಾಯ್ಕ ಅವರ ವಿವಿಧ ಬ್ಯಾಂಕ್ ಖಾತೆಗಳಿಂದ ಸುಮಾರು 47 ಲಕ್ಷ ರೂಪಾಯಿಗಳ ವಂಚನೆ ನಡೆಸಿದ್ದು ವಿಷಯ ತಿಳಿದು ಹಣ ಮರಳಿಸುವಂತೆ ಕೇಳಲು 2026ರ ಏಪ್ರಿಲ್ 15ರಂದು ಮನೆಗೆ ಹೋದಾಗ ಅವಾಚ್ಯ ಶಬ್ದಗಳಿಂದ ಬಯ್ದು ಹಣ ಕೇಳಿದರೆ ಕೈ ಕಾಲು ಮುರಿದು ಇನ್ನಿಲ್ಲದಂತೆ ಮಾಡುವುದಾಗಿ ವೃದ್ಧ ದಂಪತಿಗೆ ಅವರ ಮಗಳು ಮತ್ತು ಅಳಿಯ ಜೀವ ಬೆದರಿಕೆ ಹಾಕಿರುವ ಕುರಿತಂತೆ ದೂರು ದಾಖಲಿಸಲಾಗಿದೆ. ಪ್ರಕರಣ ದಾಖಲಿಸಿರುವ ಅಂಕೋಲಾ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಗ್ಯಾರಂಟಿ ಪರಿಷ್ಕರಣೆ: ಸರ್ಕಾರದ ಕ್ರಮಕ್ಕೆ ರಂಭಾಪುರಿ ಶ್ರೀ ಸ್ವಾಗತ

ಕನಕಗಿರಿ: ಗ್ಯಾರಂಟಿ ಯೋಜನೆಗಳು ಚುನಾವಣಾ ಪೂರ್ವದಲ್ಲಿ ಎಲ್ಲರ ಗಮನ ಸೆಳೆದಿದ್ದವು. ಅದರ ಪರಿಣಾಮವಾಗಿ ಕಾಂಗ್ರೆಸ್ ಬಹುಮತದಿಂದ ಅಧಿಕಾರಕ್ಕೆ ಬಂತು. ಆದರೆ, ಯೋಜನೆಗಳ ಅನುಷ್ಠಾನದ ವೇಳೆ ರಾಜ್ಯದ ಬೊಕ್ಕಸಕ್ಕೆ ಬಹಳಷ್ಟು ಹೊರೆ ಬಿದ್ದಿತು. ಇದೀಗ ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಪರಿಷ್ಕರಿಸಲು ಮುಂದಾಗಿರುವುದು ಉತ್ತಮ ಬೆಳವಣಿಗೆ ಎಂದು ಬಾಳೆಹೊನ್ನೂರು ಶ್ರೀರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.



ಪಟ್ಟಣದ ರಂಭಾಪುರಿ ಕಲ್ಯಾಣ ಮಂಟಪದಲ್ಲಿ ಪತ್ರಕರ್ತರ ಜೊತೆ ಶುಕ್ರವಾರ ಮಾತನಾಡಿದ ಅವರು, ಗ್ಯಾರಂಟಿ ಯೋಜನೆಗಳಿಗೆ ಹಣ ಒದಗಿಸಲು ಬೇರೆ ಬೇರೆ ಮೂಲಗಳಿಂದ ಹೆಚ್ಚಿನ ತೆರಿಗೆ ವಿಧಿಸಿದ್ದರಿಂದ ಜನಸಾಮಾನ್ಯರಿಗೆ ತೊಂದರೆಯಾಗಿರುವುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಗ್ಯಾರಂಟಿ ಯೋಜನೆಯಿಂದ ಕೆಲವರಿಗೆ ಅನುಕೂಲವಾಗಿದ್ದರೂ ಬಹಳಷ್ಟು ಜನರಿಗೆ ತೊಂದರೆಯಾಗಿದ್ದು ಸತ್ಯ. ಮೃತ ವ್ಯಕ್ತಿಗಳಿಗೂ ಹಣ ಸಂದಾಯವಾಗುತ್ತಿರುವುದು ಸೇರಿದಂತೆ ಹಲವು ವಿಷಯಗಳಲ್ಲಿ ಸರ್ಕಾರದ ಹಣ ಪೋಲಾಗುತ್ತಿದೆ. ಇದನ್ನು ತಪ್ಪಿಸಲು ಗ್ಯಾರಂಟಿ ಪರಿಷ್ಕರಣೆಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಮುಂದಾಗಿರುವುದು ಒಳ್ಳೆಯ ನಿರ್ಧಾರವಾಗಿದೆ ಎಂದರು.

ಸಂಘರ್ಷ ಬೇಡ, ಅಭಿವೃದ್ಧಿ ಬೇಕು

ರಾಜ್ಯದಲ್ಲಿ ಮಾಡಬೇಕಾದ ಸಾಕಷ್ಟು ಅಭಿವೃದ್ಧಿ ಕೆಲಸಗಳಿವೆ. ಜಾತಿ-ಧರ್ಮಗಳ ಸಂಘರ್ಷಕ್ಕೆ ಅವಕಾಶ ಕೊಡದೇ ಎಲ್ಲ ಸಮುದಾಯಗಳ ಹಿತ ಕಾಪಾಡುವ ನಿಟ್ಟಿನಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಗಟ್ಟಿ ನಿರ್ಧಾರ ತೆಗೆದುಕೊಳ್ಳುವ ಆತ್ಮವಿಶ್ವಾಸ ತಮಗಿದೆ ಎಂದು ಜಗದ್ಗುರುಗಳು ವಿಶ್ವಾಸ ವ್ಯಕ್ತಪಡಿಸಿದರು.

ಅರ್ಹರಿಗೆ ಮಾತ್ರ ಇದರ ಲಾಭ ತಲುಪಬೇಕೇ ಹೊರತು ಅನರ್ಹರಿಗಲ್ಲ. ರಾಜ್ಯದ ಅಭಿವೃದ್ಧಿ ಯೋಜನೆಗಳಿಗೆ ಹೆಚ್ಚಿನ ಹಣ ವಿನಿಯೋಗಿಸಿ ಸರ್ಕಾರ ಕಾರ್ಯಪ್ರವೃತ್ತರಾಗುವುದು ಒಳಿತು ಎಂದು ಸಲಹೆ ನೀಡಿದರು.

ಮಾಜಿ ಶಾಸಕ ಪರಣ್ಣ ಮುನವಳ್ಳಿ, ಪಪಂ ಅಧ್ಯಕ್ಷೆ ತನುಶ್ರೀ ಟಿಜೆ ರಾಮಚಂದ್ರ, ಉಪಾಧ್ಯಕ್ಷ ಕಂಠಿರಂಗ ನಾಯಕ, ಪ್ರಮುಖರಾದ ಕೆ.ಗಂಗಾಧರ ಸ್ವಾಮಿ. ಚನಬಸಯ್ಯ ಹಿರೇಮಠ, ಶರಣಪ್ಪ ಸಜ್ಜನ್, ಮಹಾಂತೇಶ ಸಜ್ಜನ್, ಸಂಗಪ್ಪ ಸಜ್ಜನ, ಚೆನ್ನಪ್ಪ ತೆಗ್ಗಿನಮನಿ, ವಾಗೇಶ ಹೀರೆಮಠ, ಡಾ.ಗುರುಮೂರ್ತಿ, ಬಸವರಾಜ ಸಜ್ಜನ, ಹನುಮೇಶ ವಾಲೇಕಾರ್, ರಾಜೇಶ ಸೇರಿದಂತೆ ಇತರರು ಇದ್ದರು.

ಧಾರ್ಮಿಕ ಪ್ರವಾಸೋದ್ಯಮ ಅಭಿವೃದ್ಧಿಗೆ ಅಧ್ಯಯನ

ಧಾರವಾಡ: ನಗರದ ಕರ್ನಾಟಕ ಕಲಾ ಕಾಲೇಜಿನ ಪ್ರವಾಸೋದ್ಯಮ ಅಧ್ಯಯನ ವಿಭಾಗದ ಹಲವು ಪ್ರತಿನಿಧಿಗಳು ಸ್ಪೇನ್‌ನ ಸ್ಯಾಂಟಿಯಾಗೋ ಡೆ ಕಾಂಪೋಸ್ಟೆಲ್ಲಾ ವಿವಿಯಲ್ಲಿ ನಡೆದಿರುವ ಅಂತಾರಾಷ್ಟ್ರೀಯ ಅಧ್ಯಯನಕ್ಕೆ ಭೇಟಿ ನೀಡುವ ಮೂಲಕ ಗಮನ ಸೆಳೆದಿದ್ದಾರೆ.

ಸುಮಾರು 16 ಅಂತಾರಾಷ್ಟ್ರೀಯ ಪಾಲುದಾರರು ಒಳಗೊಂಡ ಈ ಯೋಜನೆಗೆ ಪ್ರವಾಸೋದ್ಯಮ ವಿಭಾಗದ ವ್ಯವಸ್ಥಾಪಕ ಪ್ರೊ.ಜಗದೀಶ ಕಿವುಡನವರ್ ಮತ್ತು ತಜ್ಞ ಕೇದಾರನಾಥ ಅಂಗಡಿ ಅವರು ಈ ಅಧ್ಯಯನ ಕಾರ್ಯಕ್ರಮದಲ್ಲಿ ಕವಿವಿ ಪ್ರತಿನಿಧಿಸಿದ್ದಾರೆ. ಅಧ್ಯಯನ ಭೇಟಿಯಲ್ಲಿ ಯುರೋಪ್, ಏಷ್ಯಾ ಮತ್ತು ಆಫ್ರಿಕಾದ ಸಂಶೋಧಕರು ಮತ್ತು ವಿದ್ವಾಂಸರೊಂದಿಗೆ ಧಾರ್ಮಿಕ ಯಾತ್ರೆಗಳು ಜಾಗತಿಕ ಸಂಸ್ಕೃತಿ, ಪರಂಪರೆ, ಸಮುದಾಯ ಮತ್ತು ಆರ್ಥಿಕತೆ ಮೇಲೆ ಬೀರುವ ಪರಿಣಾಮಗಳ ಕುರಿತು ಚರ್ಚಿಸಲಾಯಿತು.

ವಿಶ್ವ ಪರಂಪರೆಯ ತಾಣ ಪ್ರಸಿದ್ಧ 'ಕ್ಯಾಮಿನೋ ಡೆ ಸ್ಯಾಂಟಿಯಾಗೊ' ಯಾತ್ರಾ ಮಾರ್ಗದ ನಿರ್ವಹಣೆ, ಪರಂಪರೆ ಸಂರಕ್ಷಣೆ ಹಾಗೂ ಸುಸ್ಥಿರ ಪ್ರವಾಸೋದ್ಯಮ ಮಾದರಿಗಳನ್ನು ಅಧ್ಯಯನ ಮಾಡುವ ಜೊತೆ ಪರಸ್ಪರ ವಿಚಾರ ವಿನಿಮಯವೂ ನಡೆಸಲಾಗಿದೆ.



ಯಾತ್ರಿಕರ ಸಂಚಾರ ವ್ಯವಸ್ಥೆ, ಗ್ರಾಮೀಣ ಪ್ರವಾಸೋದ್ಯಮ, ಸ್ಥಳೀಯ ಆರ್ಥಿಕ ಚಟುವಟಿಕೆ ಹಾಗೂ ಮೂಲಸೌಕರ್ಯ ನಿರ್ವಹಣೆ ಜೊತೆಗೆ ಸ್ಯಾಂಟಿಯಾಗೊ ಕ್ಯಾಥೆಡ್ರಲ್, ಯಾತ್ರಿಕರ ಕಚೇರಿ, ಸ್ಥಳೀಯ ಸಂಘಟನೆಗಳ ಕಾರ್ಯವೈಖರಿ ಸಹ ಪರಿಶೀಲಿಸಲಾಯಿತು. ಯೋಜನೆಗೆ ಕೆಯುಡಿ ಕುಲಪತಿ ಪ್ರೊ.ಎ.ಎಂ.ಖಾನ್, ಕೆಸಿಡಿ ಪ್ರಾಚಾರ್ಯ ಡಾ. ಐ.ಸಿ.ಮುಳಗುಂದ ಅವರ ಮಾರ್ಗದರ್ಶನ ಮತ್ತು ಬೆಂಬಲ ಪ್ರಮುಖವಾಗಿದೆ ಎಂದು ಪ್ರವಾಸೋದ್ಯಮ ಅಧ್ಯಯನ ವಿಭಾಗದ ನಿರ್ದೇಶಕ ಪ್ರೊ.ಕೆ.ಜಗದೀಶ ತಿಳಿಸಿದ್ದಾರೆ.

ಸಂಸದರ ವಿರುದ್ಧ ಬಿಜೆಪಿ ಕಾರ್ಯಕರ್ತರ ಪ್ರತಿಭಟನೆ

ವಿಜಯನಗರ: ರಾಷ್ಟ್ರೀಯ ಹೆದ್ದಾರಿಯ ಸರ್ವಿಸ್ ರಸ್ತೆ ಕುಸಿತ ಹಾಗೂ ಸಾರ್ವಜನಿಕರ ವಿರುದ್ಧ ಅವಹೇಳನಕಾರಿ ಪದಬಳಕೆ ಮಾಡಿದ ಸಂಸದ ಈ. ತುಕಾರಾಂ ವಿರುದ್ಧ ಬಿಜೆಪಿ ನಾಯಕರು ಮತ್ತು ಕಾರ್ಯಕರ್ತರು ಹೊಸಪೇಟೆಯಲ್ಲಿ ಶುಕ್ರವಾರ ಬೃಹತ್ ಪ್ರತಿಭಟನೆ ನಡೆಸಿದರು.

ನಗರದ ಪಟೇಲ್ ನಗರದಲ್ಲಿರುವ ಬಿಜೆಪಿ ಕಚೇರಿಯಿಂದ ಪುನೀತ್ ರಾಜಕುಮಾರ್ ಸರ್ಕಲ್ ವರೆಗೆ ಪಾದಯಾತ್ರೆ ನಡೆಸಿದ ಪ್ರತಿಭಟನಾಕಾರರು, ಸಂಸದರ ನಡೆಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಹೊಸಪೇಟೆ ತಾಲೂಕಿನ ಡಣಾಪುರ ಗ್ರಾಮದ ಸಮೀಪ ರಾಷ್ಟ್ರೀಯ ಹೆದ್ದಾರಿ 50ರ ವ್ಯಾಪ್ತಿಯಲ್ಲಿ ಸುಮಾರು 33 ಕೋಟಿ ರೂ. ವೆಚ್ಚದಲ್ಲಿ ಸರ್ವಿಸ್ ರಸ್ತೆ ಹಾಗೂ ಮೇಲ್ಸೇತುವೆ ಕಾಮಗಾರಿ ಕೈಗೊಳ್ಳಲಾಗಿತ್ತು. ಆದರೆ, ಈ ಕಾಮಗಾರಿಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿದ್ದು, ರಸ್ತೆ ನಿರ್ಮಾಣಕ್ಕೆ ಮಣ್ಣಿನ ಬದಲಾಗಿ 'ಫ್ಲೈಆಶ್' (ಬೂದಿ) ಬಳಸಲಾಗಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ. ಪರಿಣಾಮವಾಗಿ, ಕಾಮಗಾರಿ ಮುಗಿದ ಕೆಲವೇ ದಿನಗಳಲ್ಲಿ ರಸ್ತೆ ಸಂಪೂರ್ಣವಾಗಿ ಕುಸಿದು ಬಿದ್ದಿದೆ. ಡಣಾಪುರದ ವ್ಯಕ್ತಿಯೊಬ್ಬರು ಇದರ ದೃಶ್ಯಗಳನ್ನು ಮೊಬೈಲ್‌ನಲ್ಲಿ ಸೆರೆ ಹಿಡಿದು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದು, ಇದು ತೀವ್ರ ಚರ್ಚೆಗೆ ಗ್ರಾಸವಾಗಿತ್ತು.



ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಭೇಟಿ ನೀಡಿದ ಸಂಸದ ಈ. ತುಕಾರಾಂ ಅವರನ್ನು ಸ್ಥಳೀಯರು ಕಾಮಗಾರಿಯ ಕಳಪೆ ಗುಣಮಟ್ಟದ ಕುರಿತು ಪ್ರಶ್ನಿಸಿದ್ದಾರೆ. ಈ ವೇಳೆ ಸಾರ್ವಜನಿಕರ ಪ್ರಶ್ನೆಗೆ ಉತ್ತರಿಸಲಾಗದ ಸಂಸದರು, ಸ್ಥಳೀಯರ ವಿರುದ್ಧ ಅವಹೇಳನಕಾರಿ ಮತ್ತು ಅಶ್ಲೀಲ ಭಾಷೆ ಬಳಸಿ ನಿಂದಿಸಿದ್ದಾರೆ ಎಂದು ಬಿಜೆಪಿ ನಾಯಕರು ಗಂಭೀರ ಆರೋಪಿಸಿ, ಧಿಕ್ಕಾರ ಕೂಗಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಸಂಜೀವ್ ರೆಡ್ಡಿ, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಸಂದೀಪ್ ಸಿಂಗ್, ಜಿಲ್ಲಾ ವಕ್ತಾರ ಅಶೋಕ್ ಜೀರೆ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿದ್ವಾನ್ ಕೆ.ಎಸ್.ರಾಘವೇಂದ್ರ, ಜಿಲ್ಲಾ ಎಸ್.ಟಿ. ಮೋರ್ಚಾ ಅಧ್ಯಕ್ಷ ಕೃಷ್ಣ ನಾಯಕ್, ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಕಿಚಡಿ ಕೊಟ್ರೇಶ್, ನಗರಸಭಾ ಸದಸ್ಯ ಜಗದೀಶ್ ಕಮಟಗಿ, ಹೊಸಪೇಟೆ ಮಂಡಲ ಪ್ರಧಾನ ಕಾರ್ಯದರ್ಶಿ ಮಧುರ ಚನ್ನ ಶಾಸ್ತ್ರಿ, ಮಂಡಲ ಯುವ ಮೋರ್ಚಾ ಅಧ್ಯಕ್ಷ ರಾಘವೇಂದ್ರ, ಮಂಡಲ ಅಲ್ಪಸಂಖ್ಯಾತ ಮೋರ್ಚಾ ಅಧ್ಯಕ್ಷ ಇಮ್ತಿಯಾಸ್, ಮುಖಂಡರಾದ ಗೌಳಿ ರುದ್ರಪ್ಪ, ಕೌಸರ್, ರೇಣುಕಾ, ವಿಜಯಲಕ್ಷ್ಮೀ, ಶೈಲಜಾ ಸೇರಿದಂತೆ ನೂರಾರು ಜನರು ಪಾಲ್ಗೊಂಡಿದ್ದರು.

ಸ್ಪಾ-ಸಲೂನ್‌ಗಳ ಮೇಲೆ ಪೊಲೀಸ್ ಅಧಿಕಾರಿಗಳ ದಾಳಿ

ದಾಖಲೆಗಳಿಲ್ಲದ ಸ್ಪಾ ಸೆಂಟರ್‌ಗಳಿಗೆ ಬೀಗದ ಭೀತಿ

ಗದಗ: ಅವಳಿ ನಗರದ ವಿವಿಧ ಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಲವು ಸ್ಪಾ ಕಮ್ ಸಲೂನ್‌ಗಳ ಮೇಲೆ ಪೊಲೀಸ್ ಅಧಿಕಾರಿಗಳು ಗುರುವಾರ ದಿಢೀರ್ ಕಾರ್ಯಾಚರಣೆ ನಡೆಸಿದ್ದು, ಪರಿಶೀಲನೆ ನಡೆಸುವ ಮೂಲಕ, ಹಲವು ಸ್ಪಾ ಸೆಂಟರ್‌ಗಳಲ್ಲಿ ಅಗತ್ಯ ದಾಖಲೆಗಳು ಹಾಗೂ ಕಾನೂನುಬದ್ಧ ಪರವಾನಗಿಗಳ ಕೊರತೆ ಕಂಡು ಬಂದ ಹಿನ್ನೆಲೆಯಲ್ಲಿ ಅವುಗಳಿಗೆ ನೋಟಿಸ್ ನೀಡಿ, ಅಗತ್ಯ ದಾಖಲೆಗಳನ್ನು ಸಲ್ಲಿಸುವಂತೆ ಸೂಚಿಸಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ್ ಅವರ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ನಡೆದಿದೆ. ನಗರದಲ್ಲಿ ಯಾವುದೇ ಅಕ್ರಮ ಚಟುವಟಿಕೆಗಳು ನಡೆಯದಂತೆ ತಡೆಗಟ್ಟುವ ಉದ್ದೇಶದಿಂದ ಈ ಪರಿಶೀಲನಾ ಕಾರ್ಯಾಚರಣೆ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಪರಿಶೀಲನೆಯ ವೇಳೆ ಕೆಲವು ಸಂಸ್ಥೆಗಳು ಕಡ್ಡಾಯವಾಗಿ ಹೊಂದಿರಬೇಕಾದ ದಾಖಲಾತಿಗಳು, ನೋಂದಣಿಗಳು ಹಾಗೂ ಅನುಮತಿಗಳನ್ನು ಹೊಂದದೇ ಇರುವುದು ಬೆಳಕಿಗೆ ಬಂದಿದೆ.



ಈ ಹಿನ್ನೆಲೆಯಲ್ಲಿ ಸಂಬಂಧಿಸಿದ ಸಂಸ್ಥೆಗಳ ಮಾಲೀಕರು ಹಾಗೂ ನಿರ್ವಾಹಕರಿಗೆ ಅಗತ್ಯ ದಾಖಲೆಗಳನ್ನು ಸಲ್ಲಿಸುವಂತೆ ಸೂಚನೆ ನೀಡಲಾಗಿದ್ದು, ಶಾಸನಬದ್ಧ ಹಾಗೂ ಕಾನೂನು ನಿಯಮಗಳ ಪ್ರಕಾರ ಅಗತ್ಯವಿರುವ ಎಲ್ಲ ಪರವಾನಗಿಗಳು ಮತ್ತು ಅನುಮತಿಗಳನ್ನು ಪಡೆಯುವವರೆಗೆ ಸಂಸ್ಥೆಗಳ ಕಾರ್ಯಾಚರಣೆ ಸ್ಥಗಿತಗೊಳಿಸುವಂತೆ ಸೂಚಿಸಲಾಗಿದೆ. ಜೊತೆಗೆ, ಸಂಬಂಧಿಸಿದ ಸಂಸ್ಥೆಗಳ ಕಾನೂನು ಬದ್ಧತೆ ಹಾಗೂ ಮೂಲಭೂತ ಸೌಲಭ್ಯಗಳ ಕುರಿತು ಪರಿಶೀಲನೆ ನಡೆಸುವಂತೆ ನಗರಸಭೆ, ಹೆಸ್ಕಾಂ, ಅಗ್ನಿಶಾಮಕ ದಳ ಹಾಗೂ ಆರೋಗ್ಯ ಇಲಾಖೆಗೆ ಪತ್ರ ಬರೆಯಲು ಅಧಿಕಾರಿಗಳು ಮುಂದಾಗಿದ್ದಾರೆ. ವಿವಿಧ ಇಲಾಖೆಗಳು ತಮ್ಮ ವ್ಯಾಪ್ತಿಯಲ್ಲಿ ಪರಿಶೀಲನೆ ನಡೆಸಿ ವರದಿ ಸಲ್ಲಿಸುವ ನಿರೀಕ್ಷೆಯಿದೆ.

ಅಧಿಕಾರಿಗಳ ಪ್ರಕಾರ, ಸ್ಪಾ ಮತ್ತು ವೆಲ್‌ನೆಸ್ ಕೇಂದ್ರಗಳ ನಿರ್ವಹಣೆ, ನಿಯಂತ್ರಣ ಹಾಗೂ ಪರವಾನಗಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಕಾಯ್ದೆ ಅನ್ವಯ ಕೆಲವು ನಿಯಮಗಳು ಅನ್ವಯವಾಗುವ ಸಾಧ್ಯತೆ ಇದ್ದು, ಈ ಕುರಿತು ಸಹ ಸಮಗ್ರ ಪರಿಶೀಲನೆ ನಡೆಸಲಾಗುತ್ತಿದೆ.

ಅಕ್ರಮ ಚಟುವಟಿಕೆಗಳ ಆರೋಪ: ನಗರದ ಕೆಲ ಅನಧಿಕೃತ ಸ್ಪಾಗಳಲ್ಲಿ ಕಾನೂನುಬಾಹಿರ ಹಾಗೂ ಅಕ್ರಮ ಚಟುವಟಿಕೆಗಳು ನಡೆಯುತ್ತಿರುವ ಕುರಿತು ಸಾರ್ವಜನಿಕ ವಲಯದಲ್ಲಿ ಹಲವು ಆರೋಪಗಳು ಕೇಳಿಬಂದಿವೆ. ಕೆಲವು ಸಂಸ್ಥೆಗಳು ಸ್ಪಾ ಹಾಗೂ ವೆಲ್‌ನೆಸ್ ಕೇಂದ್ರಗಳ ಹೆಸರಿನಲ್ಲಿ ಕಾರ್ಯನಿರ್ವಹಿಸುತ್ತಿದ್ದರೂ, ಅವುಗಳ ನೈಜ ಚಟುವಟಿಕೆಗಳ ಬಗ್ಗೆ ಅನುಮಾನಗಳು ವ್ಯಕ್ತವಾಗಿದ್ದವು ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆ ಪರಿಶೀಲನಾ ಕಾರ್ಯಾಚರಣೆ ಕೈಗೊಂಡಿದೆ.


ಜೂ.25 ಗ್ಲೋಬಲ್ ಫುಡ್ ಪ್ರೊ-2027ರ ಕಾರ್ಯಕ್ರಮ

• **ಬೆಂಗಳೂರು:** ಲಘು ಉದ್ಯೋಗ ಭಾರತಿ-ಕರ್ನಾಟಕ ಮತ್ತು ಐಎಂಎಸ್ ಫೌಂಡೇಶನ್ ಸಂಸ್ಥೆಗಳು, ಗ್ಲೋಬಲ್ ನೆಟ್‌ವರ್ಕ್ ಇನ್‌ಸ್ಟಿಟ್ಯೂಟ್‌ನ ಬೆಂಬಲದೊಂದಿಗೆ, ಆಹಾರ ಸಂಸ್ಕರಣೆ ಮತ್ತು ಸಂಬಧಿತ ಉದ್ಯಮಗಳಲ್ಲಿನ ಎಂಎಸ್‌ಎಇಗಳನ್ನು ಸಬಲೀಕರಿಸಲು ಮೀಸಲಾಗಿರುವ ಪ್ರಮುಖ ಅಂತಾರಾಷ್ಟ್ರೀಯ ಪ್ರದರ್ಶನವಾದ ಗ್ಲೋಬಲ್ ಫುಡ್ ಪ್ರೊ-2027ರ ಅಧಿಕೃತ ಆರಂಭಿಕ ಕಾರ್ಯಕ್ರಮವನ್ನು ಜೂ. 25ರಂದು ಹಮ್ಮಿಕೊಂಡಿವೆ.

ಮುಂದಿನವರ್ಷದಮೇ13 ರಿಂದ15 ರವರೆಗೆಬೆಂಗಳೂರು ಅಂತಾರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ನಡೆಯಲಿರುವ ಗ್ಲೋಬಲ್ ಫುಡ್ ಪ್ರೊ 2027ಕ್ಕೆ ಬೃಹತ್ ಪ್ರದರ್ಶನ ಕಾರ್ಯಕ್ರಮವು ವೇದಿಕೆಯನ್ನು ಸಿದ್ಧಪಡಿಸಲಿದೆ ಎಂದು ಲಘು ಉದ್ಯೋಗ ಭಾರತಿ- ಕರ್ನಾಟಕ ಪ್ರಧಾನಕಾರ್ಯದರ್ಶಿ ಕೆ.ಎಂ.ರವಿಕುಮಾರ್ ತಿಳಿಸಿದ್ದಾರೆ. ಐಎಂಎಸ್ ಫೌಂಡೇಶನ್, ಲಘು ಉದ್ಯೋಗ ಭಾರತಿ-ಕರ್ನಾಟಕ (ಎಂಎಸ್‌ಎಇಗಳನ್ನು ಪ್ರತಿನಿಧಿಸುವ ಸಂಸ್ಥೆ) ಜಂಟಿಯಾಗಿ ಕನೆಕ್ಟಿಂಗ್ ದಿ ಗ್ಲೋಬಲ್ ಫುಡ್ ಇಂಡಸ್ಟ್ರಿ ಎಂಬ ವಿಷಯದಲ್ಲಿ ಭವಿಷ್ಯದ ಆಹಾರ: ಸವಾಲು, ಅವಕಾಶಗಳು, ಹೊಸ ಪ್ರವೃತ್ತಿಗಳು, ನಿರೀಕ್ಷೆಗಳು ವಿಚಾರ ಸಂಕಿರಣ ಆಯೋಜಿಸಿವೆ.

ಮಾಜಿ ಕೇಂದ್ರ ವಾಣಿಜ್ಯ ಸಚಿವ ಸುರೇಶ್ ಪ್ರಭಾಕರ ಪ್ರಭು, ಸಿಎಸ್‌ಐಆರ್-ಎನ್ಐಐಎಸ್‌ಟಿ ನಿರ್ದೇಶಕ ಡಾ. ಸಿ. ಆನಂದರಾಮಕೃಷ್ಣನ್, ಗ್ಲೋಬಲ್ ನೆಟ್‌ವರ್ಕ್ ಇನ್‌ಸ್ಟಿಟ್ಯೂಟ್ ಮುಖ್ಯ ಮಾರ್ಗದರ್ಶಕ ಡಾ. ಜಗತ್ ಶಾ, ಆರ್ಥ್‌ಆಮ್ ಗ್ರೂಪ್ ವ್ಯವಸ್ಥಾಪಕ ನಿರ್ದೇಶಕ ಡಾ. ಬಿಜ್ನಾ ಕೋಟಕ್ ದಾಸಾನಿ, ಸೆಕ್ಯೂರ್ಲಿ ಗ್ರೂಪ್ ಆಸ್ಟ್ರೇಲಿಯಾದ ಸಂಸ್ಥಾಪಕ ನಿರ್ದೇಶಕ ಮಿಸ್ಟರ್ ರಾಬ್ ನೀಲಿ, ತಂಜಾವೂರು ನಿಫ್ಟೆಮ್ ನಿರ್ದೇಶಕ ಡಾ. ವಿ. ಪಳನಿಮುತ್ತು, ನಿವೃತ್ತ ಐಎಎಸ್ ಅಧಿಕಾರಿ ಮದನ್ ಗೋಪಾಲ್ ಹಾಗೂ ಐಎಂಎಸ್ ಫೌಂಡೇಷನ್ ಮುಖ್ಯಸ್ಥ ಎಚ್.ವಿ.ಎಸ್. ಕೃಷ್ಣ, ಲಘು ಉದ್ಯೋಗ ಭಾರತಿ - ಕರ್ನಾಟಕ ಅಧ್ಯಕ್ಷ ಕೆ. ನಾರಾಯಣ ಪ್ರಸನ್ನ ಅವರೊಂದಿಗೆ ವಲಯದ ಮುಖಂಡರು ಭಾಗವಹಿಸಲಿದ್ದಾರೆ.

ರಾಮ ಬಾಣ



ಉದ್ಯಮಿಗಳಿಗೆ ಬೆದರಿಸಿ 20 ಲಕ್ಷ ರೂ.ದರೋಡೆ

ಬೆಂಗಳೂರು: ಸಿಐಡಿ ಇನ್‌ಸ್ಪೆಕ್ಟರ್ ನೇತೃತ್ವದಲ್ಲೇ ಐವರು ದರೋಡೆಕೋರರ ಗ್ಯಾಂಗ್, ಕೇರಳ ಮೂಲದ ಉದ್ಯಮಿಗಳಿಗೆ ಬೆದರಿಸಿ 20 ಲಕ್ಷ ರೂ.ದರೋಡೆ ಮಾಡಿರುವ ಘಟನೆ ಮಡಿವಾಳ ಖಾಸಗಿ ಹೋಟೆಲ್‌ನಲ್ಲಿ ನಡೆದಿದೆ.

ವ್ಯಾಪಾರ ಉದ್ದೇಶಗಳಿಗಾಗಿ ಹಣ ಹಿಡಿದುಕೊಂಡು ಕೇರಳದ ಉದ್ಯಮಿಗಳು ಮಡಿವಾಳದ ಖಾಸಗಿ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದರು. ಈ ಬಗ್ಗೆ ನಿಖರ ಮಾಹಿತಿ ಪಡೆದಿದ್ದ ಇನ್‌ಸ್ಪೆಕ್ಟರ್ ಮಹೇಶ್ ಕನಕಗಿರಿ, ಹ್ಯಾರಿಸ್, ಕುಪೇಂದ್ರ, ಶಫಿ ಮತ್ತು ಶಾನಿ ಎಂಬ ನಾಲ್ವರೊಂದಿಗೆ ಸೇರಿ ದರೋಡೆಗೆ ಪ್ಲಾನ್ ಮಾಡಿದ್ದರು. ಯೋಜನೆಯಂತೆ ಹೋಟೆಲ್ ಮುಂಭಾಗ ಅಧಿಕೃತ ಸಿಐಡಿ ಪೊಲೀಸ್ ಜೀಪ್ ನಿಲ್ಲಿಸಿ ಇನ್‌ಸ್ಪೆಕ್ಟರ್ ಒಳಗೆ ಕುಳಿತಿದ್ದರು. ಅವರ ಗ್ಯಾಂಗ್‌ನ ಇಬ್ಬರು ಹೋಟೆಲ್ ಕೋಣೆಗೆ ನುಗ್ಗಿ, ತಾವು ಪೊಲೀಸರೆಂದು ಇನ್‌ಸ್ಪೆಕ್ಟರ್ ಅವರ ಅಧಿಕೃತ ಗುರುತಿನ ಚೀಟಿ ತೋರಿಸಿ, ಅಕ್ರಮವಾಗಿ ಟ್ರೇಡಿಂಗ್ ಮಾಡಲು ಹಣ ತಂದಿದ್ದೀರಿ ಎಂದು ಉದ್ಯಮಿಗಳನ್ನು ತೀವ್ರವಾಗಿ ಬೆದರಿಸಿದ್ದಾರೆ. ಬಳಿಕ ಅವರಿಂದ 20 ಲಕ್ಷ ರೂ. ನಗದನ್ನು ಕಸಿದುಕೊಂಡು, ಹೊರಗೆ ನಿಂತಿದ್ದ ಪೊಲೀಸ್ ಜೀಪ್‌ನಲ್ಲೇ ಇಡೀ ಗ್ಯಾಂಗ್ ಪರಾರಿಯಾಗಿದೆ.

ಠಾಣೆಗೆ ದೂರು ನೀಡುತ್ತಿದ್ದಂತೆ ಇನ್‌ಸ್ಪೆಕ್ಟರ್ ಪರಾರಿ: ಆರಂಭದಲ್ಲಿ ಹೆದರಿದ್ದ ಕೇರಳದ ವ್ಯಕ್ತಿಗಳಿಗೆ ನಂತರದ ಬೆಳವಣಿಗೆಗಳಿಂದ ದರೋಡೆಯ ಬಗ್ಗೆ ತೀವ್ರ ಅನುಮಾನ ಮೂಡಿದೆ. ತಕ್ಷಣವೇ ಅವರು ಮಡಿವಾಳ ಪೊಲೀಸ್ ಠಾಣೆಗೆ ತೆರಳಿ ದೂರು ದಾಖಲಿಸಿದ್ದಾರೆ. ಪ್ರಕರಣದ ಗಾಂಭೀರ್ಯತೆ ಅರಿತು ತಕ್ಷಣವೇ ತನಿಖೆಗೆ ಇಳಿದ ಮಡಿವಾಳ ಪೊಲೀಸರು, ರಾತ್ರೋರಾತ್ರಿ ಕಾರ್ಯಾಚರಣೆ ನಡೆಸಿ ದರೋಡೆ ಗ್ಯಾಂಗ್‌ನಲ್ಲಿದ್ದ ಕುಪೇಂದ್ರ ಎಂಬಾತನನ್ನು ಹೆಡೆಮುರಿ ಕಟ್ಟಿದ್ದಾರೆ. ಆ ವೇಳೆ ಆತ ಸತ್ಯ ಬಾಯಿಬಿಟ್ಟಿದ್ದಾನೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೇನೇಜಿ

ಜನರು ಅವರನ್ನು ತುಂಬಾ ಒಳ್ಳೆಯ ಮನುಷ್ಯ ಎನ್ನುತ್ತಾರೆ.ಆದರೆ ಅವರು ವ್ಯವಹಾರದಲ್ಲಿ ತುಂಬಾ ಕಠಿಣ ವ್ಯಕ್ತಿ
- ಮೋದಿಯ ಕುರಿತು ಟ್ರಂಪ್ ಮಾತು
- ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ ಎಂಬಂತೆ ಕಠೋರತೆ ಇಲ್ಲದಿದ್ದಲ್ಲಿ ಸ್ವಾರ್ಥಿಗಳು ಒಳ್ಳೆಯವರನ್ನು ಹೊಂಡಕ್ಕೆ ಇಳಿಸಿ ತಲೆಯೆತ್ತದಂತೆ ಮಾಡುತ್ತಾರೆ.

ದಿನ ಭವಿಷ್ಯ

ಮೇಷ
ಹೆಚ್ಚು ಪರಿಶ್ರಮ ಬೇಡುವ ದಿನ. ಏಕೆಂದರೆ ಯಾವುದೂ ಸುಲಭದಲ್ಲಿ ಸಾಧ್ಯವಾಗದು. ಆಪ್ತರು ಮುನಿಸಿಕೊಳ್ಳಬಹುದು. ಆರ್ಥಿಕ ವ್ಯಯ ಹೆಚ್ಚು.

ವೃಷಭ
ಪ್ರವಾಸದ ಸಾಧ್ಯತೆ. ಹೊಸ ವ್ಯವಹಾರದಲ್ಲಿ ದುಡುಕಿ ಹಣ ಹೂಡದಿರಿ. ಬಾಕಿ ಇರುವ ಕಾರ್ಯ ಮುಗಿಸಿ. ಇಲ್ಲವಾದರೆ ಒತ್ತಡ ಎದುರಿಸುವಿರಿ.

ಮಿಥುನ
ಸಮಸ್ಯೆ ಪರಿಹಾರಕ್ಕೆ ಅವಸರ ಮಾಡದಿರಿ. ಸಾವಧಾನವಾಗಿ ಯೋಚಿಸಿ ನಿರ್ಧಾರ ತಾಳಿ. ಆರ್ಥಿಕ ಒತ್ತಡ ನಿವಾರಣೆ. ಬಂಧುವಿನ ಸಹಕಾರ.

ಕಟಕ
ಸಕಾರಾತ್ಮಕ ಬೆಳವಣಿಗೆ ಇಂದು ಕಾಣುವಿರಿ. ಭಾವುಕ ಪ್ರಸಂಗದಲ್ಲಿ ಮನಸ್ಸು ದೃಢವಾಗಿರಲಿ. ನಿಮ್ಮ ದೌರ್ಬಲ್ಯ ಪ್ರದರ್ಶಿಸದಿರಿ.

ಸಿಂಹ
ನಿಮ್ಮ ಯಾವುದೋ ಕೆಲಸ ಅರ್ಧದಲ್ಲೆ ನಿಂತು ಬಿಟ್ಟಿದೆ. ಅದರ ವ್ಯಾಕುಲ ಕಾಡುವುದು. ಇನ್ನೂ ಕೆಲವು ದಿನ ನೀವು ಕಾಯ ಬೇಕಾಗುವುದು.

ಕನ್ಯಾ
ವೃತ್ತಿಯಲ್ಲಿ ಉನ್ನತಿ. ಉದ್ದೇಶಿತ ಕಾರ್ಯ ಪೂರ್ಣ. ಆದರೆ ಕೌಟುಂಬಿಕ ಅಸಹನೆ. ಶಾಂತಿ, ಸೌಹಾರ್ದತೆ ದೂರ. ಧನವ್ಯಯ.

ತುಲಾ
ನಿರಾಳ ದಿನ. ಕಾಡುತ್ತಿದ್ದ ಚಿಂತೆ ಪರಿಹಾರ. ಉತ್ಸಾಹ ತುಂಬುವ ಕಾರ್ಯದಲ್ಲಿ ತೊಡಗಿ. ಬಂಧುಮಿತ್ರರ ಭೇಟಿ ಸಂತೋಷ ತರಲಿದೆ.

ವೃಶ್ಚಿಕ
ಬಾಕಿ ಇರುವ ಕೆಲಸ ಪೂರ್ತಿಗೆ ಸಮಾಧಾನ ಪಟ್ಟುಕೊಳ್ಳುವಿರಿ. ಹಣದ ಕೊರತೆ ನೀಗಲಿದೆ. ಬಂಧುಮಿತ್ರರ ಭೇಟಿ. ಆರೋಗ್ಯ ಚಿಂತೆ ಮಾಯ.

ಧನು
ಒತ್ತಡ ಹೆಚ್ಚು, ಕೆಲವು ಕಿರಿಕಿರಿಗೆ ಒಳಗಾಗುವಿರಿ. ಮನೆಯಲ್ಲಿ ಸಂಗಾತಿ ಜತೆ ವಾಗ್ವಾದ ನಡೆದೀತು. ತಾಳ್ಮೆಯಿಂದ ವ್ಯವಹರಿಸಿ. ಕಾರ್ಯಸಿದ್ಧಿ ವಿಳಂಬ.

ಮಕರ
ಹೆಚ್ಚಿನ ಒತ್ತಡವು ಎದುರಿಸುವಿರಿ. ಕೆಲಸದ ಮೇಲೆ ಪರಿಣಾಮ. ನಿಮ್ಮ ಮಿತಿಯಲ್ಲೆ ಕಾರ್ಯಾಚರಿಸಿ. ಕೈಗೆ ಎಟುಕದ ವಿಷಯ ಬಿಡಿ.

ಕುಂಭ
ದಿನದ ಆರಂಭ ಉತ್ಸಾಹದಿಂದ. ಆದರೆ ಸಂಜೆ ವೇಳೆಗೆ ಬೇಸರದ ಬೆಳವಣಿಗೆ ನಡೆದೀತು. ಕೆಲವರನ್ನು ಅತಿಯಾಗಿ ಹಚ್ಚಿಕೊಳ್ಳದಿರಿ.

ಮೀನ
ಮನೆಯವರ ಜತೆ ಹೆಚ್ಚು ಸೂಕ್ಷ್ಮವಾಗಿ ವರ್ತಿಸುವಿರಿ. ಅವರ ಭಾವನೆಗೆ ಸ್ಪಂದಿಸುವಿರಿ. ಖರೀದಿ ಉತ್ಸಾಹದಲ್ಲಿ ಜೇಬಿಗೆ ತೂತು ಬಿದ್ದೀತು.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ: 2,8,3,6

ಅಡ್ಡ ಮತದಾನ ಪಕ್ಷ ಗಂಭೀರವಾಗಿ ಪರಿಗಣಿಸಿದೆ: ರಾಜ್ಯಾಧ್ಯಕ್ಷ ವಿಜಯೇಂದ್ರ

ಕ್ಷಮಿಸುವ ಪ್ರಶ್ನೆಯಿಲ್ಲ



• **ಬೆಂಗಳೂರು:** ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದವರನ್ನು ಕ್ಷಮಿಸುವ ಪ್ರಶ್ನೆಯೇ ಇಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಪಕ್ಷದ ವ್ಹಿಪ್ ಸಾಧಿಕರ ವಿರುದ್ಧ ಖಂಡಿತ ಶಿಸ್ತು ಕ್ರಮ ಕೈಗೊಳ್ಳಲಾಗುವುದು. ಅಡ್ಡ ಮತದಾನವನ್ನು ಪಕ್ಷ ಗಂಭೀರವಾಗಿ ಪರಿಗಣಿಸಿದೆ ಎಂದರು.

ಎಂಟತ್ತು ದಿನಗಳ ಹಿಂದೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಕರೆ ಮಾಡಿ ಮೂರನೇ ಅಭ್ಯರ್ಥಿ ಕಣಕ್ಕಿಳಿಸೋಣ ಎಂದು ಹೇಳಿದ್ದರು. ನೀವಾದರೂ ಹಾಕಿ ನಾವಾದರೂ ಹಾಕುತ್ತೇವೆ. ಒಳ್ಳೆಯ ಉದ್ದೇಶ ಇಟ್ಟುಕೊಂಡು ಹೋರಾಟ ಮಾಡೋಣ ಎಂದಿದ್ದರು. ಆಗ ನೀವೇ ಅಭ್ಯರ್ಥಿ ಹಾಕಿ ಒಟ್ಟಾಗಿ ಸೇನಾನಿ ಮಾಡೋಣ ಎಂದು ತಿಳಿಸಿದ್ದೆ. ಎರಡೂ ಪಕ್ಷಗಳ ಉದ್ದೇಶ ಒಂದೇ ಆಗಿತ್ತು. ಆದರೆ, ಗುರುವಾರ ನಡೆದ ಮತದಾನದಲ್ಲಿ ಜೆಡಿಎಸ್ ಪಕ್ಷದಿಂದ ಆರೇಳು ಅಡ್ಡ ಮತದಾನ ಆಗಿದೆ. ಬಿಜೆಪಿಯಿಂದ ನಾಲ್ಕೈದು ಅಡ್ಡ ಮತದಾನ ಆಗಿದೆ. ಇದರಿಂದ ಎರಡೂ ಪಕ್ಷಗಳಿಗೆ ಬೇಸರವಾಗಿದೆ ಎಂದು ಹೇಳಿದರು.

ಯಾರು ಅಡ್ಡ ಮತದಾನ ಮಾಡಿ ಆಟ ಆಡಿರಬಹುದು ಎಂಬ ಮಾಹಿತಿ ಸಿಕ್ಕಿದೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಿಗೆ ಮಾಹಿತಿ ನೀಡಲು ಭೇಟಿ ಮಾಡಲು ಅವಕಾಶಕ್ಕಾಗಿ ಮನವಿ ಮಾಡಿದ್ದೇನೆ. ಅವರು ಯಾವಾಗ ಅವಕಾಶ ಕೊಟ್ಟರೂ ಭೇಟಿ ಮಾಡಿ ವಿವರ ನೀಡಲಿದ್ದೇನೆ ಎಂದು ತಿಳಿಸಿದರು.

ಬಿಜೆಪಿ ಟಿಕೆಟ್‌ನಲ್ಲಿ ಗೆದ್ದು ಚುನಾವಣೆಯಲ್ಲಿ ಈ ರೀತಿ ಮತದಾನ ಮಾಡುತ್ತಾರೆ ಎಂದರೆ ಅವರಿಗೆ ಗೆರೆ ಎಳೆಯುವ ಕೆಲಸವನ್ನು ಪಕ್ಷ ಮಾಡಲಿದೆ. ಎಲ್ಲಕ್ಕೂ ಒಂದು ಮಿತಿ ಇದೆ. ಬಿಜೆಪಿಯಲ್ಲಿನ ಸಣ್ಣಪುಟ್ಟ ಗೊಂದಲದಿಂದಾಗಿ ಕಾರ್ಯಕರ್ತರು ಬೇಸತ್ತಿದ್ದಾರೆ. ಈಗ ಇಂತಹ ಬೆಳವಣಿಗೆ ನಡೆದಿದೆ. ಇದರಿಂದ ನೋವಾಗಿದೆ. ಅಭ್ಯರ್ಥಿಯನ್ನು ಕಣಕ್ಕಿಳಿಸುವ ಬಗ್ಗೆ ಎರಡೂ ಪಕ್ಷದ ಮುಖಂಡರು ಕುಳಿತು ತೀರ್ಮಾನ ಮಾಡಿದ್ದೆವು. ನಮ್ಮ ಪಕ್ಷದ ಇಬ್ಬರು ಗೆಲುವು ಸಾಧಿಸಿರಬಹುದು. ಆದರೆ, ಅಡ್ಡ ಮತದಾನದಿಂದ ಅಪಮಾನ ಆಗಿದೆ. ಇದನ್ನೆಲ್ಲ ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗುತ್ತೇವೆ ಎಂದು ವಿವರಿಸಿದರು.

ಎಲ್ಲವನ್ನು ಅರಗಿಸಿಕೊಳ್ಳಬಲ್ಲೆ: ಪಕ್ಷದ ರಾಜ್ಯ ಘಟಕದ ಅಧ್ಯಕ್ಷನಾಗಿ ಪಕ್ಷದ ಬೆಳವಣಿಗೆಯನ್ನು ಗಂಭೀರವಾಗಿ ಪರಿಗಣಿಸುತ್ತೇನೆ. ಅಧ್ಯಕ್ಷನಾಗುವುದಕ್ಕೂ ಮೊದಲು ನಾನು ಕಾರ್ಯಕರ್ತ. ಪಕ್ಷದ ಹೈಕಮಾಂಡ್ ಕಾಲಕಾಲಕ್ಕೆ ಏನೇನು ತೀರ್ಮಾನ ಮಾಡಬೇಕೋ ಅದನ್ನು ಮಾಡಲಿದೆ. ಇಂತಹ ಮಹತ್ವದ ಚುನಾವಣೆಯಲ್ಲಿ ಹೀಗೆ ಆಗುತ್ತದೆ ಎಂಬ ಕಲ್ಪನೆ ಇರಲಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಮುಖ್ಯಮಂತ್ರಿ ಯಾರೇ ಆದರೂ ಹೆದರುವ ಪ್ರಶ್ನೆ ಇಲ್ಲ. ಸರ್ಕಾರವನ್ನು ಬಗ್ಗಿಸಲೂ ನಮಗೆ ಗೊತ್ತಿದೆ. ಇಂತಹ ಸಣ್ಣ ಪುಟ್ಟ ಘಟನೆಯಿಂದ ವಿಚಲಿತರಾಗಿ ಓಡಿ ಹೋಗುವುದಿಲ್ಲ, ಎಲ್ಲವನ್ನು ಅರಗಿಸಿಕೊಳ್ಳಬಲ್ಲೇ ಎಂದು ಹೇಳಿದರು.

ಕಾಂಗ್ರೆಸ್‌ನಿಂದ ಬೆಂಕಿ ಹಚ್ಚುವ ಕುತಂತ್ರ

ವಿಧಾನಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದವರು ಎಂದು ಕೆಲವರ ಹೆಸರುಗಳನ್ನು ತೇಲಿಬಿಡುವ ಮೂಲಕ ಬಿಜೆಪಿಯಲ್ಲಿ ಬೆಂಕಿ ಹಚ್ಚುವ ಕುತಂತ್ರವನ್ನು ಕಾಂಗ್ರೆಸ್‌ನವರು ಮಾಡುತ್ತಿದ್ದಾರೆ. ಕಾಂಗ್ರೆಸ್ ಕುತಂತ್ರಕ್ಕೆ ನಾವು ತಲೆಕೆಡಿಸಿಕೊಳ್ಳುವುದಿಲ್ಲ, ಆದ್ರೆ ಮತದಾನ ಮಾಡಿದವರ ಪತ್ತೆಗೆ ಸಮಿತಿ ರಚಿಸಲಾಗಿದೆ. ಯಾರು ಅಡ್ಡ ಮತದಾನ ಮಾಡಿದ್ದಾರೆ ಎಂಬುದು ಮೂರ್ನಾಲ್ಕು ದಿನದಲ್ಲಿ ತಿಳಿಯಲಿದೆ ಎಂದು ವಿಜಯೇಂದ್ರ ಹೇಳಿದರು.

ಬಹಳ ಜನ ಚಾಣಕ್ಯರನ್ನು ರಾಜ್ಯದ ಜನ ನೋಡಿದ್ದಾರೆ. ಕುದುರೆ ಓಡುವ ಸಮಯದಲ್ಲಿ ಓಡುತ್ತದೆ, ಬೀಳುವ ಸಮಯದಲ್ಲಿ ಬೀಳುತ್ತದೆ. ಬಿಜೆಪಿಗೆ ಎಲ್ಲವನ್ನೂ ಎದುರಿಸುವ ಶಕ್ತಿ ಇದೆ. ದೊಡ್ಡ ಸಂಘಟನೆ ಇದೆ. ಕಾರ್ಯಕರ್ತರ ಶಕ್ತಿ ಇದೆ. ಯಾರನ್ನು ಯಾವಾಗ ಹೇಗೆ ಬಗ್ಗಿಸಬೇಕು ಎಂಬುದು ತಿಳಿದಿದೆ.
■ ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಮೇಕೆದಾಟುಗೆ ತ.ನಾಡು ಅಡ್ಡಗಾಲು

ಪುಟ ೧➡ ಇದು ಕಾವೇರಿ ಜಲ ವಿವಾದ ನ್ಯಾಯಮಂಡಳಿಯ 2007ರ ಅಂತಿಮ ತೀರ್ಪು ಹಾಗೂ ಸುಪ್ರೀಂ ಕೋರ್ಟ್‌ನ 2018ರ ತೀರ್ಪಿಗೆ ವಿರುದ್ಧವಾಗಿದೆ ಎಂದು ನಿರ್ಣಯದಲ್ಲಿ ಆರೋಪಿಸಲಾಗಿದೆ.

ಯೋಜನೆಗೆ ಸಂಬಂಧಿಸಿದಂತೆ ಕಾವೇರಿ ಕಣಿವೆಯ ಇತರ ರಾಜ್ಯಗಳ ಒಪ್ಪಿಗೆ ಪಡೆಯಲಾಗಿಲ್ಲ, ಕೇಂದ್ರ ಸರ್ಕಾರದಿಂದಲೂ ಯಾವುದೇ ಅನುಮೋದನೆ ಪಡೆದಿಲ್ಲ. ಹೀಗಾಗಿ ಮೇಕೆದಾಟು ಯೋಜನೆಗೆ ತಾಂತ್ರಿಕ, ಪರಿಸರ ಸೇರಿದಂತೆ ಯಾವುದೇ ರೀತಿಯ ಅನುಮತಿ ನೀಡಬಾರದು ಎಂದು ಕೇಂದ್ರ ಸರ್ಕಾರವನ್ನು ವಿಧಾನಸಭೆ ಒತ್ತಾಯಿಸಿದೆ. ಕರ್ನಾಟಕ ಸಲ್ಲಿಸಿರುವ ವಿಸ್ತೃತ ಯೋಜನಾ ವರದಿಯನ್ನು ಪರಿಶೀಲಿಸಬಾರದು, ಮುಂದಿನ ಪ್ರಕ್ರಿಯೆಗೆ ಒಳಪಡಿಸಬಾರದು ಹಾಗೂ ಅನುಮೋದನೆ ನೀಡಬಾರದು ಎಂದು ಕೇಂದ್ರ ಜಲ ಆಯೋಗಕ್ಕೂ ಆಗ್ರಹಿಸಲಾಗಿದೆ.

ಹೊಸ ನ್ಯಾಯಮಂಡಳಿಗೆ ಆಗ್ರಹ: ಮೇಕೆದಾಟು ವಿಚಾರವನ್ನು ಹೊಸ ಜಲ ವಿವಾದವೆಂದು ಪರಿಗಣಿಸಬೇಕು. ಅಂತಾರಾಜ್ಯ ನದಿ ನೀರು ವಿವಾದ ಕಾಯ್ದೆ-1956ರ ಅನ್ವಯ ಹೊಸ ನ್ಯಾಯಮಂಡಳಿ ರಚಿಸುವಂತೆ ಕೇಂದ್ರವನ್ನು ಒತ್ತಾಯಿಸಲು ನಿರ್ಣಯದಲ್ಲಿ ತಿದ್ದುಪಡಿ ತರಬೇಕು ಎಂದು ವಿರೋಧ ಪಕ್ಷದ ನಾಯಕ ಉದಯನಿಧಿ ಸ್ಟಾಲಿನ್ ಆಗ್ರಹಿಸಿದರು. ತಮಿಳುನಾಡಿನ ಎಲ್ಲ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಒಟ್ಟಾಗಿ ದಿಲ್ಲಿಗೆ ತೆರಳಿ ಕೇಂದ್ರ ಸರ್ಕಾರದ ಪ್ರಮುಖರನ್ನು ಭೇಟಿಯಾಗಬೇಕು. ಯೋಜನೆ ವಿರೋಧಿಸುವ ವಿಚಾರದಲ್ಲಿ ರಾಜ್ಯದ ಒಗ್ಗಟ್ಟನ್ನು ಪ್ರದರ್ಶಿಸಬೇಕು ಎಂದರು.

'ಮೇಕೆದಾಟುವಿನಲ್ಲಿ ಯಾವುದೇ ಅಣೆಕಟ್ಟು ನಿರ್ಮಾಣವಾಗಬಾರದು ಎಂಬುದು ಡಿಎಂಕೆಯ ದೃಢ ನಿಲುವು. ತಮಿಳುನಾಡಿನ ಹಕ್ಕುಗಳಿಗೆ ಧಕ್ಕೆಯಾಗಲು ಅವಕಾಶ ನೀಡುವುದಿಲ್ಲ, ಯೋಜನೆ ತಡೆಯಲು ಕೈಗೊಳ್ಳುವ ಎಲ್ಲ ಕಾನೂನು ಕ್ರಮಗಳನ್ನು ಬೆಂಬಲಿಸುತ್ತೇವೆ' ಎಂದು ಉದಯನಿಧಿ ಹೇಳಿದರು.

ಕುಡಿಯುವ ನೀರಿಗಾಗಿ ಯೋಜನೆ

ಮೇಕೆದಾಟು ಸಮತೋಲನ ಜಲಾಶಯ ಯೋಜನೆಯು ಬೆಂಗಳೂರು ನಗರದ ಕುಡಿಯುವ ನೀರಿನ ಅಗತ್ಯ ಪೂರೈಸುವುದರ ಜತೆಗೆ ಜಲವಿದ್ಯುತ್ ಉತ್ಪಾದನೆಯ ಉದ್ದೇಶವನ್ನೂ ಹೊಂದಿದೆ. ಯೋಜನೆಯಿಂದ ತಮಿಳುನಾಡಿಗೆ ಹರಿಯಬೇಕಾದ ಕಾವೇರಿ ನೀರಿನ ಪಾಲಿಗೆ ಯಾವುದೇ ಧಕ್ಕೆಯಾಗುವುದಿಲ್ಲ ಎಂಬುದು ಕರ್ನಾಟಕದ ನಿಲುವಾಗಿದೆ. ಆದರೆ, ಯೋಜನೆಯಿಂದ ತಮ್ಮ ರಾಜ್ಯದ ರೈತರ ಹಿತಾಸಕ್ತಿಗೆ ತೊಂದರೆಯಾಗಲಿದೆ ಎಂದು ತಮಿಳುನಾಡು ನಿರಂತರವಾಗಿ ವಿರೋಧಿಸುತ್ತಿದೆ.

ಐದನೇ ನಿರ್ಣಯ

ಮೇಕೆದಾಟು ಯೋಜನೆ ವಿರೋಧಿಸಿ ತಮಿಳುನಾಡು ವಿಧಾನಸಭೆ ಅಂಗೀಕರಿಸಿದ ಐದನೇ ನಿರ್ಣಯ ಇದಾಗಿದೆ. ಈ ಹಿಂದೆ 2014ರ ಡಿಸೆಂಬರ್‌ನಲ್ಲಿ ಜಯಲಲಿತಾ ಸರ್ಕಾರ, 2015ರ ಮಾರ್ಚ್‌ನಲ್ಲಿ ಓ. ಪನ್ನೀರ್‌ಸೆಲ್ವಂ ಸರ್ಕಾರ, 2018ರ ಡಿಸೆಂಬರ್‌ನಲ್ಲಿ ಎಡಪ್ಪಾಡಿ ಪಳನಿಸ್ವಾಮಿ ಸರಕಾರ ಹಾಗೂ 2022ರ ಮಾರ್ಚ್‌ನಲ್ಲಿ ಎಂ.ಕೆ. ಸ್ಟಾಲಿನ್ ಸರ್ಕಾರ ಇದೇ ರೀತಿಯ ನಿರ್ಣಯಗಳನ್ನು ಅಂಗೀಕರಿಸಿದ್ದವು.

ಭಾರತ ತಲುಪಿದ ದಿಶಾ

ಪುಟ ೧➡ **ಸರ್ಕಾರದ ನಿಕಟ ಸಮನ್ವಯ:** ಕೇಂದ್ರ ಬಂದರು, ಹಡಗು ಸಾಗಣೆ ಮತ್ತು ಜಲಮಾರ್ಗಗಳ ಸಚಿವಾಲಯದ ನಿರ್ದೇಶಕ ಓಪೇಶ್ ಕುಮಾರ್ ಶರ್ಮಾ ಗುರುವಾರ ಮಾತನಾಡಿ, ಪರ್ಷಿಯನ್ ಕೊಲ್ಲಿಯ ಪ್ರದೇಶದಲ್ಲಿರುವ ಭಾರತೀಯ ಹಡಗುಗಳು ಮತ್ತು ಇಂಧನ ಸರಕುಗಳ ಸುರಕ್ಷಿತ ವಾಪಸಾತಿಗಾಗಿ ಕೇಂದ್ರ ಸರ್ಕಾರ ವಿವಿಧ ಸಚಿವಾಲಯಗಳು ಹಾಗೂ ಸಂಬಂಧಿತ ಸಂಸ್ಥೆಗಳೊಂದಿಗೆ ನಿರಂತರ ಸಮನ್ವಯ ಸಾಧಿಸುತ್ತಿದೆ ಎಂದು ಹೇಳಿದರು. ಜೂನ್ 15ರಂದು 'ದಿಶಾ' ಹಾರ್ಮುಜ್ ಜಲಸಂಧಿ ದಾಟಿದ ಬಳಿಕ ಇನ್ನಾವುದೇ ಭಾರತೀಯ ಧ್ವಜದ ಹಡಗು ಪರ್ಷಿಯನ್ ಕೊಲ್ಲಿಯಿಂದ ಹೊರಬಂದಿಲ್ಲ ಎಂದು ಅವರು ಮಾಹಿತಿ ನೀಡಿದರು.

ಇಂಧನ ಸರಬರಾಜು, ನಾವಿಕರ ಸುರಕ್ಷತೆಗೆ ಆದ್ಯತೆ: ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ, ರಾಸಾಯನಿಕ ಮತ್ತು ರಸಗೊಬ್ಬರ ಸಚಿವಾಲಯ, ವಿದೇಶಾಂಗ ವ್ಯವಹಾರಗಳ ಸಚಿವಾಲಯ ಸೇರಿದಂತೆ ಎಲ್ಲ ಸಂಬಂಧಿತ ಇಲಾಖೆಗಳೊಂದಿಗೆ ಸಮನ್ವಯ ನಡೆಸಲಾಗುತ್ತಿದೆ. ಇಂಧನ ಸರಕುಗಳು ಹಾಗೂ ಭಾರತೀಯ ಧ್ವಜದ ಹಡಗುಗಳ ಸುರಕ್ಷಿತ ಸಂಚಾರಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಶರ್ಮಾ ಹೇಳಿದರು.

ಸಾವಿರಾರು ನಾವಿಕರಿಗೆ ನೆರವು: ಡೈರೆಕ್ಟರೇಟ್ ಜನರಲ್ ಆಫ್ ಶಿಪ್ಪಿಂಗ್ (ಡಿಜಿ ಶಿಪ್ಪಿಂಗ್) ಸ್ಥಾಪಿಸಿರುವ ನಿಯಂತ್ರಣ ಕೊಠಡಿ ಇದುವರೆಗೆ 13,187ಕ್ಕೂ ಹೆಚ್ಚು ಕರೆಗಳು, 29,376 ಇಮೇಲ್‌ಗಳನ್ನು ನಿರ್ವಹಿಸಿದೆ. ಕಳೆದ 72 ಗಂಟೆಗಳಲ್ಲಿ ಮಾತ್ರ 450 ಕರೆಗಳು ಹಾಗೂ 1,077 ಇಮೇಲ್‌ಗಳು ಸ್ವೀಕರಿಸ ಲ್ಪಟ್ಟಿವೆ. ಇದಲ್ಲದೆ, ಸಚಿವಾಲಯವು ಇದುವರೆಗೆ 3,639ಕ್ಕೂ ಹೆಚ್ಚು ಭಾರತೀಯ ನಾವಿಕರ ಸುರಕ್ಷಿತ ವಾಪಸಾತಿಗೆ ನೆರವು ನೀಡಿದ್ದು, ಕಳೆದ 72 ಗಂಟೆಗಳಲ್ಲಿ 47 ನಾವಿಕರನ್ನು ಸ್ವದೇಶಕ್ಕೆ ಕರೆತರಲಾಗಿದೆ.

ರಾಜ್ಯದವರಿಗೇ ಗ್ಯಾರಂಟಿ

ಪುಟ ೧➡ ಅಲ್ಲದೇ, 2026-27ನೇ ಸಾಲಿಗೆ ಸಾಮಾನ್ಯ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಎಲ್ಲರನ್ನೂ ಸೇರಿಸಿ 10 ಲಕ್ಷ ಉಚಿತ ಬಸ್ ಪಾಸ್‌ಗಳನ್ನು, ವಿದ್ಯಾರ್ಥಿಗಳಿಗೆ ವಿತರಿಸಲು ಅಂದಾಜಿಸಲಾಗಿದೆ. ಗೃಹಜ್ಯೋತಿ ಯೋಜನೆಯಲ್ಲಿ ಮೇ ಅಂತ್ಯದವರೆಗೆ 1.65 ಕೋಟಿ ಫಲಾನುಭವಿಗಳು ಯೋಜನೆಯ ಲಾಭ ಪಡೆದಿರುತ್ತಾರೆ. ಹೊರ ರಾಜ್ಯದಿಂದ ಇಲ್ಲಿಗೆ ಬಂದು ನೆಲೆಸಿ ಗೃಹಜ್ಯೋತಿ ಲಾಭ ಪಡೆಯುವವರ ಮಾಹಿತಿ ಸಂಗ್ರಹಿಸಲು ಸೂಚನೆ. ಮತಪಟ್ಟಿಯಲ್ಲಿ ಹೆಸರಿರುವ ಮತದಾರರು ಮಾತ್ರ ಸರ್ಕಾರದ ಯೋಜನೆಗಳ ಫಲಾನುಭವಿಗಳಾಗಿರುತ್ತಾರೆ.

ನೈಜ ಫಲಾನುಭವಿಗಳಿಗೆ ತೊಂದರೆ ಆಗಬಾರದು

ಪುಟ ೧➡ **ಏರ್‌ಟೆಲ್ ಆ್ಯಪ್ ಬ್ಯಾಂಕ್‌ನಲ್ಲಿ (ಏರ್ಟೆಲ್ ಸಿಮ್‌ದಾರರು ಬಳಸಲು ಅವಕಾಶವಿರುವ ಖಾತೆ) ಯುಪಿಐ ಖಾತೆಗಳನ್ನು ತೆಗೆದು ದುರುಪಯೋಗಪಡಿಸಿಕೊಳ್ಳುತ್ತಿರುವ ಪ್ರಕರಣಗಳು ಪತ್ತೆಯಾಗಿವೆ ಎನ್ನುವ ಬಗ್ಗೆ ಅಧಿಕಾರಿಗಳು ಸಭೆಯ ಗಮನಕ್ಕೆ ತಂದರು. ಗೃಹಲಕ್ಷ್ಮಿ ಜಾರಿಯಲ್ಲಿ ಬರುತ್ತಿರುವ ಎರಡು ಪ್ರಮುಖ ತಾಂತ್ರಿಕ ಸಮಸ್ಯೆಗಳ ಬಗ್ಗೆ ಕೂಲಂಕಷ ಚರ್ಚೆ ನಡೆಸಲಾಯಿತು. ಮರಣ ಹೊಂದಿದ ಫಲಾನುಭವಿಗಳ ಸಂಖ್ಯೆ ಸಕಾಲದಲ್ಲಿ ದೊರೆಯದಿರುವ ಬಗ್ಗೆ ಇ-ಕೆವೈಸಿ ಹಾಗೂ ಬ್ಯಾಂಕ್‌ಖಾತೆ/ಎನ್‌ಪಿಸಿಐ ನಿಷ್ಕ್ರಿಯವಾಗಿರುವ ಫಲಾನುಭವಿಗಳ ಕುರಿತಂತೆ ಚರ್ಚೆ ನಡೆಸಲಾಯಿತು.**

ಮುಂದಿನ ವಾರ ಹೈಕಮಾಂಡ್ ಭೇಟಿ: ಆರ್.ಅಶೋಕ್

ಪುಟ ೧➡ ಈ ವಿಚಾರವನ್ನು ಕೇಂದ್ರದ ನಾಯಕರ ಗಮನಕ್ಕೂ ತರಲಾಗಿದೆ. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರೊಂದಿಗೆ ಚರ್ಚೆ ಮಾಡಿದ್ದು, ಅವರಿಗೂ ಇದರಿಂದ ಬೇಸರವಾಗಿದೆ. ಇದಕ್ಕೆ ಸರಿಯಾದ ಉತ್ತರ ನೀಡುತ್ತೇವೆ. ಇದು ಬಿಜೆಪಿ, ಜೆಡಿಎಸ್‌ನಿಂದ ಆಗಿದೆ ಎಂದು ಹೇಳುವುದಿಲ್ಲ. ಮೋಸ ಮಾಡಿರುವವರು ಯಾರು ಎಂಬುದನ್ನು ಕಂಡುಹಿಡಿಯುತ್ತೇವೆ. ಅಡ್ಡ ಮತದಾನ ಮಾಡಿರುವವರು ಮತ್ತೆ ಶಾಸಕರಾಗದಂತೆ ನೋಡಿಕೊಳ್ಳುತ್ತೇವೆ ಎಂದು ತಿಳಿಸಿದರು.

70 ಲಕ್ಷಕ್ಕೂ ಹೆಚ್ಚು ಯುವಕರಿಗೆ ನೌಕರಿ

ಪುಟ ೧➡ ಯೋಜನೆಯ ಸಾಧನೆಗಳನ್ನು ಉಲ್ಲೇಖಿಸಿದ ಪ್ರಧಾನಿ ಮೋದಿ, ಸುಮಾರು 70 ಲಕ್ಷ ಹೊಸ ಉದ್ಯೋಗಗಳು ಸೃಷ್ಟಿಯಾಗಿದ್ದು, ಅಷ್ಟೇ ಸಂಖ್ಯೆಯ ಮೊದಲ ಬಾರಿಗೆ ಉದ್ಯೋಗ ಪಡೆದವರು ಸಾಮಾಜಿಕ ಭದ್ರತಾ ವ್ಯವಸ್ಥೆಯ ವ್ಯಾಪ್ತಿಗೆ ಬಂದಿದ್ದಾರೆ ಎಂದು ಹೇಳಿದರು. ಸುಮಾರು 20 ಲಕ್ಷ ಯುವಕರು ತಮ್ಮ ಮೊದಲ ಉದ್ಯೋಗದಲ್ಲಿ ಆರು ತಿಂಗಳ ಸೇವೆ ಪೂರ್ಣಗೊಳಿಸಿದ್ದು, 10 ಲಕ್ಷಕ್ಕೂ ಹೆಚ್ಚು ಮಂದಿ ಈಗಾಗಲೇ ಪ್ರೋತ್ಸಾಹಧನವನ್ನು ಪಡೆದಿದ್ದಾರೆ ಎಂದರು. ಇದು ಕೇವಲ ಆರ್ಥಿಕ ನೆರವಲ್ಲ, ಯುವಕರ ಶ್ರಮಕ್ಕೆ ರಾಷ್ಟ್ರ ನೀಡುತ್ತಿರುವ ಗೌರವ ಮತ್ತು ಅವರ ಭವಿಷ್ಯದ ಮೇಲಿನ ವಿಶ್ವಾಸದ ಸಂಕೇತ ಎಂದು ಮೋದಿ ಹೇಳಿದರು.

ಉದ್ಯಮ ಮತ್ತು ಯುವಕರಿಗೆ ಸಮಾನ ಬೆಂಬಲ: ಪಿಎಂ-ವಿಬಿಆರ್‌ವೈ ಕೇವಲ ಉದ್ಯೋಗ ಯೋಜನೆಯಲ್ಲ, ಉದ್ಯಮ ಮತ್ತು ಉದ್ಯೋಗಿಗಳ ನಡುವಿನ ಬಲವಾದ ಸೇತುವೆಯಾಗಿದೆ. ಉದ್ಯೋಗ ಸೃಷ್ಟಿಸುವ ಸಂಸ್ಥೆಗಳಿಗೆ ಉತ್ತೇಜನ ನೀಡುವುದರ ಜತೆಗೆ ಉದ್ಯೋಗ ಜೀವನ ಆರಂಭಿಸುವ ಯುವಕರಿಗೂ ಸರ್ಕಾರ ಬೆಂಬಲ ನೀಡುತ್ತಿದೆ ಎಂದರು.

ಮಹಿಳಾ ಉದ್ಯೋಗಕ್ಕೆ ಹೆಚ್ಚಿನ ಒತ್ತು: ಮಹಿಳೆಯರ ಆರ್ಥಿಕ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಲು ರಾತ್ರಿ ಪಾಳಿಯ ಉದ್ಯೋಗ, ಮನೆಯಿಂದಲೇ ಕೆಲಸ ಮಾಡುವ ಅವಕಾಶಗಳು ಹಾಗೂ ಕಾರ್ಯಸ್ಥಳದ ಸುರಕ್ಷತಾ ವ್ಯವಸ್ಥೆಗಳನ್ನು ಬಲಪಡಿಸುವ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಮೋದಿ ಹೇಳಿದರು.

3.5 ಕೋಟಿ ಉದ್ಯೋಗಗಳ ಗುರಿ

99,446 ಕೋಟಿ ರೂ. ವೆಚ್ಚದ ಈ ಯೋಜನೆಯ ಮೂಲಕ ಎರಡು ವರ್ಷಗಳಲ್ಲಿ 3.5 ಕೋಟಿಗೂ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸುವ ಗುರಿ ಹೊಂದಲಾಗಿದೆ. ಇದರಲ್ಲಿ ಸುಮಾರು 1.92 ಕೋಟಿ ಮಂದಿ ಮೊದಲ ಬಾರಿಗೆ ಉದ್ಯೋಗ ಕ್ಷೇತ್ರಕ್ಕೆ ಪ್ರವೇಶಿಸುವ ನಿರೀಕ್ಷೆಯಿದೆ. ಆಗಸ್ಟ್ 2025ರಿಂದ ಯೋಜನೆಯಲ್ಲಿ 70 ಲಕ್ಷಕ್ಕೂ ಹೆಚ್ಚು ಯುವಕರು ಔಪಚಾರಿಕ ಉದ್ಯೋಗ ವ್ಯವಸ್ಥೆಗೆ ಸೇರ್ಪಡೆಯಾಗಿದ್ದು, ಅವರಲ್ಲಿ ಸುಮಾರು ಶೇ.30 ಮಹಿಳೆಯರಾಗಿದ್ದಾರೆ.

ಇಸ್ಲಾಂಗೆ ಮತಾಂತರಗೊಂಡು ಕೇರಳದಲ್ಲಿ ಪತ್ತೆ: ಇಬ್ಬರ ಸೆರೆ

• **ಮಡಿಕೇರಿ:** ಕಳೆದ ಒಂದೂವರೆ ತಿಂಗಳ ಹಿಂದೆ ಕೊಡಗಿನ ಕುಶಾಲನಗರದಿಂದ ನಾಪತ್ತೆಯಾಗಿದ್ದ ಮಹಿಳೆ ಹಾಗೂ ಆಕೆಯ 9 ವರ್ಷದ ಮಗು ಕೇರಳ ರಾಜ್ಯದ ಮಲಪ್ಪುರಂ ಜಿಲ್ಲೆಯ ಮದರಸವೊಂದರಲ್ಲಿ ಪತ್ತೆಯಾಗುವ ಮೂಲಕ ಪ್ರಕರಣಕ್ಕೆ ತಿರುವು ದೊರಕಿದ್ದು, ಈ ಪ್ರಕರಣದ ಹಿಂದೆ ಮತಾಂತರ ಹಾಗೂ ಲವ್ ಜಿಹಾದ್‌ನ ದೊಡ್ಡ ಸಂಚು ಇರುವುದಾಗಿ ಕುಶಾಲನಗರದ ಹಿಂದೂಪರ ಸಂಘಟನೆಗಳು ಆರೋಪಿಸಿವೆ. ಕೇರಳದ ಮಲಪ್ಪುರಂ ಜಿಲ್ಲೆಯ ಪೊನ್ನಾಣಿ ಹಾಗೂ ಮಂಜೇರಿ ಭಾಗಗಳಲ್ಲಿ ಮತಾಂತರ ಜಾಲ ಕಾರ್ಯನಿರ್ವಹಿಸುತ್ತಿದೆ ಎಂಬ ಆರೋಪವೂ ಹಿಂದೂ ಸಂಘಟನೆಗಳಿಂದ ಕೇಳಿ ಬಂದಿದೆ.

ಕುಶಾಲನಗರದ ನಿಸರ್ಗಧಾಮದ ಎನ್‌ಟಿಸಿ ಕಾಂಪ್ಲೆಕ್ಸ್‌ನ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಸಚಿತಾ, ಅಂಗಡಿ ಮಾಲಕ ಸಲೀಂ ಎಂಬಾತನ ಸಂಪರ್ಕಕ್ಕೆ ಬಂದ ಬಳಿಕ ಗಂಡನನ್ನು ಬಿಟ್ಟು ಮಗುವಿನೊಂದಿಗೆ ತೆರಳಿದ್ದರು ಎಂದು ಆರೋಪಿಸಲಾಗಿದೆ.

ಮೋದಿ ವಿದೇಶ ಪ್ರವಾಸ ಅತ್ಯಂತ ಫಲಪ್ರದ: ಬಿಜೆಪಿ

ಪುಟ ೧➡ ಭಾರತ ಮತ್ತು ಫ್ರಾನ್ಸ್ ನಡುವೆ ಕೃತಕ ಬುದ್ಧಿಮತ್ತೆ (ಎಐ) ಹಾಗೂ ಡೇಟಾ ಸಂರಕ್ಷಣೆ ಕುರಿತ ದ್ವಿಪಕ್ಷೀಯ ಒಪ್ಪಂದಕ್ಕೆ ಸಹಿ ಹಾಕಿರುವುದು ಈ ಪ್ರವಾಸದ ಪ್ರಮುಖ ಸಾಧನೆಗಳಲ್ಲಿ ಒಂದಾಗಿದೆ ಎಂದು ಹೇಳಿದರು. ಫ್ರಾನ್ಸ್ ಭಾರತದಲ್ಲಿ ವೈಮಾನಿಕ-ಬಾಹ್ಯಾಕಾಶ ಸಂಶೋಧನಾ ಕೇಂದ್ರ ಹಾಗೂ ಉತ್ತರ ಪ್ರದೇಶದ ಕಾನ್ಪುರದಲ್ಲಿ ರಾಷ್ಟ್ರೀಯ ಕೌಶಲ್ಯಾಭಿವೃದ್ಧಿ ಕೇಂದ್ರ ಸ್ಥಾಪಿಸಲು ನಿರ್ಧರಿಸಿದೆ. ಜತೆಗೆ ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಗಣಿತ (ಸ್ಟೆಮ್) ಕ್ಷೇತ್ರಗಳಲ್ಲಿ ವರ್ಷಕ್ಕೆ 30,000 ಭಾರತೀಯ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲು ಮುಂದಾಗಿದೆ. ಪ್ರವಾಸದ ವೇಳೆ ಪ್ರಧಾನಿ ಮೋದಿ 50ಕ್ಕೂ ಹೆಚ್ಚು ಜಾಗತಿಕ ಕಂಪನಿಗಳ ಮುಖ್ಯಸ್ಥರು, ಉದ್ಯಮಿಗಳು ಮತ್ತು ನವೋದ್ಯಮಿಗಳೊಂದಿಗೆ ಮಾತುಕತೆ ನಡೆಸಿದ್ದು, ಹಲವು ಹೂಡಿಕೆ ಮತ್ತು ತಂತ್ರಜ್ಞಾನ ಸಹಭಾಗಿತ್ವಗಳಿಗೆ ಬುನಾದಿ ಹಾಕಲಾಗಿದೆ ಎಂದು ಬಿಜೆಪಿ ತಿಳಿಸಿದೆ.

ದತ್ತಿ ಪ್ರಶಸ್ತಿಗೆ ಪುಸ್ತಕಗಳ ಆಹ್ವಾನ

• **ಬೆಂಗಳೂರು:** ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪುಸ್ತಕಗಳಿಗೆ ನೀಡಲಾಗುವ ವಿವಿಧ ಪ್ರತಿಷ್ಠಿತ ದತ್ತಿ ಪ್ರಶಸ್ತಿಗಳಿಗಾಗಿ ಪುಸ್ತಕಗಳ ಆಹ್ವಾನ ಮಾಡಲಾಗಿದೆ. 2025 ಜನವರಿ 1ರಿಂದ ಡಿಸೆಂಬರ್ 31ರೊಳಗೆ ಪ್ರಕಟಗೊಂಡ ಪುಸ್ತಕಗಳನ್ನು ಲೇಖಕರು, ಪ್ರಕಾಶಕರು ಕಳಿಸಿಕೊಡಬಹುದಾಗಿದೆ. 2025ನೆ ಸಾಲಿನಲ್ಲಿ ಪ್ರಕಟಗೊಂಡಿರುವ ಒಟ್ಟು 55 ದತ್ತಿ ಪುಸ್ತಕಗಳಿಗೆ ವಿವಿಧ ದತ್ತಿ ಪುರಸ್ಕಾರಗಳನ್ನು ಕನ್ನಡ ಸಾಹಿತ್ಯ ಪರಿಷತ್ತು ನೀಡುತ್ತಿದೆ. ದತ್ತಿ ದಾನಿಗಳು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ದತ್ತಿ ನಿಧಿ ಸ್ಥಾಪಿಸಿದ್ದು, ಇದಕ್ಕಾಗಿ 59 ವಿವಿಧ ಪ್ರಕಾರಗಳ ಪುಸ್ತಕ ಆಹ್ವಾನಿಸಲಾಗಿದೆ.

ಮುಖ್ಯಮಂತ್ರಿ ವಿ.ಡಿ. ಸತೀಶನ್‌ರಿಂದ ಚೊಚ್ಚಲ ಬಜೆಟ್ ಮಂಡನೆ

ನವಕೇರಳಕ್ಕಾಗಿ ಇರುವ ಬಜೆಟ್

• **ತಿರುವನಂತಪುರಂ:** ಹಣಕಾಸು ಖಾತೆ ಯನ್ನೂ ಹೊಂದಿರುವ ಕೇರಳ ಸಿಎಂ ವಿ.ಡಿ. ಸತೀಶನ್ ಅವರು 2026-27ನೇ ಸಾಲಿಗಾಗಿ 2,39,907.13 ಕೋ. ರೂ. ಗಾತ್ರದ 1,84,438 ಕೋ. ರೂ. ಆದಾಯ, 34,586.66 ಕೋ.ರೂ.ಗಳ ಆದಾಯ ಕೊರತೆ ಮತ್ತು 55,419.5ಕೋ. ರೂ.ಗಳ ಹಣಕಾಸು ಕೊರತೆಯ ಬಜೆಟನ್ನು ಮಂಡಿಸಿದ್ದಾರೆ.

ಇದು ಅವರ ಚೊಚ್ಚಲ ಬಜೆಟ್. ರಾಜ್ಯದಲ್ಲಿ ನ್ಯಾಯಯುತ ನೆಲೆಯಲ್ಲಿ ಭೂ ಮೌಲ್ಯಮಾಪನ ವನ್ನು ಮಾಡುವ ನಿಟ್ಟಿನಲ್ಲಿ ಪುನರ್ ಪರಿಶೀಲನೆ ನಡೆಸಲಾಗುವುದು .ರಾಜ್ಯಾದ್ಯಂತ ನ್ಯಾಯ ಯುತ ಮೌಲ್ಯಗಳಲ್ಲಿ ಅಸಮಾನತೆ ಇರುವುದನ್ನು ಸರಿಪಡಿಸುವಲ್ಲಿ ತಾಂತ್ರಿಕ ಮತ್ತು ಮಾರುಕಟ್ಟೆ ಮೌಲ್ಯ ದತ್ತಾಂಶಗಳ ಮೌಲ್ಯ ಮಾಪನವನ್ನು ಕೈಗೊಳ್ಳಲಾಗುವುದು ಎಂದಿದ್ದಾರೆ. ಬೆಳವಣಿಗೆ ಮತ್ತು ಅಭಿವೃದ್ಧಿಯ ನವಕೇರಳಕ್ಕಾಗಿ ಇರುವ ಬಜೆಟ್ ಎಂದು ಅವರು ಘೋಷಿಸಿದ್ದಾರೆ.

ಕೇರಳ ಸ್ಟ್ಯಾಂಪ್ ಕಾಯ್ದೆಯಲ್ಲಿ ಬಾಕಿ ಇರುವ ಎಲ್ಲ ಅರ್ಜಿಗಳನ್ನು 2026ರ ಅಕ್ಟೋಬರ್‌ಗೆ ಮುನ್ನ ಇತ್ಯರ್ಥಪಡಿಸಲಾಗುವುದು. ಇ-ಸ್ಟ್ಯಾಂಪಿಂಗ್ ಸೌಲ್ಯವನ್ನು ಖಾಸಗಿ ವಿಮಾ ಕಂಪನಿಗಳು ಮತ್ತು ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳಿಗೂ ವಿಸ್ತರಿಸಲಾಗುವುದು. ಆಸ್ತಿ ವಹಿವಾಟುಗಳಲ್ಲಿ ಕಡಿಮೆ ಮೌಲ್ಯಮಾಪನ ಮಾಡಲಾದ ಎಲ್ಲಾ ಬಾಕಿಗಳನ್ನು 'ಆಸ್ತಿಯ ಮೇಲಿನ ಶುಲ್ಕ' ಎಂದು ದಾಖಲಿಸಲಾಗುತ್ತದೆ. ಇದು ಭೂಮಿಗೆ ಸಂಬಂಧಿಸಿದ ಹೊಣೆಗಾರಿಕೆಗಳ ಬಗ್ಗೆ ಸಂಭಾವ್ಯ ಖರೀದಿದಾರರಲ್ಲಿ ಜಾಗೃತಿ ಮೂಡಿಸುತ್ತದೆ ಎಂದು ಅವರು ತಿಳಿಸಿದ್ದಾರೆ.

ವೈದ್ಯಕೀಯ ತಪಾಸಣೆ

40ವರ್ಷ ಮೇಲ್ಪಟ್ಟವರಿಗೆ ವಾರ್ಷಿಕ ವೈದ್ಯಕೀಯ ತಪಾಸಣೆಗೆ ಹಣಕಾಸು ನೆರವು ಒದಗಿಸುವ ಯೋಜನೆಯೊಂದನ್ನು ಸತೀಶನ್ ಪ್ರಕಟಿಸಿದ್ದು, ಹರಿಪಾದ್‌ನಲ್ಲಿ ಹೊಸ ವೈದ್ಯಕೀಯ ಕಾಲೇಜೊಂದನ್ನು ಸ್ಥಾಪಿಸುವುದಾಗಿ ಘೋಷಿಸಿದ್ದಾರೆ.

ಮಾನವ-ಪ್ರಾಣಿ ಸಂಘರ್ಷ ತಡೆಗೆ 192ಕೋ.ರೂ.: 2050ರ ವೇಳೆಗೆ ಕೇರಳವನ್ನು ಇಂಗಾಲ-ತಟಸ್ಥ ರಾಜ್ಯವೆಂದು ಘೋಷಿಸುವ ಕ್ರಮಗಳನ್ನು ಪ್ರಕಟಿಸಿದ ಅವರು, ಕೃಷಿ ಪದ್ಧತಿಯಲ್ಲಿ ಮಣ್ಣಿನ ಇಂಗಾಲದ ಪ್ರತ್ಯೇಕತಾ ಕ್ರಮಗಳನ್ನು ಸೇರಿಸಲಾಗುವುದು .ಕೇರಳದಲ್ಲಿ ಮಾನವ-ಪ್ರಾಣಿ ಸಂಘರ್ಷವನ್ನು ತಗ್ಗಿಸಲು ವೈಜ್ಞಾನಿಕ ಕ್ರಮಗಳನ್ನು ಬಳಸಲು 192 ಕೋ.ರೂ.ಗಳ ಬಜೆಟ್ ಹಂಚಿಕೆ ಮಾಡಲಾಗಿದೆ.

ಕೇರಳದಲ್ಲಿ ಹೂಡಿಕೆಗಳನ್ನು ಉತ್ತೇಜಿಸುವ ಪ್ರಯತ್ನದಲ್ಲಿ, ಮುಖ್ಯಮಂತ್ರಿ ವಿ ಡಿ ಸತೀಸನ್ 2026-27 ರ ಪರಿಷ್ಕೃತ ಬಜೆಟ್‌ನಲ್ಲಿ ಡೇಟಾ ಆಧಾರಿತ 'ಇನ್ವೆಸ್ಟ್ ಕೇರಳ ಕೋಶ' ರಚನೆಯನ್ನು ಘೋಷಿಸಿದ್ದಾರೆ. ಇದು ಯೋಜನೆಗಳು ಪ್ರಗತಿ ಯಲ್ಲಿರುವ, ಅನುಷ್ಠಾನಕ್ಕೆ ಸಿದ್ಧವಾಗುವುದನ್ನು ಖಚಿತಪಡಿಸುತ್ತದೆ. ಭೂ ಸ್ವಾಧೀನ ಕ್ರಮಗಳನ್ನು ಸಹ ತ್ವರಿತಗೊಳಿಸುತ್ತದೆ ಎಂದರು.

ಹಸಿರೀಕರಣಕ್ಕಾಗಿ 15 ಲಕ್ಷ ಸಸಿ

ಪುಟ ೧➡ ಜೀವವೈವಿಧ್ಯತೆಯನ್ನು ಹೆಚ್ಚಿಸುವುದು ಹಾಗೂ ಭವಿಷ್ಯದ ಪೀಳಿಗೆಗಳಿಗಾಗಿ ದೀರ್ಘಕಾಲಿಕ ಪರಿಸರ ಆಸ್ತಿಗಳನ್ನು ನಿರ್ಮಿಸುವ ಉದ್ದೇಶ ಹೊಂದಿದೆ ಎಂದು ತಿಳಿಸಿದರು. ಈ ಅಭಿಯಾನದಲ್ಲಿ ನಗರದ 50,000ಕ್ಕೂ ಹೆಚ್ಚು ನಾಗರಿಕರು, ಸ್ವಯಂಸೇವಕರು, ವಿದ್ಯಾರ್ಥಿಗಳು, ಕಾರ್ಪೊರೇಟ್ ಸಂಸ್ಥೆಗಳು, ನಿವಾಸಿ ಸಂಘಗಳು, ಸರ್ಕಾರೇತರ ಸಂಸ್ಥೆಗಳು ಹಾಗೂ ಸರ್ಕಾರಿ ಇಲಾಖೆಗಳು ಭಾಗವಹಿಸಲಿದ್ದು, ನಮ್ಮ ಜತೆಗೆ ಕಾರ್ಮಿಕ ಇಲಾಖೆಯೂ ಕೈಜೋಡಿಸಿದೆ ಎಂದರು.

ಮೂರು ಕಡೆ ಪ್ರಮುಖ ಕಾರ್ಯಕ್ರಮ: ಸಸಿ ನೆಡುವ ಕಾರ್ಯಕ್ರಮವು ನಾಡಪ್ರಭು ಕೆಂಪೇಗೌಡ ಬಡಾವಣೆ, ಬನಶಂಕರಿ 6ನೇ ಹಂತ, ಹಾಗೂ ಡಾ. ಶಿವರಾಮ ಕಾರಂತ ಬಡಾವಣೆ ಸೇರಿದಂತೆ ಕೆರೆಗಳ ಬಫರ್ ವಲಯಗಳು, ರಾಜಕಾಲುವೆಗಳ ಬಫರ್ ವಲಯಗಳು, ಉದ್ಯಾನವನಗಳು ಮತ್ತು ಇತರ ಸಾರ್ವಜನಿಕ ಸ್ಥಳಗಳಲ್ಲಿ ನಡೆಯಲಿದೆ, ಪ್ರತಿಯೊಬ್ಬರು 30 ಸಸಿಗಳನ್ನು ನೆಡಲಿದ್ದಾರೆ ಎಂದು ಹ್ಯಾರಿಸ್ ಮಾಹಿತಿ ನೀಡಿದರು.


ಬೆಂಗಳೂರಿನ ವಾತಾವರಣಕ್ಕೆ ಸೂಕ್ತವಾದ ಮರ: ಅಭಿಯಾನದಲ್ಲಿ ಬೆಂಗಳೂರಿನ ಪರಿಸರ ವ್ಯವಸ್ಥೆಗೆ ಸೂಕ್ತವಾದ ಸ್ಥಳೀಯ ಮರಗಳ ಜಾತಿಗಳು ಹಾಗೂ ಔಷಧೀಯ ಸಸ್ಯಗಳಿಗೆ ಆದ್ಯತೆ ನೀಡಲಾಗುತ್ತದೆ. ಅಪರೂಪದ ಹಾಗೂ ವಿರಳವಾದ ಹಲವು ಸ್ಥಳೀಯ ಸಸ್ಯ ಪ್ರಭೇದಗಳನ್ನೂ ನೆಡಲಾಗುವುದು. ವೈಜ್ಞಾನಿಕವಾಗಿ ಯೋಜಿತವಾದ, ಹೆಚ್ಚಿನ ಸಾಂದ್ರತೆಯ ಮಿಯಾವಾಕಿ ವಿಧಾನವನ್ನು ಅಳವಡಿಸಿಕೊಂಡು ಸ್ವಾವಲಂಬಿ ನಗರ ಆಮ್ಲಜನಕ ಉದ್ಯಾನಗಳನ್ನು ನಿರ್ಮಿಸುವ ಗುರಿಯನ್ನು ಕಾರ್ಯಕ್ರಮ ಹೊಂದಿದೆ.

ಪರಿಸರ ಸಂರಕ್ಷಣೆಯ ಉದ್ದೇಶಗಳ ಜತೆಗೆ, ಬೆಂಗಳೂರಿನ ಪರಿಸರ ಭವಿಷ್ಯದ ಬಗ್ಗೆ ಸಮುದಾಯದ ಮಾಲೀಕತ್ವದ ಭಾವನೆಯನ್ನು ಬೆಳೆಸುವ ಸಲುವಾಗಿ ಸಾರ್ವಜನಿಕರ ಸಕ್ರಿಯ ಭಾಗವಹಿಸುವಿಕೆಯನ್ನು ಉತ್ತೇಜಿಸುವುದೂ ಈ ಅಭಿಯಾನದ ಪ್ರಮುಖ ಉದ್ದೇಶವಾಗಿದೆ. ನಗರ ಯೋಜನೆ ಹಾಗೂ ಸುಸ್ಥಿರ ನಗರಾಭಿವೃದ್ಧಿಯಲ್ಲಿ ಪ್ರಕೃತಿ ಆಧಾರಿತ ಪರಿಹಾರಗಳನ್ನು ಅಳವಡಿಸುವ ಬಿಡಿಎಯ ವಿಶಾಲ ದೃಷ್ಟಿಕೋನದ ಪ್ರತಿಬಿಂಬವೂ ಇದಾಗಿದೆ ಎಂದು ಹ್ಯಾರಿಸ್ ತಿಳಿಸಿದರು.

ಬೃಹತ್ ಪ್ರಮಾಣದ ಹಸಿರು ಪ್ರದೇಶಗಳು ಹಾಗೂ ಪರಿಸರ ಸಂರಕ್ಷಣಾ ವಲಯಗಳನ್ನು ನಿರ್ಮಿಸುವ ಮೂಲಕ ನಗರದ ದೀರ್ಘಕಾಲಿಕ ಪರಿಸರ ಸ್ಥೈರ್ಯಕ್ಕೆ ನಾವು ಹೂಡಿಕೆ ಮಾಡುತ್ತಿದ್ದೇವೆ. ಬೆಂಗಳೂರನ್ನು ಜಾಗತಿಕ ಮಟ್ಟದಲ್ಲಿ ಮುಂಚೂಣಿಯ ನಗರವಾಗಿ ಗುರುತಿಸುವ ಗುರಿ ಹೊಂದಿದ್ದೇವೆ.
■ ಮೇಜರ್ ಪಿ. ಮಣಿವಣ್ಣನ್, ಬಿಡಿಎ ಆಯುಕ್ತ

ಲಂಚ: ಭೂಮಾಪಕ ಬಲೆಗೆ

• **ಬಳ್ಳಾರಿ:** ಖಾಸಗಿ ಲೇಔಟ್‌ವೊಂದರ ಪ್ಲಾನ್ ಡೆವಲಪ್‌ಮೆಂಟ್ ಅನುಮೋದನೆಗಾಗಿ 3.5 ಲಕ್ಷ ರೂ.ಲಂಚದ ಬೇಡಿಕೆ ಇಟ್ಟಿದ್ದ ಇಲ್ಲಿನ ನಗರಾಭಿವೃದ್ಧಿ ಪ್ರಾಧಿಕಾರದ ಭೂಮಾಪಕ ಶಾಂತಮೂರ್ತಿ ಅವರು ಶುಕ್ರವಾರ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.




ವೀರೇಶ್ ಎನ್ನುವವರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು, ಶಾಂತ ಮೂರ್ತಿ ಪರವಾಗಿ ಮಹಮ್ಮದ್ ಸಾಜಿದ್ ಅವರು, ವೀರೇಶ್ ಮೂಲಕ ಲಂಚದ ಹಣ ಪಡೆಯು ವಾಗ ಅಧಿಕಾರಿಗಳ ಬಲೆಗೆ ಬಿದ್ದಿದ್ದಾರೆ. ಆರೋಪಿಯನ್ನು ವಶಕ್ಕೆ ಪಡೆದ ಅಧಿಕಾರಿಗಳು ವಿಚಾರಣೆ ಮುಂದುವರಿಸಿದ್ದಾರೆ. ಜಮೀನುಗಳ ಏಕ ಹಾಗೂ ಬಹು ನಿವೇಶನ ವಿನ್ಯಾಸದ ಕಡತಗಳಿಗೆ ಅನುಮೋದನೆ ದೊರಕಿಸಲು ಕಚೇರಿಗಳಲ್ಲಿ ಕೆಲಸ ಮಾಡಿಕೊಡಲು ವೀರೇಶ್ ಎನ್ನುವವರು ಜಿಪಿಎ ಪಡೆದಿದ್ದರು. ಈ ಕಡತಗಳಿಗೆ ಅನುಮೋದನೆ ನೀಡಲು ಬುಡಾ ಕಚೇರಿಯ ಭೂಮಾಪಕರು ಶಾಂತ ಮೂರ್ತಿ 3.50 ಲಕ್ಷ ರೂ. ಲಂಚದ ಬೇಡಿಕೆ ಇಟ್ಟಿದ್ದರು. ಈ ಕುರಿತು ಲೋಕಾಯುಕ್ತ ಠಾಣೆಯಲ್ಲಿ ದೂರು ದಾಖಲಾಗಿತ್ತು.

ಕೋಡಿ ಕನ್ಯಾಣ ಬೀಚ್: ಯುವಕ ಸಮುದ್ರ ಪಾಲು

• **ಕೋಟ:** ಕೋಡಿ ಕನ್ಯಾಣದ ಬೀಚ್ ರೆಸಾರ್ಟ್‌ನಲ್ಲಿದ್ದ ಬೆಂಗಳೂರು ಮೂಲದ ಯುವಕನೋರ್ವ ಸಮುದ್ರದಲ್ಲಿ ಈಜಲು ಹೋಗಿ ನೀರಿನ ಸೆಳೆತಕ್ಕೆ ಸಿಲುಕಿ ಮೃತಪಟ್ಟಿರುವ ದಾರುಣ ಘಟನೆ ಕೋಡಿ ಕನ್ಯಾಣ ಕಡಲತೀರದಲ್ಲಿ ಜೂ. 19ರ ಮುಂಜಾನೆ ಸಂಭವಿಸಿದೆ. ಬೆಂಗಳೂರು ರಾಜಾಜಿ ನಗರದ ನಿಖಿಲ್ ಕುಮಾರ್ (32) ಮೃತಪಟ್ಟ ದುರ್ದೈವಿ ಯುವಕ ಎಂದು ಗುರುತಿಸಲಾಗಿದೆ. ರಾಜಧಾನಿ ಬೆಂಗಳೂರಿನಿಂದ ಕರಾವಳಿ ಪ್ರವಾಸ ಕೈಗೊಂಡಿದ್ದ 9 ಮಂದಿ ಯುವಕರ ತಂಡವೊಂದು ಶುಕ್ರವಾರ ಬೆಳಿಗ್ಗೆ ಕೋಡಿ ಕನ್ಯಾಣದ ರೆಸಾರ್ಟ್‌ನಲ್ಲಿ ವಾಸ್ತವ್ಯ ಹೂಡಿ ಸಮುದ್ರ ತೀರದಲ್ಲಿ ವೀಕ್ಷಿಸುತ್ತಿದ್ದರು. ಈ ಪೈಕಿ ನಾಲ್ವರು ಯುವಕರು ಸಮುದ್ರದಲ್ಲಿ ಸ್ನಾನ ಮಾಡಲೆಂದು ನೀರಿಗೆ ಇಳಿದಿದ್ದಾರೆ. ಈ ಸಂದರ್ಭದಲ್ಲಿ ನೀರಿನ ಭಾರಿ ಸೆಳೆತಕ್ಕೆ ಸಿಲುಕಿ ನಿಖಿಲ್ ಸಮುದ್ರದಲ್ಲಿ ಕೊಚ್ಚಿ ಹೋಗಿದ್ದಾರೆ.


ತಿಮ್ಮಪ್ಪನ ದರ್ಶನ



ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅವರು ಪತ್ನಿ ಉಷಾ, ಪುತ್ರ ಆಕಾಶ್ ಅವರ ಜತೆಗೆ ತಿರುಪತಿ ತಿರುಮಲ ದೇಗುಲದಲ್ಲಿ ಶುಕ್ರವಾರ ವೆಂಕಟೇಶ್ವರ ಸ್ವಾಮಿ ದರ್ಶನ ಪಡೆದರು.

ಡಿಕೆಶಿ ವಿರುದ್ಧ ಪ್ರಕರಣ ಹೈ ವಜಾ

• **ಬೆಂಗಳೂರು:** ಆಕ್ಷೇಪಾರ್ಹ ಹೇಳಿಕೆಗಳನ್ನು ಒಳಗೊಂಡ ಬಿಜೆಪಿ ನಾಯಕರ ಚಿತ್ರಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡ ಆರೋಪದ ಮೇಲೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ದಾಖಲಾಗಿದ್ದ ಪ್ರಕರಣ ಹೈಕೋರ್ಟ್ ಶುಕ್ರವಾರ ವಜಾಗೊಳಿಸಿದೆ.



ನಗರದ ಹೈಗ್ರೌಂಡ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣ ರದ್ದತಿ ಕೋರಿ ಡಿ.ಕೆ. ಶಿವಕುಮಾರ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರ ಏಕಸದಸ್ಯ ಪೀಠವು ಪುರಸ್ಕರಿಸಿದೆ. ಶಿವಕುಮಾರ್ ಅವರನ್ನು ಪ್ರತಿನಿಧಿಸಿದ್ದ ವಕೀಲ ಎಚ್.ವಿ.ಪ್ರವೀಣ್ ಗೌಡ ಅವರು ಶಿವಕುಮಾರ್ ಅವರ ಸಾಮಾಜಿಕ ಜಾಲತಾಣ ಖಾತೆ ಮೂಲಕ ಆಕ್ಷೇಪಾರ್ಹ ಪೋಸ್ಟ್‌ಗಳನ್ನು ಹಾಕಲಾಗಿದೆ ಎಂಬ ಏಕೈಕ ಕಾರಣಕ್ಕೆ ಅವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಕಾಂಗ್ರೆಸ್ ಸಾಮಾಜಿಕ ಜಾಲತಾಣ ವಿಭಾಗದ ಮುಖ್ಯಸ್ಥರು ಪೋಸ್ಟ್ ಅಪ್ಲೋಡ್ ಮಾಡಿದ್ದಾರೆ. ಶಿವಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷರು ಎಂಬ ಕಾರಣಕ್ಕೆ ಅವರನ್ನು ಪ್ರಕರಣದಲ್ಲಿ ಸಿಲುಕಿಸಲಾಗಿದೆ ಎಂದರು.

ಪ್ರಕರಣದ ಹಿನ್ನೆಲೆ: 3 ದಶಕಗಳ ಹಿಂದೆ ರಾಮ ಜನ್ಮಭೂಮಿ ವಿಚಾರವಾಗಿ ಹುಬ್ಬಳ್ಳಿಯಲ್ಲಿ ನಡೆದ ಗಲಭೆ ಪ್ರಕರಣದಲ್ಲಿ ಆರೋಪಿಯಾಗಿದ್ದ ಶ್ರೀಕಾಂತ್ ಪೂಜಾರಿಯನ್ನು ಹೈಕೋರ್ಟ್ ಪೊಲೀಸರು ಬಂಧಿಸಿದ್ದರು. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ನಡೆ ಖಂಡಿಸಿ ಬಿಜೆಪಿಯು ರಾಜ್ಯಾದ್ಯಂತ ಪ್ರತಿಭಟನೆ ನಡೆಸಿತ್ತು. ಆ ಸಂದರ್ಭದಲ್ಲಿ ಬಿಜೆಪಿ ನಾಯಕರು ನಾನು ಕರಸೇವಕ ನನ್ನನ್ನೂ ಬಂಧಿಸಿ ಎಂಬ ಒಕ್ಕಣೆ ಹೊಂದಿದ್ದ ಭಿತ್ತಿಪತ್ರ ಹಿಡಿದು ಅಭಿಯಾನ ನಡೆಸಿದ್ದರು. ಇದನ್ನು ಟೀಕಿಸುವ ಉದ್ದೇಶದಿಂದ ಕಾಂಗ್ರೆಸ್ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಪೋಟೋ ಬಳಸಿ ನಾನು ಆರ್‌ಟಿಜಿಎಸ್ ಮೂಲಕ ಲಂಚ ಪಡೆದಿದ್ದೇನೆ. 40 ಸಾವಿರ ಕೋಟಿ ರೂ. ಅಕ್ರಮದಲ್ಲ ಪಾಲುದಾರ ನನ್ನನ್ನು ಬಂಧಿಸಿ, ಶಾಸಕ ವಿ.ಸುನೀಲ್ ಕುಮಾರ್ ಪೋಟೊ ಬಳಸಿ ನಾನು ಪರಶುರಾಮ ಮೂರ್ತಿ ಕಂಚನ್ನು ಕದ್ದಿದ್ದೇನೆ. ಸಿಮೆಂಟ್ ಕದ್ದಿದ್ದೇನೆ ನನ್ನನ್ನು ಬಂಧಿಸಿ ಎಂಬ ಒಕ್ಕಣೆಯ ಚಿತ್ರಗಳನ್ನು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧಿಕೃತ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಲಾಗಿತ್ತು.

ಕಿರುಸುದ್ದಿ

ಹುಸಿ ಬಾಂಬ್ ಬೆದರಿಕೆ: ಜಿಲ್ಲಾ ನ್ಯಾಯಾಲಯ ತಪಾಸಣೆ



• **ದಾವಣಗೆರೆ:** ಹುಸಿ ಬಾಂಬ್ ಬೆದರಿಕೆ ಇ-ಮೇಲ್ ಮತ್ತೆ ಬಂದ ಹಿನ್ನೆಲೆಯಲ್ಲಿ ಶುಕ್ರವಾರ ನಗರದ ಜಿಲ್ಲಾ ನ್ಯಾಯಾಲಯ ಸಂಕೀರ್ಣವನ್ನು ಪೊಲೀಸ್ ಇಲಾಖೆ ಹಾಗೂ ಬಾಂಬ್ ನಿಷ್ಕ್ರಿಯ ದಳದ ಅಧಿಕಾರಿ, ಸಿಬ್ಬಂದಿ ತೀವ್ರ ತಪಾಸಣೆ ನಡೆಸಿದ್ದು, ಅಂತಿಮವಾಗಿ ಇದೊಂದು ಹುಸಿ ಬಾಂಬ್ ಕರೆ ಎಂಬುದು ಸ್ಪಷ್ಟವಾಗಿದೆ. ನಗರದ ಜಿಲ್ಲಾ ನ್ಯಾಯಾಲಯಕ್ಕೆ ಬಾಂಬ್ ಇಟ್ಟಿರುವುದಾಗಿ ಜಿಲ್ಲಾ ನ್ಯಾಯಾಲಯಕ್ಕೆ ಇ-ಮೇಲ್ ಬಂದಿದ್ದು, ತಕ್ಷಣವೇ ಜಿಲ್ಲಾ ಪೊಲೀಸ್ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ, ಬಾಂಬ್ ನಿಷ್ಕ್ರಿಯ ದಳ ಹಾಗೂ ಶ್ವಾನ ದಳದ ತಂಡಗಳು ಸ್ಥಳಕ್ಕೆ ಧಾವಿಸಿ ಇಡೀ ಜಿಲ್ಲಾ ನ್ಯಾಯಾಲಯದ ಪ್ರತಿ ಕೊಠಡಿ, ವಕೀಲರ ಭವನ, ಶೌಚಾಲಯ ಹೀಗೆ ಯಾವುದನ್ನೂ ಬಿಡದೆ, ಮೂಲೆ-ಮೂಲೆಯಲ್ಲಿ ಬಾಂಬ್‌ಗಾಗಿ ಶೋಧ ಕೈಗೊಂಡವು. ಸುಮಾರು ಗಂಟೆಗಳ ಶೋಧದ ನಂತರ ಇದೊಂದು ಹುಸಿ ಬಾಂಬ್ ಬೆದರಿಕೆ ಕರೆಯೆಂಬುದು ಸ್ಪಷ್ಟವಾದ ಹಿನ್ನೆಲೆಯಲ್ಲಿ ಎಲ್ಲರೂ ನಿಟ್ಟುಸಿರುಬಿಟ್ಟರು.

ಯುವತಿ ಹತ್ಯೆ: ಮೂವರ ಸೆರೆ

• **ಬೆಳಗಾವಿ:** ಲಿವಿಂಗ್ ರಿಲೇಷನ್‌ಶಿಪ್‌ನಲ್ಲಿದ್ದ ಯುವತಿಯನ್ನು ಬೇರೆ ಮದುವೆಯಾಗಲು ಮುಂದಾಗಿದ್ದ ಪ್ರಿಯಕರನನ್ನು ಪ್ರಶ್ನಿಸಿದ ಹಿನ್ನೆಲೆಯಲ್ಲಿ ಯುವತಿಯನ್ನು ಹತ್ಯೆ ಮಾಡಿರುವ ಘಟನೆ ಬೆಳಕಿಗೆ ಬಂದಿದೆ. ಕೊಲೆ ಬಳಿಕ ಶವವನ್ನು ಮಹಾರಾಷ್ಟ್ರದ ದಟ್ಟ ಕಾಡಿನಲ್ಲಿ ಎಸೆದು ಪರಾರಿಯಾಗಿದ್ದ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಬೆಳಗಾವಿ ತಾಲೂಕಿನ ವಂಟಮೂರಿ ಗ್ರಾಮದ ಗಂಗವ್ವ ಹಂಚಿನಮನಿ (25) ಹತ್ಯೆಗೀಡಾದ ಯುವತಿ. ಹುಕ್ಕೇರಿ ತಾಲೂಕಿನ ರಾಜನಕಟ್ಟಿ ಗ್ರಾಮದ ಬಸವರಾಜ್ ಕರ್ನಾವರ್ (33) ಪ್ರಮುಖ ಆರೋಪಿ ಎಂದು ಗುರುತಿಸಲಾಗಿದೆ. ಬಸವರಾಜ್ ತನ್ನ ತಂದೆ ಯಲ್ಲಪ್ಪ ಹಾಗೂ ಮಾವ ಲಗಮಪ್ಪ ಅವರೊಂದಿಗೆ ಸೇರಿ ಕೃತ್ಯ ಎಸಗಿರುವುದಾಗಿ ತನಿಖೆಯಲ್ಲಿ ತಿಳಿದುಬಂದಿದೆ. ಆರೋಪಿಗಳು ಗಂಗವ್ವಳ ಮೇಲೆ ಕಬ್ಬಿಣದ ರಾಡ್‌ನಿಂದ ಹಲ್ಲೆ ನಡೆಸಿ ಹತ್ಯೆ ಮಾಡಿದ ಬಳಿಕ, ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಚಂದಗಡ ತಾಲೂಕಿನ ತಿಲಾರಿ ಘಾಟ್ ಪ್ರದೇಶದ ದಟ್ಟ ಕಾಡಿನಲ್ಲಿ ಶವವನ್ನು ಎಸೆದು ಬಂದಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಧಾರವಾಡ ನ್ಯಾಯಾಲಯಕ್ಕೂ ಬಾಂಬ್ ಬೆದರಿಕೆ

• **ಧಾರವಾಡ:** ನಗರದ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಆವರಣಕ್ಕೆ ಬಾಂಬ್ ಬೆದರಿಕೆ ಇಮೇಲ್ ಬಂದ ಹಿನ್ನೆಲೆಯಲ್ಲಿ ನ್ಯಾಯಾಲಯದ ಆವರಣದಲ್ಲಿ ಕೆಲ ಹೊತ್ತು ತೀವ್ರ ಆತಂಕದ ಜತೆಗೆ ಸುಪ್ತ ಗೊಂದಲದ ವಾತಾವರಣ ಶುಕ್ರವಾರ ನಿರ್ಮಾಣವಾಗಿತ್ತು. ಕೋರ್ಟ್ ಆವರಣದಲ್ಲಿ ಬಾಂಬ್ ಇಟ್ಟಿರುವ ಬಗ್ಗೆ ಇಮೇಲ್ ವಿಳಾಸಕ್ಕೆ ಸಂದೇಶ ಬಂದಿತ್ತು. ತಕ್ಷಣ ಎಚ್ಚೆತ್ತ ಸಿಬ್ಬಂದಿ ಪೊಲೀಸರಿಗೆ ಮಾಹಿತಿ ನೀಡಿದರು. ಸ್ಥಳಕ್ಕೆ ಧಾವಿಸಿದ ಬಾಂಬ್ ಪತ್ತೆ-ನಿಷ್ಕ್ರಿಯ ಮತ್ತು ಶ್ವಾನದಳದ ಸಿಬ್ಬಂದಿ ಆವರಣ ತಪಾಸಣೆ ನಡೆಸಿದರು.

34 ಅಭಿವೃದ್ಧಿ ಪ್ರಾಧಿಕಾರಗಳ ಪ್ರಗತಿ ಪರಿಶೀಲನೆಯಲ್ಲಿ ಡಾ.ಯತೀಂದ್ರ

ಪ್ರತಿ ತಿಂಗಳು ಸಭೆ ನಡೆಸಿ

• **ಬೆಂಗಳೂರು:** ನಗರಾಭಿವೃದ್ಧಿ ಪ್ರಾಧಿಕಾರಗಳು ಕಾಲ ಕಾಲಕ್ಕೆ ಪ್ರಾಧಿಕಾರದ ಸಭೆ ನಡೆಸಿರುವ ಹಿನ್ನೆಲೆಯಲ್ಲಿ ನಾಗರಿಕರಿಗೆ ಸರಿಯಾಗಿ ಸೌಲಭ್ಯ ಕೊಡಲು ಸಾಧ್ಯವಾಗುತ್ತಿಲ್ಲ. ಪ್ರತಿ ತಿಂಗಳು ಪ್ರಾಧಿಕಾರದ ಸಭೆ ನಡೆಸಬೇಕು ಎಂದು ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಸೂಚಿಸಿದರು.

ರಾಜ್ಯದ 34 ಅಭಿವೃದ್ಧಿ ಪ್ರಾಧಿಕಾರಗಳ ಪ್ರಗತಿ ಪರಿಶೀಲನೆ ನಡೆಸಿದ ಅವರು, ಕೆಲವು ಪ್ರಾಧಿಕಾರಗಳು ವರ್ಷಕ್ಕೆ 2 ಅಥವಾ 3 ಸಭೆಗಳನ್ನು ಮಾತ್ರ ಮಾಡಿವೆ. ಇದರಿಂದ ಪ್ರಗತಿ ಸಾಧ್ಯವಿಲ್ಲ, ಸಭೆ ನಡೆಸದಿರುವುದನ್ನು ನಾನು ಗಂಭೀರವಾಗಿ ಪರಿಗಣಿಸಿದ್ದೇನೆ. ವರ್ಷಕ್ಕೆ ಕನಿಷ್ಠ 8 ಸಭೆಗಳನ್ನಾದರೂ ಮಾಡಬೇಕು ಎಂದು ಸೂಚಿಸಿದರು.

ಜನಸಂಖ್ಯೆ ಬೆಳೆಯುತ್ತಿದೆ: ಅದಕ್ಕೆ ಅನುಗುಣವಾಗಿ ಸೌಲಭ್ಯಗಳನ್ನು ಪ್ರಾಧಿಕಾರಗಳು ಕೊಡಬೇಕು. ಲಭ್ಯವಿರುವ ಜಾಗಗಳನ್ನು ತೆಗೆದುಕೊಂಡು ಅಭಿವೃದ್ಧಿಪಡಿಸಬೇಕು. ವಸತಿ ಇಲಾಖೆಯಿಂದ ಬೇಡಿಕೆಗೆ ತಕ್ಕಷ್ಟು ಮನೆಗಳನ್ನು ನೀಡಲಾಗುತ್ತಿಲ್ಲ, ವಸತಿಗಳಿಗೆ ಬೇಡಿಕೆ ಇದೆ. ನಮ್ಮ ಪ್ರಾಧಿಕಾರಗಳಿಂದ ಖಾಸಗಿ ಅಪಾರ್ಟ್‌ಮೆಂಟ್‌ಗಳ ರೀತಿಯಲ್ಲಿ ಅಪಾರ್ಟ್‌ಮೆಂಟ್ ನಿರ್ಮಿಸಿ ಮನೆಗಳನ್ನು ಹಂಚುವ ಬಗ್ಗೆ ಪರಿಶೀಲಿಸಲು ಸಚಿವರು ತಿಳಿಸಿದರು.

ಮಾಸ್ಟರ್ ಪ್ಲಾನ್: ಹಳೆಯ ಮಾಸ್ಟರ್ ಪ್ಲಾನ್ ಅನ್ನು ಪರಿಷ್ಕರಿಸಿ, ಎಲ್ಲಾ ಪ್ರಾಧಿಕಾರಗಳು ಜಿಐಎಸ್ ಆಧರಿಸಿ ಮಾಸ್ಟರ್ ಪ್ಲಾನ್ ತಯಾರಿಸಬೇಕು. ಮೈಸೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಮಾಸ್ಟರ್‌ಪ್ಲಾನ್ ಮಾಡಲಾಗಿದೆ. 2024ರಿಂದ ಚಾಮುಂಡಿಬೆಟ್ಟ ಅಭಿವೃದ್ಧಿ ಪ್ರಾಧಿಕಾರ ಬಂದಿದೆ. ಈ ಪ್ರಾಧಿಕಾರದ ವ್ಯಾಪ್ತಿಯನ್ನು ಬಿಟ್ಟು ಮಾಸ್ಟರ್‌ಪ್ಲಾನ್ ಮಾಡಬೇಕಿದೆ ಎಂದರು.

ಬ್ಯಾಂಕ್ ಖಾತೆಗಳ ನಿರ್ವಹಣೆ: ಎಲ್ಲಾ ಪ್ರಾಧಿಕಾರಗಳು ಪಾರದರ್ಶಕವಾಗಿ ಬ್ಯಾಂಕ್ ಖಾತೆಗಳನ್ನು ನಿರ್ವಹಿಸಬೇಕು. ಬ್ಯಾಂಕ್ ಖಾತೆಗಳಿಗೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆ ನೀಡುವ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಯತೀಂದ್ರ ತಿಳಿಸಿದರು.

ಕಟ್ಟಡ ಪರವಾನಿಗೆ: ಕಟ್ಟಡ ನಿರ್ಮಾಣ ಪರವಾನಿಗೆ ವಿಳಂಬವಾಗಬಾರದು. ವಿಳಂಬದಿಂದ ಜನರಿಗೆ ನಿರ್ಮಾಣ ವೆಚ್ಚ ಹೆಚ್ಚಾಗುತ್ತದೆ. ವಿನಾಕಾರಣ ವಿಳಂಬ ಮಾಡಿದರೆ ಕ್ರಮಗೊಳ್ಳಲಾಗುವುದು ಎಂದರು.



ಕೆರೆಗಳ ಅಭಿವೃದ್ಧಿ

ಪ್ರಾಧಿಕಾರಗಳು ಕೆರೆಗಳ ಬ್ಯೂಟಿಫಿಕೇಷನ್ ಬಗ್ಗೆ ಒತ್ತು ನೀಡುತ್ತಿವೆ. ನೀರು ಸಂಗ್ರಹದ ಬಗ್ಗೆ ಗಮನ ಹರಿಸುತ್ತಿಲ್ಲ. ನೀರಿಲ್ಲದಿದ್ದರೆ ಕೆರೆಗಳು ಉಪಯೋಗವಿಲ್ಲ. ಕೊಳಚೆ ನೀರು ಹರಿಯದಂತೆ ಕ್ರಮವಹಿಸಬೇಕು. ಡಿ-ಸಿಲ್ಟಿಂಗ್, ಕುಡಿಯುವ ನೀರಿಗೆ ಕೆರೆ ಅಭಿವೃದ್ಧಿಪಡಿಸಲಾಗುತ್ತಿದೆ. ಕೆರೆಗಳ ಸರ್ವತೋಮುಖ ಅಭಿವೃದ್ಧಿಗೆ ಅಗತ್ಯವಿರುವ ಮಾರ್ಗಸೂಚಿಗಳನ್ನು ಬದಲಾವಣೆ ಮಾಡಿಕೊಳ್ಳಬೇಕು ಎಂದು ಡಾ.ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ಕಾಮಗಾರಿ ವಿಳಂಬವಾದರೆ ಕ್ರಮ

ನಗರ ಪ್ರದೇಶಗಳ ಕುಡಿಯುವ ನೀರಿನ ಕಾಮಗಾರಿಗಳು ನಿಗದಿತ ಸಮಯಕ್ಕೆ ಪೂರ್ಣಗೊಳಿಸದಿದ್ದರೆ ಕ್ರಮ ಕೈಗೊಳ್ಳಲಾಗುವುದು. ಬೆಳಗಾವಿ, ಕಲಬುರಗಿ ಹಾಗೂ ಹುಬ್ಬಳ್ಳಿ-ಧಾರವಾಡದಲ್ಲಿ ಕೆಯುಐಡಿಎಫ್‌ಸಿ ಮೂಲಕ ವಿಶ್ವಬ್ಯಾಂಕ್ ಪ್ರಾಯೋಜಿತ ಕುಡಿಯುವ ನೀರಿನ ಬೃಹತ್ ಕಾಮಗಾರಿಗಳನ್ನು ಎಲ್ ಆ್ಯಂಡ್ ಟಿ ಅನುಷ್ಠಾನಗೊಳಿಸುತ್ತಿದ್ದು, ಕಾಮಗಾರಿಗಳು ನಿಧಾನವಾಗಿರುವ ಹಿನ್ನೆಲೆಯಲ್ಲಿ ಎಲ್ ಆ್ಯಂಡ್ ಟಿ ಅಧಿಕಾರಿಗಳಿಗೆ ನಿಗದಿತ ಕಾಲಮಿತಿಯಲ್ಲಿ ಕಾಮಗಾರಿ ಪೂರ್ಣಗೊಳಿಸುವಂತೆ ಡಾ.ಯತೀಂದ್ರ ಸಿದ್ದರಾಮಯ್ಯ ತಾಕೀತು ಮಾಡಿದರು.

ವಂಚನೆ ತಡೆಗೆ ಅತ್ಯಾಧುನಿಕ ತಂತ್ರಜ್ಞಾನ: ಸಚಿವ ಖರ್ಗೆ



• **ಬೆಂಗಳೂರು:** ದೇಶಾದ್ಯಂತ ಸೈಬರ್ ಅಪರಾಧಗಳು ಮತ್ತು ಆನ್‌ಲೈನ್ ವಂಚನೆ ಪ್ರಕರಣಗಳು ತೀವ್ರವಾಗಿ ಹೆಚ್ಚಾಗುತ್ತಿರುವ ಬೆನ್ನಲ್ಲೇ, ರಾಜ್ಯ ಸರ್ಕಾರ ಮತ್ತು ಪೊಲೀಸ್ ಇಲಾಖೆ ವಂಚಕರಿಗೆ ಬಿಸಿ ಮುಟ್ಟಿಸಲು ಅತ್ಯಾಧುನಿಕ ತಂತ್ರಜ್ಞಾನ ಹಾಗೂ ಬಿಗಿ ಕ್ರಮಗಳನ್ನು ಕೈಗೊಂಡಿದೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಎಂ.ಜಿ.ರಸ್ತೆಯಲ್ಲಿರುವ ಪೊಲೀಸ್ ವೈರ್‌ಲೆಸ್ ಕೇಂದ್ರ ಕಚೇರಿಗೆ ಭೇಟಿ ನೀಡಿದ ಸಚಿವರು, ಅಲ್ಲಿನ ವ್ಯವಸ್ಥೆಗಳನ್ನು ಪರಿಶೀಲಿಸಿ, ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದರು. ಬಳಿಕ ಮಾತನಾಡಿ, ವಂಚನೆಗೊಳಗಾದ ಸಾರ್ವಜನಿಕರ ಹಣವನ್ನು ಬ್ಯಾಂಕ್‌ಗಳಲ್ಲೇ ತಡೆಹಿಡಿಯುವಲ್ಲಿ ಕರ್ನಾಟಕ ಪೊಲೀಸರು ಗಮನಾರ್ಹ ಯಶಸ್ಸು ಸಾಧಿಸಿದ್ದಾರೆ. ಮಹಾರಾಷ್ಟ್ರ ರಾಜ್ಯದಲ್ಲಿ ವರದಿಯಾದ 3,203 ಕೋಟಿ ರೂ.ಗಳಲ್ಲಿ 548 ಕೋಟಿ ರೂ. (ಶೇ.17) ಹಣವನ್ನು ಬ್ಲಾಕ್ ಮಾಡಿದ್ದರೆ, ಕರ್ನಾಟಕದಲ್ಲಿ ವರದಿಯಾದ 2,640 ಕೋಟಿ ರೂ.ಗಳಲ್ಲಿ 436 ಕೋಟಿ ರೂ. (ಶೇ.17) ಹಣವನ್ನು ಯಶಸ್ವಿಯಾಗಿ ತಡೆಹಿಡಿಯುವ ಮೂಲಕ ಸಾರ್ವಜನಿಕರ ಹಣವನ್ನು ರಕ್ಷಿಸಿದೆ ಎಂದರು.

ಸ್ವಯಂಚಾಲಿತ ಬಾಟ್ ಲಿಂಕ್

ಸಾರ್ವಜನಿಕರು ಕರೆ ಮಾಡಿದಾಗ ಕಟ್ ಆದ ಕರೆಗಳಿಗೆ ದೂರುಗಳನ್ನು ಅಪ್ಲೋಡ್ ಮಾಡಲು ಸ್ವಯಂಚಾಲಿತ ಬಾಟ್ ಲಿಂಕ್ ಕಳುಹಿಸಲಾಗುತ್ತಿದೆ. ಐ4ಸಿ ಪ್ಲಾಟ್‌ಫಾರ್ಮ್‌ನಲ್ಲಿ ಬ್ಯಾಂಕ್ ವಹಿವಾಟುಗಳನ್ನು ವೇಗವಾಗಿ ನಿರ್ಬಂಧಿಸಲು 51 ಪಿಎಸ್‌ಐ ಮತ್ತು ಹೆಡ್ ಕಾನ್‌ಸ್ಟೇಬಲ್‌ಗಳನ್ನು ನಿಯೋಜಿಸಲಾಗಿದೆ.

ತಂತ್ರಜ್ಞಾನ ಆಧಾರಿತ ಆಧುನಿಕ ಸುಧಾರಣೆಗಳು: ಇಲಾಖೆಯು ಇತ್ತೀಚೆಗೆ ಹಲವು ತಾಂತ್ರಿಕ ಸುಧಾರಣೆಗಳನ್ನು ತಂದಿದೆ. 2025ರಲ್ಲಿ ವೆಬ್-ಆಧಾರಿತ ಕಂಪ್ಲೇಂಟ್ ಬಾಟ್, 2026ರಲ್ಲಿ ವಾಟ್‌ಅಪ್ ಕಂಪ್ಲೇಂಟ್ ಬಾಟ್ ಪರಿಚಯಿಸಲಾಗಿದೆ. ದೂರುಗಳ ಆದ್ಯತೆ ಮೇರೆಗೆ ಕರೆಗಳನ್ನು ವಿಂಗಡಿಸಲು, ಸ್ವಯಂಚಾಲಿತವಾಗಿ ನಿರ್ವಹಿಸಲು ಐವಿಆರ್‌ಎಸ್ ತಂತ್ರಜ್ಞಾನ ಬಳಸಲಾಗುತ್ತಿದೆ.

55 ಕೈಗಾರಿಕಾ ಯೋಜನೆಗೆ ಅಸ್ತು



• **ಬೆಂಗಳೂರು:** ರಾಜ್ಯದಲ್ಲಿ ಒಟ್ಟು 7,506 ಕೋಟಿ ರೂ. ಬಂಡವಾಳ ಹೂಡಿಕೆ ಹಾಗೂ 28 ಸಾವಿರಕ್ಕೂ ಅಧಿಕ ಉದ್ಯೋಗಾವಕಾಶಗಳನ್ನು ಸೃಷ್ಟಿಸಲಿರುವ 55 ಕೈಗಾರಿಕಾ ಯೋಜನೆಗಳಿಗೆ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ಶುಕ್ರವಾರ ನಡೆದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಯಲ್ಲಿ ಮಾತನಾಡಿ, ಈ ಯೋಜನೆಗಳಲ್ಲಿ 41 ಯೋಜನೆಗಳು ಬೆಂ.ನಗರ ಮತ್ತು ಗ್ರಾಮಾಂತರ ಜಿಲ್ಲೆಗಳನ್ನು ಹೊರತುಪಡಿಸಿ ರಾಜ್ಯದ ಇತರೆ ಭಾಗಗಳಲ್ಲಿ ಸ್ಥಾಪನೆಯಾಗಲಿದ್ದು, ಕೈಗಾರಿಕಾ ವಿಕೇಂದ್ರೀಕರಣಕ್ಕೆ ಉತ್ತೇಜನ ನೀಡಲಿವೆ ಎಂದು ಹೇಳಿದರು.

ತೈವಾನ್, ದಕ್ಷಿಣ ಕೊರಿಯಾ, ಜರ್ಮನಿ ಹಾಗೂ ಜಪಾನ್ ಮೂಲದ ನಾಲ್ಕು ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ಯೋಜನೆಗಳ ಮೂಲಕ 314.46 ಕೋಟಿ ರೂ. ಹೂಡಿಕೆ ಆಗಲಿದ್ದು, 503 ಮಂದಿಗೆ ಉದ್ಯೋಗ ದೊರೆಯಲಿದೆ. ಟೀಮಿಂಗ್ ಆಟೋಮೇಷನ್, ವೈ.ಜೆ. ಲಿಂಕ್, ರೇವುಂ ಮತ್ತು ಶಿಂಕೋ ಕಂಪನಿಗಳು ಈ ಹೂಡಿಕೆಗಳನ್ನು ಮಾಡಲಿವೆ ಎಂದು ತಿಳಿಸಿದರು.

ಒಟ್ಟು 35 ಯೋಜನೆಗಳು 50 ಕೋಟಿ ರೂ.ಗಿಂತ ಅಧಿಕ ಬಂಡವಾಳ ಹೂಡಿಕೆ ಮಾಡಲಿದ್ದು, 5 ಕಂಪನಿಗಳು ಹೆಚ್ಚುವರಿ 223.61 ಕೋಟಿ ರೂ. ಹೂಡಿಕೆ ಮಾಡಲು ಮುಂದಾಗಿವೆ. ಏರೋಸ್ಪೇಸ್, ಇಎಸ್‌ಡಿಎಂ, ಜನರಲ್ ಇಂಜಿನಿಯರಿಂಗ್ ಕ್ಷೇತ್ರಗಳಿಗೆ ಸಂಬಂಧಿಸಿದ ಯೋಜನೆಗಳೇ ಹೆಚ್ಚಾಗಿವೆ ಎಂದರು. ಚಾ.ನಗರದಲ್ಲಿ ಕೇನ್ಸ್ ಎಲೆಕ್ಟ್ರಾನಿಕ್ಸ್ 495 ಕೋಟಿ ರ,. ದೊಡ್ಡಬಳ್ಳಾಪುರದಲ್ಲಿ ಎಸ್‌ಎಫ್‌ಒ ಟೆಕ್ನಾಲಜೀಸ್ 490 ಕೋಟಿ ರೂ, ಕೋಲಾರದಲ್ಲಿ ಆರ್‌ಬಿಟ್ ಇಂಡಸ್ಟ್ರಿಯಲ್ ಪಾರ್ಕ್ 454 ಕೋಟಿ ರೂ, ವಿಜಯಪುರದಲ್ಲಿ ಟೆರ್ರಾ ಸರ್ಕ್ಯೂಟ್ಸ್ 441 ಕೋಟಿ ರೂ ಹಾಗೂ ಬೆಂ.ಗ್ರಾಮಾಂತರ ಜಿಲ್ಲೆಯಲ್ಲಿ ಬೆಲಾಟ್ರಿಕ್ಸ್ ಏರೋಸ್ಪೇಸ್ 404 ಕೋಟಿ ರೂ. ಹೂಡಿಕೆ ಮಾಡಲಿವೆ ಎಂದು ಸಚಿವರು ತಿಳಿಸಿದರು.

1.53 ಲಕ್ಷ ಪಿಂಚಣಿ ಸ್ಥಗಿತ: ಜಿಲ್ಲಾಧಿಕಾರಿ

• **ಬೆಳಗಾವಿ:** ರಾಜ್ಯ ಸರ್ಕಾರದ ವಿವಿಧ ಪಿಂಚಣಿ ಯೋಜನೆಗಳನ್ನು ಅನರ್ಹರು ದುರುಪಯೋಗಪಡಿಸಿಕೊಳ್ಳುತ್ತಿದ್ದ ದೊಡ್ಡ ಜಾಲವೊಂದು ಬೆಳಕಿಗೆ ಬಂದಿದ್ದು, ರಾಜ್ಯದಲ್ಲಿಯೇ ಅತಿ ಹೆಚ್ಚು ಅನರ್ಹ ಪಿಂಚಣಿದಾರರು ಬೆಳಗಾವಿ ಜಿಲ್ಲೆಯಲ್ಲಿ ಪತ್ತೆಯಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಬರೋಬ್ಬರಿ 1.53 ಲಕ್ಷ ಪಿಂಚಣಿಗಳನ್ನು ತಕ್ಷಣದಿಂದಲೇ ಸ್ಥಗಿತಗೊಳಿಸಿದೆ ಎಂದು ಡಿಸಿ ಮಹಮ್ಮದ್ ರೋಷನ್ ಹೇಳಿದರು.

ಈ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿ, ಸರ್ಕಾರದ ನಿರ್ದೇಶನದಂತೆ ಜಿಲ್ಲಾದ್ಯಂತ ಜಂಟಿ ಸರ್ವೆ ನಡೆಸಲಾಗಿದ್ದು, ಒಟ್ಟು 1.82 ಲಕ್ಷ ಅನರ್ಹ ಪಿಂಚಣಿದಾರರ ಮಾಹಿತಿ ಸಂಗ್ರಹಿಸಲಾಗಿದೆ ಎಂದು ತಿಳಿಸಿದರು.

ಪರಿಶೀಲನೆ ವೇಳೆ 65 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದರೂ ವೃದ್ಧಾಪ್ಯ ಪಿಂಚಣಿ ಪಡೆಯುತ್ತಿದ್ದವರು, ವಾರ್ಷಿಕ 35 ಸಾವಿರ ರೂಪಾಯಿಗಳಿಗಿಂತ ಹೆಚ್ಚು ಆದಾಯ ಹೊಂದಿದ್ದವರು ಹಾಗೂ ಬೆಳಗಾವಿ ಜಿಲ್ಲೆಯಿಂದ ಬೇರೆ ಜಿಲ್ಲೆಗಳಿಗೆ ವಲಸೆ ಹೋಗಿದ್ದರೂ ಪಿಂಚಣಿ ಪಡೆಯುತ್ತಿದ್ದವರನ್ನು ಗುರುತಿಸಲಾಗಿದೆ. ಈ ಪೈಕಿ ನಿಯಮ ಉಲ್ಲಂಘಿಸಿ ಸೌಲಭ್ಯ ಪಡೆಯುತ್ತಿದ್ದ 1.53 ಲಕ್ಷ ಜನರ ಪಿಂಚಣಿಯನ್ನು ಅಧಿಕೃತವಾಗಿ ಸ್ಥಗಿತಗೊಳಿಸಲಾಗಿದೆ ಎಂದು ಹೇಳಿದರು.

ಮುಂಬೈನಲ್ಲಿ ಇಂದು ಸಿಎಂ ಶಿವಕುಮಾರ ಸಭೆ

• **ಬೆಳಗಾವಿ:** ಕೃಷ್ಣಾ ನದಿಗೆ 2 ಟಿಎಂಸಿ ನೀರು ಬಿಡುಗಡೆ ಮಾಡುವ ಕುರಿತು ಜೂ.20ರಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರೊಂದಿಗೆ ಮುಂಬೈನಲ್ಲಿ ಮಹತ್ವದ ಸಭೆ ನಡೆಸಲಿದ್ದು, ಈ ಬಾರಿ ನೀರು ಬಿಡುಗಡೆ ಆಗುವ ವಿಶ್ವಾಸವಿದೆ ಎಂದು ಜಿಲ್ಲಾಧಿಕಾರಿ ಮಹಮ್ಮದ್ ರೋಷನ್ ತಿಳಿಸಿದರು.



ಜಿಲ್ಲಾಧಿಕಾರಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಈ ಹಿಂದೆ ಬೇಸಿಗೆ ಅವಧಿಯಲ್ಲಿ ಮಹಾರಾಷ್ಟ್ರದಿಂದ ನಿಯಮಿತವಾಗಿ 2 ಟಿಎಂಸಿ ನೀರು ಬಿಡುಗಡೆ ಮಾಡಲಾಗುತ್ತಿತ್ತು. ಆದರೆ, ಕಳೆದ ಐದಾರು ವರ್ಷಗಳಿಂದ ನೀರು ಹರಿಸಲಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಹಿಂದಿನಂತೆ ನೀರು ಬಿಡುಗಡೆ ಮಾಡುವಂತೆ ಕರ್ನಾಟಕ ಸರ್ಕಾರ ಮನವಿ ಸಲ್ಲಿಸಲಿದ್ದು, ಮುಂದಿನ ಹತ್ತು ದಿನಗಳಲ್ಲಿ ನೀರು ದೊರೆಯುವ ನಿರೀಕ್ಷೆಯಿದೆ ಎಂದರು.

ಹಿಪ್ಪರಗಿ ಬ್ಯಾರೇಜ್‌ನ ಗೇಟ್ ಮುರಿದ ಪರಿಣಾಮ ಸುಮಾರು ಒಂದೂವರೆ ಟಿಎಂಸಿ ನೀರು ನಷ್ಟವಾಗಿದೆ. ಪ್ರಸ್ತುತ ಅಲ್ಲಿ ಕೇವಲ 0.08 ಟಿಎಂಸಿ ನೀರು ಮಾತ್ರ ಸಂಗ್ರಹವಿದೆ. ಈ ಕುರಿತು ಸಿಎಂ ಗಮನಕ್ಕೆ ತರಲಾಗಿದ್ದು, ಮಹಾರಾಷ್ಟ್ರ ಸರ್ಕಾರದೊಂದಿಗೆ ನೇರವಾಗಿ ಚರ್ಚಿಸಿ ನೀರು ಬಿಡುಗಡೆಗೆ ಮನವರಿಕೆ ಮಾಡುವ ಪ್ರಯತ್ನ ನಡೆಯಲಿದೆ ಎಂದು ತಿಳಿಸಿದರು.

ಸಚಿವ ಸಂಪುಟ ವಿಸ್ತರಣೆ ವಿಚಾರ ಕಾಂಗ್ರೆಸ್ ಹೈಕಮಾಂಡ್ ನಿರ್ಧಾರ

ಸಿದ್ದು ಜತೆ ವೈಮನಸ್ಸಿಲ್ಲ: ಮಹದೇವಪ್ಪ

• **ಮೈಸೂರು:** ಮಾಜಿ ಸಿಎಂ ಸಿದ್ದರಾಮಯ್ಯ ಹಾಗೂ ನನ್ನ ನಡುವೆ ಯಾವ ವೈಮನಸ್ಸು ಇಲ್ಲ, ಅವರು ಸದಾ ನನ್ನೊಂದಿಗೆ ಇರುತ್ತಾರೆ, ಮುಂದೆಯೂ ಇರುತ್ತಾರೆ ಎಂದು ಮಾಜಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಹೇಳಿದರು.



ಶುಕ್ರವಾರ ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಸಿದ್ದರಾಮಯ್ಯ ನಮ್ಮ ಪರವಾಗಿಲ್ಲ ಎಂದು ಹೇಳಬಾರದು. ನನ್ನ ಪರವಾಗಿ ಬಲವಾಗಿ ವಾದ ಮಾಡಿಲ್ಲ ಎನ್ನುವುದು ಸರಿಯಲ್ಲ ಡಾ.ಯತೀಂದ್ರ ಕೂಡ ನಮ್ಮ ಮಗನಿದ್ದಂತೆ. ನಾನು-ಸಿದ್ದರಾಮಯ್ಯ 40 ವರ್ಷಗಳ ಕಾಲ ಜತೆಯಾಗಿದ್ದಂತೆ ಡಾ.ಯತೀಂದ್ರ ಹಾಗೂ ಸುನೀಲ್ ಬೋಸ್ ಜತೆಯಾಗಿದ್ದಾರೆ. ನನ್ನ ಸಿದ್ಧಾಂತ, ಹೋರಾಟಗಳನ್ನು ಮುಂದು ವರಿಸಿಕೊಂಡು ಹೋಗುವ ವಿಶ್ವಾಸ ಇದೆ ಎಂದರು.


ಸಚಿವ ಸಂಪುಟ ವಿಸ್ತರಣೆ ವಿಚಾರದಲ್ಲಿ ಕಾಂಗ್ರೆಸ್ ಹೈಕಮಾಂಡ್ ನಿರ್ಧಾರ ಮಾಡಲಿದೆ. ಸಂಪುಟಕ್ಕೆ ಸೇರುವ ಬಗ್ಗೆ ಯಾರ ಬಳಿಗೂ ಹೋಗಲ್ಲ. ಮಂತ್ರಿಗಿರಿ, ಅಧಿಕಾರಕ್ಕಾಗಿ ಎಂದಿಗೂ ಯಾರನ್ನು ಕೇಳಿಕೊಂಡಿಲ್ಲ. ಅತ್ತು-ಕರೆದು ಅಧಿಕಾರ ಪಡೆದಿಲ್ಲ.

ಸಿಎಂ ಡಿ.ಕೆ ಶಿವಕುಮಾರ್ ಅವರ ಸಚಿವ ಸಂಪುಟದಲ್ಲಿ ಅವಕಾಶ ಸಿಗದಿದ್ದಕ್ಕೆ ನಿರಾಶೆಯಾಗುವ ಪ್ರಶ್ನೆಯೇ ಇಲ್ಲ, ಪೂರ್ಣ ಪ್ರಮಾಣದಲ್ಲಿ ಸಚಿವ ಸಂಪುಟ ವಿಸ್ತರಣೆಯಾಗುವಾಗ ಸಿಗುವ ನಿರೀಕ್ಷೆ ಇದೆ. ಸಿಗುತ್ತದೆ ಎನ್ನುವ ವಿಶ್ವಾಸವನ್ನು ಇಟ್ಟುಕೊಂಡಿದ್ದೇವೆ ಎಂದರು.

ಮುಂದಿನ ದಿನಗಳಲ್ಲಿ ಜೆನ್ ಝಿ ತಲೆಮಾರಿನ ಯುವಜನರಿಗೆ ಹೆಚ್ಚಿನ ಅವಕಾಶ: ಕೇಂದ್ರ ಸಚಿವ ಹೇಳಿಕೆ

ಅಡ್ಡ ಮತದಾನಕ್ಕೆ ನಾನು ವಿಚಲಿತನಾಗಿಲ್ಲ: ಕುಮಾರಸ್ವಾಮಿ

• **ಬೆಂಗಳೂರು:** ವಿಧಾನಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ನಡೆಯುತ್ತದೆ ಎಂಬುದು ನನಗೆ ಮೊದಲೇ ತಿಳಿದಿತ್ತು. ಆದರೆ, ಈ ನಾನು ವಿಚಲಿತನಾಗಿಲ್ಲ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.



ನಗರದಲ್ಲಿ ಶುಕ್ರವಾರ ಮಾಧ್ಯಮಗಳ ಜತೆ ಮಾತನಾಡಿದ ಅವರು, ಅತಿಯಾದ ನಂಬಿಕೆ, ವಿಶ್ವಾಸವೇ ಈ ಸೋಲಿನ ಕಾರಣ. ಇಂತಹ ವಂಚನೆ, ಮೋಸಗಳು ನನಗೆ ಮತ್ತು ನಮ್ಮ ಪಕ್ಷಕ್ಕೆ ಹೊಸವಲ್ಲ, ಎಷ್ಟೋ ಸಲ ಎದುರಿಸಿ ಅದರಿಂದ ಆಚೆ ಬಂದಿದ್ದೇವೆ. ಮುಂದಿನ ದಿನಗಳಲ್ಲಿ ಜೆನ್ ಝಿ ತಲೆಮಾರಿನ ಯುವಜನರಿಗೆ ಹೆಚ್ಚಿನ ಅವಕಾಶ ನೀಡುತ್ತೇವೆ. ಹೊಸ ನಾಯಕತ್ವವನ್ನು ಬೆಳೆಸುವುದು ನಮಗೆ ಗೊತ್ತಿದೆ. ಹೊಸ ಮುಖಗಳಿಗೆ ಹೆಚ್ಚಿನ ಆದ್ಯತೆ ನೀಡುವ ನಿರ್ಧಾರ ಮಾಡಿರುವುದಾಗಿ ಕುಮಾರಸ್ವಾಮಿ ತಿಳಿಸಿದರು.

ಶಾಸಕ ಜಿ.ಟಿ. ದೇವೇಗೌಡ ಅವರ ಹೆಸರು ಪ್ರಸ್ತಾಪಿಸುತ್ತಿದ್ದಂತೆಯೇ ತೀವ್ರ ಅಸಹನೆ ವ್ಯಕ್ತಪಡಿಸಿದ ಕೇಂದ್ರ ಸಚಿವರು ನನ್ನ ಮುಂದೆ ಅವರ ಹೆಸರು ಎತ್ತಬೇಡಿ ಎಂದು ನೇರವಾಗಿಯೇ ಹೇಳಿದರು. ಕಳೆದ ಒಂದೂವರೆ ವರ್ಷದಿಂದಲೂ ಅವರ ಬಗ್ಗೆ ನಾನು ಚಕಾರ ಎತ್ತಿಲ್ಲ. ಚಾಮುಂಡೇಶ್ವರಿ ವಿಧಾನಸಭೆ ಕ್ಷೇತ್ರದಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ಕೂಡ ಅವರ ಹೆಸರನ್ನು ನಾನು ಎಲ್ಲಿಯೂ ಪ್ರಸ್ತಾಪಿಸಿಲ್ಲ ಎಂದ ಹರಿಹಾಯ್ದರು.

ಯಾರು ಎಷ್ಟೇ ಒತ್ತಡ ಹಾಕಿದರೂ ನಾನು ನನ್ನ ನಿರ್ಧಾರವನ್ನು ಕಠಿಣವಾಗಿ ಕೈಗೊಳ್ಳುತ್ತೇನೆ. ಇಲ್ಲಿ ನನ್ನ ವೈಯಕ್ತಿಕ ವಿಚಾರ ಮುಖ್ಯವಲ್ಲ, ಪಕ್ಷವನ್ನು ಉಳಿಸಲು ಕೆಲ ಕಠಿಣ ನಿರ್ಧಾರಗಳನ್ನು ಮಾಡಲೇಬೇಕಿದೆ ಎಂದು ತಿಳಿಸಿದರು.

ಕಾರ್ಯಕರ್ತರು ಹಗಲಿರುಳು ಕಷ್ಟಪಟ್ಟು ಇವರನ್ನು ಗೆಲ್ಲಿಸಿ ಶಾಸಕರನ್ನಾಗಿ ಮಾಡಿದ್ದಾರೆ. ಇವರು ನೋಡಿದರೆ ತಮ್ಮ ಸ್ವಾರ್ಥ ನೋಡಿಕೊಂಡಿದ್ದಾರೆ. ದೇವೇಗೌಡರು ಕಳೆದ ಅರವತ್ತು ವರ್ಷಗಳಿಂದ ರಾಜಕೀಯ ಮಾಡಿಕೊಂಡು ಬಂದಿದ್ದಾರೆ. ಕಷ್ಟಪಟ್ಟು ಈ ಪಕ್ಷವನ್ನು ಕಟ್ಟಿದ್ದಾರೆ. ಕೆಲವನ್ನು ಅತಿಯಾಗಿ ನಂಬಿ ಈ ಪರಿಸ್ಥಿತಿಗೆ ಬಂದಿದ್ದಾರೆ. ಅವರು ಅಧಿಕಾರದಲ್ಲಿ ಇದ್ದಿದ್ದು ಅತ್ಯಲ್ಪ ಅವಧಿ. ಅವರ ಬಳುವಳಿ ನನಗೂ ಬಂದಿದೆ ಎಂದು ಸಚಿವ ಕುಮಾರಸ್ವಾಮಿ ಹೇಳಿದರು.

ಜಿಟಿಡಿ ಎರಡೂ ಕಾಲು ಹೊರಗಿಟ್ಟಿದ್ದಾರೆ: ಅಡ್ಡ ಮತದಾನ ಮಾಡಿರುವ ಈ ಜಿಲ್ಲೆಯ ವ್ಯಕ್ತಿಯದು ಮುಗಿದು ಹೋದ ಕಥೆ. ಅವರು ಒಂದು ಕಾಲಲ್ಲ, ಎರಡು ಕಾಲುಗಳನ್ನು ಹೊರಗಡೆ ಇಟ್ಟಿದ್ದಾರೆ. ಈ ಬಾರಿ ಅಸೆಂಬ್ಲಿ ಟಿಕೆಟ್‌ಗಳನ್ನು ಅಂತಿಮ ನಿರ್ಣಯ ಮಾಡುವುದು ನಾನೇ. ಇದರ ಬಗ್ಗೆ ಯಾವ ಗೊಂದಲವೂ ಬೇಡ. ದೇವೇಗೌಡರಿಗೆ ಅವರ ಮೇಲೆ ಪ್ರೀತಿ ವ್ಯಾಮೋಹ ಇರುವುದು ಸತ್ಯ. ಆ ವ್ಯಾಮೋಹವನ್ನೇ ಆ ವ್ಯಕ್ತಿ ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಮುಂದೆ ಇದಕ್ಕೆ ನಾನು ಅವಕಾಶ ಕೊಡುವುದಿಲ್ಲ ಎಂದರು.

ಕೇಂದ್ರದಲ್ಲಿ ಇರುವುದು ತಾತ್ಕಾಲಿಕ: ರಾಜ್ಯ ರಾಜಕಾರಣಕ್ಕೆ ಯಾವಾಗ ವಾಪಸ್ಸು ಬರುತ್ತೀರಿ ಎಂಬ ಪ್ರಶ್ನೆಗೆ ಮಾರ್ಮಿಕವಾಗಿ ಉತ್ತರಿಸಿದ ಕುಮಾರಸ್ವಾಮಿ ಅವರು; ಕೇಂದ್ರದಲ್ಲಿ ಇರುವುದು ಟೆಂಪರರಿ, ನನಗೆ ರಾಜ್ಯವೇ ಪರ್ಮನೆಂಟ್ ಎಂದರು. ರಾಜ್ಯ ರಾಜಕಾರಣಕ್ಕೆ ಹೊಸದಾಗಿ ನಾನು ಬರಬೇಕಾಗಿಲ್ಲ. ನಮ್ಮ ಪಕ್ಷಕ್ಕೆ ನಾನೇ ಅಧ್ಯಕ್ಷ ಅಲ್ಲವೇ ಎಂದು ಕುಮಾರಸ್ವಾಮಿ ಅವರು ಹೇಳಿದರು.

ನಾನು ರೆಡ್ ಜೋನ್ ತೆಗೆಯದಿದ್ದಕ್ಕೆ ಬಿಡದಿಯಲ್ಲಿ ಇನ್ನೂ ಭೂಮಿ ಉಳಿದಿದೆ: ಬಿಡದಿ ಟೌನ್ ಶಿಪ್ ಕುಮಾರಸ್ವಾಮಿ ಕೂಸು ಅಂತಾರೆ. ನೈಸ್ ರಸ್ತೆ ದೇವೇಗೌಡರ ಕೂಸು ಎನ್ನುತ್ತಿದ್ದರು. ಬಿಡದಿಯಲ್ಲಿ ನಾನು ರೆಡ್ ಜೋನ್ ತೆಗೆದು ಹಾಕಲಿಲ್ಲ ಅಂತಾರೆ. ಒಂದು ವೇಳೆ ನಾನು ರೆಡ್ ಜೋನ್ ತೆಗೆದಿದ್ದರೆ ಇವತ್ತು ಒಂದು ಚೂರು ಭೂಮಿಯು ರೈತರ ಕೈಯಲ್ಲಿ ಇರುತ್ತಿರಲಿಲ್ಲ. ನಾನೇನಾದರೂ ರಿಯಲ್ ಎಸ್ಟೇಟ್ ಮಾಫಿಯಾ ಪರ ಇದ್ದಿದ್ದರೆ ಇಷ್ಟೊತ್ತಿಗೆ ಭೂಮಿ ರೈತರಿಂದ ಹೋಗಿಬಿಡುತ್ತಿತ್ತು ಎಂದು ಸಚಿವ ಕುಮಾರಸ್ವಾಮಿ ಅವರು ಹೇಳಿದರು.

ಅಂತಿಮ ನಿರ್ಧಾರ ನನ್ನದೇ

ನಮ್ಮ ಪಕ್ಷದಲ್ಲಿ ಕೆಲವರು ಆ ವ್ಯಕ್ತಿಯನ್ನು ಸರಿಪಡಿಸುವ ಬಗ್ಗೆ ಪ್ರಯತ್ನ ಮಾಡುತ್ತಿದ್ದರು. ಅದು ಅವರ ವೈಯಕ್ತಿಕ ವಿಚಾರ. ಆದರೆ, ಪಕ್ಷಕ್ಕೆ ಸಂಬಂಧಿಸಿ ಅಂತಿಮ ನಿರ್ಧಾರ ಕೈಗೊಳ್ಳುವುದು ನಾನೇ. ಈ ಬಗ್ಗೆ ನಾನೇ ಅಂತಿಮ ನಿರ್ಧಾರ ಕೈಗೊಳ್ಳುತ್ತೇನೆ. ಈ ವ್ಯಕ್ತಿ ಏನೆಲ್ಲಾ ಮಾಡಿದ್ದಾರೆ ಎಂದು ನನಗೆ ಗೊತ್ತು. ಮೂರು ಬಾರಿ ನನಗೆ ಇವರಿಂದ ಕಹಿ ಅನುಭವ ಆಗಿದೆ.

ಅಡ್ಡ ಮತದಾನ ಮಾಡಿದವರ ಪತ್ತೆಗೆ ಸಮಿತಿ ರಚನೆ: ಛಲವಾದಿ

• **ಬೆಂಗಳೂರು:** ವಿಧಾನ ಪರಿಷತ್‌ಗೆ ನಡೆದ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದವರು ಇಂಥವರು ಎಂದು ಮಾಧ್ಯಮಗಳಲ್ಲಿ ಕೆಲವರ ಹೆಸರು ಹರಿಬಿಡಲಾಗುತ್ತಿದೆ. ಇದನ್ನು ದಯವಿಟ್ಟು ಯಾವುದೇ ಮಾಧ್ಯಮಗಳು ಮಾಡಬಾರದು ಎಂದು ವಿಧಾನಪರಿಷತ್ತಿನ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಮನವಿ ಮಾಡಿದ್ದಾರೆ.



ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು. ಅಡ್ಡ ಮತದಾನ ಮಾಡಿದವರ ಪತ್ತೆಗಾಗಿ ಸಮಿತಿ ರಚಿಸಲಾಗಿದೆ. ಈ ಸಮಿತಿ ವರದಿ ನೀಡಲಿದೆ. ಆಗ ಅಡ್ಡ ಮತದಾನ ಮಾಡಿದವರು ಪತ್ತೆಯಾದ ನಂತರ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ವಿವರಿಸಿದರು.

ನಮ್ಮ ಪಕ್ಷದ ವತಿಯಿಂದ ಲಿಂಗರಾಜ ಪಾಟೀಲ್ ಅವರಿಗೆ 30 ಮತಗಳು ಹಾಗೂ ರಘು ಕೌಟಿಲ್ಯ ಅವರಿಗೆ 30 ಮತಗಳನ್ನು ನೀಡಿದ್ದೆವು. ಮತ್ತೆ ಉಳಿದ ಮೂರು ಮತಗಳನ್ನು ಎನ್‌ಡಿಎ ಅಭ್ಯರ್ಥಿಗೆ ಹಾಕಲು ಸೂಚಿಸಲಾಗಿತ್ತು. ಬಸನಗೌಡ ಪಾಟೀಲ್ ಯತ್ನಾಳ್ ಅವರು ಬಿಜೆಪಿಗೆ ಮತ ಹಾಕುವುದಾಗಿ ಹೇಳಿದರು. ನಾಲ್ವರನ್ನು ಆರ್. ಅಶೋಕ ತಮ್ಮೊಂದಿಗೆ ಕರೆದೊಯ್ದು ಮತ ಹಾಕಿಸಿದರು. ಹಂಚಿಕೆಯಾದ 30 ಮತಗಳಲ್ಲಿ ರಘು ಕೌಟಿಲ್ಯ ಅವರಿಗೆ ಬಂದ ಮತದಲ್ಲಿ ಒಂದು ಅಸಿಂಧುವಾಗಿದೆ. ಲಿಂಗರಾಜ ಪಾಟೀಲ್ ಅವರಿಗೆ ಮೂರು ಮತಗಳು ಬಂದಿಲ್ಲ ಎಂದರು. ಅಡ್ಡ ಮತದಾನ ಮಾಡಿದವರು ಎಂದು ತಮ್ಮ ಹೆಸರನ್ನು ಮಾಧ್ಯಮಗಳಲ್ಲಿ ಬಿತ್ತರಿಸಲಾಗುತ್ತಿದ್ದು, ಮುಜುಗರಕ್ಕೆ ಒಳಗಾಗಿದ್ದೇನೆ ಎಂದು ಶಾಸಕ ಡಾ. ಚಂದ್ರು ಲಮಾಣಿ ಹೇಳಿದ್ದಾರೆ.

ಸಂಪಾದಕೀಯ

ಕೋವಿಡ್‌ನಲ್ಲಿ ಅಮೆರಿಕದ ಪಾತ್ರ

ಅಮೆರಿಕದ ಗುಪ್ತಚರ ಸಂಸ್ಥೆ ಸಿಐಎ ನಿರ್ದೇಶಕಿ ತುಳಸಿ ಗಬ್ಬರ್ಡ್ ತಮ್ಮ ಹುದ್ದೆ ತ್ಯಜಿಸುವ ಮುನ್ನ ದೊಡ್ಡ ಬಾಂಬೊಂದನ್ನು ಸಿಡಿಸಿದ್ದಾರೆ. ನಿರ್ದೇಶಕ ಸ್ಥಾನವನ್ನು ತೆರವುಗೊಳಿಸುವ ಮುನ್ನ 'ಈವರೆಗೆ ಯಾರೂ ಕಂಡಿರದ' ಕೆಲವು ದಾಖಲೆಗಳನ್ನು ಬಿಡುಗಡೆ ಮಾಡಿರುವ ಅವರು, 2019ರಲ್ಲಿ ಇಡೀ ಜಗತ್ತನ್ನು ಕಾಡಿದ ಕೊರೋನಾವೈರಸ್ ಸಂಶೋಧನೆಯಲ್ಲಿ ಅಮೆರಿಕದ ಪಾಲೂ ಇದೆ



ಹಾಗೂ ವೈರಸ್‌ನ ಉತ್ಪತ್ತಿಯನ್ನು ಮುಚ್ಚಿಡುವಲ್ಲೂ ಅಮೆರಿಕದ ಗುಪ್ತಚರ ಸಂಸ್ಥೆಯೂ ಸೇರಿದಂತೆ ಹಲವರು ಕಾರ್ಯವೆಸಗಿದ್ದಾರೆ ಎಂಬಂತಹ ಸ್ಫೋಟಕ ಮಾಹಿತಿ ಬಿಚ್ಚಿಟ್ಟಿದ್ದಾರೆ. ತುಳಸಿ ಗಬ್ಬರ್ಡ್ ಈಗ ಬಹಿರಂಗಗೊಳಿಸಿರುವ ಮಾಹಿತಿಯ ಪ್ರಕಾರ ಅಮೆರಿಕದ ಅಲರ್ಜಿ ಮತ್ತು ಸೋಂಕು ರೋಗಗಳ ರಾಷ್ಟ್ರೀಯ ಸಂಸ್ಥೆಯ ಮುಖ್ಯಸ್ಥರಾಗಿರುವ ಡಾ. ಆಂಟನಿ ಫೌಸಿಯವರು ವೈರಸ್‌ಗಳ ಕುರಿತಂತೆ ಸಂಶೋಧನೆ ನಡೆಸಲು ಚೀನಾದ ವುಹಾನ್‌ನ ಪ್ರಯೋಗಾಲಯಕ್ಕೆ ದೊಡ್ಡ ಮಟ್ಟದ ಆರ್ಥಿಕ ನೆರವು ನೀಡಿದ್ದರು. ಇದೇ ಆಂಟನಿ ಫೌಸಿ ಮಾಜಿ ಅಧ್ಯಕ್ಷ ಜೋ ಬೈಡೆನ್ ಅವರ ವೈದ್ಯಕೀಯ ಸಲಹೆಗಾರರೂ ಆಗಿದ್ದರು ಎಂಬುದು ಗಮನಾರ್ಹ. ವುಹಾನ್‌ನ ಪ್ರಯೋಗಾಲಯದಿಂದಲೇ ಕೊರೋನಾ ವೈರಸ್‌ಗಳು ಸೋರಿಹೋಗಿ ಬಳಿಕ ಜಗತ್ತಿನಾದ್ಯಂತ ಹರಡುವಂತಾಗಿತ್ತು ಎಂಬ ಅನುಮಾನಗಳು ಜಗತ್ತನ್ನು ಕಾಡುತ್ತಿದ್ದು ಅದನ್ನೀಗ ಗಬ್ಬರ್ಡ್ ಬಿಡುಗಡೆ ಮಾಡಿರುವ ಮಾಹಿತಿಗಳು ದೃಢಪಡಿಸಿವೆ.

ಆದರೆ ಕೊರೋನಾ ವೈರಸ್ ಪ್ರಯೋಗಾಲಯದಿಂದ ಸೋರಿಕೆ ಆದುದಲ್ಲ, ಬದಲಾಗಿ ನೈಸರ್ಗಿಕವಾಗಿ ಉತ್ಪತ್ತಿಯಾದುದು ಎಂಬ ಸುದ್ದಿಯನ್ನು ಹರಡುವಲ್ಲೂ ಆಂಟನಿ ಫೌಸಿ ಪ್ರಮುಖ ಪಾತ್ರ ವಹಿಸಿದ್ದರು. ಅವರ ಈ ಕಾರ್ಯಕ್ಕೆ ಸಿಐಎ ಕೂಡಾ ಸಾಥ್ ನೀಡಿತ್ತು. ಅಮೆರಿಕದ ಗುಪ್ತಚರ ಸಂಸ್ಥೆಯಲ್ಲಿನ ಕೆಲವರಿಗೆ ಈ ಮಾಹಿತಿ ತಿಳಿದಿತ್ತಾದರೂ ಅವರು ಅದನ್ನು ಬಯಲುಗೊಳಿಸದಂತೆ ಅವರ ಮೇಲೆ ಒತ್ತಡ ಹಾಗೂ ಬೆದರಿಕೆ ಹಾಕಲಾಗಿತ್ತು ಎಂಬುದೂ ಈಗ ಬಯಲಾಗಿದೆ.

ಮಾರಣಾಂತಿಕ ವೈರಸ್‌ಗಳನ್ನು ಪ್ರಯೋಗಾಲಯದಲ್ಲಿ ಅಭಿವೃದ್ಧಿ ಪಡಿಸುವಂತಹ ಸಂಶೋಧನೆಗಳು ನಡೆಯುತ್ತಿವೆ ಎಂಬುದು ಇದೀಗ ದೃಢಪಟ್ಟಿದೆ. ಈ ಕಾರ್ಯದಲ್ಲಿ ಚೀನಾದೊಂದಿಗೆ ಅಮೆರಿಕದ ಪಾತ್ರವೂ ಇರುವುದು ಆಶ್ಚರ್ಯಾಘಾತ ಉಂಟು ಮಾಡಿದೆ. ವೈರಸ್ ಜಗತ್ತಿನಾದ್ಯಂತ ಹರಡಿ ಸಾಕಷ್ಟು ಅಧ್ವಾನಗಳನ್ನು ಸೃಷ್ಟಿಸಿದ ಬಳಿಕವೂ ಅಮೆರಿಕನ್ ಆಡಳಿತವು ಸತ್ಯಾಂಶವನ್ನು ಮುಚ್ಚಿಟ್ಟದ್ದು ಆಘಾತಕಾರಿ. ಇದೀಗ ಕೋವಿಡ್‌ನಿಂದ ಉಂಟಾದ ಪ್ರಾಣಹಾನಿ ಹಾಗೂ ಇನ್ನಿತರ ವಿನಾಶಗಳಿಗೆ ಚೀನಾದಷ್ಟೇ ಅಮೆರಿಕವೂ ಹೊಣೆಗಾರ ಎಂಬಂತಾಯಿತು. ಹಾಗಾಗಿ ಸಂಬಂಧಿತ ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವುದು ಅಗತ್ಯ.

ಸಂಸ್ಕಾರ ಬಯಸುವ ವಿಶುದ್ಧ

ನಿಮ್ಮ ಸಂವಹನ ಕಲೆ ಮತ್ತು ಇನ್ನಿತರರ ಮೇಲೆ ಪ್ರಭಾವ ಬೀರುವ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ವಿಶುದ್ಧ ಚಕ್ರವನ್ನು ಬಲಪಡಿಸುವುದು ತುಂಬಾ ಮುಖ್ಯ.

ಪೂರ್ಣ ಪರಿಪೂರ್ಣ
• ಪೂರ್ಣಪ್ರಜ್ಞ ಬೇಲೂರು
poornaprajnabelur@gmail.com



ವಿಶುದ್ಧ ಚಕ್ರದ ಸಮತೋಲನವು ಸಂಸ್ಕಾರವಿದ್ದರೆ ಮಾತ್ರ ಸಾಧ್ಯ. ಕಾರಣ ಮಾತೇ ಇವರ ಮುಖ್ಯ ಆಯುಧ. ಮಾತೇ ಇವರ ಬಂಡವಾಳ. ಮಾತೇ ಇವರ ಯಶಸ್ಸಿನ ಮಾರ್ಗ. ಮಾತೇ ಇವರ ಗುರಿ ತಲುಪಿಸುವ ಸ್ನೇಹಿತ. ಮಾತೇ ಇವರ ಮಾತೆ, ಪಿತಾ ಮತ್ತು ಗುರು. ಹೀಗಿರುವಾಗ ಮಾತಿನ ಮೇಲೆ ಹಿಡಿತ ಸಾಧಿಸುವುದು ಮತ್ತು ಅದನ್ನು ಸಿಹಿಯಾಗಿಸುವುದು ಸುಲಭದ ಮಾತಲ್ಲ. ಈ ಹಿಂದೆ ಹೇಳಿದ್ದೆ; ಮಾತು ಪದಗಳನ್ನು, ಅಕ್ಷರವನ್ನು, ಧ್ವನಿಯನ್ನು, ಹಾವಭಾವಗಳನ್ನು, ವರ್ತನೆಯನ್ನು, ವ್ಯಕ್ತಿತ್ವವನ್ನು ಅವಲಂಬಿಸಿದೆ. ಅಂದರೆ ಪ್ರತಿಯೊಂದಕ್ಕೂ ಅಪಾರವಾದ ಶಕ್ತಿಯಿದೆ. ಅದನ್ನು ಸರಿಯಾಗಿ ನಿರ್ವಹಿಸಲು ನಿಮಗೆ ಸಂಸ್ಕಾರ ಬೇಕು. ಸೃಜನಶೀಲತೆ ಬೇಕು. ವಿನಯ, ವಿಧೇಯತೆ ಬೇಕು. ಬುದ್ಧಿವಂತಿಕೆ, ಓದಿನ ಜ್ಞಾನ, ಅನುಭವದ ಹಿನ್ನೆಲೆ ಮತ್ತು ಸೂಕ್ತವಾದ ಸಂವಹನ ಬೇಕು. ಆಗ ನೀವು ಎಲ್ಲರನ್ನೂ ಸಂಮೋಹನ ಗೊಳಿಸಲು ಸಾಧ್ಯ.

ನಿಮ್ಮ ಈ ಎಲ್ಲಾ ಶಕ್ತಿಯನ್ನು ಬಳಸಿ ಇನ್ನೊಬ್ಬರ ನಡವಳಿಕೆ, ಆಲೋಚನೆ, ಚಿಂತನೆಗಳನ್ನು ಬದಲಾಯಿಸುವುದೇ ಸಂಮೋಹನ. ನಿಮಗೆ ಗೊತ್ತಿರುವಂತೆ ನೀವು ಉಪನ್ಯಾಸ ಕೊಡುವಾಗ ನಿಮ್ಮ ಧ್ವನಿ ಕೆಟ್ಟಿತು ಎಂದಾದರೆ; ನಿಮ್ಮ ಕತೆ ಪುಸ್...ಮುಗಿಯಿತು. ಮಾತು ತಡವರಿಸಿತು ಎಂದಾದರೆ ಅಲ್ಲಿಗೆ ನೀವು ಪೂರ್ಣ ಬಿದ್ದಿರಿ. ಧ್ವನಿಯ ಲಯ ಮತ್ತು ಸರಿಯಾದ ಅಕ್ಷರಗಳ ಜೋಡಣೆ ಇವು ಎಂತಹವರನ್ನೂ ಸಹಾ ಮಂತ್ರಮುಗ್ಧರನ್ನಾಗಿ ಮಾಡಿಸುತ್ತದೆ. ಸಂಮೋಹನಕಾರನಿಗೆ ಅವನ ಮಾತು ಮತ್ತು ಧ್ವನಿ ಇವೇ ಬಂಡವಾಳ.

ಭಾರತೀಯ ಯೋಗಶಾಸ್ತ್ರದ ಪ್ರಕಾರ ವಿಶುದ್ಧ ಚಕ್ರದ ಸಿದ್ಧಿಯನ್ನು ಪಡೆದರೆ ಅವರಿಗೆ ವಾಕ್‌ಸಿದ್ಧಿ ಲಭಿಸುತ್ತದೆ. ವಾಕ್ ಸಿದ್ಧಿ ಎಂದರೆ ಮಾತಿನ ಮೇಲೆ ಹಿಡಿತವನ್ನು ಸಾಧಿಸುವುದಷ್ಟೇ ಅಲ್ಲ, ಸತ್ಯ, ಪ್ರಾಮಾಣಿಕತೆ, ಆಡಿದ ಮಾತಿನಂತೆ ನಡೆದುಕೊಳ್ಳುವುದು, ಹಿತವಾದ ಮಾತುಗಳನ್ನು ಮಾತ್ರ ಮಾತನಾಡುವುದು, ಮನಃಪೂರ್ವಕವಾಗಿ ಉತ್ತರಿಸುವುದು, ಸ್ಥಿತಪ್ರಜ್ಞತೆಯಿಂದ ಮಾತುಗಳನ್ನು ಸ್ವೀಕರಿಸುವುದು ಹೀಗೆ ಏನೆಲ್ಲಾ ಸೇರಿದಾಗ ವಾಕ್‌ಸಿದ್ಧಿ ಎನ್ನುತ್ತಾರೆ. ಇದನ್ನು ನೀವು ಬಾಲ್ಯದಿಂದಲೇ ಅಭ್ಯಾಸ ಮಾಡಬೇಕಾಗುತ್ತದೆ. ಅದಕ್ಕೆ ತಕ್ಕುದಾದ ವಾತಾವರಣ, ಕಲಿಕೆ, ವಿದ್ಯಾಭ್ಯಾಸ, ಕೌಶಲ್ಯ, ಅರ್ಥನೀತಿಗಳು, ಸಮಾಜದ ರೀತಿನೀತಿಗಳು, ನಿಮ್ಮ ವ್ಯಕ್ತಿತ್ವ, ವರ್ತನೆಗಳು, ಹಾಗೂ ಧ್ವನಿಯ ಮೇಲೆ ಹಿಡಿತದಿಂದ ಬರುವ ಮಾತುಗಳನ್ನು ನೀವು ಕಲಿತಿರಬೇಕು. ಸತತ ಅಭ್ಯಾಸ ಮಾಡಿದರೆ ಸಾಲದು, ಮನನ ಮಾಡಿಕೊಳ್ಳಬೇಕು. ನೀವೀಗ ನೋಡುತ್ತಿರುವ ರವಿಶಂಕರ್ ಗುರೂಜಿ, ಸದ್ಗುರು ಜಗ್ಗಿ ವಾಸುದೇವ್ ಮುಂತಾದ ಧರ್ಮಗುರುಗಳನ್ನು ನೀವು ನೋಡಿರುತ್ತೀರಿ. ಇವರೆಲ್ಲಾ ತಮ್ಮ ವಾಕ್ ಶಕ್ತಿಯಿಂದಲೇ ಜಗತ್ ಪ್ರಸಿದ್ಧರಾದವರು.

ಸಿನಿ ತಾರೆ ಅಪರ್ಣರವರು ಇಂದು ನಮ್ಮ ನಡುವೆ ಇಲ್ಲ, ಆದರೆ ಅವರ ಸುಂದರ ಮಾತುಗಳ ಧ್ವನಿ ಮುದ್ರಿಕೆ ಆಕಾಶವಾಣಿ, ದೂರದರ್ಶನ ಮತ್ತು ಅನೇಕ ಜಾಹಿರಾತು ವಿಭಾಗಗಳಲ್ಲಿ ಇಂದಿಗೂ ಲಭ್ಯ. ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ಒಂದಿಬ್ಬರು ಪ್ರಖ್ಯಾತರಾದವರು ಇದ್ದೇ ಇರುತ್ತಾರೆ. ಅವರ ನಿತ್ಯ ಅನುಷ್ಠಾನ ಹೇಗಿರಬೇಕು ಎನ್ನುವುದನ್ನು ನೀವು ನೋಡಿ ಕಲಿಯಬೇಕು. ಇವರೆಲ್ಲರ ಮಾತಿನ ಕಂಪನಗಳು, ಕೇಳುಗರ ಮಿದುಳಿನ ತರಂಗಗಳನ್ನು ಶಾಂತಗೊಳಿಸುತ್ತದೆ. ಅವರನ್ನು ನಿದ್ರೆಗೆ ತಳ್ಳುತ್ತದೆ. ಕನಸಿನಲ್ಲಿ ಮುಂದಿನ ನಡೆಗಳು ಹೀಗೇ ಇರಬೇಕು ಎನ್ನುವುದನ್ನು ಸೂಚ್ಯವಾಗಿ ತಿಳಿಸುತ್ತದೆ. ವಿಶುದ್ಧ ಚಕ್ರವು ಸುಸ್ಥಿರವಾಗಿದ್ದಾಗ, ಬಲವಾಗಿದ್ದಾಗ ಅದ್ಭುತವಾದ ಆತ್ಮವಿಶ್ವಾಸ ಮೂಡುತ್ತದೆ. ಅದೇ ನೀವು ಇನ್ನೊಬ್ಬರನ್ನು ಅವಹೇಳನ ಮಾಡುತ್ತಾ, ಅನುಸರಿಸುತ್ತಾ, ನಕಾರಾತ್ಮಕವಾದ ಭಾವವನ್ನು ವ್ಯಕ್ತಪಡಿಸುತ್ತಿದ್ದರೆ ನಿಮ್ಮಲ್ಲಿನ ವಿಶುದ್ಧ ಚಕ್ರವು ನಿಧಾನವಾಗಿ ನೆಲದಾಳಕ್ಕೆ ಇಳಿಯುತ್ತಾ ಹೋಗುತ್ತದೆ.

ಸಂಮೋಹನ ಮತ್ತು ಮಾತು

ಸತ್ಯವಾದ ಮಾತುಗಳು ಮತ್ತು ಆಕರ್ಷಣೀಯವಾದ ಧ್ವನಿ ಇದ್ದರೆ, ರೂಪ ಸಹಾ ಇರಬೇಕೆಂದಿಲ್ಲ. ಕೇವಲ ಮಾತಿನಿಂದ ಅಲ್ಲಿದ್ದವರನ್ನೆಲ್ಲಾ ಒಂದೇ ಕಡೆ ಜಮಾಯಿಸಬಹುದು. ವಿಶುದ್ಧ ಚಕ್ರವು ಬಲವಾಗಿದ್ದಾಗ; ಅಂತಹಾ ವ್ಯಕ್ತಿಗಳಲ್ಲಿ ಒಂದು ವಿಶೇಷ ಆತ್ಮವಿಶ್ವಾಸ ಮೂಡುತ್ತದೆ. ಆತ್ಮವಿಶ್ವಾಸವೇ ಸಂವಹನದ ಮೊದಲ ಹೆಜ್ಜೆ, ಮಾತಿನ ಬಂಡವಾಳ.

ನಿಮ್ಮ ಸಂವಹನ ಕಲೆ ಮತ್ತು ಇನ್ನಿತರರ ಮೇಲೆ ಪ್ರಭಾವ ಬೀರುವ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ವಿಶುದ್ಧ ಚಕ್ರವನ್ನು ಬಲಪಡಿಸುವುದು ತುಂಬಾ ಮುಖ್ಯ. ಹಂ ಬೀಜ ಮಂತ್ರ ಪಠಣ ಮತ್ತು ಸೂರ್ಯನಿಗೆ ಅರ್ಘ್ಯ ನೀಡುವುದರ ಮೂಲಕ ಧ್ವನಿಯು ಗಂಭೀರ ಮತ್ತು ಆಕರ್ಷಕವಾಗಿ ಬದಲಾಗುತ್ತದೆ. ಸೂರ್ಯ ನಮಸ್ಕಾರವನ್ನು ಪ್ರತಿದಿನ ಬೆಳಿಗ್ಗೆ ಮಾಡಬೇಕು. ಹಾಗೂ ಹಂ ಎನ್ನುವ ಪದವನ್ನು ಜಪಿಸಿ ಸಮಸ್ತ ಲೋಕದ ದೃಷ್ಟಿಯನ್ನು ತಮ್ಮೆಡೆಗೆ ಎಳೆಯಬೇಕು. ಸಂಜೆಯ ಸಮಯದಲ್ಲಿ ಆಕಾಶದ ನೀಲಿ ಬಣ್ಣವನ್ನು ನೀವು ನೋಡುತ್ತಾ, ಅದು ನಿಮ್ಮ ಗಂಟಲಿಗೆ ಬಂದು ಇಳಿಯುತ್ತಿದೆ ಎನ್ನುವ ಕಲ್ಪನೆಯನ್ನು ಮಾಡಿಕೊಳ್ಳಿ. ಮತ್ತು ಹಂ ಎನ್ನುವ ಬೀಜ ಮಂತ್ರವನ್ನು ನೂರಾ ಎಂಟು ಬಾರಿ ಜಪಿಸಿ. ಪ್ರಾರಂಭದಲ್ಲಿ ಆಕಾಶ ನೋಡುತ್ತಾ, ನೀಲಿ ಬಣ್ಣವನ್ನು ಕಣ್ಣಲ್ಲಿ ತುಂಬಿಕೊಳ್ಳುತ್ತಾ ಕ್ರಮೇಣ ಕಣ್ಣು ಮುಚ್ಚಿ, ಆಗಲೂ ನೀಲಿ ಬಣ್ಣವೇ ಕಣ್ಣಲ್ಲಿ ಉಳಿದರೆ ನಿಮ್ಮ ಏಕಾಗ್ರತೆ ಸಫಲವಾದಂತೆ. ಹೀಗೆ ಹಂ ಜೊತೆ ನೀಲಿಯೂ ಕಣ್ಣಿನ ಮೂಲಕ ಗಂಟಲಿಗೆ ಇಳಿದರೆ ನಿಮ್ಮ ಪ್ರಯತ್ನ ಸಫಲವಾದಂತೆ.

ಏಕಾಗ್ರತೆ ಸಾಧಿಸಲು ಸಾಧ್ಯವಾಗುತ್ತಿಲ್ಲ ಎಂದಾದರೆ, ತ್ರಾಟಕ ಕ್ರಿಯೆಯನ್ನು ಮಾಡಿ. ದೀಪವನ್ನು ರೆಪ್ಪೆ ಮುಚ್ಚದೇ ನೋಡುತ್ತಾ ಕುಳಿತುಕೊಳ್ಳಿ. ಅಥವಾ ಒಂದು ಬಿಳಿಯ ಕಾರ್ಡ್‌ಬೋರ್ಡ್‌ನ್ನು ಗೋಡೆಗೆ ಅಂಟಿಸಿ. ಅದರ ಮಧ್ಯದಲ್ಲಿ ಒಂದು ಕಪ್ಪು ಚುಕ್ಕೆಯನ್ನು ಇಡಿ. ಅದನ್ನೇ ರೆಪ್ಪೆ ಮುಚ್ಚದೇ ನೋಡಿ. ಹೀಗೆ ಕ್ರಮೇಣ ಏಕಾಗ್ರತೆಯನ್ನು ಸಾಧಿಸಿ.

ನೀವು ಸಂಗೀತದಲ್ಲಿ ಆಸಕ್ತಿ ಇರುವವರಾದರೆ, ಏಕಾಗ್ರತೆ ತುಂಬಾ ಸುಲಭ. ನೀವೇ ಸಂಗೀತ ಕಲಿಯಬೇಕೆಂದಿಲ್ಲ, ಒಳ್ಳೆಯ ಕೇಳುಗರಾದರೂ ಸಾಕು. ನಿಮಗೆ ಏಕಾಗ್ರತೆ ಕೈವಶವಾಗುತ್ತದೆ. ಆದರೆ ದಿನಾಲೂ ನಿಶ್ಚಿತ ಸಮಯದಲ್ಲಿ, ನಿಶ್ಚಿತ ಅವಧಿಯವರೆಗೆ ಸಂಗೀತವನ್ನು ನೀವು ಆಲಿಸಲೇ ಬೇಕು. ಹೀಗೆ ನಿಮಗೆ ರಾಗಗಳ ಪರಿಚಯವಾಗುತ್ತದೆ. ಹಾಗೆ ರಾಗಗಳನ್ನು ನೀವು ಗುರುತಿಸ ತೊಡಗಿದರೆ, ಏಕಾಗ್ರತೆ ಸಾಧನೆಯಾಗಿದೆ ಎಂದರ್ಥ.

ಕೊನೆಯ ಸಾಧ್ಯತೆ; ನೀವು ದಿನಾಲೂ ಓಂಕಾರವನ್ನು ಪಠಿಸಬೇಕು. ಮೊದಲಿಗೆ ಹದಿನಾರು ಸಾರಿ ಓಂಕಾರವನ್ನು ಪಠಿಸಿ. ಬಳಿಕ ದಿನಾಲೂ ಅದನ್ನು ನಾಲ್ಕರಂತೆ ಹೆಚ್ಚಿಸುತ್ತಾ ಹೋಗಿ. ಹೀಗೆ ನೂರಾ ಎಂಟು ಆದ ಕೂಡಲೇ ನಿಮ್ಮನ್ನೇ ನೀವು ಗಮನಿಸಿ. ಓಂಕಾರ ಉಚ್ಚರಿಸುತ್ತಾ ಇದ್ದಾಗ, ನಿಮ್ಮ ಸುತ್ತಲೂ ಏನಾದರೂ ಆಗುವ ಆಗುಹೋಗುಗಳ ಅರಿವು ನಿಮಗಾಗುತ್ತಿಲ್ಲ ಎಂದಾದರೆ, ನೀವು ಏಕಾಗ್ರತೆಯನ್ನು ಸಾಧಿಸಿದ್ದೀರಿ ಎಂದರ್ಥ.

ವಿಶುದ್ಧ ಚಕ್ರವು ನಿಮಗೆ ಸಿದ್ಧಿಯಾಗಿದ್ದು ತಕ್ಷಣದಲ್ಲಿ ಗೊತ್ತಾಗುವುದಿಲ್ಲ. ಆದರೆ ನಿಮ್ಮ ಸಂವಹನ ತುಂಬಾ ಚೆನ್ನಾಗಿ ಆಗುತ್ತಿದೆ ಎಂದಾದರೆ, ನಿಮ್ಮ ಧ್ವನಿಯಲ್ಲಿ ಆಕರ್ಷಣೆ ಉಂಟಾಗಿದೆ ಎಂದಾದರೆ, ವ್ಯಕ್ತಿತ್ವದಲ್ಲಿ ಕಾಂತಿ ಉಂಟಾಗಿದೆ ಎಂದಾದರೆ, ಕಾರಣ ವಿಶುದ್ಧ ಚಕ್ರದ ಜಾಗೃತಿ.

ನೀವೀಗ ನಾಯಕರು

ಸಂವಹನ ಕಲೆಯನ್ನು, ಸಂಮೋಹನ ಶಕ್ತಿಯನ್ನು ನೀವು ವಶಪಡಿಸಿಕೊಂಡರೆ ನೀವು ನಾಯಕರಾಗಲು ಯೋಗ್ಯತೆಯನ್ನು ಪಡೆದುಕೊಂಡಿರಿ. ನೀವು ಮಾಡಬೇಕಾದ್ದು ಇಷ್ಟೇ; ನಿಮ್ಮ ಆಲೋಚನೆಗಳನ್ನು ಸ್ಪಷ್ಟಗೊಳಿಸುವುದು ಮತ್ತು ಅದನ್ನು ಸೂಕ್ತವಾದ ಪದಗಳು ಹಾಗೂ ಧ್ವನಿಯನ್ನು ಬಳಸಿ ಕಾರ್ಯರೂಪಕ್ಕೆ ತರುವುದು. ಎಂತಹಾ ವ್ಯಕ್ತಿಯಾದರೂ ನಿಮ್ಮ ಧ್ವನಿಗೆ ಮತ್ತು ಆಲೋಚನೆಗಳ ರೀತಿಗೆ ತಲೆಬಾಗಲೇ ಬೇಕು. ಅಂತಹಾ ಶಕ್ತಿಯನ್ನು ನೀವು ವಿಶುದ್ಧ ಚಕ್ರದಿಂದ ಪಡೆಯುತ್ತೀರಿ. ನೀವು ಕೇವಲ ಒಬ್ಬ ಅಧಿಕಾರಿಯಲ್ಲ, ನಾಯಕ. ಒಬ್ಬ ಸಾಮಾನ್ಯ ಕೃಷಿಕನಲ್ಲ, ಪ್ರಗತಿಪರ ಕೃಷಿಕ. ಒಬ್ಬ ಉಪನ್ಯಾಸಕನಲ್ಲ, ಉತ್ತಮ ವಾಗ್ಮಿ. ಓರ್ವ ಅರ್ಥಧಾರಿಯಲ್ಲ, ಸರಸ್ವತಿಯ ಸುಪುತ್ರ. ನಾಯಕನಾದ ಮೇಲೆ ನೀವು ಸದಾ ಎಚ್ಚರಿಕೆಯಿಂದ ಇರಬೇಕಾದ್ದು ಅಗತ್ಯ. ನಿಮ್ಮ ಮಾತುಗಳಲ್ಲಿ ಸ್ಪಷ್ಟತೆ ಇರಬೇಕು. ಸರಳವಾದ ಪದಗಳನ್ನು ಬಳಸಬೇಕು. ನಿಮಗೇನು ಬೇಕು ಎನ್ನುವುದನ್ನು ನೇರವಾಗಿ ಹೇಳಬೇಕು ಮತ್ತು ಅಂತಿಮವಾಗಿ ನಿಮ್ಮ ಗುರಿ ಯಾವುದು ಎನ್ನುವುದು ಅವರಿಗೆಲ್ಲಾ ಅರ್ಥವಾಗಬೇಕು. ಸದಾ ಗಂಭೀರವಾಗಿಯೂ ಮತ್ತು ಶ್ರಮದ ಕೆಲಸ ಮಾಡುವಾಗ ಉತ್ತೇಜನಕಾರಿಯಾಗಿಯೂ, ಕಷ್ಟಗಳು, ಸಮಸ್ಯೆಗಳು ಬಂದಾಗ ಹುರಿದುಂಬಿಸುತ್ತಾ, ತಮಾಷೆ ಮಾಡುತ್ತಾ ನಿಮ್ಮ ಇರುವಿಕೆಯನ್ನು ದೃಢಗೊಳಿಸುವುದು ಮುಖ್ಯ. ನಿಮ್ಮ ಮೇಲೆ ಅವರಾಗಿಯೇ ಗೌರವ ನೀಡುವಂತೆ ವರ್ತನೆ ಇರಬೇಕು. ಸಿಟ್ಟು, ದರ್ಪ, ಅಹಂಕಾರದಿಂದ ವರ್ತಿಸಿ, ಅವರಲ್ಲಿ ಆತಂಕ, ಭಯ ಹುಟ್ಟಿಸಿ ಗೌರವ ಪಡೆಯುವಂತೆ ಆಗಬಾರದು. ಇಂತಹ ಗೌರವ ಎಂದಿಗೂ ಶಾಶ್ವತವಲ್ಲ.

ನೆನಪಿಡಿ; ವಿಶುದ್ಧ ಚಕ್ರ ಜಾಗೃತವಾದರೆ ಮಾತ್ರ ಪ್ರತಿಯೊಬ್ಬರನ್ನು ಸಹಾ ಸಂಮೋಹನಗೊಳಿಸಬಹುದು. ಹಾಗೂ ನೀವು ಮರೆಯಲಾಗದ ನಾಯಕರಾಗಿ ಉಳಿಯಬಹುದು. ನಿಮ್ಮ ನಾಯಕತ್ವದಲ್ಲಿ ಎಲ್ಲವೂ ಯಶಸ್ಸೇ ಆಗುತ್ತದೆ.

ವಾಸಕ್ಕಿಟ್ಟುಕೊಳ್ಳಬಾರದವರು

**ಅಕರ್ಮಶೀಲಂ ಚ ಮಹಾಶನಂ ಚ ಲೋಕದ್ವಿಷ್ಟಂ ಬಹುಮಾಯಾಂ ನೃಶಂಸಮ್।
ಅದೇಶಕಾಲಜ್ಞಮನಿಷ್ಟವೇಷಮ್ ಏತಾನ್ ಗೃಹೇ ನ ಪ್ರತಿವಾಸಯೇತ ॥**

–ಹಿತೋಪದೇಶ



ದುಷ್ಕರ್ಮಿ, ಹೊಟ್ಟೆಬಾಕ, ಮಾನವದ್ವೇಷಿ, ಮಹಾಮಾಯಾವಿ, ಕ್ರೂರಿ, ದೇಶಕಾಲಗಳ ಅರಿವಿಲ್ಲದವನು, ಇಷ್ಟವಲ್ಲದವನು ಇಂಥವರನ್ನು ಮನೆಯಲ್ಲಿ ವಾಸಕ್ಕಿಟ್ಟುಕೊಳ್ಳಬಾರದು – ಎಂಬುದು ಶ್ಲೋಕಾರ್ಥ.

ಸನಾತನ ಭಾರತೀಯರ ಆಚಾರವಿಚಾರ, ನಡೆ–ನುಡಿ, ಹೃದಯ ವೈಶಾಲ್ಯ ಸಾಮಾನ್ಯ ಕಲ್ಪನೆಗೆ ನಿಲುಕದ್ದು. ಜಗತ್ತಿನ ಇತರೆಡೆ ಕಾಣದ ವೈಶಿಷ್ಟ್ಯವನ್ನು ಸನಾತನ ಪರಂಪರೆಯಲ್ಲಿ ಕಾಣುತ್ತೇವೆ. ನಮಗೆ ಆಶ್ರಯ ಕೇಳಿ ಬಂದವರಿಗೆ ನಿರಾಶೆಗೊಳಿಸಿ ಗೊತ್ತಿಲ್ಲ. ಹಸಿದವರೊಡನೆ ಹಂಚಿ ತಿನ್ನುವುದನ್ನು ಸನಾತನ ಧರ್ಮವೇ ಕಲಿಸಿದೆ. 'ಅತಿಥಿ ದೇವೋ ಭವ' ಎಂದು ನಂಬಿ ಮನೆಗೆ ಬಂದವರನ್ನು ಗೌರವಾದರಗಳಿಂದ ಸತ್ಕರಿಸುವ ಪರಂಪರೆಯ ಪಾಠ ನಮಗಿದೆ. ಅತಿಥಿ ಎಂದರೆ ಹೇಳದೇ ಕೇಳದೇ ಬರುವವನು. ಪರಿಚಯವಿಲ್ಲದಿರಲೂಬಹುದು. ಅಪರಿಚಿತರಿಗೂ ಅಶನ, ವಸನ, ವಸತಿ ಕೊಟ್ಟು ಸತ್ಕರಿಸುವುದು ನಮ್ಮ ಜಾಯಮಾನ.

ಇದು ಮಾನವತ್ವದ ಶ್ರೇಷ್ಠ ಪರಿಕಲ್ಪನೆಯೆನಿಸಿದರೂ ಬಲ್ಲವರು ಒಂದಿಷ್ಟು ಎಚ್ಚರಿಕೆಯ ಸೂಚನೆಯನ್ನು ನೀಡಿದ್ದಾರೆ. ಮನೆಯಲ್ಲಿ ಇತರರು ನಿಲ್ಲುವುದಕ್ಕೆ ಅವಕಾಶ ಕಲ್ಪಿಸುವುದು ಮಾನವತ್ವದ ಧರ್ಮ ಮುಖ್ಯವೆನಿಸಿದರೂ, ಕೆಲವರಿಗೆ ಅವಕಾಶ ಕಲ್ಪಿಸಬಾರದು ಎಂಬ ನಿಯಮವಿದೆ. ಯಾರನ್ನೆಲ್ಲ ಮನೆಯಲ್ಲಿ ವಾಸಕ್ಕೆ ಇಟ್ಟುಕೊಳ್ಳಬಾರದು ಎಂಬುದನ್ನು ಪ್ರಕೃತ ಶ್ಲೋಕದಲ್ಲಿ ನಿರೂಪಿಸಲಾಗಿದೆ. ದುಷ್ಕರ್ಮಿಗೆ ಅವಕಾಶ ಕಲ್ಪಿಸಬಾರದು. ಮೊದಲೇ ದುಷ್ಕರ್ಮಿ. ಯಾವ ಬಗೆಯ ಕೆಡುಕನ್ನೆಸಗುವುದಕ್ಕೂ ಹೇಸುವುದಿಲ್ಲ. ಇಂಥವನಿಂದ ಕೇಡು ತಪ್ಪಿದ್ದಲ್ಲ. ಮನೆಗೆ ಮಾರಿ ಹೊಕ್ಕಂತಾಗುವುದರಿಂದ ಆಶ್ರಯವನ್ನು ನೀಡಬಾರದು. ವಿದೇಶಿ ನುಸುಳುಕೋರರು ನಮ್ಮ ದೇಶದಲ್ಲಿ ಎಂತೆಂತಹ ಅನ್ಯಾಯವೆಸಗುತ್ತಿದ್ದಾರೆ ಎಂಬುದನ್ನು ಗಮನಿಸಿದಾಗ ಈ ಹೇಳಿಕೆ ಅರ್ಥವಾಗುತ್ತದೆ.

ಹೊಟ್ಟೆಬಾಕನನ್ನು ಮನೆಯೊಳಗೆ ಸೇರಿಸಬಾರದು. ಇವನಿಂದಾಗಿ ಇತರರು ಉಪವಾಸ ಬೀಳಬೇಕಾದೀತು. ಅವನು ತಿನ್ನುವ ಪರಿ ಮನೆಯನ್ನೇ ಮಸಣ ಮಾಡುವ ಸಾಧ್ಯತೆಯಿರುವುದರಿಂದ ಇಂಥವರಿಗೆ ಅವಕಾಶವಿರಬಾರದು. ಮಾನವದ್ವೇಷಿಗೆ ಆಶ್ರಯವಿತ್ತರೆ ಅನಾಹುತ ತಪ್ಪಿದ್ದಲ್ಲ. ಆಶ್ರಯ ಕೊಟ್ಟವರು ಅಪರಾಧಿ ಸ್ಥಾನದಲ್ಲಿ ನಿಲ್ಲಬೇಕಾಗಿ ಬರಬಹುದು. ಆದ್ದರಿಂದ ಇವರನ್ನು ದೂರವಿರಿಸಬೇಕು.

ಮಹಾಮೋಸಗಾರ, ವಂಚಕ, ಕ್ರೂರಿ ಇವರಿಗಂತೂ ಆಶ್ರಯ ಕಲ್ಪಿಸಬಾರದು. ಇವರಿಂದ ಅಪಾಯವೆಂದೂ ತಪ್ಪಿದ್ದಲ್ಲ. ಇಂದಲ್ಲದಿದ್ದರೆ ನಾಳೆಯಾದರೂ ವಂಚಿಸಿ ಪರಾರಿಯಾಗುತ್ತಾರೆ. ಕೃತಜ್ಞತೆಯ ಗಂಧವಿಲ್ಲದ ಇಂಥವರಿಗೆ ಆಶ್ರಯವನ್ನು ನಿರಾಕರಿಸಬೇಕು. ದೇಶ–ಕಾಲಗಳ ಅರಿವಿಲ್ಲದವನಿಗೆ ವಾಸಕ್ಕೆ ಅವಕಾಶ ಕಲ್ಪಿಸಿದರೆ ಮನೆಯ ವ್ಯವಹಾರವೇ ಅಸ್ತವ್ಯಸ್ತವಾದೀತು. ಮನೆಯೇ ಕುರುಕ್ಷೇತ್ರವಾಯಿತು.

ಕೊನೆಯದಾಗಿ ನಮಗೆ ಇಷ್ಟವಲ್ಲದವನಿಗೆ ಆಶ್ರಯ ನೀಡಬಾರದು. ಒಂದೊಮ್ಮೆ ಆಶ್ರಯವಿತ್ತರೆ ಮನೆಯ ನೆಮ್ಮದಿ ಹಾಳಾಗುತ್ತದೆ. ಇಷ್ಟವಿಲ್ಲದಿದ್ದರೂ ಅವನ ವ್ಯವಹಾರವನ್ನು ಒಪ್ಪಿಕೊಳ್ಳಬೇಕಾಗಿ ಬರುತ್ತದೆ. ಇದರಿಂದ ಮನೆಯ ವಾತಾವರಣವೇ ಕಲುಷಿತಗೊಳ್ಳುತ್ತದೆ. ಇಂಥವರಿಗೆ ಆಶ್ರಯವಿತ್ತು ನೆಮ್ಮದಿಯ ಬದುಕನ್ನು ಹಾಳು ಮಾಡಿಕೊಳ್ಳುವುದರ ಬದಲು ಆಶ್ರಯ ನೀಡದಿರುವುದೇ ಒಳ್ಳೆಯದು.

ತುರ್ತು ಪರಿಸ್ಥಿತಿಗೆ 51 ವರ್ಷ: ಮರೆಯಲಾಗದ ಕರಾಳ ಅಧ್ಯಾಯ

ಒಳನೋಟ
• ಹೆ.ಬಾ. ಮಲ್ಯ



ಇದೇ ಜೂನ್ ತಿಂಗಳ 25ನೇ ತಾರೀಕಿಗೆ ತುರ್ತು ಪರಿಸ್ಥಿತಿಗೆ 51 ವರ್ಷಗಳಾಗುತ್ತವೆ. ಅಂದಿನಿಂದ ಒಂದು ಪೀಳಿಗೆಯೇ ಕಳೆದುಹೋಗಿದೆ. ಇಂದಿನ ಎಳೆ ಪೀಳಿಗೆಯವರಿಗೆ ತುರ್ತು ಪರಿಸ್ಥಿತಿಯ ಘೋರ ದೌರ್ಜನ್ಯಗಳ ಬಗ್ಗೆ ಹೇಳಿದರೆ ಒಂದಷ್ಟು ಮಟ್ಟಿಗೆ ಪರಿಣಾಮವಾದೀತೇ ಹೊರತು ಹೆಚ್ಚೇನೂ ಇಲ್ಲ. ಆದರೆ ಅಂದು ಆ ಕರಾಳ ದಿನಗಳನ್ನು ಎದುರಿಸಿ, ಪ್ರತಿಭಟಿಸಿ, ಜೈಲು ಸೇರಿ, ಅಸಾಧ್ಯ ಹಿಂಸೆಗಳನ್ನು ಅನುಭವಿಸಿದ ಹಳೆ ಪೀಳಿಗೆಯವರ ಮನಸ್ಸಿನಲ್ಲಿ ಆ ಕರಾಳ ದಿನಗಳ ನೆನಪು ಇಂದಿಗೂ ಮಾಸಿಲ್ಲ. ಅವರಲ್ಲಿ ಮಾತ್ರ ಭಾವನಾತ್ಮಕ ಪರಿಣಾಮ ಆಗುತ್ತದೆ. ಪ್ರಜೆಗಳು ನಿಷ್ಕ್ರಿಯ ಪ್ರೇಕ್ಷಕರಾದರೆ ಪ್ರಜಾಪ್ರಭುತ್ವವನ್ನು ಓರ್ವ ಸರ್ವಾಧಿಕಾರಿಣಿ ಹೇಗೆ ಸರ್ವ ನಾಶ ಮಾಡಬಹುದು ಎಂಬುದು ತುರ್ತು ಪರಿಸ್ಥಿತಿ ಕಲಿಸುವ ಪಾಠ. ಸ್ವಂತ ಸ್ವಾರ್ಥಕ್ಕಾಗಿ, ತನ್ನ ಅಧಿಕಾರ ಉಳಿಸಿಕೊಳ್ಳುವ ದುಷ್ಟ ಉದ್ದೇಶಕ್ಕಾಗಿ ಸಂವಿಧಾನವನ್ನೇ ಹೊಸಕಿ ಹಾಕಿದ ಇಂದಿರಾಗಾಂಧಿಯವರ ನೆನಪಾಗುತ್ತದೆ. ಇಂದು ಕರ್ನಾಟಕದ ಗೃಹ ಸಚಿವರು, ಆರ್.ಎಸ್.ಎಸ್. ನೋಂದಣಿ ಮಾಡಿಸಿಕೊಂಡಿಲ್ಲ ಎನ್ನುತ್ತಾರೆ. ಇದೊಂದು ಬಾಲಿಷ ಹೇಳಿಕೆ. ಈಗಾಗಲೇ ನೆಟ್ಟಿಗರು ಈ ಬಗ್ಗೆ ಹಲವಾರು ಉತ್ತರಗಳನ್ನು ಕೊಟ್ಟಿದ್ದಾರೆ. ಗೃಹಸಚಿವರಿಗೆ ಅವರ ಕಾಂಗ್ರೆಸ್ ಅಧಿನಾಯಕಿ ಸಂವಿಧಾನ ಬುಡಮೇಲು ಮಾಡಿದ ಇತಿಹಾಸ ತಿಳಿದಿದೆಯೋ ಗೊತ್ತಿಲ್ಲ. ಹಾಗಾಗಿ ಅವರ ಹೇಳಿಕೆಯನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಾಗಿಲ್ಲ. ಪತ್ರಕರ್ತರು, ''ಸರಸಂಘಚಾಲಕರು ಈ ಬಗ್ಗೆ ಏನು ಹೇಳುತ್ತಾರೆ'' ಎಂದು ಕೇಳಿದಾಗ ಅವರು ಅದಕ್ಕೆ ತಾನು ಪ್ರತಿಕ್ರಿಯಿಸುವುದಿಲ್ಲ ಎಂದು ಸರಿಯಾಗಿಯೇ ಹೇಳಿದ್ದಾರೆ. ಆದರೆ ಸಾಮಾನ್ಯ ಪ್ರಜೆಗಳಿಗೆ ಸರಿಯಾದ ತಿಳಿವಳಿಕೆ ಕೊಡುವ ದೃಷ್ಟಿಯಿಂದ ಕೆಲವು ಮಾತುಗಳನ್ನು ಹೇಳಿದ್ದಾರೆ.

ಅದು ಹಾಗಿರಲಿ. ಈಗ ಇಂದಿರಾಗಾಂಧಿಯವರು 1975ರಲ್ಲಿ ತುರ್ತು ಪರಿಸ್ಥಿತಿ ಹೇರಿದ ಹಿನ್ನೆಲೆ ಬಗ್ಗೆ ಒಂದಷ್ಟು ಸ್ಮರಿಸಿಕೊಳ್ಳೋಣ. 1975 ಜೂನ್ 25ರ ಮಧ್ಯರಾತ್ರಿ ಅಂದಿನ ಪ್ರಧಾನಿ ಇಂದಿರಾಗಾಂಧಿಯವರು ದೇಶದಲ್ಲಿ ಆಂತರಿಕ ತುರ್ತು ಪರಿಸ್ಥಿತಿಯನ್ನು ಹೇರಿದರು. ಅಂದು ಭಾರತದ ಸಂವಿಧಾನದ ಕಗ್ಗೊಲೆ ನಡೆಯಿತು. ಆಕೆಯ ಮೊಮ್ಮಗ ಇಂದು ಕೆಂಪು ಹೊದಿಕೆಯ ಸಂವಿಧಾನ ಪುಸ್ತಕವೊಂದನ್ನು ಎತ್ತಿ ಹಿಡಿದು ಡ್ರಾಮಾ ಮಾಡುತ್ತಿದ್ದಾರೆ.

ಇತಿಹಾಸದಿಂದ ಪಾಠ ಕಲಿಯಬೇಕು. ಇಲ್ಲವಾದಲ್ಲಿ ಮತ್ತೆ ಅದೇ ಕರಾಳ ಕಾಲಖಂಡ ಮರುಕಳಿಸುವ ಅಪಾಯವಿದೆ. ಮಾತ್ರವಲ್ಲ ಅದನ್ನು ಆಗಾಗ ನೆನಪಿಸಿಕೊಳ್ಳಬೇಕು. Lest We forget ಎಂಬ ಮಾತೊಂದಿದೆ. ಅಂದಿನ ಕಾಂಗ್ರೆಸ್ ತನ್ನ ಜನಪ್ರಿಯತೆಯನ್ನು ಕಳೆದುಕೊಳ್ಳುತ್ತಾ ಬಂದಿತ್ತು. ಅಧಿಕಾರ ನೆಹರೂ ವಂಶದ ಕೈ ತಪ್ಪಿ ಹೋಗುವ ಪರಿಸ್ಥಿತಿ ಏರ್ಪಟ್ಟಿತ್ತು. ಲಾಲ್ ಬಹಾದ್ದೂರ್ ಶಾಸ್ತ್ರಿಯವರ ನಿಗೂಢ ಸಾವಿನ ನಂತರ ಇಂದಿರಾ ಗಾಂಧಿಯವರನ್ನು ಅಂದಿನ ಕಾಂಗ್ರೆಸ್ ನೀತಿ ನಿರೂಪಕ ಮಂಡಳಿ ಪ್ರಧಾನಿ ಪಟ್ಟಕ್ಕೇರಿಸಿತ್ತು. ಈ ಮಂಡಳಿಯಲ್ಲಿ ಕಾಂಗ್ರೆಸ್ ಹಳೆತಲೆಮಾರಿನ ದಿಗ್ಗಜರುಗಳಾಗಿದ್ದ ಕಾಮರಾಜ್ ನಾಡಾರ್, ನಿಜಲಿಂಗಪ್ಪ, ಮೊರಾರ್ಜಿ ದೇಸಾಯಿ, ಎಸ್. ಕೆ. ಪಾಟೀಲ್ ಮುಂತಾದವರಿದ್ದರು. ಇಂದಿರಾ ಗಾಂಧಿಗೆ ಅವರ ಮೂಗು ತೂರಿಸುವಿಕೆ ಸಹನೆಯಾಗದೆ ಅವರನ್ನು ಪಕ್ಕಕ್ಕೆ ಸರಿಸಿ ಕಾಂಗ್ರೆ (Congress Indira) ಪಕ್ಷ ಸ್ಥಾಪಿಸಿದರು. ಪಕ್ಷ ಇಬ್ಭಾಗವಾಯಿತು. ಹಳೆ ಕಾಂಗ್ರೆಸ್ ಕಾಂಗೋ (Congress Organisation) ಆಯಿತು. ತನ್ನ ಜನಪ್ರಿಯತೆ ಪುನಃ ಗಳಿಸಿಕೊಳ್ಳಲು ಇಂದಿರಾಗಾಂಧಿ ಬಾಂಗ್ಲಾ ವಿಮೋಚನಾ ಯುದ್ಧ ಮಾಡಿದರು. ಇದರಿಂದ ಅಪಾರ ಜನಪ್ರಿಯತೆ ಗಳಿಸಿ 1971–72ರ ಲೋಕಸಭಾ ಚುನಾವಣೆಯಲ್ಲಿ 342 ಸ್ಥಾನ ಗಳಿಸಿ ಪ್ರಧಾನಿಯಾಗಿ ಮುಂದುವರಿದರು. ಆದರೆ ಅವರ ವಿರುದ್ಧ ಸ್ಪರ್ಧಿಸಿದ್ದ ಸಮಾಜವಾದಿ ಪಕ್ಷದ ನಾಯಕ ರಾಜ್‌ನಾರಾಯಣ್ ಇಂದಿರಾಗಾಂಧಿ ವಿರುದ್ಧ ಚುನಾವಣಾ ಅಕ್ರಮದ ವಿಷಯವಾಗಿ ನ್ಯಾಯಾಲಯದಲ್ಲಿ ತಕರಾರು ಅರ್ಜಿ ಸಲ್ಲಿಸಿದರು. 1975ರ ಜೂನ್ 12ರಂದು ಅಲಹಾಬಾದ್ (ಈಗ ಪ್ರಯಾಗರಾಜ್) ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿದ್ದ ಜಸ್ಟಿಸ್ ಜಗಮೋಹನ್ ಲಾಲ್ ಸಿನ್ಹಾ ಅವರು ಐತಿಹಾಸಿಕ ತೀರ್ಪು



ನೀಡಿದರು. ತಕರಾರು ಅರ್ಜಿಯನ್ನು ಪುರಸ್ಕರಿಸಿ, ಇಂದಿರಾಗಾಂಧಿ ಚುನಾವಣೆಯಲ್ಲಿ ಅಕ್ರಮ ಎಸಗಿದ್ದಾರೆಂದೂ, ಸರಕಾರಿ ಯಂತ್ರದ ದುರುಪಯೋಗಪಡಿಸಿಕೊಂಡಿದ್ದಾರೆಂದೂ, ತೀರ್ಪು ನೀಡಿದರು. ಇಂದಿರಾಗಾಂಧಿಯ ಆಯ್ಕೆಯನ್ನು ರದ್ದುಪಡಿಸಿ; ಆರು ವರ್ಷಗಳ ಕಾಲ ಅವರು ಚುನಾವಣೆಯಲ್ಲಿ ಸ್ಪರ್ಧಿಸದಂತೆ ತೀರ್ಪು ನೀಡಿದರು. ಆಗ ಆಕೆ ಪ್ರಧಾನಿ ಪಟ್ಟಕ್ಕೆ ರಾಜೀನಾಮೆ ಕೊಡಬೇಕಾದ ಪರಿಸ್ಥಿತಿ ಏರ್ಪಟ್ಟಿತು.

342 ಸ್ಥಾನ ಗಳಿಸಿದ್ದ ಆಕೆ ಪಕ್ಷದ ಬೇರೊಬ್ಬ ಸಮರ್ಥ ನಾಯಕನನ್ನು ಪ್ರಧಾನಿಯನ್ನಾಗಿ ಮಾಡಬಹುದಾಗಿತ್ತು. ಆದರೆ ವಂಶವಾದ ಹಾಗೂ ಸರ್ವಾಧಿಕಾರಿ ಧೋರಣೆ ಆಕೆಯಲ್ಲಿ ಮಡುಗಟ್ಟಿತ್ತು. ಒಮ್ಮೆ ಗದ್ದುಗೆ ಬಿಟ್ಟು ಕೊಟ್ಟರೆ ಮತ್ತೆ ಸಿಗುವುದು ಅನುಮಾನ, ಹೇಗಾದರೂ ಮಾಡಿ ತಾನೇ ಪ್ರಧಾನಿ ಸ್ಥಾನದಲ್ಲಿ ಮುಂದುವರಿಯಬೇಕು, ಅಧಿಕಾರ ನೆಹರು ವಂಶಸ್ಥರ ಕೈಯಲ್ಲೇ ಸದಾಕಾಲಕ್ಕೂ ಇರಬೇಕು ಎಂಬ ಸರ್ವಾಧಿಕಾರಿ ಮನೋವೃತ್ತಿ ಪ್ರದರ್ಶಿಸಿದರು. ಅದಕ್ಕೆ ಅವರು ಅನುಸರಿಸಿದ ಮಾರ್ಗ, ನ್ಯಾಯಾಲಯದ ತೀರ್ಪನ್ನೇ ಧಿಕ್ಕರಿಸುವುದು, ಸಂವಿಧಾನವನ್ನೇ ತಿರುಚುವುದು. ಸರ್ವೋಚ್ಚ ನ್ಯಾಯಾಲಯದಲ್ಲಿ ಅವರ ಪಕ್ಷದ ಪ್ರಭಾವದಿಂದ ಪದೋನ್ನತಿ ಪಡೆದ ನ್ಯಾಯಾಧೀಶರನೇಕರಿದ್ದರು. ಮೂವರು ಸೀನಿಯರ್ ಜಡ್ಜ್‌ಗಳನ್ನು ಪಕ್ಕಕ್ಕೆ ಸರಿಸಿ ತನಗೆ ಅನುಕೂಲರಾದ ನ್ಯಾಯಾಧೀಶರನ್ನೇ ಮುಖ್ಯ ನ್ಯಾಯಾಧೀಶರನ್ನಾಗಿ ಪದೋನ್ನತಿ ಮಾಡಿದರು. ಈ ಅನೈತಿಕ ನಡೆಯ ವಿರುದ್ಧ ಪ್ರತಿಭಟಿಸಿ, ಜಸ್ಟಿಸ್ ಕೆ.ಎಸ್. ಹೆಗ್ಡೆ ಆದಿಯಾಗಿ ಮೂವರು ನ್ಯಾಯಾಧೀಶರು ರಾಜೀನಾಮೆ ನೀಡಿ ಹೊರನಡೆದಿದ್ದರು. ಸಂವಿಧಾನ ತಿದ್ದುಪಡಿ ಮಾಡಿ ಮೂಲಭೂತ ಹಕ್ಕುಗಳ ಹನನ ಮಾಡಲಾಯಿತು. ತಾನೇ ಪ್ರಧಾನಿ, ತಾನು ಅಧಿಕಾರ ಬಿಟ್ಟು ಕೊಡುವುದಿಲ್ಲ ಎಂದು ಘೋಷಿಸಿದರು. ಇತ್ತೀಚೆಗೆ ಪಶ್ಚಿಮ ಬಂಗಾಳದ ವಿಧಾನಸಭೆ ಚುನಾವಣೆಯಲ್ಲಿ ಮಮತಾ ಬ್ಯಾನರ್ಜಿ ಹೀನಾಯವಾಗಿ ಸೋತರೂ ತಾನು ಕುರ್ಚಿ ಬಿಟ್ಟು ಕೊಡುವುದಿಲ್ಲ ಎಂದು ಹಠ ಮಾಡಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಸರ್ವೋಚ್ಚ ನ್ಯಾಯಾಲಯ ಮಂಡಿಯೂರಿತು. ಇಂದಿರಾ ಪರವಾಗಿ ತೀರ್ಪು ಹೊರ ಬಂದಿತು. ಇಂದಿರಾಗಾಂಧಿ ಹಿಟ್ಲರ್‌ನಂತೆ, ಸರ್ವಾಧಿಕಾರಿಣಿಯಂತೆ, ವರ್ತಿಸಲಾರಂಭಿಸಿದರು. ಅದಕ್ಕೆ ಮೊದಲೇ ದೇಶದಲ್ಲಿ ಜೆ.ಪಿ. ನೇತೃತ್ವದಲ್ಲಿ ಲೋಕಸಂಘರ್ಷ ಸಮಿತಿ ರಚಿತವಾಗಿ ಜನಸಂಘ, ಎಡಪಕ್ಷಗಳು, ಸಮಾಜವಾದಿಗಳು, ಕಾಂಗ್ರೆಸ್ (O), ಸ್ವತಂತ್ರ ಪಾರ್ಟಿ ಸೇರಿ ಜನತಾ ಪಕ್ಷದ ಉದಯವಾಯಿತು. ಹಿಂದಿನ ಜನಸಂಘ ಜನತಾ ಪಕ್ಷದಲ್ಲಿ ವಿಲೀನಗೊಂಡಿತು. ದೇಶಾದ್ಯಂತ ಜೆ.ಪಿ.ಯವರ ಸಮಗ್ರ ಕ್ರಾಂತಿಯ ಆಂದೋಳನ ಬಿಸಿ ತಟ್ಟಲಾರಂಭಿಸಿತ್ತು. ಆಗ ನಡೆದ ಗುಜರಾತ್ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಸೋತಿತ್ತು. ಈ ಎಲ್ಲಾ ಘಟನಾವಳಿಗಳಿಂದ ಕಂಗೆಟ್ಟ ಇಂದಿರಾಗಾಂಧಿ ಜೆ.ಪಿ. ಆಂದೋಳನದ ಮೇಲೆ ನಿಷೇಧ ಹೇರಿದರು. ರಾ.ಸ್ವ.ಸಂಘದ ಮೇಲೂ ಪ್ರತಿಬಂಧ ಹೇರಿದರು. ಎಲ್ಲ ಪಕ್ಷಗಳ ನಾಯಕರನ್ನು, ಸರಸಂಘಚಾಲಕ ಬಾಳಾಸಾಹೇಬ್ ದೇವರಸ್, ಜಯಪ್ರಕಾಶ ನಾರಾಯಣ್, ಅಟಲ್ ಬಿಹಾರಿ ವಾಜಪೇಯಿ, ಲಾಲ್ ಕೃಷ್ಣ ಆಡ್ವಾಣಿ ಮುಂತಾದವರನ್ನು ಬಂಧಿಸಿ ಜೈಲಿಗಟ್ಟಲಾಯಿತು. ಪತ್ರಿಕಾ ಮಾಧ್ಯಮದ ಮೇಲೆ ನಿಯಂತ್ರಣ ಹೇರಿದರು. MISA (Maintenance of Internal Security Act) ಹೆಸರಿನಲ್ಲಿ ಅನೇಕರನ್ನು ವಿಚಾರಣೆಯಿಲ್ಲದೇ ಜೈಲಿನಲ್ಲಿರಿಸಲಾಯಿತು. ಆರ್.ಎಸ್.ಎಸ್. ಸುಮ್ಮನೆ ಕುಳಿತುಕೊಳ್ಳಲಿಲ್ಲ. ನವೆಂಬರ್ 14ರಂದು ದೇಶಾದ್ಯಂತ ಸತ್ಯಾಗ್ರಹಕ್ಕೆ ಕರೆ ನೀಡಿತು. ಬೃಹತ್ ಪ್ರತಿಭಟನೆ ನಡೆಯಿತು. ಲಕ್ಷಾಂತರ ಸಂಘ ಸ್ವಯಂಸೇವಕರು ಸತ್ಯಾಗ್ರಹ ಮಾಡಿ ಜೈಲು ಸೇರಿದರು. ಸ್ವಯಂಸೇವಕರ ಮೇಲೆ ಹಿಂಸಾತ್ಮಕ ಪೊಲೀಸ್ ದೌರ್ಜನ್ಯ ನಡೆಸಲಾಯಿತು. ಅನೇಕ ಕಾರ್ಯಕರ್ತರು ಹುತಾತ್ಮರಾದರು. ಅದೊಂದು ವ್ಯಾಪಕ ಜನಾಂದೋಳನವೇ ಆಗಿತ್ತು. ಗಾಬರಿಗೊಂಡ ಇಂದಿರಾಗಾಂಧಿ ತುರ್ತು ಪರಿಸ್ಥಿತಿಯನ್ನು ಹಿಂತೆಗೆದುಕೊಳ್ಳಬೇಕಾಯಿತು. 1977 ಮಾರ್ಚ್‌ನಲ್ಲಿ ಚುನಾವಣೆ ನಡೆದು ಇಂದಿರಾಗಾಂಧಿಯ ಕಾಂಗ್ರೆ ಪಕ್ಷ ಸೋತು ಜನತಾ ಪಕ್ಷದ ಸರಕಾರ ಅಧಿಕಾರಕ್ಕೇರಿತು. 18 ತಿಂಗಳ ಕಾರವಾಸ ಅನುಭವಿಸಿದ ಸತ್ಯಾಗ್ರಹಿಗಳ ಬಿಡುಗಡೆ ಆಯಿತು.

51 ವರ್ಷಗಳ ನಂತರವೂ ಈ ಕರಾಳ ಅಧ್ಯಾಯ, ಪ್ರಜಾಪ್ರಭುತ್ವದ ಕಗ್ಗೊಲೆ, ಸಂವಿಧಾನದ ನಾಶ, ಹಿಂಸೆ, ಜೈಲು ಎಲ್ಲ ನೆನಪುಗಳೂ ಪ್ರತಿವರ್ಷ ಜೂನ್ 25ರ ಹೊತ್ತಿಗೆ ಉಮ್ಮಳಿಸಿ ಬರುತ್ತವೆ. ಪ್ರಿಯಾಂಕ್ ಖರ್ಗೆಯಂಥ ಅಪ್ರಬುದ್ಧ ಕಾಂಗ್ರೆಸ್ ನಾಯಕರಿಗೆ ಇದರ ಅರಿವಿಲ್ಲ. ಕಳೆದ ನೂರು ವರ್ಷಗಳಲ್ಲಿ ಬ್ರಿಟಿಷರು, ನೆಹರೂ–ಇಂದಿರಾ ಕಾಂಗ್ರೆಸ್ ಯಾರೂ ಸಂಘದ ನೋಂದಣಿ ಬಗ್ಗೆ ಮಾತಾಡಿಲ್ಲ. ಸಂಘ ಒಂದು ಸಂಸ್ಥೆಯಲ್ಲ. ರಾಷ್ಟ್ರೀಯತೆಯ ಜಾಗೃತಿಯ ಆಂದೋಳನ. ಅದನ್ನು ಅರಿಯದ ಅಪ್ರಬುದ್ಧರು ಸಂಘ ನೋಂದಣಿ ಬಗ್ಗೆ ಮಾತನಾಡುತ್ತಾರೆ.

ಪ್ರಿಯಾಂಕ ಖರ್ಗೆ ಅವರಿಗೆ ಸಂವಿಧಾನದ ಒಂದು ಪಾಠ

• ಡಾ. ನಿರಂಜನ ಪೂಜಾರ, ಸಹಾಯಕ ಪ್ರಾಧ್ಯಾಪಕರು,
ಕಲ್ಬುರ್ಗಿ ಕೇಂದ್ರೀಯ ವಿಶ್ವವಿದ್ಯಾಲಯ



ರಾಷ್ಟ್ರೀಯ ಸ್ವಯಂಸೇವಕ ಸಂಘ ಎಲ್ಲಿಯೂ ನೋಂದಣಿಯಾಗಿಲ್ಲ, ಹಾಗಾಗಿ ಅದೊಂದು ನಿಗೂಢ ಸಂಸ್ಥೆ ಎಂಬ ಸಚಿವ ಪ್ರಿಯಾಂಕ ಖರ್ಗೆ ಅವರ ಇತ್ತೀಚಿನ ಹೇಳಿಕೆಯು ಮತ್ತು ಅವರ ಪತ್ರ ಕೇವಲ ಒಂದು ರಾಜಕೀಯ ಪ್ರಲಾಪವಾಗಿ ಉಳಿದಿಲ್ಲ, ಬದಲಾಗಿ ಅದು ಭಾರತೀಯ ಸಂವಿಧಾನದ ಮೂಲಭೂತ ಹಕ್ಕುಗಳ ವ್ಯಾಖ್ಯಾನ ಮತ್ತು ಭಾರತದ ಸಾಂಸ್ಕೃತಿಕ–ಸಾಂಸ್ಥಿಕ ಪರಂಪರೆಯ ಕುರಿತಾದ ಅವರ ಬೌದ್ಧಿಕ ದಾರಿದ್ರ್ಯವನ್ನು ಬೆತ್ತಲು ಮಾಡಿದೆ. ನೂರು ವರ್ಷಗಳ ಇತಿಹಾಸವಿರುವ, ದೇಶದ ಪ್ರತಿ ಹಳ್ಳಿಯಲ್ಲೂ ಬೇರೂರಿರುವ ಒಂದು ರಾಷ್ಟ್ರೀಯ ಚಳವಳಿಯನ್ನು ಕೇವಲ 'ನೋಂದಣಿ ಪ್ರಮಾಣಪತ್ರ'ದ ಕೊರತೆಯಿಂದ ಅಳೆಯಲು ಹೊರಟಿರುವುದು, ವಸಾಹತುಶಾಹಿ ಗುಲಾಮಿ ಮನಸ್ಥಿತಿಯ ಸ್ಪಷ್ಟ ಕುರುಹಾಗಿದೆ.

ಸಾಂವಿಧಾನಿಕ ಸಿಂಧುತ್ವ

ಸಂವಿಧಾನದ ಪಾಠ ಮಾಡುವವರು ಸಂವಿಧಾನದ ವಿಧಿಗಳನ್ನು ಸರಿಯಾಗಿ ಓದಿಕೊಳ್ಳಬೇಕು. ಭಾರತೀಯ ಸಂವಿಧಾನದ ಅನುಚ್ಛೇದ 19(1)(ಸಿ) ಪ್ರತಿಯೊಬ್ಬ ನಾಗರಿಕನಿಗೂ 'ಸಂಘ–ಸಂಸ್ಥೆಗಳನ್ನು ರಚಿಸಿಕೊಳ್ಳುವ ಸ್ವಾತಂತ್ರ್ಯ'ವನ್ನು ಒಂದು ಪರಮೋಚ್ಚ ಮೂಲಭೂತ ಹಕ್ಕಾಗಿ ಖಾತರಿಪಡಿಸಿದೆ. ಕಾನೂನುಶಾಸ್ತ್ರದ ಪ್ರಕಾರ ಯಾವುದೇ ಒಂದು ಸಂಘಟನೆ ಅಥವಾ ಸಮೂಹ ಅಸ್ತಿತ್ವಕ್ಕೆ ಬರಲು ಸರ್ಕಾರದ ಅಧಿಕೃತ ನೋಂದಣಿ ಕಡ್ಡಾಯವಲ್ಲ. ಸೊಸೈಟೀಸ್ ಕಾಯ್ದೆ ಅಥವಾ ಟ್ರಸ್ಟ್ ಕಾಯ್ದೆಯಡಿ ನೋಂದಣಿ ಮಾಡಿಕೊಳ್ಳುವುದು ಕೇವಲ ಬ್ಯಾಂಕ್ ಖಾತೆ ತೆರೆಯಲು, ಸರ್ಕಾರದ ಅನುದಾನ ಪಡೆಯಲು, ಆಸ್ತಿ ಖರೀದಿಸಲು ಅಥವಾ ತೆರಿಗೆ ವಿನಾಯಿತಿ ಪಡೆಯಲು ರೂಪಿಸಲಾದ ಆಡಳಿತಾತ್ಮಕ ವ್ಯವಸ್ಥೆಯೇ ಹೊರತು ಸಂಘಟನೆಯ ಸಾಂವಿಧಾನಿಕ ಸಿಂಧುತ್ವವನ್ನು ನಿರ್ಧರಿಸುವ ಅಂತಿಮ ಮಾನದಂಡವಲ್ಲ. ಸಾರ್ವಜನಿಕ ಸುವ್ಯವಸ್ಥೆ ಮತ್ತು ರಾಷ್ಟ್ರದ ಸಾರ್ವಭೌಮತೆಗೆ ಧಕ್ಕೆ ತರದ ಯಾವುದೇ ಅನೋಂದಾಯಿತ ಸಮೂಹವು ಸಂಪೂರ್ಣವಾಗಿ ಸಂವಿಧಾನಬದ್ಧವಾಗಿಯೇ ಕಾರ್ಯಾಚರಿಸುತ್ತದೆ. ಈ ಕನಿಷ್ಠ ಜ್ಞಾನವಿಲ್ಲದೆ ಆರ್‌ಎಸ್‌ಎಸ್ ಅನ್ನು ನಿಗೂಢ ಸಂಘಟನೆ ಎನ್ನುವುದು ಸಂವಿಧಾನದ ಆಶಯಕ್ಕೇ ಮಾಡುವ ಘೋರ ಅಪಚಾರ.

ತುರ್ತುಪರಿಸ್ಥಿತಿ

ಇನ್ನು ಆರ್‌ಎಸ್‌ಎಸ್ ಅನ್ನು ಸಂವಿಧಾನ ವಿರೋಧಿ ಎಂದು ಬಿಂಬಿಸುವ ಮುನ್ನ ಇತಿಹಾಸದ ಪುಟಗಳನ್ನು ಒಮ್ಮೆ ತಿರುವಿಹಾಕಬೇಕು. 1975ರಲ್ಲಿ ಸಂವಿಧಾನದ ರಕ್ಷಣೆಗಾಗಿ ಬೀದಿಗಿಳಿದು ಹೋರಾಡಿದ ಅತಿದೊಡ್ಡ ಶಕ್ತಿ ಸಂಘ. ಅಂದು ಸಂವಿಧಾನದ ಕುತ್ತಿಗೆ ಹಿಸುಕಿದವರ ವಾರಸುದಾರರು ಇಂದು ಅದೇ ಸಂವಿಧಾನವನ್ನು ರಕ್ಷಿಸಲು ಪ್ರಾಣ ಪಣಕ್ಕಿಟ್ಟ ಸಂಘಟನೆಗೆ ಸಂವಿಧಾನದ ಪಾಠ ಮಾಡಲು ಹೊರಟಿರುವುದು ಶತಮಾನದ ಬಹುದೊಡ್ಡ ವ್ಯಂಗ್ಯ!

ವಸಾಹತುಶಾಹಿ ಮಾನದಂಡ

ಭಾರತೀಯ ಸಮಾಜಶಾಸ್ತ್ರದ ಹಿನ್ನೆಲೆಯಲ್ಲಿ ನೋಡಿದಾಗ ಪ್ರತಿಯೊಂದು ಸಾಮಾಜಿಕ ಗುಂಪನ್ನೂ 'ನೋಂದಣಿ'ಯೆಂಬ ಕಟ್ಟುಪಾಡಿಗೆ ಒಳಪಡಿಸುವ ಕಲ್ಪನೆಯೇ ಬ್ರಿಟಿಷ್ ಕಣ್ಗಾವಲು ವ್ಯವಸ್ಥೆಯ ಕೊಡುಗೆ. ಆದರೆ ಭಾರತೀಯ ನಾಗರಿಕತೆ ಅನಾದಿ ಕಾಲದಿಂದಲೂ ವಿಕೇಂದ್ರೀಕೃತ ಹಾಗೂ ಅನೌಪಚಾರಿಕ ಸಂಸ್ಥೆಗಳ ಮೂಲಕವೇ ಬೆಳೆದಿದೆ.

ನಮ್ಮ ಸಾವಿರಾರು ಮಠಮಾನ್ಯಗಳು, ಪ್ರಾಚೀನ ವೇದ ಪಾಠಶಾಲೆಗಳು, ಹಳ್ಳಿಗಳ ಭಜನಾ ಮಂಡಳಿಗಳು ಅಥವಾ ಕೋಟ್ಯಂತರ ರೂಪಾಯಿಗಳ ವಹಿವಾಟು ನಡೆಯುವ ಊರ ಜಾತ್ರಾ ಸಮಿತಿಗಳು ಯಾವುದೇ ಬ್ರಿಟಿಷ್ ಕಾಯ್ದೆಯಡಿ ಹುಟ್ಟಿಕೊಂಡಿಲ್ಲ. ಇವು ಸಮಾಜದ ವಿಶ್ವಾಸ, ಧರ್ಮ ಮತ್ತು ಸಾಮೂಹಿಕ ಸಹಕಾರದ ಆಧಾರದ ಮೇಲೆ ಸ್ವಯಂ ನಿಯಂತ್ರಿತವಾಗಿ ನಡೆಯುವ ಸಾವಯವ ವ್ಯವಸ್ಥೆಗಳು. ಆರ್‌ಎಸ್‌ಎಸ್ ಕೂಡ ಇದೇ ಮಣ್ಣಿನ ಗುಣವಿರುವ ಒಂದು ಬೃಹತ್ ಕೌಟುಂಬಿಕ ವ್ಯವಸ್ಥೆಯಾಗಿದ್ದು, ಅದನ್ನು ಕೇವಲ ಕಾಗದದ ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ಮೂಲಕ ಅಳೆಯುವುದು ಭಾರತೀಯ ಪರಂಪರೆಗೆ ಮಾಡುವ ಅವಮಾನ.

ಪಾರದರ್ಶಕತೆ ಮತ್ತು ಆರ್ಥಿಕ ಸ್ವಾಯತ್ತತೆ

ಆರ್‌ಎಸ್‌ಎಸ್ ಕಾನೂನನ್ನು ಉಲ್ಲಂಘಿಸುತ್ತದೆ ಅಥವಾ ಗುಪ್ತವಾಗಿ ಕಾರ್ಯಾಚರಿಸುತ್ತದೆ ಎಂಬುದು ಮತ್ತೊಂದು ಬೌದ್ಧಿಕ ಸುಳ್ಳು. ಆರ್‌ಎಸ್‌ಎಸ್ ಎಂಬುದು ಒಂದು ಸೈದ್ಧಾಂತಿಕ ಪ್ರವಾಹ. ಆದರೆ ಎಲ್ಲಿ ಭೌತಿಕ ಮತ್ತು ಆರ್ಥಿಕ ವ್ಯವಹಾರಗಳ ಪ್ರಶ್ನೆ ಬರುತ್ತದೆಯೋ ಅಲ್ಲಿ ಸಂಘವು ಕಟ್ಟುನಿಟ್ಟಾಗಿ ಕಾನೂನನ್ನು ಪಾಲಿಸುತ್ತದೆ. ದೇಶಾದ್ಯಂತ ಇರುವ ಸಂಘ ಕಾರ್ಯಾಲಯಗಳು ಮತ್ತು ಜಮೀನುಗಳು ಅಧಿಕೃತವಾಗಿ ನೋಂದಾಯಿತವಾದ ಟ್ರಸ್ಟ್‌ಗಳ ಸುಪರ್ದಿಯಲ್ಲಿವೆ ಮತ್ತು ಅವು ಪ್ರತಿವರ್ಷ ಲೆಕ್ಕಪರಿಶೋಧನಾ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸುತ್ತವೆ. ಅಷ್ಟೇ ಅಲ್ಲದೆ ಸಂಘದ ಪ್ರೇರಣೆಯಿಂದ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿರುವ ಅಂಗಸಂಸ್ಥೆಗಳೆಲ್ಲವೂ ಸೊಸೈಟೀಸ್ ಅಥವಾ ಟ್ರಸ್ಟ್ ಕಾಯ್ದೆಯಡಿ ನೋಂದಣಿಯಾದ ಕಾನೂನುಬದ್ಧ ಸಂಸ್ಥೆಗಳೇ ಆಗಿವೆ. ಯಾವುದೇ ಬಾಹ್ಯ ಆರ್ಥಿಕ ಸಹಾಯವಿಲ್ಲದೆ, ಕೇವಲ ತನ್ನ ಸ್ವಯಂಸೇವಕರು ಪ್ರತಿ ವರ್ಷ ಅತ್ಯಂತ ಪಾರದರ್ಶಕವಾಗಿ ನೀಡುವ ಗುರುದಕ್ಷಿಣೆಯೆಂಬ ವ್ಯವಸ್ಥೆಯಿಂದ ನಡೆಯುವ ಸಂಘಟನೆಗೆ ಸರ್ಕಾರದ ಮಾನ್ಯತೆಗಾಗಿ ಹಂಬಲಿಸುವ ದರ್ದು ಇರುವುದಿಲ್ಲ.

ಪ್ರಬುದ್ಧ ರಾಜಕಾರಣದ ಅಗತ್ಯ

ಸಂವಿಧಾನವನ್ನು ಕೇವಲ ಓದುವುದಕ್ಕಿಂತ, ಅದರ ತಾತ್ವಿಕ ಆಶಯವನ್ನು ಗ್ರಹಿಸುವುದೇ ಪ್ರಬುದ್ಧ ರಾಜಕಾರಣದ ಲಕ್ಷಣ. ಒಂದು ಸಂಘಟನೆಯ ಶ್ರೇಷ್ಠತೆಯು ರಿಜಿಸ್ಟ್ರಾರ್ ಕಚೇರಿಯ ಕಡತದಲ್ಲಿರುವ ಪ್ರಮಾಣಪತ್ರದಿಂದ ನಿರ್ಧಾರವಾಗುವುದಿಲ್ಲ.

ಕಾಗದದಲ್ಲಿ ರಿಜಿಸ್ಟರ್ ಆಗಿ, ವಿದೇಶಿ ಫಂಡ್ ತಂದು, ದೇಶವಿಭಜಕ ಕೃತ್ಯಗಳಲ್ಲಿ ತೊಡಗುವ ಎನ್‌ಜಿಓಗಳ ಬೆನ್ನಿಗೆ ನಿಲ್ಲುವವರಿಗೆ ಆರ್‌ಎಸ್‌ಎಸ್‌ನಂತಹ ನೈಜ ಸಾಂವಿಧಾನಿಕ ಮತ್ತು ಸಾಮಾಜಿಕ ಶಕ್ತಿಯ ಮಹತ್ವ ಅರ್ಥವಾಗುವುದು ಕಷ್ಟ. ರಾಜಕೀಯ ಭಿನ್ನಾಭಿಪ್ರಾಯಗಳು ಏನೇ ಇರಲಿ ಸಂವಿಧಾನ ಮತ್ತು ಇತಿಹಾಸದ ಕುರಿತ ಚರ್ಚೆಗಳು ಬೌದ್ಧಿಕ ಎತ್ತರದಲ್ಲಿರಬೇಕೇ ಹೊರತು ಆಧಾರರಹಿತ ಪ್ರಲಾಪಗಳಾಗಿರಬಾರದು.

ಯೋಗದಿನದಲ್ಲಿ ಭಾಗಿ | ಯೋಜನೆಗೆ ಚಾಲನೆ

ಇಂದು ಪ.ಬಂಗಾಳಕ್ಕೆ ಪ್ರಧಾನಿ ಮೋದಿ ಭೇಟಿ

• **ಕೋಲ್ಕತ್ತಾ:** ಪ್ರಧಾನಿ ನರೇಂದ್ರ ಮೋದಿಯವರು ಎರಡು ದಿನಗಳ ಪಶ್ಚಿಮ ಬಂಗಾಳ ಪ್ರವಾಸದಲ್ಲಿದ್ದು, ಶನಿವಾರ ಕೃಷಿ ಕಲ್ಯಾಣ ಹಾಗೂ ರಕ್ಷಣಾ ಯೋಜನೆಗಳ ಸಹಿತ ಹಲವು ಅಭಿವೃದ್ಧಿ ಯೋಜನೆಗಳ ಲೋಕಾರ್ಪಣೆ ಮಾಡಲಿದ್ದಾರೆ. ಭಾನುವಾರ ಸಾರ್ವಜನಿಕರ ಜತೆ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.

ವಿಧಾನಸಭಾ ಚುನಾವಣೆಯ ಬಳಿಕ ಪಶ್ಚಿಮ ಬಂಗಾಳಕ್ಕೆ ಮೋದಿಯವರ ಮೊದಲ ಭೇಟಿ ಇದಾಗಿದೆ.

ಅಭಿವೃದ್ಧಿ, ಕೃಷಿ, ರಾಷ್ಟ್ರೀಯ ಭದ್ರತೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಒಳಗೊಂಡಿರುವ ವ್ಯಾಪಕ ಯೋಜನೆಗಳಿಗಾಗಿ ಪಶ್ಚಿಮ ಬಂಗಾಳವನ್ನು ಆಯ್ಕೆ ಮಾಡುವ ಮೂಲಕ, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ರಾಜ್ಯದ ಮೇಲಿನ ತನ್ನ ಬದ್ಧತೆಯನ್ನು ಒತ್ತಿಹೇಳಲು ಹಾಗೂ ರೈತರು, ಯುವಜನತೆ ಮತ್ತು ಮಧ್ಯಮ ವರ್ಗ ಸೇರಿದಂತೆ ಪ್ರಮುಖ ಮತದಾರ ವರ್ಗಗಳೊಂದಿಗೆ ತನ್ನ ಸಂಪರ್ಕ ಬಲಪಡಿಸಲು ಪ್ರಯತ್ನಿಸುತ್ತಿದೆ ಎಂದು ರಾಜ್ಯ ಬಿಜೆಪಿ ನಾಯಕ ಹೇಳಿದ್ದಾರೆ.

ಮೀನುಗಾರಿಕಾ ಬಂದರು ಉದ್ಘಾಟನೆ: ಮೀನುಗಾರರು ಮತ್ತು ವ್ಯಾಪಾರಿಗಳಿಗೆ ಸುಧಾರಿತ ಮಾರುಕಟ್ಟೆ ಸೌಲಭ್ಯಕ್ಕಾಗಿ ಮೀನುಗಾರಿಕಾ ಮೂಲಸೌಕರ್ಯವನ್ನು ಕೇಂದ್ರ ಸರ್ಕಾರ ಉತ್ತೇಜಿಸಲಿದೆ. ಸೌತ್ 24 ಪರಗಣಾಸ್‌ನಲ್ಲಿ ಮೀನುಗಾರಿಕೆ ವಿಸ್ತರಿಸಲಾಗುವುದು. ಬಿರಭೂಮ್‌ನ ಸೈಂಥಿಯಾದಲ್ಲಿ ನೂತನ ಮೀನು ಮಾರುಕಟ್ಟೆ ನಿರ್ಮಿಸಲಾಗಿದೆ.

ಈ ಬಾರಿ ಕೋಲ್ಕತ್ತಾದಲ್ಲಿ ಯೋಗ: ಪ್ರತಿ ವರ್ಷವೂ ಮೋದಿ ವಿಭಿನ್ನ ನಗರಗಳಲ್ಲಿ ಅಂತಾರಾಷ್ಟ್ರೀಯ ಯೋಗ ದಿನವನ್ನು ಸಾರ್ವಜನಿಕರ ಜತೆ ಆಚರಿಸುತ್ತಾರೆ. ಈ ಬಾರಿ ಕೋಲ್ಕತ್ತಾದಲ್ಲಿ ಪ್ರಧಾನಿ ನೇತೃತ್ವದಲ್ಲಿ ಆರೋಗ್ಯಕ್ಕಾಗಿ ಯೋಗ ಎಂಬ ಥೀಮ್‌ನಲ್ಲಿ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಆಯೋಜಿಸಲಾಗುವುದು. ಇದೇ ಮೊದಲ ಬಾರಿಗೆ ರಾಜ್ಯದಲ್ಲಿ ಮೋದಿ ನೇತೃತ್ವದ ಪ್ರಮುಖ ಯೋಗ ದಿನಾಚರಣೆ ಕಾರ್ಯಕ್ರಮ ನಡೆಯಲಿದೆ.

3 ಯುದ್ಧನೌಕೆಗಳ ನಿಯೋಜನೆ: ಭಾನುವಾರ ಪ್ರಧಾನಿ ಮೋದಿ ಮೂರು ಯುದ್ಧನೌಕೆಗಳನ್ನು ನೌಕಾಸೇನೆಯಲ್ಲಿ ನಿಯೋಜಿಸಲಿದ್ದಾರೆ. ಇವುಗಳು ಸಾಗರೋತ್ತರ ಯುದ್ಧ, ಹೈಡ್ರೋಗ್ರಾಫಿಕ್ ಸರ್ವೆ ಹಾಗೂ ಜಲಾಂತರ್ಗಾಮಿ ವಿರೋಧಿ ಸಾಮರ್ಥ್ಯ ಹೊಂದಿವೆ.

ಫುಟ್‌ಪಾತ್‌ನಲ್ಲಿ ನಡೆ ಮೂಲಭೂತ ಹಕ್ಕು

• **ಹೊಸದಿಲ್ಲಿ:** ಸುರಕ್ಷಿತವಾಗಿ ಹಾಗೂ ನಿರಾತಂಕವಾಗಿ ಫುಟ್‌ಪಾತ್‌ನಲ್ಲಿ ನಡೆಯುವುದು ಪ್ರತಿಯೊಬ್ಬ ನಾಗರಿಕನ ಮೂಲಭೂತ ಹಕ್ಕು ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ. ವಾಹನಗಳ ಸಂಚಾರದ ಸೌಲಭ್ಯಕ್ಕಿಂತ ಪಾದಚಾರಿಗಳು ಫುಟ್‌ಪಾತ್‌ನಲ್ಲಿ ನಡೆಯುವ ಹಕ್ಕಿಗೇ ಮೊದಲ ಆದ್ಯತೆ ನೀಡಬೇಕು ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ.

ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಅತುಲ್ ಎಸ್. ಚಾಂದೂರ್ಕರ್ ಅವರ ನ್ಯಾಯಪೀಠ ಈ ತೀರ್ಪು ನೀಡಿದ್ದು, ನಡೆಯುವ ಹಕ್ಕು ಸಂವಿಧಾನದ 19(1)(ಡಿ) ವಿಧಿಯಲ್ಲಿ ಖಾತರಿಪಡಿಸಿರುವ ಮುಕ್ತ ಸಂಚಾರದ ಹಕ್ಕಿನ ಅವಿಭಾಜ್ಯ ಅಂಗವಾಗಿದೆ. ಜತೆಗೆ ಸಂವಿಧಾನದ 19 ಮತ್ತು 21ನೇ ವಿಧಿಗಳ ಅಡಿಯಲ್ಲಿ ಇದು ರಕ್ಷಣೆ ಪಡೆದಿದೆ ಎಂದು ಹೇಳಿದೆ.

ರಸ್ತೆಯೊಂದು ಅಸ್ತಿತ್ವದಲ್ಲಿದ್ದರೆ, ಅದರ ಪಕ್ಕದಲ್ಲಿ ಪಾದಚಾರಿಗಳಿಗಾಗಿ ಪ್ರತ್ಯೇಕವಾಗಿ ಗುರುತಿಸಲಾದ ಮತ್ತು ಸುಸ್ಥಿತಿಯಲ್ಲಿ ನಿರ್ವಹಿಸಲಾದ ಫುಟ್‌ಪಾತ್ ಇರಲೇಬೇಕು. ಇದನ್ನು ಒದಗಿಸುವುದು ಆಡಳಿತ ವ್ಯವಸ್ಥೆಯ ಜಾಗರೂಕತೆಯ ಕರ್ತವ್ಯವಾಗಿದೆ. ಫುಟ್‌ಪಾತ್‌ನಲ್ಲಿ ನಡೆಯುವ ನಾಗರಿಕನ ಮೂಲಭೂತ ಹಕ್ಕು ಯಾಂತ್ರಿಕ ವಾಹನಗಳ ಸಂಚಾರದ ಸೌಲಭ್ಯಕ್ಕಿಂತ ಮಿಗಿಲಾದುದು ಎಂದು ನ್ಯಾಯಪೀಠ ಹೇಳಿದೆ.

ಚಕ್ರಗಳು ಮನುಷ್ಯನನ್ನೇ ಬದಿಗೆ ತಳ್ಳಿವೆ: ನಗರಗಳು ಮತ್ತು ಪಟ್ಟಣಗಳ ಯೋಜನೆಯಲ್ಲಿ ದೀರ್ಘಕಾಲದಿಂದ ವಾಹನಗಳಿಗೆ ಹೆಚ್ಚಿನ ಮಹತ್ವ ನೀಡಲಾಗಿದ್ದು, ಪಾದಚಾರಿಗಳನ್ನು ಕಡೆಗಣಿಸಲಾಗಿದೆ ಎಂದು ನ್ಯಾಯಾಲಯ ಅಸಮಾಧಾನ ವ್ಯಕ್ತಪಡಿಸಿದೆ.

ಚಕ್ರಗಳ ಮೇಲಿನ ಸಂಚಾರವೇ ನಮ್ಮ ಕಲ್ಪನೆಯನ್ನು ಆವರಿಸಿಕೊಂಡ ಪರಿಣಾಮವಾಗಿ, ನಗರಾಡಳಿತಗಳು ವಾಹನಗಳಿಗೆ ಅನುಕೂಲಕರವಾದ ರಸ್ತೆಗಳ ನಿರ್ಮಾಣದಲ್ಲೇ ತೊಡಗಿಕೊಂಡಿವೆ. ಫುಟ್‌ಪಾತ್‌ಗಳು ವಾಹನಗಳ ಅತಿಕ್ರಮಣಕ್ಕೆ ಒಳಗಾಗಿದ್ದು, ಪಾದಚಾರಿಗಳನ್ನೇ ವಾಹನ ಚಾಲಕರಿಗೆ ತೊಂದರೆ ಉಂಟುಮಾಡುವವರಂತೆ ಕಾಣಲಾಗುತ್ತಿದೆ. ಈ ಮನೋಭಾವ ಇನ್ನು ಮುಂದೆ ನಿಲ್ಲಬೇಕು ಎಂದು ನ್ಯಾಯಪೀಠ ಖಡಕ್ ಸಂದೇಶ ನೀಡಿದೆ.

ಯಾರ ಹೊಣೆ?: ಫುಟ್‌ಪಾತ್‌ಗಳನ್ನು ಗುರುತಿಸುವುದು, ನಿರ್ಮಿಸುವುದು, ನಿರ್ವಹಿಸುವುದು ಮತ್ತು ಅತಿಕ್ರಮಣದಿಂದ ರಕ್ಷಿಸುವ ಹೊಣೆ ನಗರಾಭಿವೃದ್ಧಿ ಪ್ರಾಧಿಕಾರಗಳು, ಮಹಾನಗರ ಪಾಲಿಕೆಗಳು, ನಗರಸಭೆಗಳು, ಪುರಸಭೆಗಳು ಹಾಗೂ ಗ್ರಾಮ ಪಂಚಾಯಿತಿಗಳ ಮೇಲಿದೆ ಎಂದು ನ್ಯಾಯಾಲಯ ಹೇಳಿದೆ.

ನೀಟ್ ಮರುಪರೀಕ್ಷೆ, ಸಂಪೂರ್ಣ ಸುರಕ್ಷತೆ

ನಾಳೆ ನೀಟ್(ಯುಜಿ) ಮರುಪರೀಕ್ಷೆ

22.79 ಲಕ್ಷ ವಿದ್ಯಾರ್ಥಿಗಳ ನೋಂದಣಿ

- ಎನ್‌ಟಿಎ, ಕೇಂದ್ರ ಸರ್ಕಾರದಿಂದ ಹಲವು ಮುನ್ನೆಚ್ಚರಿಕಾ ಕ್ರಮ
- 551 ದೇಶೀಯ, 14 ವಿದೇಶಿ ನಗರಗಳಲ್ಲಿ ಮರುಪರೀಕ್ಷೆ



22.79 ಲಕ್ಷ-ನೀಟ್ ಪರೀಕ್ಷಾರ್ಥಿಗಳು

14 ವಿದೇಶಿ ಪರೀಕ್ಷಾ ನಗರಗಳು

551 ಭಾರತದ ಪರೀಕ್ಷಾ ನಗರಗಳು

ಜೂ.22ರವರೆಗೆ ಟೆಲಿಗ್ರಾಮ್ ನಿಷೇಧ

ಪ್ರಶ್ನೆಪತ್ರಿಕೆ ಸೋರಿಕೆಯಿಲ್ಲದೆ ಜೂ.21ರಂದು ನೀಟ್ ಮರುಪರೀಕ್ಷೆಯನ್ನು ನಡೆಸಬೇಕೆಂಬ ಉದ್ದೇಶದಿಂದ ಕೇಂದ್ರ ಸರ್ಕಾರ ಜೂ.22ರವರೆಗೆ ಟೆಲಿಗ್ರಾಮ್ ಮೆಸೆಂಜರ್ ಆ್ಯಪ್ ಮೇಲೆ ತಾತ್ಕಾಲಿಕ ನಿಷೇಧವನ್ನು ಹೇರಿದೆ. ಎನ್‌ಟಿಎ ಪ್ರಕಾರ, ಟೆಲಿಗ್ರಾಮ್ ಅನ್ನು ದುರುಪಯೋಗ ಮಾಡಿಕೊಂಡು ಅಪರಾಧಿಗಳು ನಕಲಿ ಪ್ರಶ್ನೆಪತ್ರಿಕೆ ಮೂಲಕ ಅಭ್ಯರ್ಥಿಗಳ ದಾರಿ ತಪ್ಪಿಸುವ ಹಲವು ಚಾನೆಲ್‌ಗಳಿದ್ದವು. 200ಕ್ಕೂ ಅಧಿಕ ಚಾನೆಲ್‌ಗಳನ್ನು ಕೇಂದ್ರ ಸರ್ಕಾರ ಆ್ಯಪ್‌ನಿಂದ ತೆರವುಗೊಳಿಸಿದೆ. ಪೇಪರ್ ಲೀಕ್ಡ್ ನೀಟ್, ರಿ-ನೀಟ್ 2026 ಮತ್ತು ಪ್ರೈವೇಟ್ ಮಾಫಿಯಾ ಹೆಸರಿನ ಚಾನೆಲ್‌ಗಳು, ಬಾಟ್ ಪ್ರೊಫೈಲ್‌ಗಳು ನಕಲಿ ಪ್ರಶ್ನೆಪತ್ರಿಕೆ ಮಾರಾಟ ಮಾಡುತ್ತಿದ್ದವು ಎಂದು ತಿಳಿದುಬಂದಿದೆ.

ನೀಟ್(ಯುಜಿ) 2026 ಮರುಪರೀಕ್ಷೆಯನ್ನು 2026ರ ಜೂ.21ರಂದು ನಿಗದಿಯಂತೆ ನಡೆಸಲಾಗುತ್ತದೆ. ಇಲ್ಲಿಯವರೆಗೆ ತೆಗೆದುಕೊಳ್ಳಲಾದ ಕ್ರಮಗಳಿಂದ ಪರೀಕ್ಷಾ ಭದ್ರತೆಗೆ ಯಾವುದೇ ಧಕ್ಕೆಯಾಗಿಲ್ಲ. 22.79 ಲಕ್ಷ ಪರೀಕ್ಷಾರ್ಥಿಗಳು ನೀಟ್ ಮರುಪರೀಕ್ಷೆ ಬರೆಯಲಿದ್ದಾರೆ. ನ್ಯಾಯಸಮ್ಮತ, ಸುರಕ್ಷಿತ ಮತ್ತು ವಿಶ್ವಾಸಾರ್ಹ ಪರೀಕ್ಷೆ ನಡೆಸುವ ತನ್ನ ಬದ್ಧತೆಯನ್ನು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ(ಎನ್‌ಟಿಎ) ಪುನರುಚ್ಚರಿಸುತ್ತದೆ. ಈ ಬಾರಿ ಯಾವುದೇ ಸೋರಿಕೆ ಅಥವಾ ತಪ್ಪುಗಳು ಆಗದಂತೆ ನೋಡಿಕೊಳ್ಳಲು ಎನ್‌ಟಿಎ ಮತ್ತು ಕೇಂದ್ರ ಸರ್ಕಾರ ಹಲವು ಸುರಕ್ಷತಾ ಕ್ರಮಗಳನ್ನು ತೆಗೆದುಕೊಂಡಿವೆ. ಟೆಲಿಗ್ರಾಮ್ ಮೇಲೆ ತಾತ್ಕಾಲಿಕ ನಿಷೇಧ, ಐಎಎಫ್ ಹೆಲಿಕಾಪ್ಟರ್‌ಗಳ ಮೂಲಕ ಪ್ರಶ್ನೆಪತ್ರಿಕೆಗಳ ಸಾಗಣೆ, ಪೇಪರ್ ಸೆಟ್ಟರ್ಸ್ ಲಾಕ್‌ಡೌನ್, ಕೇಂದ್ರ ಸಶಸ್ತ್ರ ಪೊಲೀಸ್ ಪಡೆ ಸಿಬ್ಬಂದಿ ನಿಯೋಜನೆ ಇತ್ಯಾದಿ ಕ್ರಮಗಳನ್ನು ತೆಗೆದುಕೊಂಡಿದ್ದು, ಪರೀಕ್ಷಾ ಕೇಂದ್ರಗಳಲ್ಲಿ ಭದ್ರತಾ ಸಿಬ್ಬಂದಿ ಕಣ್ಗಾವಲು ನಡೆಸುತ್ತಾರೆ. ಕೇಂದ್ರ ಸರ್ಕಾರ ಮತ್ತು ಎನ್‌ಟಿಎ ತೆಗೆದುಕೊಂಡ ಸುರಕ್ಷತಾ ಕ್ರಮಗಳು ಹಾಗೂ ಪರೀಕ್ಷಾರ್ಥಿಗಳಿಗೆ ನೀಡಿದ ಮಾರ್ಗಸೂಚಿಗಳೇನು? ಇಲ್ಲಿದೆ ಸಂಕ್ಷಿಪ್ತ ಮಾಹಿತಿ.

ಪ್ರಶ್ನೆಪತ್ರಿಕೆ ಸಾಗಣೆಗೆ ಸಿ-17 ಗ್ಲೋಬ್‌ಮಾಸ್ಟರ್!

ರಹಸ್ಯ ಪ್ರಶ್ನೆಪತ್ರಿಕೆಗಳನ್ನು ಭಾರತೀಯ ವಾಯುಪಡೆಯ ಸಿ-17 ಗ್ಲೋಬ್‌ಮಾಸ್ಟರ್ ಸರಕು ವಿಮಾನಗಳ ಮೂಲಕ ದೇಶದ ಸುಮಾರು 18ರಿಂದ 20 ಪ್ರಾದೇಶಿಕ ಕೇಂದ್ರಗಳಿಗೆ ಸಾಗಿಸಲು ವ್ಯವಸ್ಥೆ ಮಾಡಲಾಗಿದೆ. ರಸ್ತೆ ಸಂಪರ್ಕ ಕಡಿಮೆ ಇರುವ ಹಾಗೂ ದುರ್ಗಮ ಪ್ರದೇಶಗಳಿಗೆ ಎಂಐ-17 ಹೆಲಿಕಾಪ್ಟರ್‌ಗಳನ್ನು ಬಳಸಲಾಗುತ್ತಿದೆ. 674 ನಗರ ಸಂಯೋಜಕರು ಹಾಗೂ 6,669 ಸ್ವತಂತ್ರ ವೀಕ್ಷಕರು ಪರೀಕ್ಷಾ ಪ್ರಕ್ರಿಯೆಯ ಮೇಲ್ವಿಚಾರಣೆ ನಡೆಸಲಿದ್ದಾರೆ ಎಂದು ಎನ್‌ಟಿಎ ತಿಳಿಸಿದೆ. ಕೆಲವೆಡೆಗಳಲ್ಲಿ ಪ್ರಶ್ನೆಪತ್ರಿಕೆಗಳನ್ನು ಐಎಎಫ್ ಹೆಲಿಕಾಪ್ಟರ್‌ಗಳನ್ನು ಬಳಸಿ ಏರ್‌ಲಿಫ್ಟ್ ಮಾಡಲಾಗಿದ್ದು, ಯಾವುದೇ ಸೋರಿಕೆ ಆಗದಿರಲು ಕೇಂದ್ರ ಸರ್ಕಾರ ಈ ಸುರಕ್ಷತಾ ಕ್ರಮ ತೆಗೆದುಕೊಂಡಿದೆ ಎಂದು ವರದಿ ಹೇಳಿದೆ.

ನೀಟ್ ಪೇಪರ್ ಸೆಟ್ಟರ್‌ಗಳ ಲಾಕ್‌ಡೌನ್

ಯಾವುದೇ ಪ್ರಶ್ನೆಪತ್ರಿಕೆಗಳ ಸೋರಿಕೆಯನ್ನು ತಡೆಗಟ್ಟಲು ನೀಟ್ ಪೇಪರ್ ಸೆಟ್ಟರ್‌ಗಳನ್ನು ಕಟ್ಟುನಿಟ್ಟಾದ ಲಾಕ್‌ಡೌನ್‌ಗೆ ಒಳಪಡಿಸಲಾಗಿದೆ. ಅವರಿಗೆ ಮೊಬೈಲ್ ಫೋನ್ ಅಥವಾ ಇಂಟರ್‌ನೆಟ್ ಸೌಲಭ್ಯವನ್ನು ಒದಗಿಸಿಲ್ಲ.

ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳ ನಿಯೋಜನೆ

ಪರೀಕ್ಷಾ ಕೇಂದ್ರಗಳ ಸುರಕ್ಷತೆಗಾಗಿ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳ (ಸಿಎಪಿಎಫ್) ಸಿಬ್ಬಂದಿಯನ್ನು ನಿಯೋಜನೆ ಮಾಡಲಾಗಿದೆ. ಸಿಆರ್‌ಪಿಎಫ್ ಮತ್ತು ಸಿಐಎಸ್‌ಎಫ್ ಎರಡೂ ಸಿಎಪಿಎಫ್ ಪಡೆಗಳಿಗೆ ಪ್ರಶ್ನೆಪತ್ರಿಕೆ ಸಾಗಣೆ ಜವಾಬ್ದಾರಿ ವಹಿಸಲಾಗಿದೆ.

ವಿಶೇಷ ಸೌಲಭ್ಯಗಳು



ಪರೀಕ್ಷಾರ್ಥಿಗಳ ಆರೋಗ್ಯದ ಹಿತದೃಷ್ಟಿಯಿಂದ ಕುಡಿಯುವ ನೀರು, ಸ್ಯಾನಿಟೇಶನ್, ಮೆಡಿಕಲ್ ವ್ಯವಸ್ಥೆ ಹಾಗೂ ವೇಗದಲ್ಲಿ ವೆರಿಫಿಕೇಶನ್‌ನಡೆಸಲು ಹೆಚ್ಚುವರಿ ಸಿಬ್ಬಂದಿಯನ್ನು ನಿಯೋಜನೆ ಮಾಡಲಾಗಿದೆ. ಒಂದು ವೇಳೆ ವಿದ್ಯುತ್ ಸಮಸ್ಯೆ ಎದುರಾದರೆ ಎಂಬ ಕಾರಣಕ್ಕೆ ಪವರ್ ಬ್ಯಾಕ್ ಅಪ್ ಇರಲಿದೆ.

ಇಂದು ರಾಷ್ಟ್ರವ್ಯಾಪಿ ಮಾಕ್‌ಡ್ರಿಲ್

ದೇಶಾದ್ಯಂತ ನಿಗದಿಯಾಗಿರುವ ನೀಟ್ ಯುಜಿ 2026ರ ಮರುಪರೀಕ್ಷೆಗೂ ಮುನ್ನ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿ) ಶನಿವಾರ ರಾಷ್ಟ್ರವ್ಯಾಪಿ ಮಾಕ್‌ಡ್ರಿಲ್(ಅಣಕು ಪರೀಕ್ಷೆ) ನಡೆಸಲಿದೆ. ಮರುಪರೀಕ್ಷೆಯ ಸುಗಮ ನಿರ್ವಹಣೆಯನ್ನು ಖಚಿತಪಡಿಸಿಕೊಳ್ಳಲು ಮಾಕ್‌ಡ್ರಿಲ್ ಆಯೋಜಿಸಲಾಗುತ್ತಿದೆ. ಪೂರ್ಣ ಪ್ರಮಾಣದ ಪೂರ್ವಾಭ್ಯಾಸವು ಬೆಳಗ್ಗೆ 9 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ನಡೆಯುತ್ತದೆ. ಪ್ರಶ್ನೆ ಪತ್ರಿಕೆಗಳ ವಿತರಣೆಯಿಂದ ಹಿಡಿದು ಉತ್ತರ ಪತ್ರಿಕೆಗಳ ಸಂಗ್ರಹಣೆ ಮತ್ತು ಸಾಗಣೆಯವರೆಗೆ ಪರೀಕ್ಷಾ ಪ್ರಕ್ರಿಯೆಯ ಪ್ರತಿಯೊಂದು ಹಂತವನ್ನು ಇದರಲ್ಲಿ ನಡೆಸಲಾಗುತ್ತದೆ.





ಪರೀಕ್ಷಾ ದಿನದ ಮಾರ್ಗಸೂಚಿ

ಪರೀಕ್ಷಾ ದಿನದ ಶಿಷ್ಟಾಚಾರವನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಪರೀಕ್ಷಾರ್ಥಿಗಳಿಗೆ ಎನ್‌ಟಿಎ ಸಲಹೆ ನೀಡಿದೆ. ಪರೀಕ್ಷಾ ಪ್ರವೇಶಾತಿ ಕಾರ್ಡ್, ಗುರುತಿನ ಚೀಟಿ, ಫೋಟೋ ಮತ್ತು ಮಳೆ ಕಾರಣದಿಂದ ಅಗತ್ಯವಿದ್ದರೆ ಪಾರದರ್ಶಕ ಪ್ಲಾಸ್ಟಿಕ್ ಬಳಸಬಹುದು. ಎಲ್ಲಾ ಪರೀಕ್ಷಾರ್ಥಿಗಳು ಪರೀಕ್ಷಾ ಕೇಂದ್ರ ಪ್ರವೇಶಿಸುವ ಮುನ್ನ ಭದ್ರತಾ ಪರಿಶೀಲನೆಗೆ ಒಳಗಾಗಲೇಬೇಕು. ತಿಳಿ ಬಣ್ಣದ ಮತ್ತು ಅರ್ಧ ತೋಳಿನ ಬಟ್ಟೆಗಳನ್ನು ಧರಿಸಬೇಕು. ಹೈ-ಹೀಲ್ ಪಾದರಕ್ಷೆ ಮತ್ತು ಶೂಗಳನ್ನು ಧರಿಸದಿರಲು, ಸ್ಲಿಪ್ಪರ್ಸ್ ಅಥವಾ ಸಾಮಾನ್ಯ ಪಾದರಕ್ಷೆಗಳನ್ನು ಧರಿಸಲು ಹಾಗೂ ಪಾರದರ್ಶಕ ನೀರಿನ ಬಾಟಲಿ ಬಳಸಲು ಶಿಫಾರಸು ಮಾಡಲಾಗಿದೆ. ರಿಪೋರ್ಟಿಂಗ್ ಸಮಯಕ್ಕೂ ಮುಂಚಿತವಾಗಿ ನೀಟ್ ಅಭ್ಯರ್ಥಿಗಳು ಪರೀಕ್ಷಾ ಕೇಂದ್ರವನ್ನು ತಲುಪುವಂತೆ ಸಲಹೆ ನೀಡಲಾಗಿದೆ. ಪರೀಕ್ಷೆಯಲ್ಲಿ ಒಎಂಆರ್ ಶೀಟ್ ತುಂಬಿಸಲು ಪೆನ್ ತರುವಂತೆ ಸೂಚಿಸಲಾಗಿದೆ. ಎಲೆಕ್ಟ್ರಾನಿಕ್ ಗ್ಯಾಜೆಟ್ಸ್, ಮೊಬೈಲ್ ಫೋನ್ಸ್, ಸ್ಮಾರ್ಟ್ ವಾಚ್, ಬ್ಲೂಟೂತ್ ಡಿವೈಸ್, ಇಯರ್‌ಫೋನ್ಸ್ ಮತ್ತು ಸಂವಹನಕ್ಕೆ ಬಳಸುವ ಯಾವುದೇ ಉಪಕರಣಗಳನ್ನು ನಿಷೇಧಿಸಲಾಗಿದೆ. ಲೋಹ, ದೊಡ್ಡ ಬೆಲ್ಟ್ ಬಕಲ್‌ಗಳು, ದೊಡ್ಡ ಬಟನ್‌ಗಳು, ದೊಡ್ಡ ಆಭರಣ ಇತ್ಯಾದಿ ಪರೀಕ್ಷಾ ಕೇಂದ್ರಕ್ಕೆ ತರುವುದನ್ನು ನಿಷೇಧಿಸಲಾಗಿದೆ. ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ಕಣ್ಗಾವಲು. ಪರೀಕ್ಷಾ ಕೇಂದ್ರಗಳ ಎಲ್ಲಾ ಗೇಟ್‌ಗಳಲ್ಲಿ ಸುರಕ್ಷತೆ, ಪರಿಶೀಲನೆ ಹೆಚ್ಚಿಸಲಾಗಿದೆ.

ಕಿರುಸುದ್ದಿ

ಜಪಾನ್‌ನಲ್ಲಿ 5 ದಿನಗಳ ಭಗವದ್ಗೀತಾ ಮಹೋತ್ಸವ

• **ಟೋಕಿಯೊ:** ಜಪಾನ್ ರಾಜಧಾನಿ ಟೋಕಿಯೊದಲ್ಲಿ ಶುಕ್ರವಾರದಿಂದ ಐದು ದಿನಗಳ ಅಂತಾರಾಷ್ಟ್ರೀಯ ಗೀತಾ ಮಹೋತ್ಸವ ನಡೆಯಲಿದೆ. ಭಾರತದ ಶಾಶ್ವತ ಸಾಂಸ್ಕೃತಿಕ ಪರಂಪರೆ ಮತ್ತು ಭಗವದ್ಗೀತೆಯ ಸಾರ್ವತ್ರಿಕ ಸಂದೇಶವನ್ನು ಜಾಗತಿಕ ವೇದಿಕೆಯಲ್ಲಿ ಉತ್ತೇಜಿಸುವಲ್ಲಿ ಈ ಕಾರ್ಯಕ್ರಮವು ಮಹತ್ವದ ಮೈಲಿಗಲ್ಲಾಗಿ ಹೊರಹೊಮ್ಮಲಿದೆ. ಜಪಾನ್‌ನಲ್ಲಿ ಅಂತಾರಾಷ್ಟ್ರೀಯ ಗೀತಾ ಮಹೋತ್ಸವ (ಐಜಿಎಂ)-2026 ಅನ್ನು ಶುಕ್ರವಾರದಿಂದ ಜೂ.23 ವರೆಗೆ ನಡೆಸಲಾಗುತ್ತಿದೆ.

ಇಬ್ಬರು ಶಂಕಿತ ಉಗ್ರ ಸಹಚರರ ಬಂಧನ

• **ಶ್ರೀನಗರ:** ಜಮ್ಮು-ಕಾಶ್ಮೀರ ಪೊಲೀಸರು ಕಿಶ್ತ್ವಾರ್ ಜಿಲ್ಲೆಯಲ್ಲಿ ಇಬ್ಬರು ಶಂಕಿತ ಭಯೋತ್ಪಾದಕ ಸಹಚರರನ್ನು ಪೊಲೀಸರು ಬಂಧಿಸಿದ್ದಾರೆ. ಭಯೋತ್ಪಾದಕರ ಜತೆ ನಂಟು ಹೊಂದಿರುವ ರಾಷ್ಟ್ರ ವಿರೋಧಿ ಶಕ್ತಿಗಳು ಮತ್ತು ಬೆಂಬಲ ಜಾಲಗಳ ಮೇಲೆ ಪತ್ತೆ ಹಚ್ಚುವ ತನಿಖೆಯ ಭಾಗವಾಗಿ ಈ ಬಂಧನ ನಡೆದಿದೆ. ಈ ಮೂಲಕ ಈ ಪ್ರಕರಣದಲ್ಲಿ ಒಟ್ಟು ಬಂಧಿತರ ಸಂಖ್ಯೆ ನಾಲ್ಕಕ್ಕೆ ತಲುಪಿದೆ. ಕಿಶ್ತ್ವಾರ್ ಪೊಲೀಸ್ ಠಾಣೆಯಲ್ಲಿ ದಾಖಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಬಂಧನಗಳನ್ನು ಮಾಡಲಾಗಿದೆ. ಕಿಶ್ತ್ವಾರ್‌ನ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಎಸ್‌ಪಿ) ನರೇಶ್ ಸಿಂಗ್, ನಿಖರವಾದ ತನಿಖೆಯ ನಂತರ, ಪೊಲೀಸರು ಅರಣ್ಯ ಇಲಾಖೆಯ ಸರ್ಕಾರಿ ಉದ್ಯೋಗಿ ತಾರಿಕ್ ಅಹ್ಮದ್ ಗಿನೂ ಮತ್ತು ದಾಚಾನ್‌ನ ತಾಂಡರ್ ನಿವಾಸಿಗಳಾದ ಮೊಹಮ್ಮದ್ ಇಕ್ಬಾಲ್‌ನನ್ನು ಭಯೋತ್ಪಾದಕ ಚಟುವಟಿಕೆಗಳಲ್ಲಿ ಭಾಗಿಯಾದ ಆರೋಪದ ಮೇಲೆ ಬಂಧಿಸಿದ್ದಾರೆ ಎಂದು ಹೇಳಿದರು.

ನಿಯಾಮೆ ಸೇನಾ ನೆಲೆಗೆ ದಾಳಿ: 13 ಮಂದಿ ಸಾವು

• **ನಿಯಾಮೆ:** ನೈಜರ್ ರಾಜಧಾನಿ ನಿಯಾಮೆ ನಗರದಲ್ಲಿನ ವಿಮಾನ ನಿಲ್ದಾಣ ಮತ್ತು ಸೇನಾ ನೆಲೆಯ ಮೇಲೆ ಅಲ್ ಖೈದಾ ಉಗ್ರ ಸಂಘಟನೆಯ ಪಶ್ಚಿಮ ಆಫ್ರಿಕಾ ಘಟಕ ನಡೆಸಿದ ಬಾಂಬ್ ದಾಳಿಯಲ್ಲಿ 11 ಭದ್ರತಾ ಸಿಬ್ಬಂದಿ ಹಾಗೂ ಇಬ್ಬರು ನಾಗರಿಕರು ಮೃತಪಟ್ಟಿದ್ದಾರೆ. ಈ ದಾಳಿಯ ಹೊಣೆಯನ್ನು ಅಲ್-ಖೈದಾ ಉಗ್ರ ಸಂಘಟನೆಯ ಪಶ್ಚಿಮ ಆಫ್ರಿಕಾ ಘಟಕವಾದ ಇಸ್ಲಾಮಿಕ್ ಸ್ಟೇಟ್ ಸಹೇಲ್ ಪ್ರಾವಿನ್ಸ್ ವಹಿಸಿಕೊಂಡಿದೆ. ಭದ್ರತಾ ಪಡೆಗಳು ದಾಳಿಕೋರರನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಿದ್ದು, ಹಲವರನ್ನು ಬಂಧಿಸಿ, ಶಸ್ತ್ರಾಸ್ತ್ರಗಳನ್ನು ವಶಪಡಿಸಿವೆ. ಈ ಘಟನೆ ಆಫ್ರಿಕಾದಲ್ಲಿ ಮುಂದುವರಿದ ಭದ್ರತಾ ಅಸ್ಥಿರತೆ ಹಾಗೂ ವಿವಿಧ ಜಿಹಾದಿ ಉಗ್ರ ಸಂಘಟನೆಗಳ ನಡುವಿನ ಪೈಪೋಟಿಯನ್ನು ಸ್ಪಷ್ಟಗೊಳಿಸಿದೆ.

ಸಮರತಂತ್ರ ಸಾಧನಗಳ ಅರ್ಹತೆಯಲ್ಲಿ ರಾಜಿಯಿಲ್ಲ

• **ಹೊಸದಿಲ್ಲಿ:** 2014ರಲ್ಲಿ ಬರೇ 46ಸಾವಿರ ಕೋಟಿ ರೂಗಳಿಗೆ ಸೀಮಿತವಾಗಿದ್ದ ಭಾರತದ ರಕ್ಷಣಾ ಉತ್ಪಾದನೆ 2025-26ರಲ್ಲಿ 1,78,000 ಕೋಟಿ ರೂ.ಮೀರಿದೆ ಎಂದು ಹೆಮ್ಮೆ ವ್ಯಕ್ತಪಡಿಸಿರುವ ರಕ್ಷಣಾ ಸಚಿವ ರಾಜನಾಥ ಸಿಂಗ್, ಸಾಂಪ್ರದಾಯಿಕ ಸಮರತಂತ್ರಗಳು 1947ರಲ್ಲಿ ಹೊಂದಿದ್ದ ವಿಶ್ವಾಸಾರ್ಹತೆ ಮತ್ತು ಪ್ರಸ್ತುತತೆಯನ್ನು ಇಂದಿಗೂ ಉಳಿಸಿಕೊಂಡಿವೆ ಎಂದು ಹೇಳಿದ್ದಾರೆ. ತನ್ನ ಆವಶ್ಯಕತೆಗಳನ್ನು ಸ್ವಂತ ಸಾಮರ್ಥ್ಯದಿಂದ ಈಡೇರಿಸಿಕೊಳ್ಳಬಲ್ಲ ರಾಷ್ಟ್ರವು ಖಂಡಿತವಾಗಿ ಆತ್ಮವಿಶ್ವಾಸದಿಂದ ಮುಂದೆ ಸಾಗಬಲ್ಲುದು ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮಹಾರಾಷ್ಟ್ರದ ನಾಗ್ಪುರದ ಅಂಬಾಝರಿಯಲ್ಲಿ, ಯಂತ್ರ ಇಂಡಿಯಾ ಲಿಮಿಟೆಡ್ ಶಸ್ತ್ರಾಸ್ತ್ರ ಕಾರ್ಖಾನೆಯಲ್ಲಿ, 10ಸಾವಿರ ಟನ್ ಸಾಮರ್ಥ್ಯದ ಅಲ್ಯೂಮಿನಿಯಂ ಬಿಡಿಭಾಗಗಳಿಗೆ ಸಂಬಂಧಪಟ್ಟ ಅತ್ಯಾಧುನಿಕ ಘಟಕಕ್ಕೆ ಭೂಮಿಪೂಜೆ ನೆರವೇರಿಸಿ ಸಚಿವರು ಮಾತನಾಡಿದರು. ದುರ್ಲಭ ಅಲ್ಯೂಮಿನಿಯಂ ಬಿಡಿಭಾಗಗಳ ಆಮದು ಮೇಲಿನ ಅವಲಂಬನೆಯನ್ನು ಹೊಸ ಸೌಕರ್ಯವು ಕುಗ್ಗಿಸಲಿದೆ. ಸಮರಗಳ ಸಂದರ್ಭ ಪೂರೈಕೆ ವ್ಯವಸ್ಥೆ ಸಹಜವಾಗೇ ಅಸ್ತವ್ಯಸ್ತಗೊಳ್ಳುತ್ತದೆ. ಅಂತಹ ಸನ್ನಿವೇಶಗಳಲ್ಲಿ ಆವಶ್ಯ ವಸ್ತುಗಳನ್ನು ದೇಶೀಯವಾಗಿ ಉತ್ಪಾದಿಸಲು ಪ್ರತಿಯೊಂದು ದೇಶವೂ ಬಯಸುವುದು ಸಹಜವೆಂದು ಸಚಿವ ಸಿಂಗ್ ನುಡಿದರು.

ಸಾಂಪ್ರದಾಯಿಕ ಸಮರತಂತ್ರಗಳು ಸ್ವಾತಂತ್ರ್ಯ ಸಂದರ್ಭ ಹೊಂದಿದ್ದ ವಿಶ್ವಾಸಾರ್ಹತೆಯನ್ನು ಇಂದಿಗೂ ಕಾಯ್ದುಕೊಂಡಿವೆ ಮತ್ತು 2047ರ ವೇಳೆಯೂ ತಮ್ಮ ನಿರ್ಣಾಯಕತೆಯನ್ನು ಎತ್ತಿಹಿಡಿಯಲಿವೆ ಎಂದರು.

ಅಯೋಧ್ಯೆ ದೇಣಿಗೆ ನಿಧಿ: ತಪ್ಪಿತಸ್ಥರಿಗೆ ಶಿಕ್ಷೆ ಖಚಿತ

• **ಲಖನೌ:** ಅಯೋಧ್ಯೆಯ ರಾಮ ಮಂದಿರದ ದೇಣಿಗೆ ಪ್ರಕರಣದಲ್ಲಿ ತಪ್ಪಿತಸ್ಥರು ಎಷ್ಟೇ ಪ್ರಭಾವಿಗಳಾಗಿದ್ದರೂ, ಅವರನ್ನು ಯಾವುದೇ ಕಾರಣಕ್ಕೂ ಬಿಡುವುದಿಲ್ಲ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಹೇಳಿದ್ದಾರೆ.

ರಾಮ ಮಂದಿರದ ದೇಣಿಗೆ ನಿಧಿಯನ್ನು ದುರುಪಯೋಗಪಡಿಸಿಕೊಂಡ ಆರೋಪದ ಕುರಿತು ತನಿಖೆಗೆ ಎಸ್‌ಐಟಿ ರಚಿಸಿದ ಬೆನ್ನಲ್ಲೇ ಆದಿತ್ಯನಾಥ್ ಅವರು ಅಯೋಧ್ಯೆಗೆ ಭೇಟಿ ನೀಡಿದ್ದಾರೆ.

ದೇವಾಲಯದ ಪಟ್ಟಣದಲ್ಲಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಯೋಗಿ, ಭಗವಾನ್ ರಾಮನ ಭಕ್ತರ ಭಾವನೆಗಳಿಗೆ ನೋವುಂಟುಮಾಡುವಂತಹ ಹೇಳಿಕೆಗಳನ್ನು ನೀಡದಂತೆ ಜನರನ್ನು ಒತ್ತಾಯಿಸಿದರು. ಟ್ರಸ್ಟ್‌ನ ಕೋರಿಕೆ ಮೇರೆಗೆ ನಾವು ಎಸ್‌ಐಟಿ ತನಿಖೆಗೆ ಆದೇಶಿಸಿದ್ದೇವೆ. ಎಸ್‌ಐಟಿ ತನಿಖೆಯು 15 ದಿನಗಳಲ್ಲಿ ಎಲ್ಲವನ್ನೂ ಸ್ಪಷ್ಟಪಡಿಸುತ್ತದೆ ಎಂದರು. ನಾನು ಒಂದು ವಾರದೊಳಗೆ ಪ್ರಾಥಮಿಕ ವರದಿಯನ್ನು ಪಡೆಯುತ್ತೇನೆ. ತಪ್ಪಿತಸ್ಥರು ಯಾರೇ ಆಗಿರಲಿ, ಅವರನ್ನು ಬಿಡಲಾಗುವುದಿಲ್ಲ ಎಂದು ಹೇಳಿದರು. ಭಗವಾನ್ ರಾಮನ ಜನ್ಮಸ್ಥಳದಲ್ಲಿ ದೇವಾಲಯಕ್ಕಾಗಿ 500 ವರ್ಷಗಳ ಹೋರಾಟವನ್ನು ನೆನಪಿಸಿಕೊಂಡ ಯೋಗಿ, ಅಯೋಧ್ಯೆಯಲ್ಲಿ ಭವ್ಯವಾದ ದೇವಾಲಯದ ಕನಸನ್ನು ನನಸಾಗಿಸಲು ಭಗವಾನ್ ರಾಮನು ಕಲಿಸಿದ ತಾಳ್ಮೆ ಮತ್ತು ಘನತೆಯನ್ನು ಭಕ್ತರು ಪ್ರದರ್ಶಿಸಿದ್ದಾರೆ ಎಂದು ಹೇಳಿದರು. ಈಗ ಇದು ಕೇವಲ 15 ದಿನಗಳ ವಿಷಯವಾಗಿದೆ. ಸತ್ಯ ಹೊರಬರಲು ಅದೇ ತಾಳ್ಮೆ ಮತ್ತು ಘನತೆಯನ್ನು ಕಾಪಾಡಿಕೊಳ್ಳಿ ಎಂದು ಅವರು ಹೇಳಿದರು.

ಕದನವಿರಾಮ ನವೀಕರಣ ಇಸ್ರೇಲ್-ಲೆಬನಾನ್ ಅಸ್ತು

• **ಹೊಸದಿಲ್ಲಿ:** ಅಮೆರಿಕ-ಇರಾನ್ ನಡುವಿನ ಸ್ವಿಜರ್‌ಲೆಂಡ್ ಮಾತುಕತೆ ರದ್ದಾದ ಬಳಿಕ ಇಸ್ರೇಲ್-ಲೆಬನಾನ್ ಕದನ ವಿರಾಮ ಒಪ್ಪಂದವನ್ನು ನವೀಕರಿಸಲು ಒಪ್ಪಿಕೊಂಡಿವೆ. ಅಮೆರಿಕ-ಇರಾನ್ ಮಧ್ಯಂತರ ಒಪ್ಪಂದಕ್ಕೆ ಸಹಿ ಹಾಕಿದ ನಂತರವೂ ಲೆಬನಾನ್ ಮೇಲೆ ಇಸ್ರೇಲ್ ದಾಳಿ ನಡೆಸಿತ್ತು.

ಲೆಬನಾನ್‌ನಲ್ಲಿ ಹಿಜ್ಬೊಲ್ಲಾ ಅಡಗುದಾಣಗಳ ಮೇಲೆ ದಾಳಿ ನಡೆಸಿರುವುದಾಗಿ ಇಸ್ರೇಲ್ ಸಮರ್ಥಿಸಿಕೊಂಡಿದೆ. ಶುಕ್ರವಾರ ಎರಡೂ ಪಕ್ಷಗಳು ಕದನ ವಿರಾಮ ಒಪ್ಪಂದ ನವೀಕರಿಸಲು ಒಪ್ಪಿವೆ. ದಕ್ಷಿಣ ಲೆಬನಾನ್ ಮೇಲೆ ಇಸ್ರೇಲ್ ದಾಳಿ ಮುಂದುವರಿದಿದೆ. ಶುಕ್ರವಾರ ಸಂಜೆ 4 ಗಂಟೆಗೆ ಕದನ ವಿರಾಮ ನವೀಕರಿಸಲು ಉಭಯ ರಾಷ್ಟ್ರಗಳು ಒಪ್ಪಿಕೊಂಡಿದ್ದವು. ಆದರೆ ಇಸ್ರೇಲ್ ಇನ್ನಷ್ಟು ವೈಮಾನಿಕ ದಾಳಿ ನಡೆಸಿದ್ದು, 150ಕ್ಕೂ ಅಧಿಕ ಹಿಜ್ಬೊಲ್ಲಾ ಅಡಗುದಾಣಗಳ ಮೇಲೆ ದಾಳಿ ನಡೆಸಿದೆ. ಇಸ್ರೇಲ್ ದಾಳಿಗೆ 47 ನಾಗರಿಕರು ಮೃತಪಟ್ಟಿದ್ದಾರೆ ಮತ್ತು 97 ಮಂದಿ ತೀವ್ರ ಗಾಯಗೊಂಡಿದ್ದಾರೆ ಎಂದು ಲೆಬನಾನ್ ಆರೋಗ್ಯ ಸಚಿವಾಲಯ ತಿಳಿಸಿದೆ. ನಾಲ್ವರು ಇಸ್ರೇಲಿ ಯೋಧರು ಮೃತಪಟ್ಟಿದ್ದಾರೆಂದು ವರದಿಯಾಗಿದೆ. ಲೆಬನಾನ್ ವಿಚಾರದಲ್ಲಿ ಅಮೆರಿಕ-ಇಸ್ರೇಲ್ ಭಿನ್ನಾಭಿಪ್ರಾಯವೇ ಈ ಒಮ್ಮತಕ್ಕೆ ಕಾರಣವೆನ್ನಲಾಗಿದೆ.

ಹತಾಶೆಯಿಂದ ಒಪ್ಪಿದ ಇರಾನ್: ಹತಾಶೆಯಿಂದ ಇರಾನ್ ಮಧ್ಯಂತರ ಒಪ್ಪಂದ ಒಪ್ಪಿಕೊಂಡಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶುಕ್ರವಾರ ಹೇಳಿದ್ದಾರೆ. ಇದೇ ವೇಳೆ ಷರತ್ತುಗಳನ್ನು ಅಮೆರಿಕ ಉಲ್ಲಂಘಿಸಿದರೆ, ನಮ್ಮ ಕೈ ಟ್ರಿಗರ್ ಮೇಲಿಟ್ಟು ಸಿದ್ಧವಾಗಿದ್ದೇವೆ ಎಂದು ಇರಾನ್ ಸೇನೆ ಹೇಳಿದೆ.

ಟ್ರಂಪ್ ಹೇಳಿಕೆಗೆ ಮೆಲೋನಿ ಛೀಮಾರಿ

• **ವಾಷಿಂಗ್ಟನ್:** ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ಅವರು ಜಿ7 ಶೃಂಗಸಭೆಯಲ್ಲಿ ತಮ್ಮೊಂದಿಗೆ ಒಂದು ಫೋಟೋ ತೆಗೆಸಿಕೊಳ್ಳಲು ಬೇಡಿಕೊಂಡಿದ್ದರು ಎಂಬ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೇಳಿಕೆಗೆ ,ಮೆಲೋನಿ ಖಾರವಾಗಿ ತಿರುಗೇಟು ನೀಡಿದ್ದಾರೆ. ಈ ಹೇಳಿಕೆ ಸಂಪೂರ್ಣ ಸುಳ್ಳು ಮತ್ತು ಕಟ್ಟುಕಥೆ ಎಂದು ಹೇಳಿದ್ದಾರೆ. ಇಟಲಿ ಟಿವಿ ವಾಹಿನಿಗೆ ನೀಡಿದ ಸಂದರ್ಶನದಲ್ಲಿ ಟ್ರಂಪ್, ನಾನು ಮೆಲೋನಿ ಜತೆ ಮಾತನಾಡಬೇಕಾದ ಅಗತ್ಯವಿರಲಿಲ್ಲ, ಅವರು ನನ್ನೊಂದಿಗೆ ಫೋಟೋ ತೆಗೆಸಿಕೊಳ್ಳಲು ತುಂಬಾ ಕೇಳಿಕೊಂಡಿದ್ದರು ಎಂದಿದ್ದಾರೆ. ಟ್ರಂಪ್ ಅವರ ಈ ಹೇಳಿಕೆ ಇಟಲಿಯಲ್ಲಿ ತೀವ್ರ ಚರ್ಚೆಗೆ ಕಾರಣವಾಗಿದೆ. ನಾನು ಅಥವಾ ಇಟಲಿ ಎಂದಿಗೂ ಬೇಡಿಕೊಳ್ಳುವುದಿಲ್ಲ ಎಂದು ಮೆಲೋನಿ ವೀಡಿಯೊ ಸಂದೇಶದಲ್ಲಿ ಹೇಳಿಕೊಂಡಿದ್ದಾರೆ.

ಮ್ಯಾಕ್ರಾನ್‌ಗೆ ಕಲಂಕಾರಿ ಮಹಾಭಾರತ ಚಿತ್ರಕಲೆ | ಫಿಕೊಗೆ ಕಾಶ್ಮೀರಿ ಗಾಲಿಚೆ

ಭಾರತೀಯ ಸಂಸ್ಕೃತಿಯ ಉಡುಗೊರೆ

• **ಹೊಸದಿಲ್ಲಿ:** ಪ್ರಧಾನಿ ನರೇಂದ್ರ ಮೋದಿ ಅವರು ಫ್ರಾನ್ಸ್ ಮತ್ತು ಸ್ಲೊವಾಕಿಯಾ ಪ್ರವಾಸದ ವೇಳೆ ಅಲ್ಲಿನ ನಾಯಕರಿಗೆ ಭಾರತದ ಶ್ರೀಮಂತ ಕಲೆ, ಸಂಸ್ಕೃತಿ, ವೈದ್ಯಕೀಯ ಪರಂಪರೆ ಹಾಗೂ ಪ್ರಾದೇಶಿಕ ಆಹಾರ ವೈವಿಧ್ಯವನ್ನು ಪ್ರತಿಬಿಂಬಿಸುವ ವಿಶಿಷ್ಟ ಉಡುಗೊರೆಗಳನ್ನು ನೀಡಿದ್ದಾರೆ.

ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರಾನ್ ಅವರಿಗೆ ಆಂಧ್ರಪ್ರದೇಶದ ಕಲಂಕಾರಿ ಶೈಲಿಯಲ್ಲಿ ರಚಿಸಲಾದ ಮಹಾಭಾರತದ ಚಿತ್ರಕಲೆಯನ್ನು ಮೋದಿ ಉಡುಗೊರೆಯಾಗಿ ನೀಡಿದ್ದಾರೆ. ಸ್ಲೊವಾಕಿಯಾ ಪ್ರಧಾನಿ ರಾಬರ್ಟ್ ಫಿಕೊ ಅವರಿಗೆ ಕಾಶ್ಮೀರಿ ರೇಷ್ಮೆ ಗಾಲಿಚೆ ಹಾಗೂ ಅಲ್ಲಿನ ಸಂಸತ್ ಸ್ಪೀಕರ್ ರಿಚರ್ಡ್ ರಾಸಿ ಅವರಿಗೆ ಬಿಹಾರದ ಸಾಂಪ್ರದಾಯಿಕ ಸಿಹಿ ತಿಂಡಿ ಠೇಕುವಾ ನೀಡಲಾಗಿದೆ.

ಆರು ತಿಂಗಳ ಪರಿಶ್ರಮದ ಕಲಾಕೃತಿ: ಮ್ಯಾಕ್ರಾನ್ ಅವರಿಗೆನೀಡಲಾದಮಹಾಭಾರತದಕಲಂಕಾರಿಚಿತ್ರವನ್ನು ಸಾಂಪ್ರದಾಯಿಕ ಲೇಖನಿ ಚಿತ್ರಣ ವಿಧಾನ ಬಳಸಿ ಕೈಯಿಂದ ರಚಿಸಲಾಗಿದೆ. ಇದನ್ನು ಪೂರ್ಣಗೊಳಿಸಲು ಸುಮಾರು ಆರು ತಿಂಗಳು ಬೇಕಾಗಿದೆ. ಮಹಾಭಾರತದ



ಕರ್ತವ್ಯ, ನ್ಯಾಯ, ಧೈರ್ಯ ಮತ್ತು ನೈತಿಕ ಆಯ್ಕೆಯ ಸಂದೇಶಗಳನ್ನು ಚಿತ್ರದಲ್ಲಿ ಬಿಂಬಿಸಲಾಗಿದೆ. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ನೀಡಿದ ಕರ್ತವ್ಯಪ್ರಜ್ಞೆ, ಆತ್ಮಸಂಯಮ ಮತ್ತು ಆಂತರಿಕ ಶಕ್ತಿಯ ಬೋಧನೆಯನ್ನೂ ಕಲಾಕೃತಿಯಲ್ಲಿ ಪ್ರಮುಖವಾಗಿ ಚಿತ್ರಿಸಲಾಗಿದೆ.

ಸ್ಲೊವಾಕಿಯಾ ಪ್ರಧಾನಿ ರಾಬರ್ಟ್ ಫಿಕೊ ಅವರಿಗೆ ಕಾಶ್ಮೀರ ಕಣಿವೆಯ, ವಿಶೇಷವಾಗಿ ಶ್ರೀನಗರ ಪ್ರದೇಶದ ಪ್ರಸಿದ್ಧ ಕೈಗಂಟಿನ ರೇಷ್ಮೆ ಗಾಲಿಚೆಯನ್ನು ನೀಡಲಾಗಿದೆ. ನೈಸರ್ಗಿಕ ರೇಷ್ಮೆ ಯಿಂದ ತಯಾರಿಸಲಾದ ಈ ಗಾಲಿಚೆಯಲ್ಲಿ ಹೂವು, ಬಳ್ಳಿ, ಮಾವಿನಕಾಯಿ ಹಾಗೂ ಪದಕಾಕಾರದ ಸೂಕ್ಷ್ಮ ವಿನ್ಯಾಸಗಳಿವೆ. ಅಂದ, ಬಾಳಿಕೆ ಮತ್ತು ಕಲಾತ್ಮಕತೆಯ ಸಂಗಮವಾಗಿರುವ ಕಾಶ್ಮೀರಿ ರೇಷ್ಮೆ ಗಾಲಿಚೆಗಳು ಜಗತ್ತಿನಾದ್ಯಂತ ಐಷಾರಾಮಿ ಗೃಹಾಲಂಕಾರ ವಸ್ತು ಗಳಾಗಿಯೂ, ಕಲಾಕೃತಿಗಳಾಗಿಯೂ ಪ್ರಸಿದ್ಧಿ ಪಡೆದಿವೆ.

ಸ್ಲೊವಾಕ್ ಅಧ್ಯಕ್ಷರಿಗೆ ಡೋಕ್ರಾ ಜಿಂಕೆ: ಸ್ಲೊವಾಕಿಯಾ ಅಧ್ಯಕ್ಷ ಪೀಟರ್ ಪೆಲ್ಲೆಗ್ರಿನಿ ಅವರಿಗೆ ಹಿತ್ತಾಳೆಯಿಂದ ತಯಾರಿಸಲಾದ ಡೋಕ್ರಾ ಜಿಂಕೆಗಳ ಜೋಡಿಯನ್ನು ಉಡುಗೊರೆಯಾಗಿ ನೀಡಲಾಗಿದೆ. ಛತ್ತೀಸ್‌ಗಢ, ಒಡಿಶಾ, ಜಾರ್ಖಂಡ್ ಮತ್ತು ಪಶ್ಚಿಮ ಬಂಗಾಳದ ಬುಡಕಟ್ಟು ಕುಶಲಕರ್ಮಿಗಳು ಶತಮಾನಗಳಿಂದ ಅನುಸರಿಸಿಕೊಂಡು ಬಂದಿರುವ ಪುರಾತನ ಲೋಹ ಎರಕದ ಕಲೆಯನ್ನು ಇದು ಪ್ರತಿನಿಧಿಸುತ್ತದೆ. ಪೆಲ್ಲೆಗ್ರಿನಿ ಅವರಿಗೆ ಛತ್ರಪತಿ ಸಂಭಾಜಿನಗರದ ಹಿಮ್ರೂ ರೇಷ್ಮೆ ಟೈ ಮತ್ತು ಜೇಬು ವಸ್ತ್ರದ ಜೋಡಿಯನ್ನೂ ನೀಡಲಾಗಿದೆ. ರಾಜಸ್ಥಾನದ ಪ್ರತಾಪಗಢ ಜಿಲ್ಲೆಯ ಸಾಂಪ್ರದಾಯಿಕ ಥೇವಾ ಕಲೆಯ ವಿನ್ಯಾಸ ಹೊಂದಿರುವ ಕೈಕೊಂಡಿಗಳನ್ನೂ ಸ್ಲೊವಾಕ್ ಅಧ್ಯಕ್ಷರಿಗೆ ನೀಡಲಾಗಿದೆ.

ಭಾರತೀಯರನ್ನುದ್ದೇಶಿಸಿ ಮೋದಿ ಮಾತು

ವಿಶ್ವಾಸಾರ್ಹ ಪಾಲುದಾರ

• **ಪ್ಯಾರಿಸ್:** ಜಗತ್ತಿನ ಅತ್ಯಂತ ವಿಶ್ವಾಸಾರ್ಹ ಪಾಲುದಾರನಾಗಿ ಭಾರತ ಹೊರಹೊಮ್ಮುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತುಂಬು ಹೆಮ್ಮೆ -ಹರ್ಷ ವ್ಯಕ್ತಪಡಿಸಿದ್ದಾರೆ. ಭಾವೀ ಪೀಳಿಗೆಗೆ ಅವಕಾಶಗಳ ತೆರೆದಿಡಬಲ್ಲ, ಆವಿಷ್ಕಾರ ಮತ್ತು ಅಭಿವೃದ್ಧಿಗೆ ಪ್ರೇರಣಾದಾಯಿ ರಂಗಗಳಲ್ಲಿ ರಾಷ್ಟ್ರವು ಧಾರಾಳ ಹೂಡಿಕೆ ಹೂಡುತ್ತಿದೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ರಾಷ್ಟ್ರದ ಮತ್ತು ರಾಷ್ಟ್ರವಾಸಿ ಜನರ ಆಶೋತ್ತರಗಳು ನವಶೃಂಗವನ್ನು ಸ್ಪರ್ಷಿಸುತ್ತಿರುವ ಹಾಗೂ ಭಾರತವು ತನ್ನ ಭವ್ಯ ಭವಿಷ್ಯವನ್ನು ರೂಪಿಸುತ್ತಿರುವಂತಹ ರಾಷ್ಟ್ರದ ಯಾನದಲ್ಲಿದೊಂದು ವರ್ಣನಾಯೋಗ್ಯ ಅಥವಾ ವ್ಯಾಖ್ಯಾನಾರ್ಹ ಕಾಲಘಟ್ಟವಾಗಿದೆ ಎಂದು ಪ್ಯಾರಿಸ್‌ನಲ್ಲಿ ಭಾರತೀಯ ಸಮುದಾಯವನ್ನು ಉದ್ದೇಶಿಸಿ



ಪ್ರಧಾನಿ ಮೋದಿ ಸಂತಸ ವ್ಯಕ್ತಪಡಿಸಿದ್ದಾರೆ. ವ್ಯಾಪಾರವೊಂದೇ ರಾಷ್ಟ್ರಗಳ ನಡುವಿನ ಬಾಂಧವ್ಯವನ್ನು ನಿರ್ಧರಿಸುವಕಾಲವಿತ್ತು. ಆದರೆಇಂದು ವ್ಯಾಪಾರದ ಜತೆ ವಿಶ್ವಾಸಾರ್ಹತೆ ಕೂಡ ನಿರ್ಣಾಯಕ ಪಾತ್ರ ವಹಿಸುತ್ತಿದೆ. ಪ್ರತಿಯೊಂದು ರಾಷ್ಟ್ರವೂ ವಿಶ್ವಾಸಾರ್ಹ ಪೂರೈಕೆ ವ್ಯವಸ್ಥೆಯನ್ನು ಬಯಸುತ್ತಿದೆ. ಪ್ರತೀ ರಾಷ್ಟ್ರವೂ ಸ್ಥಿರ ಪಾಲುದಾರಿಕೆ ಬಯಸುತ್ತಿದೆ.

ಕಿರುಸುದ್ದಿ

ಗಾಯಗೊಂಡ ಚಾಲಕ ಸಾವು

ಜೋಯಿಡಾ: ಕಾರವಾರ-ಜೋಯಿಡಾ ರಸ್ತೆಯ ಚಾಪೋಲಿ ಹತ್ತಿರ ಎರಡು ಸಾರಿಗೆ ಬಸ್ಸುಗಳ ನಡುವೆ ನಡೆದ ಅಪಘಾತದಲ್ಲಿ ಗಂಭೀರ ಗಾಯಗೊಂಡಿದ್ದ ಕೆಎಸ್ ಆರ್‌ಟಿಸಿ ಬಸ್ ಚಾಲಕ ರಾಜು ಭೋಜಿ ಬೆಳಗಾವಿಯ ಕೆಎಲ್‌ಇ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಶುಕ್ರವಾರ ನಸುಕಿನ ವೇಳೆ ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ.

ಉಳವಿ-ಇಚಲಕರಂಜಿ ಮತ್ತು ಬೆಳಗಾವಿಯಿಂದ ಕಾರವಾರಕ್ಕೆ ಹೊರಟಿದ್ದ ಬಸ್ಸುಗಳ ನಡುವೆ ಗುರುವಾರ ಬೆಳಗ್ಗೆ ಜೋಯಿಡಾ ತಾಲೂಕಿನ ಚಾಪೋಲಿ ಹತ್ತಿರ ಈ ಅಪಘಾತ ಸಂಭವಿಸಿತ್ತು. ಈ ಅಪಘಾತದಲ್ಲಿ ಸಾಕಷ್ಟು ಪ್ರಯಾಣಿಕರಿಗೆ ಗಾಯವಾಗಿತ್ತು. ಅಪಘಾತದಲ್ಲಿ ಗಂಭೀರ ಗಾಯಗೊಂಡಿದ್ದ ಚಿಕ್ಕೋಡಿ ಸಾರಿಗೆ ಘಟಕದ ಉಳವಿ -ಇಚಲಕರಂಜಿ ಸಾರಿಗೆ ಬಸ್ಸಿನ ಚಾಲಕ ರಾಜು ಭೋಜೆ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಬೆಳಗಾವಿಯ ಕೆಎಲ್‌ಇ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಂತಿಮವಾಗಿ ಚಿಕಿತ್ಸೆ ಫಲಕಾರಿಯಾಗದೆ ಆಸ್ಪತ್ರೆಯಲ್ಲಿ ವಿಧಿವಶರಾಗಿದ್ದಾರೆ ಎಂದು ತಿಳಿದು ಬಂದಿದೆ.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ ಕನಿಷ್ಠ (ಕ್ವಿಂ)	₹ ಗರಿಷ್ಠ (ಕ್ವಿಂ)
ಕಡಲೆಕಾಳು	3739	5916
ಉದ್ದಿನಕಾಳು	1756	7316
ಹೆಸರುಕಾಳು	2710	4940
ಜೋಳ	2466	4316
ಮಡಿಕೆ (ಮಟಕಿ)	7056	7056
ಈರುಳ್ಳಿ	600	2200
ಆಲೂಗಡ್ಡೆ	1300	1900
ಕುಸುಬೆ	3011	5206
ಸೋಯಾಬಿನ್	3570	6975
ಗೋಧಿ	2209	2209

ವಾಣಿಜ್ಯ ನಗರಿಯಲ್ಲಿ ನಾಲ್ಕು ಬಸ್ ನಿಲ್ದಾಣಗಳು

ಪ್ರಯಾಣಿಕರಿಗೆ ತಪ್ಪದ ಪ್ರಯಾಸ!

ವಿಜಯಕುಮಾರ ಬೆಳ್ಳೇರಿಮಠ



ದಿಗಂತ ವಿಶೇಷ

ಹುಬ್ಬಳ್ಳಿ: ಉತ್ತರ ಕರ್ನಾಟಕದ ವಾಣಿಜ್ಯ ನಗರಿ ಹುಬ್ಬಳ್ಳಿಗೆ ಸುತ್ತಮುತ್ತಲಿನ ಜಿಲ್ಲೆಗಳಿಂದ ನಿತ್ಯ ಸಾವಿರಾರು ಜನರು ಭೇಟಿ ನೀಡುತ್ತಾರೆ. ಆದರೆ, ಸುಗಮ ಸಂಚಾರಕ್ಕೆ ಅನುಕೂಲವಾಗಬೇಕಾದ ಬಸ್ ನಿಲ್ದಾಣಗಳು ಅದಕ್ಕೆ ತದ್ವಿರುದ್ಧವಾಗಿದ್ದು, ಪ್ರಯಾಣಿಕರ ಆಕ್ರೋಶಕ್ಕೆ ಕಾರಣವಾಗಿದೆ.

ನಗರದಲ್ಲಿ ನಾಲ್ಕು ಪ್ರಮುಖ ಬಸ್ ನಿಲ್ದಾಣಗಳಿವೆ. ಇಲ್ಲಿಯ ಚನ್ನಮ್ಮ ವೃತ್ತದಲ್ಲಿರುವ ನಗರ ಹಾಗೂ ಉಪನಗರ ಸಾರಿಗೆ ಅಥವಾ ಹಳೆ ಬಸ್ ನಿಲ್ದಾಣ, ಗೋಕುಲ ರಸ್ತೆಯ ಕೇಂದ್ರ ಬಸ್ ನಿಲ್ದಾಣ ಅಥವಾ ಹೊಸ ಬಸ್ ನಿಲ್ದಾಣ, ಹೊಸೂರಿನ ಪ್ರಾದೇಶಿಕ ಸಾರಿಗೆಯ ಬಸ್ ನಿಲ್ದಾಣ ಹಾಗೂ ಸಿಬಿಟಿ ಬಸ್ ನಿಲ್ದಾಣಗಳಿವೆ. ನಗರ ಹಾಗೂ ಉಪನಗರ ಸಾರಿಗೆ ಬಸ್ ನಿಲ್ದಾಣ ಹಾಗೂ ಸಿಬಿಟಿ ಬಸ್ ನಿಲ್ದಾಣಗಳಲ್ಲಿ ಧಾರವಾಡ, ಸ್ಥಳೀಯ ಮಾರ್ಗಗಳು ಹಾಗೂ ಬಿಆರ್‌ಟಿಎಸ್ ಬಸ್‌ಗಳು ಕಾರ್ಯಾಚರಣೆ ನಡೆಸುತ್ತವೆ. ಹೊಸೂರು ಪ್ರಾದೇಶಿಕ ಬಸ್ ನಿಲ್ದಾಣದಿಂದ ವಿವಿಧ ತಾಲೂಕುಗಳಾದ ಕಲಘಟಗಿ, ನವಲಗುಂದ, ಕುಂದಗೋಳ, ಸವದತ್ತಿ ಹಾಗೂ ದೂರದ ವಿಜಯಪುರ, ಗದಗ, ಬಾಗಲಕೋಟೆ ಸೇರಿದಂತೆ ಕೆಲವು ಜಿಲ್ಲೆಗಳ ಬಸ್‌ಗಳು ಕಾರ್ಯಾಚಣೆ ನಡೆಸುತ್ತವೆ.

ಇನ್ನು ಗೋಕುಲ ರಸ್ತೆಯ ಕೇಂದ್ರ ಬಸ್ ಅಥವಾ ಹೊಸ ಬಸ್ ನಿಲ್ದಾಣದಿಂದ ಬೆಂಗಳೂರು ಕಡೆಗೆ ಮಾರ್ಗದ ಜಿಲ್ಲೆಗಳು, ರಾಜ್ಯದವಿವಿಧಜಿಲ್ಲೆಹಾಗೂಹೊರರಾಜ್ಯಗಳ ಬಸ್‌ಗಳು ಕಾರ್ಯ ನಿರ್ವಹಿಸುತ್ತಿವೆ.

ಮೇಲ್ಕಾಣಿಸಿದ ಊರುಗಳಿಂದ ಬರುವ ಪ್ರಯಾಣಿಕರನ್ನು ಈ ನಿಲ್ದಾಣಗಳಲ್ಲೇ ಇಳಿಸಲಾಗುತ್ತದೆ. ಇಲ್ಲಿ ಇಳಿಯುವ ಜನರು ಒಂದು ಬಸ್ ನಿಲ್ದಾಣದಿಂದ ಇನ್ನೊಂದು ಬಸ್ ನಿಲ್ದಾಣಕ್ಕೆ ಹೋಗಬೇಕೆಂದರೆ ಅವರಿಗೆ ಸರಿಯಾಗಿ ಸಾರಿಗೆ ಸೌಲಭ್ಯವೂ ಇಲ್ಲ, ಅಥವಾ ಬಸ್ ಹತ್ತಿ ಹೆಚ್ಚುವರಿಯಾಗಿ ದುಡ್ಡು ಖರ್ಚು ಮಾಡಬೇಕಿದೆ.

> **ಗೋಕುಲ ರೋಡ್ ಬಸ್ ನಿಲ್ದಾಣದಿಂದ ಧಾರವಾಡಕ್ಕೆ ಹೋಗುವ ಬಿಆರ್‌ಟಿಎಸ್ ಬಸ್‌ಗಳ ಸೌಲಭ್ಯವಿದೆ. ಇವು ಹೊಸೂರು ಪ್ರಾದೇಶಿಕ ಬಸ್ ನಿಲ್ದಾಣಕ್ಕೆ ನಿಲುಗಡೆಯಾಗಲಿವೆ. ಪ್ರಯಾಣಿಕರು ಇವುಗಳ ಸದುಪಯೋಗ ಪಡೆಯಬಹುದು.**
> ■ ಇನಾಯತ್ ಬಾಗಬಾನ, ವಿಭಾಗೀಯ ನಿಯಂತ್ರಣಾಧಿಕಾರಿ, ಹು-ಧಾ ನಗರ ಸಾರಿಗೆ ವಿಭಾಗ

> **ನಿತ್ಯ ಹುಬ್ಬಳ್ಳಿಗೆ ಬರುವ ಪ್ರಯಾಣಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಮೂರ್ನಾಲ್ಕು ಬಸ್ ನಿಲ್ದಾಣ ಇರುವುದೇ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಬಸ್ ನಿಲ್ದಾಣಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ಆದರೆ, ಅವೈಜ್ಞಾನಿಕವಾಗಿ ಬಸ್‌ಗಳ ಕಾರ್ಯಾಚರಣೆ ಇರುವುದರಿಂದ ಪ್ರಯಾಣಿಕರು ಹೆಚ್ಚುವರಿ ದುಡ್ಡು ಮತ್ತು ಸಮಯ ವ್ಯಯಿಸಬೇಕಿದೆ.**
> ■ ಸಾಗರ ದೊಡ್ಡಮನಿ, ಪ್ರಯಾಣಿಕ

ಉದಾಹರಣೆಗೆ ಹಾವೇರಿಯಿಂದ ಬಂದ ಪ್ರಯಾಣಿಕ ಬಾಗಲಕೋಟೆ ಕಡೆ ಹೋಗಬೇಕೆಂದರೆ ಹೊಸೂರು ಬಳಿ ಇಳಿದು ಅಲ್ಲಿಂದ ವಸ್ತುಗಳ ಹೊತ್ತುಕೊಂಡು ಹೊಸೂರು ಬಸ್ ನಿಲ್ದಾಣಕ್ಕೆ ಹೋಗಲು ಅರ್ಧ ಕಿಮೀ ನಡೆಯಬೇಕು. ಇಲ್ಲದಿದ್ದರೆ ಆಟೋ ಹಿಡಿಯಬೇಕು. ಅದಕ್ಕೆ ನೂರಾರು ರೂಪಾಯಿ ಕೊಡಬೇಕು.

ಇನ್ನು ಬಾಗಲಕೋಟೆ ಕಡೆಯಿಂದ ಬಂದ ಪ್ರಯಾಣಿಕರು ದಾವಣಗೆರೆ ಬಸ್ ಹಿಡಿಯಬೇಕೆಂದರೆ ಹೊಸೂರು ಬಸ್ ನಿಲ್ದಾಣದಲ್ಲಿ ಇಳಿದು ಅಲ್ಲಿಂದ ಆಟೋದಲ್ಲಿ ಹೊಸ ಬಸ್ ನಿಲ್ದಾಣಕ್ಕೆ ಹೋಗಲು ನೂರಾರು ರೂಪಾಯಿ ತೆರಬೇಕು. ಹಗಲು ಹೊತ್ತಿನಲ್ಲಿ ಹೇಗೋ ಮ್ಯಾನೇಜ್ ಮಾಡಬಹುದು. ಆದರೆ,ರಾತ್ರಿ ವೇಳೆಸಾಕಷ್ಟುಪರದಾಡಬೇಕಿದೆ. ಹೊಸೂರಲ್ಲಿರುವ ಬಸ್ ನಿಲ್ದಾಣದಿಂದ ಗೋಕುಲ ರಸ್ತೆಯ ಹೊಸ ಬಸ್ ನಿಲ್ದಾಣಕ್ಕೆ ಹೋಗಬೇಕಾದರೂ ಅದೇ ಪರಿಸ್ಥಿತಿ ಇದೆ. ಗದುಗಿನಿಂದ ಹುಬ್ಬಳ್ಳಿಗೆ ಬರಲು 106 ಟಿಕೆಟ್ ದರವಿದ್ದು, ಇಲ್ಲಿ ಆಟೋದವರಿಗೆ 100ರಿಂದ 150 ರೂ. ನೀಡಬೇಕು. ಇದು ಮತ್ತಷ್ಟು ಹೊರೆಯಾಗಲಿದೆ ಎಂದು ನವಲಗುಂದದ ನಿವಾಸಿ ಪ್ರವೀಣ ಪತ್ತಾರ ಬೇಸರ ವ್ಯಕ್ತಪಡಿಸಿದರು.

ಹುಬ್ಬಳ್ಳಿಗೆ ಬರುವ ಪ್ರತಿ ಬಸ್ ಹಳೆ ಬಸ್ ನಿಲ್ದಾಣಕ್ಕೆ ಬಂದು ಜನರನ್ನು ಇಳಿಸಿ ಕರೆದೊಯ್ಯುವ ಮೊದಲಿನ ವ್ಯವಸ್ಥೆ ಜಾರಿಯಾಗಬೇಕಿದೆ. ಅಥವಾ ಹಾವೇರಿ, ಹಾನಗಲ್, ರಾಣೇಬೆನ್ನೂರ್, ಹರಿಹರ, ದಾವಣಗೆರೆ, ಹಿರೇಕೆರೂರು, ಸವದತ್ತಿ, ಬೈಲಹೊಂಗಲ ಸೇರಿದಂತೆ ಇನ್ನಿತರ ಬಸ್‌ಗಳನ್ನು ಹಳೆ ಬಸ್ ನಿಲ್ದಾಣದಿಂದ ಕಾರ್ಯಾಚರಣೆ ಮಾಡುವಂತಾಗಲಿ ಎಂದು ಅವರು ಮನವಿ ಮಾಡಿದರು.

ಕೃಷ್ಣಾ ನದಿ ಪಾತ್ರದಲ್ಲಿ ಮಹಾ ಯೋಜನೆ ತಡೆಗೆ ಮನವಿ

ಚಿಕ್ಕೋಡಿ: ತಾಲೂಕಿನ ಕೃಷ್ಣಾ ನದಿ ತೀರದ ಕಲ್ಲೋಳ ಬ್ಯಾರೇಜ್ ಹಿನ್ನೀರಿನಿಂದ ಮಹಾರಾಷ್ಟ್ರ ಸರ್ಕಾರ ರಾಧಾಕೃಷ್ಣ ನೀರು ಸರಬರಾಜು ಯೋಜನೆಯನ್ನು ಕೈಗೊಳ್ಳುತ್ತಿದ್ದು, ಇದನ್ನು ತಡೆದು ರಾಜ್ಯದ ಜನತೆಗೆ ಅನುಕೂಲ ಮಾಡಿಕೊಡುವಂತೆ ಕಿತ್ತೂರ ಕರ್ನಾಟಕ ಸೇನೆಯ ಕಾರ್ಯಕರ್ತರು ಶುಕ್ರವಾರ ಮನವಿ ಸಲ್ಲಿಸಿದರು.

ಪಟ್ಟಣದ ಮಿನಿವಿಧಾನಸೌಧ ಕಚೇರಿಯ ಉಪ ವಿಭಾಗಾಧಿಕಾರಿಗಳ ಕಚೇರಿಯ ಗ್ರೇಡ್ 2 ತಹಶೀಲ್ದಾರ್ ಪರಿಮಳಾ ದೇಶಪಾಂಡೆ ಅವರಿಗೆ ಮನವಿ ಸಲ್ಲಿಸಿದ ಕಿತ್ತೂರ ಕರ್ನಾಟಕ ಸೇನೆಯ ಕಾರ್ಯಕರ್ತರು ಮಾತನಾಡಿ, ಈ ಯೋಜನೆಯಿಂದ ಚಿಕ್ಕೋಡಿ ತಾಲೂಕು ವ್ಯಾಪ್ತಿಯ ನದಿ ತೀರದ ಜನರಿಗೆ ತೀವ್ರ ತೊಂದರೆಯಾಗಲಿದೆ. ರಾಜ್ಯದ ಪಾಲಿನ ನೀರನ್ನು ಮಹಾರಾಷ್ಟ್ರ ಕೊಳ್ಳೆ ಹೊಡೆಯುವುದನ್ನು ತಪ್ಪಿಸಲು, ಜಿಲ್ಲಾಡಳಿತ ಹಾಗೂ ಕರ್ನಾಟಕ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಕಿತ್ತೂರ ಕರ್ನಾಟಕ ಸೇನೆಯ ಚಿಕ್ಕೋಡಿ ಜಿಲ್ಲಾಧ್ಯಕ್ಷ ನಾಗೇಶ ಮಾಳಿ, ಶ್ರವಣಕುಮಾರ ಗುಡೆ, ರಾಜೇಂದ್ರ ಪಾಟೀಲ, ರಾಹುಲ ವಾಳಕೆ, ಬಸವರಾಜ ಸಾಜನೆ, ಮುಸ್ತಾನ್ ಮುಲ್ಲಾ, ಸುರೇಶ ಬ್ಯಾಕೂಡೆ, ಕುಲದೀಪ ಬ್ಯಾಳಿ, ಸಿದ್ದವ್ವ ಹಗ್ಗರಿ, ರಮೇಶ ಧಾಂಗೇರ, ಸಂಕೇತ ಕಾಂಬಳೆ ಮುಂತಾದವರು ಇದ್ದರು.



ಇಗ್ನೋ ಪ್ರವೇಶ ಪ್ರಾರಂಭ

ಧಾರವಾಡ: ಇಂಧಿರಾಗಾಂಧಿ ರಾಷ್ಟ್ರೀಯಮುಕ್ತವಿಶ್ವವಿದ್ಯಾಲಯದ (ಇಗ್ನೋ) ದೂರ ಶಿಕ್ಷಣದ ಕೋಸ್ ಗಳಿಗೆ ಜು.2026ನೇ ಸಾಲಿಗೆ ಪ್ರವೇಶಕ್ಕಾಗಿ ಧಾರವಾಡ ಜೆ.ಎಸ್. ಎಸ್.ಕಾಲೇಜಿನಲ್ಲಿರುವ ಇಗ್ನೋದ ಧಾರವಾಡಅಧ್ಯಯನಕೇಂದ್ರದಿಂದ ಮಾಹಿತಿ ಪಡೆಯಬಹುದು.

ಇಗ್ನೋ ಧಾರವಾಡದ ಜೆ.ಎಸ್. ಎಸ್ ಕಾಲೇಜಿನಲ್ಲಿ, ಎಂ.ಎಸ್ಸಿ (ಆ.ಎಸ್), ಎಂ.ಸಿ.(ಭೌತಶಾಸ್ತ್ರ), ಎಂಬಿಎ, ಎಂಸಿಎ, ಎಂ.ಕಾಂ, ಎಮ್.ಎ.(ಇಂಗ್ಲೀಷ್) ಎಮ್.ಎ.(ಇತಿಹಾಸ), ಎಮ್.ಎ.(ಅರ್ಥಶಾಸ್ತ್ರ) ಮುಂತಾದ ಸ್ನಾತಕೋತ್ತರ ಕೋರ್ಸ್‌ಗಳು ಬಿಎ, ಬಿ.ಕಾಂ, ಬಿ.ಎಸ್ಸಿ, ಬಿಸಿಎ, ಬಿಲಿಬ್ ಸಾಯನ್ಸ್, ಬಿ.ಟಿ.ಎಸ್, ಮುಂತಾದ ಸ್ನಾತಕ ಕೋರ್ಸಗಳು ಡಿಇಸಿಇ, ಡಿಟಿಎಸ್, ಡಿಎನ್‌ಎಚ್‌ಇ ಮುಂತಾದಡಿಪ್ಲೋಮಕೋರ್ಸಗಳು, ಪಿಜಿಡಿಎಚ್‌ಇ, ಪಿಜಿಡಿಆರ್‌ಡಿ, ಪಿಜಿಸಿಇಡಿಎಸ್, ಪಿಜಿಡಿಇಡಿಎಸ್, ಪಿಜಿಡಿಇಎಸ್‌ಡಿ, ಪಿಜಿಡಿಇಎಸ್‌ಡಿ, ಪಿಜಿಡಿಎಲ್‌ಎಎನ್, ಮುಂತಾದ ಪಿಜಿ ಡಿಪ್ಲೋಮ ಕೋರ್ಸಗಳು, ಸಿಟಿಪಿಎಮ್, ಸಿಡಿಎಮ್, ಸಿಇಎಸ್ ,ಸಿಎಫ್‌ಎನ್, ಸಿಐಜಿ,ಸಿಆರ್‌ಡಿ ಮುಂತಾದ ಸರ್ಟಿಫಿಕೇಟ್ ಕೋರ್ಸಗಳು. ವಿದ್ಯಾರ್ಥಿಗಳಿಗೆ ಏಕಾಲಕ್ಕೆ ಎರಡು ಪದವಿಗಳನ್ನು ಪಡೆದುಕೊಳ್ಳಲು ಅವಕಾಶ ನಿಮ್ಮ ವ್ಯಾಸಂಗದ ಕೂಡ ಇನ್ನೊಂದು ಪದವಿ ಪಡೆದುಕೊಳ್ಳಬಹುದು, ಈ ಅವಕಾಶ ಇಗ್ನೋದಲ್ಲಿ ಕಲ್ಪಸಲಾಗಿದೆ ವಿದ್ಯಾರ್ಥಿಗಳು ಸದ್ಬಳಸಿಕೊಳ್ಳಬೇಕು.

ಇಗ್ನೋ ಜೆ.ಎಸ.ಎಸ್ .ಅಧ್ಯಯನಕೇಂದ್ರದಲ್ಲಿಸುಮಾರು 38 ವಿವಿಧ ಕೋರ್ಸ್‌ಗಳು ಅಧ್ಯಯನಕ್ಕೆ ಲಭ್ಯವಿದ್ದು ಹೆಚ್ಚಿನ ಮಾಹಿತಿಗಾಗಿ ಇಗ್ನೋ ಧಾರವಾಡ ಜೆ.ಎಸ್.ಎಸ್. ಅಧ್ಯಯನ ಕೇಂದ್ರ ವಿದ್ಯಾಗಿರಿ, ಧಾರವಾಡ, ಇವರ ದೂರವಾಣಿ :0836-2468999, 9980292705, 9886254860, 8095042986ಸಂಪರ್ಕಿಸಬಹುದು ಪ್ರವೇಶ ಆನ್‌ಲೈನ್ ಮೂಲಕ ಇದ್ದು www.ignou.ac.in <http://www.ignou.ac.in>ನಲ್ಲಿ ಲಭ್ಯವಿದೆ. ಪ್ರವೇಶ ಕೊನೆಯ ದಿನಾಂಕ: 15-07-2026 ಎಂದು ಧಾರವಾಡ ಇಗ್ನೋ ಅಧ್ಯಯನ ಕೇಂದ್ರ ಸಂಯೋಜಕ ಡಾ.ಸೂರಜ್ ಜೈನ್ ತಿಳಿಸಿದ್ದಾರೆ.

ಲಿಂಗರಾಜ್, ರಘು ಆಯ್ಕೆ: ವಿಜಯೋತ್ಸವ



ಕುಷ್ಟಗಿ: ಪಟ್ಟಣದ ಮಾರುತಿ ವೃತ್ತದಲ್ಲಿ ಭಾರತೀಯ ಜನತಾ ಪಾರ್ಟಿ ಓಬಿಸಿ ಮೋರ್ಚಾ ವತಿಯಿಂದ ಪಟಾಕಿ, ಸಿಡಿಸಿ ಸಿಹಿ ಹಂಚಿ ವಿಜಯೋತ್ಸವ ಆಚರಣೆ ಮಾಡಲಾಯಿತು.

ವಿಧಾನ ಪರಿಷತ್ ಸದಸ್ಯರಾಗಿ ನೂತನವಾಗಿ ಭಾರತೀಯ ಜನತಾ ಪಾರ್ಟಿಯಿಂದ ಲಿಂಗರಾಜ್ ಪಾಟೀಲ ಹಾಗೂ ರಘು ಕೌಟಿಲ್ಯ ಅವರು ಆಯ್ಕೆಯಾದ ಹಿನಲ್ಲೆಯಲ್ಲಿ ಬಿಜೆಪಿ ಕಾರ್ಯಕರ್ತರು ವಿಜಯೋತ್ಸವ ಆಚರಿಸಲಾಯಿತು.

ಬಿಜೆಪಿ ಓಬಿಸಿ ಮೋರ್ಚಾದ ಜಿಲ್ಲಾಧ್ಯಕ್ಷ ಕೆ.ಎಸ್.ಹನುಮಂತಪ್ಪ, ಜಿಲ್ಲಾ ಓಬಿಸಿ ಮೋರ್ಚಾದ ಪ್ರಧಾನ ಕಾರ್ಯದರ್ಶಿ ರಮೇಶ್ ಗಿರಣಿ, ಮುಖಂಡರಾದ ಸಂಗನಗೌಡ ಜೈನರ, ರಮೇಶ ಕೊಳ್ಳಿ, ಶಿವನಗೌಡ ಟಕ್ಕಳಕಿ, ಬಿಜೆಪಿ ಕುಷ್ಟಗಿ ಮಂಡಲದ ಪ್ರಧಾನ ಕಾರ್ಯದರ್ಶಿ ವಿಜಯರಾವ ದೇಸಾಯಿ, ಶ್ರೀಕಾಂತ ಅಂಗಡಿ, ಯುವ ಮುಖಂಡರಾದ ದುರುಗೇಶ್ ಇದ್ಲಾಪುರ , ಸಂಗಮೇಶ ಗುರಿಕಾರ್, ದ್ಯಾಮಣ್ಣ ತಳವಾರ್, ಸಣ್ಣೀರಪ್ಪ ರಾಥೋಡ್, ಸುಖಮುನಿ ಸ್ವಾಮಿ ಗುರುವಿನ್ ಮತ್ತು ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಇದ್ದರು.

ಕೊಲೆಗೆ ಯತ್ನ: ದೂರು, ಪ್ರತಿದೂರು ದಾಖಲು

ಹುಬ್ಬಳ್ಳಿ: ಕ್ಷುಲ್ಲಕ ವಿಷಯಕ್ಕೆ ಎರಡು ಕುಟುಂಬಸ್ಥರು ಪರಸ್ಪರ ಹೊಡೆದಾಡಿಕೊಂಡು ಕೊಲೆ ಮಾಡಲು ಯತ್ನಿಸಿ ಜೀವ ಬೆದರಿಕೆ ಹಾಕಿರುವ ಕುರಿತು ಶಹರ ಪೊಲೀಸ್ ಠಾಣೆಯಲ್ಲಿ ದೂರು ಪ್ರತಿದೂರು ದಾಖಲಾಗಿದೆ.

ಇಲ್ಲಿಯ ಗದಗ ರಸ್ತೆ ಗುಡ್‌ಶೆಡ್ ರಸ್ತೆಯ ನಿವಾಸಿ ಶಿವಾನಂದ ಮಳ್ಳಿ ಎಂಬುವರಿಗೆ ಹಳೇ ದ್ವೇಷದ ಹಿನ್ನೆಲೆ ಆದೇ ಓಣಿಯ ನಿವಾಸಿಗಳಾದ ಗುರುನಾಥ ಹೊಲದೂರ ಹಾಗೂ ಆನಂದ ಇಬ್ಬರು ಸೇರಿಕೊಂಡು ಚಾಕುವಿನಿಂದ ಎದೆಗೆ ಇರಿದು ಕೊಲೆ ಮಾಡಲು ಯತ್ನಿಸಿದ್ದಾರೆ ಎಂದು ದೂರು ದಾಖಲಾಗಿದೆ.

ಬಾನಿ ಓಣಿಯಲ್ಲಿ ರಸ್ತೆಯಲ್ಲಿ ಗುರುನಾಥ ಹೊಲದೂರ ಎಂಬುವರು ಮಾತನಾಡಿಕೊಂಡು ನಿಂತಾಗ ಸ್ವಲ್ಪ ಪಕ್ಕ ಸರಿ ಎಂಬ ವಿಚಾರಕ್ಕೆ ಶಿವಾನಂದ ಮಳ್ಳಿ ಹಾಗೂ ಶ್ರೀಕಾಂತ ಎಂಬುವರು ನನ್ನ ಮೇಲೆ ಕಟ್ಟಿಗೆಯಿಂದ ಹಲ್ಲೆ ನಡೆಸಿ ಜೀವ ಬೆದರಿಕೆ ಹಾಕಿದ್ದಾರೆ ಎಂದು ಗುರುನಾಥ ಎಂಬುವರು ಪ್ರತಿದೂರು ದಾಖಲಿಸಿದ್ದಾರೆ.

ಬೈಕ್ ನಿಯಂತ್ರಣ ತಪ್ಪಿ ಓರ್ವ ಸಾವು: ಸವಾರನೊಬ್ಬ ಬೈಕ್ ನಿಯಂತ್ರಣ ತಪ್ಪಿ ಕೆಳಗೆ ಬಿದ್ದ ಪರಿಣಾಮ ಗಂಭೀರವಾಗಿ ಗಾಯಗೊಂಡು ಮೃತಪಟ್ಟಿರುವ ಘಟನೆ ತಾಲೂಕಿನ ಕುರುಡಿಕೇರಿ ಗ್ರಾಮದ ಹತ್ತಿರ ನಡೆದಿದೆ. ಛಬ್ಬಿ ಗ್ರಾಮದ ನಿವಾಸಿ ಮಂಜುನಾಥ ಗುಗ್ಗರಿ(30) ಮೃತಪಟ್ಟಿರುವ ಬೈಕ್ ಸವಾರ. ಇತ ಕಂಪ್ಲಿಕೊಪ್ಪದಿಂದ ಕುರಡಿಕೇರಿ ಕಡೆಗೆ ಜೋರಾಗಿ ಹೋಗುವಾಗ ಬೈಕ್ ನಿಯಂತ್ರಣ ತಪ್ಪಿದೆ. ಇದರಿಂದ ತಲೆಗೆ ಹಾಗೂ ಕೈಗೆ ಗಂಭೀರವಾಗಿ ಗಾಯವಾಗಿತ್ತು. ಆತನ್ನು ನಗರದ ಕೆಎಂಸಿಆರ್ ಆಸ್ಪತ್ರೆಗೆ ಚಿಕಿತ್ಸೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

3.60 ಲಕ್ಷ ಮೌಲ್ಯದ ವಸ್ತುಗಳು ಕಳುವು: ನಗರದ ಗೋಕುಲ ರಸ್ತೆಯ ಅಕ್ಷಯ ಪಾರ್ಕ್ ಬಳಿಯ ವೊಡಾಫೋನ್ ಐಡಿಯಾ ಲಿಮಿಟೆಡ್ ಕಂಪನಿಯ ಕಚೇರಿಯಲ್ಲಿ 3.60 ಲಕ್ಷ ಮೌಲ್ಯದ ವಸ್ತುಗಳನ್ನು ಕಳವು ಮಾಡಲಾಗಿದೆ. ಈ ಬಗ್ಗೆ ಕಂಪನಿಯ ವ್ಯವಸ್ಥಾಪಕ ಶಶಿಕುಮಾರ್ ಸಿ.ಜೆ ದೂರು ನೀಡಿದ್ದು, ಗೋಕುಲ ರಸ್ತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

2.91 ಲಕ್ಷ ವಂಚನೆ: ಇಲ್ಲಿನ ಅರಿಹಂತ ತಲೇದ ಎಂಬುವರಿಂದ ಆಯುರ್ವೇದ ಔಷಧ ಖರೀದಿಸಿ, 2.91 ಲಕ್ಷ ನೀಡದೆ ವಂಚಿಸಿದ ಮತ್ತು ಜೀವ ಬೆದರಿಕೆ ಹಾಕಿದ ಆರೋಪದಡಿ ಹಾಸನದ ಇಂದ್ರೇಶ್ ಎಂಬಾತನ ವಿರುದ್ಧ ಉಪನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅರಿಹಂತ ಅವರ ಮೀನಾಕ್ಷಿ ಮೆಡಿಕಲ್ ಏಜೆನ್ಸಿಸ್‌ನಿಂದ ಆರೋಪಿ 2024ರ ಮೇನಿಂದ ಅದೇ ವರ್ಷ ಆಗಸ್ಟ್ ವರೆಗೆ 3.98 ಲಕ್ಷ ಮೌಲ್ಯದ ವ್ಯವಹಾರ ಮಾಡಿದ್ದ. ಅದರಲ್ಲಿ 1.07 ಲಕ್ಷ ಮಾತ್ರ ನೀಡಿದ್ದ. ಬಾಕಿ ಹಣ ನೀಡುವಂತೆ ಅರಿಹಂತ ಅವರು ಆರೋಪಿಗೆ ಕರೆ ಮಾಡಿದಾಗ ಹಣ ನೀಡದೆ, ಜೀವನ ಬೆದರಿಕೆ ಹಾಕಿದ್ದಾನೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

5 ಕೆ.ಜಿ. ಗಾಂಜಾ ವಶ: ಇಲ್ಲಿನ ಶ್ರೀ ಸಿದ್ಧಾರೂಢಸ್ವಾಮಿ ರೈಲ್ವೆ ನಿಲ್ದಾಣದ ಪ್ಲಾಟ್ ಫಾರಂ 4ರಲ್ಲಿ ಗದಗ ಕಡೆಗೆ ಹೋಗುವ ಮಾರ್ಗದಲ್ಲಿ 5.056 ಕೆಜಿ ಗಾಂಜಾ ಅಬಕಾರಿ ಅಧಿಕಾರಿಗಳ ಪರಿಶೀಲನೆ ವೇಳೆ ಕಂಡು ಬಂದಿದೆ.

ಜೂ.17ರಂದು ಫ್ಲಾಟಫಾರಂ 4ರ ಪ್ರಯಾಣಿಕರು ಕೂರುವ ಕಟ್ಟೆಯ ಮೇಲೆ ಯಾರೋ ಪ್ಯಾಕೆಟ್ ಬಿಟ್ಟು ಹೋಗಿದ್ದರು. ಅಬಗಾರಿ ಉಪ ಅಧೀಕ್ಷಕರ ನೇತೃತ್ವದಲ್ಲಿ ಗಸ್ತು ಪರಿಶೀಲನೆ ನಡೆಸುವಾಗ ಪತ್ತೆಯಾಗಿದೆ. ಅದನ್ನು ವಶಕ್ಕೆ ಪಡೆದು ಎನ್.ಡಿ.ಪಿ.ಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಗಾಂಜಾ ಮಾರಾಟ ಮಹಿಳೆ ವಶ: ತಾಲೂಕಿನ ಕೋಳಿವಾಡ ಗ್ರಾಮದ ಈದಗಾ ಹತ್ತಿರ ರಸ್ತೆಯಲ್ಲಿ ಮಂಜವ್ವ ಕೆ ಎಂಬ ಮಹಿಳೆಯನ್ನು ಗಾಂಜಾ ಮಾರಾಟ ಮಾಡುತ್ತಿದ್ದ ಪೊಲೀಸರು ಅವಳನ್ನು ವಶಕ್ಕೆ ಪಡೆದು 40 ಸಾವಿರ ಮೌಲ್ಯದ 815 ಗ್ರಾಂ ಗಾಂಜಾ ವಶಪಡಿಸಿಕೊಂಡಿದ್ದಾರೆ. ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಇವರ ಕಾರ್ಯಾಲಯ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಕನೀನಿನಿ, ಜಿಎಲ್‌ಬಿಸಿ, ವಿಭಾಗ ನಂ-1 ಘಟಪ್ರಭಾ ತಾಃಗೋಕಾಕ.

ಸಂ: ಘ.ವಿ.ದಂ.ಕಾ./ವಿ-1/ಪಿಬಿಇ/2025-26/333 ದಿನಾಂಕ:17.06.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ನೊಂದಾಯಿತ ಗುತ್ತಿಗೆದಾರರಿಂದ ಕಾರ್ಯನಿರ್ವಾಹಕ ಅಭಿಯಂತರರು, ಕನೀನಿನಿ, ಜಿಎಲ್‌ಬಿಸಿ, ವಿಭಾಗ ನಂ. 1 ಘಟಪ್ರಭಾ ಕಚೇರಿ ವ್ಯಾಪ್ತಿಯಲ್ಲಿ Standard Tender Document/Works/(KW- 1 & KW-2) ಪದ್ಧತಿಯಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಟೆಂಡರನ್ನು ಈ ಕೆಳಗಿನಂತೆ ಆಹ್ವಾನಿಸಲಾಗಿದೆ.

Notification No.332 dated: 17.06.2026

ಕ್ರ.ಸಂ:1:ಕಾಮಗಾರಿ ಇಂಡೆಂಟ್ ಸಂಖ್ಯೆ:KNNL/2026-27/BR/ WORK_INDENT 4578 ಟೆಂಡರ್‌ಗೆ ಇಟ್ಟ ಮೊತ್ತ ರೂ. ಲಕ್ಷಗಳಲ್ಲಿ: 42.36, ಕ್ರ.ಸಂ 2.ಕಾಮಗಾರಿ ಇಂಡೆಂಟ್ ಸಂಖ್ಯೆ:KNNL/2026-27/BD/ WORK_INDENT 4577 ಟೆಂಡರ್‌ಗೆ ಇಟ್ಟ ಮೊತ್ತ ರೂ.ಲಕ್ಷಗಳಲ್ಲಿ:42.23, ಕ್ರ.ಸಂ:3:ಕಾಮಗಾರಿ ಇಂಡೆಂಟ್ ಸಂಖ್ಯೆ:KNNL/2026-27/BR/ WORK_INDENT 4575 ಟೆಂಡರ್‌ಗೆ ಇಟ್ಟ ಮೊತ್ತ ರೂ. ಲಕ್ಷಗಳಲ್ಲಿ : 16.94, ಕ್ರ.ಸಂ:4:ಕಾಮಗಾರಿ ಇಂಡೆಂಟ್ ಸಂಖ್ಯೆ:KNNL/2026-27/ OW/ WORK_INDENT4576, ಟೆಂಡರ್‌ಗೆ ಇಟ್ಟ ಮೊತ್ತ ರೂ. ಲಕ್ಷಗಳಲ್ಲಿ : 16.94

1.ಗುತ್ತಿಗೆದಾರರ ಸ್ಪಷ್ಟೀಕರಣಗಳಿಗಾಗಿ ಕೊನೆಯ ದಿನಾಂಕ 24-06-2026 [17.30 PM ಗೆ]. 2.ಟೆಂಡರ್‌ಗೆ ಅರ್ಜಿ ಮತ್ತು ಬಿಡ್ ಸಲ್ಲಿಸುವ ಕೊನೆಯ ದಿನಾಂಕ:25.06.2026 [17.30 PM ಗೆ]. 3.KPP Portal ಮುಖಾಂತರ ಬಿಡ್ ತೆರೆಯುವ ದಿನಾಂಕ:29.06.2026 [11.00 AMಗೆ].

NOTE: ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು KPP Portal ನಲ್ಲಿ ನೋಡಿಕೊಳ್ಳಬಹುದು.

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು
ಘ.ವಿ.ದಂ ಕಾಲುವೆ ವಿಭಾಗ ನಂ-1, ಘಟಪ್ರಭಾ

DIPR/BGM/RO-NO-444/KSMCA/2026-27

CHANGE OF NAME

I, **K RAJESWARI** (Old Name) Resident of Vaddarahatti, Venkatgiri, Koppal, Karnataka, Pin Code: 583235, have changed my name as **RAJESHWARI** (New Name) henceforth I will be called and recognized by new name for all future purposes, dated: 19/06/2026.

CHANGE OF NAME

I, **RAJAKUMAR PATTAR** (Old Name) Resident of 199, Panchaxari Nagat, Navnagar, Hubli, Dharwad, Karataka, Pin Code: 580025 have changed my name as **RAJAKUMAR K PATTAR** (New Name) henceforth I will be called and recognized by new name for all future purposes, dated: 19/06/2026.

CHANGE OF NAME

I, **BIBI KHUTEEJA BIRADAR** (Old Name) Resident of H No: 07, Manjunath Nagar, Gokul Road, Hubli - 580030, have changed my name as **BIBI KHUTEEJA ULFATKHAN BIRADAR** (New Name) henceforth I will be called and recognized by new name for all future purposes, dated: 19/06/2026.

CHANGE OF NAME

I, **FAKEERAPPA HANAMAPPA JAKKAPPA NAVAR** (Old Name) Resident of 76, Jai Bheem Nilaya Heggeri, Old Hubli, Hubballi - Dharwad City - 580024, Karnataka, India have changed my name as **FAKKIRAPPA HANAMAPPA JAKKAPPANAVAR** (New Name) henceforth I will be called and recognized by new name for all future purposes, dated: 19/06/2026.

CHANGE OF NAME

I, **JACINTHA JOHN PRASANTH** (Old Name) Resident of MIG 39, Ashok Nagar, Near Ganapathy Temple, Belagavi - 590016, Karnataka, India have changed my name as **JACINTHA JHON** (New Name) henceforth I will be called and recognized by new name for all future purposes, dated: 19/06/2026.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

KPTCL

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂ.: 952/ಗದಗ/ಕಾಇಂ(ವಿ)/2026-27/1498 ದಿನಾಂಕ: 18.06.2026

ಟೆಂಡರ್ ಪ್ರಕಟಣೆ

ಕವಿಪ್ರನಿನಿಯ ಗದಗ ಕಾರ್ಯಾಚರಣೆಗಳ ವಿಭಾಗದಲ್ಲಿ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಿದೆ. 1) 110ಕೆವಿ ಕೊಣ್ಣೂರು ಉಪಕೇಂದ್ರದಲ್ಲಿ 33ಕೆವಿ ಮಿಂಚು ನಿರೋಧಕಗಳನ್ನು ಸರಬರಾಜು ಮಾಡುವುದು. 2) 110ಕೆವಿ ಡಂಬಳ ಉಪಕೇಂದ್ರಕ್ಕೆ 03 ಸಂಖ್ಯೆಯ 11ಕೆವಿ ಕರೆಂಟ್ ಟ್ರಾನ್ಸ್‌ಫಾರ್ಮರ್‌ಗಳನ್ನು ಸರಬರಾಜು ಮಾಡುವುದು 3) 110ಕೆವಿ ಡಂಬಳ ಉಪಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣೆಗೆ ಸರಕು ಸಾಮಗ್ರಿಗಳನ್ನು ಸರಬರಾಜು ಮಾಡುವುದು. 4) 400ಕೆವಿ ಡೋಣಿ ಉಪಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣೆಗೆ ಸರಕು ಸಾಮಗ್ರಿಗಳನ್ನು ಸರಬರಾಜು ಮಾಡುವುದು. 5) 110ಕೆವಿ ನರಗುಂದ, 110ಕೆವಿ ಕೊಣ್ಣೂರು, 110ಕೆವಿ ಸಂಭಾಪುರ ರಸ್ತೆ & ಬೆಟಗೇರಿ ಉಪಕೇಂದ್ರಗಳಲ್ಲಿ ಎಲೆಕ್ಟ್ರಿಕಲ್ ಇನ್ಸುಲೇಷನ್ ಮ್ಯಾಟ್ & ರಬ್ಬರ್ ಹ್ಯಾಂಡ್ ಗ್ಲೌಸ್ ಸರಬರಾಜು ಮಾಡುವುದು. 6) 110ಕೆವಿ ನರಗುಂದ ಉಪಕೇಂದ್ರಕ್ಕೆ ನ್ಯೂಮರಿಕಲ್ ರಿಲೇಗಳನ್ನು ಸರಬರಾಜು ಮಾಡುವುದು. 7) 110ಕೆವಿ ಮುಂಡರಗಿ & 110ಕೆವಿ ಶಿಂಗಟಾಲೂರು ಉಪಕೇಂದ್ರದಲ್ಲಿ ವ್ಯಾಟರಿ ಚಾರ್ಜರ್ ದುರಸ್ತಿ ಕಾಮಗಾರಿ. 8) 110ಕೆವಿ ಡಂಬಳ ಉಪಕೇಂದ್ರದಲ್ಲಿ 11ಕೆವಿ ಹೊರಾಂಗಣ ಬ್ರೇಕರ್ ಪ್ಯಾನೆಲ್‌ಗಳ ಹಾನಿಗೊಳಗಾದ ಬಾಗಿಲಿನ ಲಾಕ್‌ಗಳು ಮತ್ತು ಕೀಲಿಗಳ ದುರಸ್ತಿ/ಬದಲಿಕೆ ಮಾಡುವುದು.

ವಿಚಾರಣೆಯ ವಿವರಗಳನ್ನು **ದಿನಾಂಕ: 20.06.2026 ರಂದು 10:00 ಗಂಟೆಯ** ತದನಂತರ ಈ ಕಚೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯಾಚರಣೆಗಳು ವಿಭಾಗ, ಕವಿಪ್ರನಿನಿ, ಬಾಪೂಜಿ ನಗರ, ಗದಗ.

ಕರ್ನಾಟಕ ಸರ್ಕಾರ

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ,

ಲೋಕೋಪಯೋಗಿ ಇಲಾಖೆ, ನಂ.3ನೇ ಉಪವಿಭಾಗ, ಕಾರ್ಕಳ

ಕಚೇರಿ ದೂರವಾಣಿ ಸಂಖ್ಯೆ : 08258–230202, E-mail : aeepwdkkl@gmail.com

ನಂ. ಲೋಇಕಾ/ಪ.ಬ.ಪ/ಹರಾಜು/2026–27/ಎಇ2/360/ದಿನಾಂಕ: 19/06/2026

ಹರಾಜು ಪ್ರಕಟಣೆ

ಉಡುಪಿ ಜಿಲ್ಲೆ ಕಾರ್ಕಳದಲ್ಲಿರುವ ಕೈಗಾರಿಕಾ ತರಬೇತಿ ಕೇಂದ್ರ ಸಂಸ್ಥೆ(ಐ.ಟಿ.ಐ)ಯ ಕಟ್ಟಡ ನಿರ್ಮಾಣ ನಿವೇಶನದಲ್ಲಿ ಲಭ್ಯವಿರುವ ಉಪಯುಕ್ತ ಹಾಗೂ ನಿರುಪಯುಕ್ತ ಗ್ರಾನೈಟ್ ಕಲ್ಲುಬಂಡೆಗಳನ್ನು ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡುವ ಸಲುವಾಗಿ ಹರಾಜನ್ನು ನಿಗದಿಪಡಿಸಲಾಗಿದೆ. ಸಾಮಗ್ರಿಗಳನ್ನು ಇದ್ದಲ್ಲಿಯೇ ಇದ್ದಂತಹ ನೆಲೆಯಲ್ಲಿ ಹರಾಜಿನ ಹಾಗೆ ಹರಾಜು ಮಾಡುವ ಬಗ್ಗೆ ಮೊಹರಾದ ಟೆಂಡರನ್ನು ದಿನಾಂಕ : 25/06/2026ರಂದು ಪೂರ್ವಾಹ್ನ 11.30 ಗಂಟೆವರೆಗೆ ಸ್ವೀಕರಿಸಲಾಗುವುದು.

ಕ್ರ.ಸಂ.	ನಿರುಪಯುಕ್ತ ಸಾಮಾಗ್ರಿಗಳು	ಟೆಂಡರ್ ಹಾಕುವ ಸ್ಥಳ	ಹರಾಜು ಮಾಡುವ ಸ್ಥಳ	ಹರಾಜು ಮಾಡುವ ಅಧಿಕಾರಿ
1	ಉಪಯುಕ್ತ ಹಾಗೂ ನಿರುಪಯುಕ್ತ ಗ್ರಾನೈಟ್ ಕಲ್ಲುಬಂಡೆಗಳು	ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ರವರ ಕಛೇರಿ, ಲೋಕೋಪಯೋಗಿ ಇಲಾಖೆ ನಂ.3ನೇ ಉಪವಿಭಾಗ, ಕಾರ್ಕಳ	ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ರವರ ಕಛೇರಿ, ಲೋಕೋಪಯೋಗಿ ಇಲಾಖೆ ನಂ.3ನೇ ಉಪವಿಭಾಗ, ಕಾರ್ಕಳ	ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಅಥವಾ ಅವರಿಂದ ನೇಮಿಸಲ್ಪಟ್ಟ ಅಧಿಕಾರಿ

ಸಹಿ/– ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ,
ಲೋಕೋಪಯೋಗಿ ಇಲಾಖೆ, ನಂ.3ನೇ ಉಪವಿಭಾಗ, ಕಾರ್ಕಳ

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ

ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)

ಪತ್ರ ಸಂಖ್ಯೆ ನಂ. ಎಚ್‌ಡಿಎಂಸಿ/61/12/2026–27 ದಿನಾಂಕ: 19–06–2026

ಅಲ್ಪಾವಧಿ/ಇ-ಟೆಂಡರ ಸೂಚನೆ ಉಲ್ಲೇಖ : ಜಾಹಿರಾತು ನಂ:- 106 ದಿನಾಂಕ:- 30–04–2026

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಸನ್ 2025–26 ಹಾಗೂ 2026–27ನೇ ಸಾಲಿನ ವಾರ್ಡ್ ವಾರು ಅನುದಾನದಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅದೇಶ 1999–2000ರ ಪ್ರಕಾರ ಆಕ್ಟ್ 2000 ನಿಯಮದನ್ವಯ PWD ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರು ಕರ್ನಾಟಕ ಪಬ್ಲಿಕ್ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರಗಳನ್ನು ಆಹ್ವಾನಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಯಾವುದಾದರೂ ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಪರಿಶಿಷ್ಟ ಜಾತಿ (SC) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ - 1) ಇಂಡೆಂಟ್ ನಂ- 59213 ರೂ. 3.10ಲಕ್ಷ. 2) ಇಂಡೆಂಟ್ ನಂ- 59055 ರೂ. 8.70ಲಕ್ಷ. 3) ಇಂಡೆಂಟ್ ನಂ- 59215 ರೂ. 36.20ಲಕ್ಷ. 4) ಇಂಡೆಂಟ್ ನಂ- 59692 ರೂ. 21.50ಲಕ್ಷ. 5) ಇಂಡೆಂಟ್ ನಂ- 59784 ರೂ. 8.69ಲಕ್ಷ. **ಪರಿಶಿಷ್ಟ ಪಂಗಡದ (ST) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ - 6)** ಇಂಡೆಂಟ್ ನಂ- 58898 ರೂ.9.98ಲಕ್ಷ. 7) ಇಂಡೆಂಟ್ ನಂ- 59963 ರೂ.15.00ಲಕ್ಷ. **(CAT-1) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ - 8)** ಇಂಡೆಂಟ್ ನಂ- 59617 ರೂ.49.60ಲಕ್ಷ. **(CAT-2A) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ - 9)** ಇಂಡೆಂಟ್ ನಂ- 59052 ರೂ.21.50ಲಕ್ಷ. 10) ಇಂಡೆಂಟ್ ನಂ- 60072 ರೂ.34.95ಲಕ್ಷ. 11) ಇಂಡೆಂಟ್ ನಂ- 60075 ರೂ.8.40ಲಕ್ಷ. 12) ಇಂಡೆಂಟ್ ನಂ- 59588 ರೂ.5.50ಲಕ್ಷ. 13) ಇಂಡೆಂಟ್ ನಂ- 59783 ರೂ.21.44ಲಕ್ಷ. **ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ - 14)** ಇಂಡೆಂಟ್ ನಂ- 59719 ರೂ.10.00ಲಕ್ಷ. 15) ಇಂಡೆಂಟ್ ನಂ- 59648 ರೂ.45.20ಲಕ್ಷ. 16) ಇಂಡೆಂಟ್ ನಂ- 59812 ರೂ.21.50ಲಕ್ಷ. 17) ಇಂಡೆಂಟ್ ನಂ- 58942 ರೂ.3.50ಲಕ್ಷ. 18) ಇಂಡೆಂಟ್ ನಂ- 59053 ರೂ.12.48ಲಕ್ಷ. 19) ಇಂಡೆಂಟ್ ನಂ- 59216 ರೂ.2.25ಲಕ್ಷ. 20) ಇಂಡೆಂಟ್ ನಂ- 59219 ರೂ.15.52ಲಕ್ಷ. 21) ಇಂಡೆಂಟ್ ನಂ- 59137 ರೂ.49.95ಲಕ್ಷ. 22) ಇಂಡೆಂಟ್ ನಂ- 58903 ರೂ.23.00ಲಕ್ಷ. 23) ಇಂಡೆಂಟ್ ನಂ- 59926 ರೂ.9.45ಲಕ್ಷ. 24) ಇಂಡೆಂಟ್ ನಂ- 59931 ರೂ.21.50ಲಕ್ಷ. 25) ಇಂಡೆಂಟ್ ನಂ- 60074 ರೂ.3.15ಲಕ್ಷ. 26) ಇಂಡೆಂಟ್ ನಂ- 60076 ರೂ.28.50ಲಕ್ಷ. 27) ಇಂಡೆಂಟ್ ನಂ- 59782 ರೂ.0.00ಲಕ್ಷ 28) ಇಂಡೆಂಟ್ ನಂ- 60077 ರೂ.50.00ಲಕ್ಷ. 29) ಇಂಡೆಂಟ್ ನಂ- 59898 ರೂ.20.00ಲಕ್ಷ. **ಮರು ಕರೆ ಕಾಮಗಾರಿ - ಪರಿಶಿಷ್ಟ ಜಾತಿ (SC) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ - 30)** ಇಂಡೆಂಟ್ ನಂ- 58954 ರೂ.10.90ಲಕ್ಷ (2ನೇ ಕರೆ). **ಪರಿಶಿಷ್ಟ ಪಂಗಡದ (ST) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ - 31)** ಇಂಡೆಂಟ್ ನಂ- 58863 ರೂ.29.00ಲಕ್ಷ (2ನೇ ಕರೆ). 32) ಇಂಡೆಂಟ್ ನಂ- 57015 ರೂ.32.00ಲಕ್ಷ (2ನೇ ಕರೆ) 33) ಇಂಡೆಂಟ್ ನಂ- 57852 ರೂ.18.90ಲಕ್ಷ (2ನೇ ಕರೆ). **ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ - 34)** ಇಂಡೆಂಟ್ ನಂ- 57005 ರೂ. 19.04ಲಕ್ಷ (2ನೇ ಕರೆ). 35) ಇಂಡೆಂಟ್ ನಂ- 57543 ರೂ.10.00ಲಕ್ಷ (2ನೇ ಕರೆ). 36) ಇಂಡೆಂಟ್ ನಂ- 57771 ರೂ.35.00ಲಕ್ಷ (2ನೇ ಕರೆ). 37) ಇಂಡೆಂಟ್ ನಂ- 57006 ರೂ.9.22ಲಕ್ಷ (2ನೇ ಕರೆ). 38) ಇಂಡೆಂಟ್ ನಂ- 52389 ರೂ.6.00ಲಕ್ಷ (4ನೇ ಕರೆ). 39) ಇಂಡೆಂಟ್ ನಂ- 57117 ರೂ.5.00ಲಕ್ಷ (3ನೇ ಕರೆ). 40) ಇಂಡೆಂಟ್ ನಂ- 57150 ರೂ.7.00ಲಕ್ಷ (3ನೇ ಕರೆ). 41) ಇಂಡೆಂಟ್ ನಂ- 57147 ರೂ.15.00ಲಕ್ಷ (3ನೇ ಕರೆ). 42) ಇಂಡೆಂಟ್ ನಂ- 55682 ರೂ. 35.64ಲಕ್ಷ (3ನೇ ಕರೆ). 43) ಇಂಡೆಂಟ್ ನಂ- 57151 ರೂ.3.93ಲಕ್ಷ (3ನೇ ಕರೆ). 44) ಇಂಡೆಂಟ್ ನಂ- 52224 ರೂ.10.00ಲಕ್ಷ (6ನೇ ಕರೆ). 45) ಇಂಡೆಂಟ್ ನಂ- 43491 ರೂ. 5.40ಲಕ್ಷ (8ನೇ ಕರೆ). 46) ಇಂಡೆಂಟ್ ನಂ- 44538 ರೂ. 6.45ಲಕ್ಷ (10ನೇ ಕರೆ).

ಇ.ಎಂ.ಡಿ, ಕಾಮಗಾರಿ ಅವಧಿ ಹಾಗೂ ಇತರೆ ವಿವರಗಳನ್ನು ವೆಬ್ ಸೈಟ್ ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಗುತ್ತಿಗೆದಾರರು ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ) ಇವರ ಕಚೇರಿಯ ಕೆಲಸದ ವೇಳೆಯಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ. ಕಚೇರಿಯ ದೂರವಾಣಿ ಸಂಖ್ಯೆ: 0836-2213834ನ್ನು ಸಂಪರ್ಕಿಸಬಹುದಾಗಿದೆ ಮತ್ತು ಅಂತರ್‌ಜಾಲದ ವೆಬ್‌ಸೈಟ್ ವಿಳಾಸ: **kppp.karnataka.gov.in** ರಲ್ಲಿ ಪಡೆಯಬಹುದು. ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: **23.06.2026 ಪಡೆಯಬಹುದಾಗಿದೆ.**

ಕ್ರ. ಸಂ 30 ರಿಂದ 31ರ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **02.07.2026 ರಂದು ಸಾಯಂಕಾಲ 4.00 ಘಂಟೆಯವರೆಗೆ.** ಕ್ರ. ಸಂ 30 ರಿಂದ 31ರ ಟೆಂಡರ್ ತೆರೆಯುವ ದಿನಾಂಕ: **03.07.2026 ಸಾಯಂಕಾಲ 4.30 ಘಂಟೆಯ** ನಂತರ ತೆರೆಯಲಾಗುವುದು. **ಕ್ರ. ಸಂ 01 ರಿಂದ 29 ಹಾಗೂ 32 ರಿಂದ 46ರ ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 08.07.2026 ರಂದು ಸಾಯಂಕಾಲ 4.00 ಘಂಟೆಯವರೆಗೆ. ಕ್ರ. ಸಂ 01 ರಿಂದ 29 ಹಾಗೂ 32 ರಿಂದ 46ರ ಟೆಂಡರ ತೆರೆಯುವ ದಿನಾಂಕ: 09.07.2026 ಸಾಯಂಕಾಲ 4.30 ಘಂಟೆಯ ನಂತರ ತೆರೆಯಲಾಗುವುದು.**

ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ),
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ.

ವಾಸಾಸಂ/ಇ/ಧಾ/ಡಿಆ/332/2026–27

ಕರ್ನಾಟಕ ಸರ್ಕಾರ

ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ, ಉತ್ತರ ಕನ್ನಡ

ದೂರವಾಣಿ: 08382–220556 ಇ-ಮೇಲ್: predkarwar@gmail.com

ಕ್ರ.ಸಂ:ಪಂರಾ.ಇಂ/ಕಾ/ಸಿ–1/2026–27/12 ದಿ: 18.06.2026

ಟೆಂಡರ್ ಪ್ರಕಟಣೆ–12/2026–27 (ಕೆ.ಪಿ.ಪಿ.ಪಿ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ ಕಾರವಾರ ಇವರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಹಾಗೂ ಕೆ.ಪಿ.ಪಿ.ಪಿ. ಸಂಸ್ಥೆಯಿಂದ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ 2025–26ನೇ ಸಾಲಿನ 5054 (ಎಸ್.ಸಿ.ಪಿ/ಟಿ.ಎಸ್.ಪಿ) ಲೆಕ್ಕಶೀರ್ಷಿಕೆಯಡಿಯ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ವಿರಚಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ Standard Tender Document ನ K.W-1 ರ ತತ್ವಬದ್ಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ್ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರನ್ನು ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು ಟೆಂಡರ್ ವಿವರಗಳು ಈ ಕೆಳಗಿನಂತಿವೆ.

ಕಾಮಗಾರಿಯ ಹೆಸರು: (ಮೀಸಲಾತಿ: ಸಾಮಾನ್ಯ) (1) ಕಾರವಾರ ತಾಲೂಕಿನ ಗೋಟೆಗಾಳಿ ಗ್ರಾಮ ಪಂಚಾಯತ ಹರಿಜನಕೇರಿ ನಾರಾಯಣ ಪಾವಟೀಕರ ಹುಲಸ್ವಾರ ಮನೆಯ ಹತ್ತಿರ ಹಳ್ಳಕ್ಕೆ ತಡೆಗೋಡೆ ನಿರ್ಮಾಣ (ಮುಂದುವರೆದ ಕಾಮಗಾರಿ) **RDPR/2026-27/RD/WORK_INDENT27418** ಅಂದಾಜು ಮೊತ್ತ: ರೂ. 10.00 ಲಕ್ಷ, ಮುಂಗಡ ಠೇವಣಿ ರೂ. 32,000.00 ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು.

(ಮೀಸಲಾತಿ: ಪ್ರವರ್ಗ–2ಅ) (2) ಕಾರವಾರ ತಾಲೂಕಿನ ತೋಡುರು ಗ್ರಾ.ಪಂ. ಪುನರ್ವಸತಿ ಕೇಂದ್ರ ತೋಡುರ ಪುರುಷ ಶಿಪ್ಪ ಅಗೇರ ಮನೆಯಿಂದ ಅಂಗನವಾಡಿ–1 ಹೋಗುವ ರಸ್ತೆ ಕಾಂಕ್ರೀಟಿಕರಣ **RDPR/2026-27/RD/WORK_INDENT27377** ಅಂದಾಜು ಮೊತ್ತ: ರೂ. 15.00 ಲಕ್ಷ, ಮುಂಗಡ ಠೇವಣಿ ರೂ. 22,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(3) ಕಾರವಾರ ತಾಲೂಕಿನ ಮುದಗೇರಿ ಗ್ರಾ.ಪಂ. ಮೊಗಟ್ಟಾ ಅಂಬೇಡ್ಕರ್ ಕಾಲೋನಿಯಿಂದ ವಿದ್ಯಾನಗರ ಉಗ್ರಾಣಕ್ಕೆ ಹೋಗುವ ರಸ್ತೆ ಕಾಂಕ್ರೀಟಿಕರಣ **RDPR/2026-27/RD/WORK_INDENT27414** ಅಂದಾಜು ಮೊತ್ತ: ರೂ. 15.00 ಲಕ್ಷ, ಮುಂಗಡ ಠೇವಣಿ ರೂ. 22,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(1) ಕಾಮಗಾರಿಯ ಟೆಂಡರ್ ಡಕ್ಯುಮೆಂಟ್–ಬಿಡ್‌ಗಳನ್ನು ಮತ್ತು **Technical Bid** ನ್ನು ವೆಬ್‌ಸೈಟ್‌ನಲ್ಲಿ ತುಂಬಿ ಮರಳಿ ಸಲ್ಲಿಸುವ ಕೊನೆಯ ದಿನಾಂಕ: **29.06.2026** ರ ಮಧ್ಯಾಹ್ನ **16.30** ಘಂಟೆವರೆಗೆ. (2) ಕಾಮಗಾರಿಯ **Technical Bid** ನ್ನು ತೆರೆಯುವ ದಿನಾಂಕ: **30.06.2026** ಮಧ್ಯಾಹ್ನ **16.31** ಘಂಟೆಗೆ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ತಾಂತ್ರಿಕ ಬಿಡ್‌ಗಳಲ್ಲಿ ಯಶಸ್ವಿಯಾದ ಅರ್ಹ ಗುತ್ತಿಗೆದಾರರಿಗೆ ನಂತರದಲ್ಲಿ ತಿಳಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರು,
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ

DIPR/KWR/KSMCA/218/26-27 dt. 18.06.2026

ಕರ್ನಾಟಕ ಅರಣ್ಯ ಇಲಾಖೆ

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ,
ಕಾರ್ಯಯೋಜನೆ ಮತ್ತು ಅರಣ್ಯ ಸಮೀಕ್ಷೆ, ಬೆಳಗಾವಿ – 590016.
ದೂ.: 0831–2467218 ಇ–ಮೇಲ್: cfwpfsbgm@yahoo.co.in

ಸಂಖ್ಯೆ : ಬಿ1/ಬಜೆಟ್/ಕಾಮಗಾರಿ/ಇ-ಪ್ರೊಕ್ಯೂರ್‌ಮೆಂಟ್/ಡಿ.ಪಿ./ಟೆಂಡರ್/ 2026–27 ದಿನಾಂಕ : 17–06–2026

ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ (ಕೆ.ಪಿ.ಪಿ.ಪಿ.) ಪೋರ್ಟಲ್ ಮುಖಾಂತರ)

2026–27 ನೇ ಸಾಲಿನಲ್ಲಿ ಕಾರ್ಯಯೋಜನೆ ಮತ್ತು ಅರಣ್ಯ ಸಮೀಕ್ಷೆ ಬೆಳಗಾವಿ ವೃತ್ತದಿಂದ ಲೆಕ್ಕ ಶೀರ್ಷಿಕೆ "4406-Capital Outlay on Forestry & Wildlife-01-Forestry-101-Forest Conservation, Development & Regeneration-0-01-Survey and Demarcation, Forest Protection, Wildlife Management and Man-Animal Conflict Measures "Man-Animal Conflict-132-Other Capital Expenses (Demarcation and Protection of Forests Works)" ಇದರಡಿಯಲ್ಲಿ ಬೆಳಗಾವಿ, ಬಾಗಲಕೋಟ ಹಾಗೂ ಘಟಪ್ರಭಾ (ಗೋಕಾಕ) ಅರಣ್ಯ ವಿಭಾಗಗಳ ಅರಣ್ಯ ಪ್ರದೇಶಗಳಲ್ಲಿ ಸರ್ವೆ, ಡಿಮಾರ್ಕೇಷನ ಮತ್ತು ಅರಣ್ಯ ಗಡಿ ಸ್ತಂಭಗಳನ್ನು ನಿರ್ಮಿಸುವ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ : https://www.kppp.karnataka.gov.in ಮೂಲಕ ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ.

(ಒಟ್ಟು 198.7 ಕಿ.ಮೀ. ಮೋಜಣಿ ಮಾಡಿ ಗಡಿ ಗುರುತಿಸಿ 1345 ಅರಣ್ಯ ಗಡಿ ಸ್ತಂಭ ನಿರ್ಮಿಸುವ ಕಾಮಗಾರಿ). ಅಂದಾಜು ಗರಿಷ್ಠ ಮೊತ್ತ : ರೂ. 35.48279 ಲಕ್ಷಗಳು ಹಾಗೂ ಕನಿಷ್ಠ ಮೊತ್ತ : ರೂ. 12.66394 ಲಕ್ಷಗಳು. ಗುತ್ತಿಗೆದಾರರು ಈ ಮೇಲಿನ ಕಾಮಗಾರಿಗಳಿಗಾಗಿ ದಿನಾಂಕ : 02–07–2026 ರ ಸಂಜೆ 4.00 ಘಂಟೆಯವರೆಗೆ ಟೆಂಡರ್‌ನಲ್ಲಿ ಇ–ಪೋರ್ಟಲ್ ವೆಬ್‌ಸೈಟ್ ಮುಖಾಂತರ ಭಾಗವಹಿಸಬಹುದು. ತಾಂತ್ರಿಕ ಬಿಡ್ಡನ್ನು ದಿನಾಂಕ : 03–07–2026 ರ ಸಂಜೆ 4.00 ಘಂಟೆಗೆ ಹಾಗೂ ಆರ್ಥಿಕ ಬಿಡ್ಡನ್ನು ದಿನಾಂಕ : 04–07–2026 ರ ಮಧ್ಯಾಹ್ನ 12.00 ಘಂಟೆಯ ತೆರೆಯಲಾಗುವುದು.

ಟೆಂಡರ್ ಷರತ್ತುಗಳ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿರುವ ಕಚೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು. ಅಥವಾ ವೆಬ್‌ಸೈಟ್ ವಿಳಾಸ : https://www.kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಕಾರ್ಯಯೋಜನೆ & ಅರಣ್ಯ ಸಮೀಕ್ಷೆ, ಬೆಳಗಾವಿ.

ಡಿಐಪಿಆರ್/ ಬೆಳಗಾವಿ/459/ಮಸಿಕಾಸ/2026–27

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್, ಯಾದಗಿರಿ.
ಕಾರ್ಯಪಾಲಕ ಅಭಿಯಂತರರ ಕಛೇರಿ,
ಪಂಚಾಯತ ರಾಜ್ ಇಂಜಿನೀಯರಿಂಗ್, ವಿಭಾಗ,

ಎನ್.ವಿ.ಎಮ್. ಹೋಟೆಲ್ ಎದುರುಗಡೆ, ಸ್ಟೇಷನ್ ರಸ್ತೆ, ಯಾದಗಿರಿ–585202.

ಸಂಖ್ಯೆ:ಕಾಪಾಅ/ಪಂರಾಇಂ/ವಿಯಾ/ವಿವಿ.ಯೋ/ಟೆ.ಪ್ರ/ತಾಸ/2026–27/ 521 ದಿನಾಂಕ: 18.06.2026

ಸಂಕ್ಷಿಪ್ತ ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

1) **ಕಾಮಗಾರಿಗಳ ವಿವರ:** ಗುರುಮಿಟಕಲ್ ತಾಲೂಕಿನ ನಜರಾಪುರ ಚೆನ್ನಕೇಶ್ವರ ಟ್ಯಾಂಕ್‌ಗೆ ರಕ್ಷಣಾ ಗೋಡೆ ನಿರ್ಮಾಣ. ಇಂಡೆಂಟ್ ಸಂಖ್ಯೆ: RDPR/2025-26/FP/WORK_INDENT14967/CALL-3 **2) ಲೆಕ್ಕ ಶೀರ್ಷಿಕೆ:** 2024–25ನೇ ಸಾಲಿನ ರಾಜ್ಯವಿಪತ್ತು ಪರಿಹಾರ ಉಪಶಮನ ನಿಧಿ(ಎಸ್.ಡಿ.ಎಮ್.ಎಫ್) ಯೋಜನೆ. **3) ಟೆಂಡರಿಗಿಟ್ಟ ಅಂದಾಜು ಮೊತ್ತ:** ಕನಿಷ್ಠ ಮತ್ತು ಗರಿಷ್ಠ ರೂ. 25.00 ಲಕ್ಷ **4) ಗುತ್ತಿಗೆದಾರರ ದರ್ಜೆ:**4ನೇ ಮೇಲ್ಪಟ್ಟು ದರ್ಜೆ ಮೇಲ್ಪಟ್ಟು **5) ಟೆಂಡರ್ ಫಾರಂ ಪಡೆಯಲು ಕೊನೆಯ ದಿನಾಂಕ:** 20.06.2026 ರಿಂದ 01.07.2026 ಸಾಯಂಕಾಲ 4:00 ಗಂಟೆವರೆಗೆ **6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ:** ಇ–ಪ್ರೊಕ್ಯೂರ್‌ಮೆಂಟನಲ್ಲಿ ನಮೂದಿಸಿದಂತೆ (ಅರ್ಜಿ ಶುಲ್ಕ ಹಿಂದಿರುಗಿಸಲಾಗುವುದಿಲ್ಲಾ) **7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ:** 01.07.2026 ಸಾಯಂಕಾಲ 4:00 ಗಂಟೆವರೆಗೆ **8) ಟೆಂಡರ ತೆರೆಯುವ ದಿನಾಂಕ ಆಥೀಕ:** 03.07.2026 ಬೆಳ್ಳಿಗೆ 11:00 ನಂತರ **9) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ (ಕಛೇರಿ ಅವಧಿಯಲ್ಲಿ):** ಕಾರ್ಯಪಾಲಕ ಅಭಿಯಂತರರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಎನ್.ವಿ.ಎಮ್. ಹೋಟೆಲ್ ಎದುರುಗಡೆ, ಸ್ಟೇಷನ್ ರಸ್ತೆ, ಯಾದಗಿರಿ–585202 **10) ಅಂತರಜಾಲ ತಾಣದ ವಿಳಾಸ:** https://kppp.karnataka.gov.in

ಸೂಚನೆ:– ಟೆಂಡರರಿಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ https://kppp.karnataka.gov.in/ವೆಬ್‌ಸೈಟ್‌ನಲ್ಲಿ ಪಡೆಯಬಹುದು (ರವಾನಿಸಲಾಗಿದೆ).

ಸಹಿ/– ಕಾರ್ಯಪಾಲಕ ಇಂಜಿನೀಯರು,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ,
ಯಾದಗಿರಿ.

ವಾ.ಸಾ.ಸಂ.ಇ/ಯಾದಗಿರಿ/120/ಕೆ.ಎಸ್.ಎಂ.ಸಿ.ಎ/2026–27

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನೀಯರ್,
ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ ವಿಭಾಗ ಗದಗ

ನಂ: ಗ್ರಾ.ಕು.ನೀ.ಸ.&ನೈ.ವಿ/ಗದಗ/ ಸ.ಇಂ/ಟೆಂಡರ್/ 2026–27/369
ದಿನಾಂಕ: 18–06–2026

ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅಥವಾ ಪಂಚಾಯತ ರಾಜ್ ಇಂಜನೀಯರಿಂಗ ಇಲಾಖೆಯಲ್ಲಿ ನೋಂದಾಯಿಸಿದ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ–2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ, ಕುಡಿಯುವ ನೀರು ಸರಬರಾಜು ಯೋಜನೆ ಅಡಿಯಲ್ಲಿ ಗದಗ ಜಿಲ್ಲೆಯ ಸೇವಾ "ಇ. ಪ್ರೊಕ್ಯೂರಮೆಂಟ್–2" ಮುಖಾಂತರ ಟೆಂಡರ್ ಕರೆಯಲಾಗಿದೆ. **RWSSD/ 2026-27/SE0901 & RWSSD/2026-27/SE0902** & ಟೆಂಡರಗಿಟ್ಟ ಮೊತ್ತ ಕ್ರಮವಾಗಿ **ರೂ.77.05 ಲಕ್ಷ ಮತ್ತು ರೂ.41.38 ಲಕ್ಷ** ಈ ಕಾಮಗಾರಿಗಳ ವಿವರಗಳಿಗಾಗಿ ಹಾಗೂ ನಿಬಂಧನೆ ಮಾಡಿಕೊಳ್ಳಲು ಗುತ್ತಿಗೆದಾರರು ಕರ್ನಾಟಕ ಸರಕಾರದ "ಇ–ಪ್ರೋಕ್ಯೂರಮೆಂಟ್" ವೆಬ್‌ಸೈಟ್ **https://kppp.karnataka.gov.in** ನಲ್ಲಿ ನೋಡಿಕೊಳ್ಳಬಹುದು. ಟೆಂಡರ್ ಸಲ್ಲಿಸಲು ಪ್ರಾರಂಭವಾಗುವ ದಿನಾಂಕ: **19.06.2026** ಪ್ರಶ್ನೋತ್ತರದ ಕೊನೆಯ ದಿನಾಂಕ **24.06.2026** ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: **25.06.2026** ತಾಂತ್ರಿಕ ತೆರೆಯುವ ದಿನಾಂಕ: **29.06.2026** & ಆರ್ಥಿಕ ಬಿಡ್ ತೆರೆಯುವ ದಿನಾಂಕ: **30.06.2026.**

ಸಹಿ/–
ಕಾರ್ಯನಿರ್ವಾಹಕ ಇಂಜಿನೀಯರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಗದಗ.

ವಾ.ಸಾ.ಇ./ಗದಗ/ 125/2026–27/ಡಿಐಪಿಆರ್/ಹುಬ್ಬಳ್ಳಿ

ಕರ್ನಾಟಕ ಸರ್ಕಾರ

ಮುಖ್ಯ ವೈದ್ಯಾಧಿಕಾರಿಗಳ ಕಾರ್ಯಾಲಯ,
ತಾಲೂಕು ಸಾರ್ವಜನಿಕ ಆಸ್ಪತ್ರೆ, ಮಾನವಿ ರಾಯಚೂರು ಜಿಲ್ಲೆ

ಫೋನ್:08538–295296 ಇ-ಮೇಲ್: cmomanvi@gmail.com

ಸಂಖ್ಯೆ:ತಾ.ಸಾ.ಆ.(ಮಾ)/ಹೊ.ಗು.ಟೆಂಡರ/02/2026–27 ದಿನಾಂಕ: 17–06–2026

:: ಇ–ಟೆಂಡರ್ ಪ್ರಕಟಣೆ ::

ವಿಷಯ:–2026–27 ನೇ ಸಾಲಿಗಾಗಿ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಮಾನವಿ, ರಾಯಚೂರು ಜಿಲ್ಲೆಯಲ್ಲಿ ಖಾಲಿ ಇರುವ ನಾನ್ ಕ್ಲಿನಿಕಲ್, ಗ್ರೂಪ್–ಡಿ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಇ-ಟೆಂಡರ್ ಆಹ್ವಾನಿಸುವ ಬಗ್ಗೆ.

ಉಲ್ಲೇಖ:– 4) ಮಾನ್ಯ ಆಯುಕ್ತರು, ಆರೋಗ್ಯ ಮತ್ತು ಕು.ಕ ಸೇವೆಗಳ ಆಯುಕ್ತಾಲಯ ಬೆಂಗಳೂರು. ಇವರ ಸುಂಚನಾ ಸಂಖ್ಯೆ HFWS-19011/124/2025(E-18400947) ದಿನಾಂಕ:17/ 07/2025 ಮತ್ತು ದಿನಾಂಕ:19/07/2025
5) ಮಾನ್ಯ ಜಿಲ್ಲಾಧಿಕಾರಿಗಳು ರಾಯಚೂರು ಇವರ ಕಡತ ಅನುಮೋದನೆ ದಿನಾಂಕ: 03–06–2026.

ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಮಾನವಿ, ರಾಯಚೂರು ಜಿಲ್ಲೆಯಲ್ಲಿ ಖಾಲಿ ಇರುವ 13 ಗ್ರೂಪ್ ಡಿ ಹುದ್ದೆಗಳಲ್ಲಿ ಶೇ.80% ಭರ್ತಿ ಅಂದರೆ 40% ಗ್ರೂಪ್ ಡಿ 05 ಹುದ್ದೆಗಳು, 40% ನಾನ್ ಕ್ಲಿನಿಕಲ್ 05 ಹುದ್ದೆಗಳು ಹುದ್ದೆಗಳನ್ನು ಸೇವೆಯನ್ನು 2026–27 ನೇ ಸಾಲಿಗಾಗಿ ಟೆಂಡರು ಕಾರ್ಯಾದೇಶ ನೀಡಿದ ದಿನಾಂಕ ದಿಂದ 31–03–2027 ರ ವರೆಗೆ ಹೊರ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಅರ್ಹರಾದ ಗುತ್ತಿಗೆದಾರರಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ವೇದಿಕೆ ಮೂಲಕ ಇ-ಟೆಂಡರ್ ಕರೆಯಲಾಗಿದೆ. ಇ-ಟೆಂಡರ್ ಸಂಖ್ಯೆ: TGH(M)/TENDER/ /2026-27. ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ನಿಬಂಧನೆಗಳನ್ನು, ಟೆಂಡರ್ ಫಾರಂ ಮತ್ತು ಆರ್ಥಿಕ ಬಿಡ್‌ಗಳನ್ನು ದಿನಾಂಕ:–19–06–2026 ರಿಂದ ದಿ: 07–07–2026 ರಂದು ಸಂಜೆ 4.30 ಗಂಟೆಯವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇಚ್ಛೆಯುಳ್ಳ ಗುತ್ತಿಗೆದಾರರು ತಮ್ಮ ತಾಂತ್ರಿಕ ದರಗಳುಳ್ಳ ಆರ್ಥಿಕ ಬಿಡ್ ಹಾಗೂ ಇನ್ನಿತರ ಅಗತ್ಯ ದೃಢೀಕೃತ ದಾಖಲಾತಿಗಳನ್ನು ದಿ: 07–07–2026 ರಂದು ಸಂಜೆ 4.30 ಗಂಟೆಯೊಳಗೆ ಅಪ್‌ಲೋಡ್ ಮಾಡತಕ್ಕದ್ದು, ಟೆಂಡರುಗಳನ್ನು ದಿ: 09–07–2026 ರಂದು ಮಧ್ಯಾಹ್ನ 12.30–00 ಗಂಟೆಗೆ ಮುಖ್ಯ ವೈದ್ಯಾಧಿಕಾರಿಗಳು, ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಮಾನವಿ, ರಾಯಚೂರು ಇವರ ಕಛೇರಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್‌ಗಳನ್ನು ತೆರೆದು ಸಮಿತಿಯ ಪರಿಶೀಲಿಸಿ ಎಲ್ಲಾ ದಾಖಲಾತಿಗಳನ್ನು ಮತ್ತು ಇ.ಎಂ.ಡಿ ಮೊತ್ತವನ್ನು ಅಪ್‌ಲೋಡ್ ಮಾಡಿರುವ ಅರ್ಹ ಟೆಂಡರುದಾರರ ಆರ್ಥಿಕ ಬಿಡ್‌ಗಳನ್ನು ಡೌನ್‌ಲೋಡ್ ಮಾಡಿ ಟೆಂಡರನ್ನು ಮಾನ್ಯ ಜಿಲ್ಲಾಧಿಕಾರಿಗಳು, ರಾಯಚೂರು ಅನುಮೋದನೆಯಿಂದ ಅಂತಿಮಗೊಳಿಸಲಾಗುವುದು.

ಟೆಂಡರ್ ಷರತ್ತುಗಳು ಮತ್ತು ನಿಬಂಧನೆಗಳು, ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ಗ್ರೂಪ್ ಡಿ ನೌಕರರು ನಿರ್ವಹಿಸಬೇಕಾದ ಕೆಲಸಗಳ ವಿವರ (ಅನುಬಂಧ–I೦ರಲ್ಲಿ) ಹಾಗೂ ಇ.ಎಂ.ಡಿ ಮೊತ್ತ ರೂ.50,000/–ಗಳ ವಿವರ ಟೆಂಡರ ಫಾರ್ಮ್‌ಗಳಲ್ಲಿ ನಮೂದಿಸಲಾಗಿದೆ. ಈ ಟೆಂಡರ್ ಫಾರ್ಮ್ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಲ್ಲಿ (ವೆಬ್‌ಸೈಟ್:www.kppp.karnataka.gov.in) ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರನ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದಾಗಿದೆ. ಟೆಂಡರ್ ಮೊತ್ತ ರೂ. 25,00,000/–. ಒಂದು ವೇಳೆ ತಾಂತ್ರಿಕ ಹಾಗೂ ಆರ್ಥಿಕ ಬಿಡ್‌ನ ತೆರೆಯುವ ದಿನಾಂಕದಂದು ಸರ್ಕಾರಿ ರಜೆ ಘೋಷಣೆಯಾದಲ್ಲಿ ಅಥವಾ ಅನಿವಾರ್ಯ ಕಾರಣಗಳಿಂದ ಮುಂದಿನ ಕರ್ತವ್ಯದ ದಿನದಂದು ಟೆಂಡರ್ ತೆರೆಯಲಾಗುವುದು.

1) ಟೆಂಡರ್ ಪ್ರಕಟಣೆ ಸಂಖ್ಯೆ: TGH(M)/TENDER/02/2026-27 2) ಟೆಂಡರ್ ದಾಖಲಾತಿಗಳನ್ನು upload ಮಾಡಲು ಆರಂಭ ದಿನಾಂಕ: 19–06–2026 3) ಟೆಂಡರ್ ಅರ್ಜಿಯನ್ನು ಸಲ್ಲಿಸುವ ದಿನಾಂಕ: 06–07–2026 04.30 ಸಂಜೆ ಗಂಟೆಗೆ 4) ಟೆಂಡರ್ ದಾಖಲಾತಿಗಳನ್ನು upload ಮಾಡಲು ಅಂತಿಮ ದಿನಾಂಕ: 07–07–2026 ರ ಸಂಜೆ 04.30 ಗಂಟೆಗೆ 5) ದಾಖಲಾತಿಗಳ ಲಕೋಟೆಗಳನ್ನು ತೆರೆದು ಪರಿಶೀಲಿಸುವ ದಿನಾಂಕ ಮುಖ್ಯ ವೈದ್ಯಾಧಿಕಾರಿಗಳ ಕಾರ್ಯಾಲಯ, ತಾಲೂಕು ಸಾರ್ವಜನಿಕ ಆಸ್ಪತ್ರೆ, ಮಾನವಿ, ರಾಯಚೂರು ದಿನಾಂಕ: 09–07–2026 ರ ಮಧ್ಯಾಹ್ನ 12.30–00 ಗಂಟೆಗೆ 6) ಅರ್ಜಿ ಶುಲ್ಕ: As per E- Tender Portal 7) EMD ಮೊತ್ತ (2 % on Tender Value): ರೂ. 50,000 /- 8) ಟೆಂಡರನ ಒಟ್ಟು ಮೊತ್ತ: ರೂ. 25,00,000/–

ಸಹಿ/– ಮುಖ್ಯ ವೈದ್ಯಾಧಿಕಾರಿಗಳು
ತಾಲೂಕು ಸಾರ್ವಜನಿಕ ಆಸ್ಪತ್ರೆ ಮಾನವಿ, ರಾಯಚೂರು

DIP/RCR/130/KSMCA/132/2026-27

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕಲಬುರಗಿ

ಸಂಖ್ಯೆ: ಕಾನಿಅ/ಪಂರಾಇಂ/ವಿಕ/ತಾಶಾ/ಟೆಂಡರ/2026–27/1111 ದಿನಾಂಕ: 18/06/2026

:: ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ ಪ್ರಕಟಣೆ ::

1) ಕಾಮಗಾರಿಗಳ ಇಂಡೆಂಟ್ ಸಂಖ್ಯೆ: 1. ಅಫಜಲಪೂರ ತಾಲೂಕಿನ 2 ಕಾಮಗಾರಿಯ ಇಂಡೆಂಟ್ ಸಂಖ್ಯೆ : (1) 27157 (2) 27452, 2. ಆಳಂದ ತಾಲೂಕಿನ 3 ಕಾಮಗಾರಿಗಳ ಇಂಡೆಂಟ್ ಸಂಖ್ಯೆ : (1) 27415 (2) 27359 (3) 27417, 3. ಚಿತ್ತಾಪೂರ ತಾಲೂಕಿನ 1 ಕಾಮಗಾರಿಯ ಇಂಡೆಂಟ್ ಸಂಖ್ಯೆ : (1)27334 4. ಜೇವರ್ಗಿ ತಾಲೂಕಿನ 3 ಕಾಮಗಾರಿಗಳ ಇಂಡೆಂಟ್ ಸಂಖ್ಯೆ : (1) 27332 (2) 27334 (3) 27455, 5. ಕಲಬುರಗಿ ತಾಲೂಕಿನ 3 ಕಾಮಗಾರಿಗಳ ಇಂಡೆಂಟ್ ಸಂಖ್ಯೆ : (1) 27354 (2) 27456 (3) 27294, 6. ಸೇಡಂ ತಾಲೂಕಿನ 1 ಕಾಮಗಾರಿಗಳ ಇಂಡೆಂಟ್ ಸಂಖ್ಯೆ : (1) 27355, 7. ಯಡ್ರಾಮಿ ತಾಲೂಕಿನ 1 ಕಾಮಗಾರಿಗಳ ಇಂಡೆಂಟ್‌ಸಂಖ್ಯೆ : (1) 26033 ಒಟ್ಟು 14 ಕಾಮಗಾರಿಗಳು, 2) ಲೆಕ್ಕ ಶೀರ್ಷಿಕೆ: DDPI / KGBV / MLC LAD / Dharmik Datti / MLA LAD / PMSHREE / DMF / 5054, 3) ಟೆಂಡರಗಿಟ್ಟ ಅಂದಾಜು ಮೊತ್ತ: ಕನಿಷ್ಠ **ರೂ. 2,53,911.1, ಗರಿಷ್ಠ ರೂ. 41,94,479.01,** 4) ಗುತ್ತಿಗೆದಾರರ ಅರ್ಹತೆ: 4ನೇ ದರ್ಜೆ, 3ನೇ ದರ್ಜೆ & ಮೇಲ್ಪಟ್ಟು, 5) ಟೆಂಡರ ಫಾರಂ ಪಡೆಯುವ ದಿನಾಂಕ: **18–06–2026 ರಿಂದ 30–06–2026 ಸಾಯಂಕಾಲ 4.00 ಗಂಟೆವರೆಗೆ.** 6) ಟೆಂಡರ ಅರ್ಜಿ ಬೆಲೆ: ಇ–ಪ್ರೊಕ್ಯೂರ್‌ಮೆಂಟ್ ನಿಯಮಾನುಸಾರ 7) ಇ.ಎಂ.ಡಿ.: ಕನಿಷ್ಠ ರೂ. 6,500.00, ಗರಿಷ್ಠ ರೂ. 84,000.00, 8) ಟೆಂಡರ ಸಲ್ಲಿಸುವ ದಿನಾಂಕ: **18–06–2026 ರಿಂದ 30–06–2026 ಸಾಯಂಕಾಲ 4.00 ಗಂಟೆವರೆಗೆ,** 9) ಬಿಡ್ ತೆರೆಯುವ ದಿನಾಂಕ: **01–07–2026 ಸಾಯಂಕಾಲ 4.00 ಗಂಟೆ ನಂತರ,** 10) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಹುಮನಾಬಾದ ರಸ್ತೆ ರಾಜಾಪೂರ ಕಲಬುರಗಿ. 11) ಅಂತರಜಾಲ ತಾಣದ ವಿಳಾಸ: **www.kppp.karnataka.gov.in**

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/231/ಕೆ.ಎಸ್.ಎಂ.ಸಿ.ಎ/2026–27

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಆಸ್ತಿ ಅಧಿಕಾರಿಗಳ ಕಛೇರಿ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ,
ಬೆಂಗಳೂರು–560065

ಸಂಖ್ಯೆ : ಆಅ/ಟಿ.ಎನ್/8/2026–27 ದಿನಾಂಕ : 16–06–2026

ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕಾಮಗಾರಿ ಕೆಲಸಗಳನ್ನು ಮಾಡಲು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ–4ರಂತೆ ನೋಂದಣಿ ಪಡೆದ ಕಡಿಮೆ ನಿರ್ಣಾಯಕ/ಪ್ರತಿಷ್ಠಿತ ಗುತ್ತಿಗೆದಾರರಿಂದ ಕ್ರಮ ಸಂಖ್ಯೆ.1 ರ ಕಾಮಗಾರಿಗೆ ಟೆಂಡರನ್ನು ಕರೆಯಲಾಗಿದೆ. ಟೆಂಡರ್ ಪ್ರಕಟಣೆಯ ವಿವರ, ಟೆಂಡರ್ ದಾಖಲಾತಿ, ಕಾಮಗಾರಿಯ ವಿವರಗಳು ವೆಬ್‌ಸೈಟ್ https://www.kppp.karnataka.gov.in. ರಲ್ಲಿ ದೊರೆಯುತ್ತದೆ. ಟೆಂಡರ್ ಡಾಕ್ಯುಮೆಂಟ್‌ಗಳ ಶುಲ್ಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಮತ್ತು ಇಎಂಡಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರವೆ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವುದು.

ಮೇಲಿನ ಕಾಮಗಾರಿಯು ದ್ವಿಲಕೋಟೆ ಪದ್ಧತಿಯಲ್ಲಿರುತ್ತದೆ. ದ್ವಿಲಕೋಟೆ ಪದ್ಧತಿಯ ಷರತ್ತುಗಳ ವಿವರಗಳನ್ನು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನಿಂದ ಅಪ್‌ಲೋಡ್ ಮಾಡಲಾಗಿದೆ.

ಖಾಲಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು **www.kppp.karnataka.gov.in** ಇಂದ ಪಡೆಯಬಹುದು. ಪ್ರೀ–ಬಿಡ್ ಮೀಟಿಂಗ್ ದಿನಾಂಕ : **02–07–2026ರಂದು 10.30ಕ್ಕೆ** ನಡೆಸಲಾಗುವುದು. ಟೆಂಡರ್ ಸಲ್ಲಿಸಲು ಕೊನೆ ದಿನಾಂಕ : **04–07–2026 ರಂದು ಸಾಯಂಕಾಲ 4.00 ಗಂಟೆಯವರೆಗೆ** ಅಳಿಸುವುದು. ತಾಂತ್ರಿಕ ಬಿಡ್ಡನ್ನು ದಿನಾಂಕ : **07–07–2026 ರಂದು ಬೆಳಿಗ್ಗೆ 10.30ಕ್ಕೆ** ತೆರೆಯಲಾಗುವುದು ಮತ್ತು ಹಣಕಾಸು ಬಿಡ್ಡನ್ನು ದಿನಾಂಕ: **10–07–2026ರಂದು ಬೆಳಿಗ್ಗೆ 10.30ಕ್ಕೆ** ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ದೂರವಾಣಿ ಸಂಖ್ಯೆ**080–23332765**ರಲ್ಲಿ ಸಂಪರ್ಕಿಸಬಹುದು. ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ–**support@ eprochelpdesk.com** ಅಥವಾ **8046010000** ಮತ್ತು **8068948777.**

ಸಹಿ/–
ಆಸ್ತಿ ಅಧಿಕಾರಿಗಳು

DIPR/CP/1254/NR/2026-27

ಶನಿವಾರದ ಪಂದ್ಯಗಳು

ಬ್ರೆಜಿಲ್-ಹೈಟಿ, (ಬೆಳಗ್ಗೆ 6:00)

ಟರ್ಕಿ-ಪರಾಗ್ವೆ, (ಬೆಳಗ್ಗೆ 8:30)

ನೆದರ್ಲೆಂಡ್ಸ್-ಸ್ವೀಡನ್, (ರಾತ್ರಿ 10:30)

ಜರ್ಮನಿ-ಐವಿರಿ ಕೋಸ್ಟ್, (ರಾತ್ರಿ 1:30)

ಕಿರುಸುದ್ದಿ

ಹ್ಯಾಟ್ರಿಕ್ ಗೆಲುವು ಭಾರತದ ಗುರಿ

ಚೆನ್ನೈ: ಎರಡು ಪಂದ್ಯಗಳಲ್ಲಿ ಗೆಲುವು ಸಾಧಿಸಿದ್ದಲ್ಲದೆ ಸರಣಿ ವಶಪಡಿಸಿಕೊಂಡಿರುವ ಭಾರತ ತಂಡವು ಮೂರನೇ ಹಾಗೂ ಸರಣಿಯ ಅಂತಿಮ ಪಂದ್ಯದಲ್ಲಿ ಅಫ್ಘಾನಿಸ್ತಾನ ತಂಡವನ್ನು ಮಣಿಸಿ ವೈಟ್‌ವಾಷ್ ಸಾಧಿಸುವುದಕ್ಕೆ ಸಿದ್ಧವಾಗಿದೆ. ಶುಭಮನ್ ಗಿಲ್ ನೇತೃತ್ವದಲ್ಲಿ ಆಡುತ್ತಿರುವ ಭಾರತ ಕಳೆದ ಎರಡು ಪಂದ್ಯಗಳನ್ನು ಸರಳವಾಗಿ ಗೆಲುವು ಸಾಧಿಸಿದೆ. ಮೊದಲ ಪಂದ್ಯಕ್ಕೆ ಮಳೆ ಅಡ್ಡಿಯಾದರೂ ಭಾರತ 25 ಓವರ್‌ಗಳ ಪಂದ್ಯದಲ್ಲಿ ಜಯಸಿತ್ತು. ಎರಡನೇ ಪಂದ್ಯ ಲಖನೌನಲ್ಲಿ ನಡೆದಾಗ 50 ಓವರ್ ಪಂದ್ಯದಲ್ಲೂ ಸರಳವಾಗಿ ಗೆಲುವು ಸಾಧಿಸಿತ್ತು. ಹ್ಯಾಟ್ರಿಕ್ ಗೆಲುವಿಗಾಗಿ ಶ್ರಮಿಸಲಿರುವ ಭಾರತ ತಂಡವು ಗೆಲುವಿನ ವಿಶ್ವಾಸದಲ್ಲಿದೆ. ರೋಹಿತ್ ಶರ್ಮ, ಗಿಲ್, ಕಿಶನ್ ಯಥಾಪ್ರಕಾರ ಉತ್ತಮ ಲಯದಲ್ಲಿದ್ದಾರೆ. ಬ್ಯಾಟಿಂಗ್ ವಿಭಾಗವನ್ನು ಶ್ರೇಯಸ್ ಅಯ್ಯರ್ ಮತ್ತು ರಾಹುಲ್ ಗಟ್ಟಿಗೊಳಿಸಿದ್ದಾರೆ. ಸರಣಿಯುದ್ದಕ್ಕೂ ಉತ್ತಮ ಬೌಲಿಂಗ್ ಮಾಡಿರುವ ಗುರ್ನೂರ್ ಮೇಲೆ ನಿರೀಕ್ಷೆಗಳು ಹೆಚ್ಚಿವೆ.

ರಾಣಾ ಕಂಬ್ಯಾಕ್: ಗಾಯದಿಂದಾಗಿ ಸ್ಪರ್ಧಾತ್ಮಕ ಕ್ರಿಕೆಟ್‌ನಿಂದ ದೂರ ಉಳಿದಿದ್ದ ಹರ್ಷಿತ್ ರಾಣಾ ಮತ್ತೆ ಕಂಬ್ಯಾಕ್ ಮಾಡುವುದಕ್ಕೆ ಸಿದ್ಧರಾಗಿದ್ದು, ಮೂರನೇ ಪಂದ್ಯಕ್ಕೆ ಅವರನ್ನು ಆಯ್ಕೆ ಮಾಡಲಾಗಿದೆ. ಗಾಯದ ಕಾರಣಗಳಿಂದಾಗಿ ಸ್ಪರ್ಧಾತ್ಮಕ ಕ್ರಿಕೆಟ್, ಐಪಿಎಲ್‌ನಿಂದಲೂ ದೂರ ಉಳಿದಿದ್ದ ಅವರು ಕೊನೆಯ ಪಂದ್ಯದಲ್ಲಿ ಕಣಕ್ಕಿಳಿಯುವ ನಿರೀಕ್ಷೆಯಿದೆ.

ಪಂದ್ಯದ ವಿವರ:
ಯಾವಾಗ: ಶನಿವಾರ, ಎಲ್ಲಿ: ಚೆನ್ನೈ
ಸಮಯ: ಮಧ್ಯಾಹ್ನ 1:30

ಭಾರತಕ್ಕೆ ಜರ್ಮನ್ ಶಾಕ್

ಹೊಸದಿಲ್ಲಿ: ಗುರುವಾರ ಆಂಟ್ವೆರ್ಪ್‌ನಲ್ಲಿ ನಡೆದ ಎಫ್‌ಐಎಚ್ ಪ್ರೊ ಲೀಗ್‌ನಲ್ಲಿ ಭಾರತ ತಂಡವು ಒಂದು ಗೋಲಿನ ಮುನ್ನಡೆಯನ್ನು ಕಳೆದುಕೊಂಡು ಹಾಲಿ ವಿಶ್ವ ಚಾಂಪಿಯನ್ ಜರ್ಮನಿ ವಿರುದ್ಧ 1-2 ಅಂತರದ ಸೋಲನ್ನು ಅನುಭವಿಸಿತು.ಮೊದಲಾರ್ಧದಲ್ಲಿ ಗೋಲು ರಹಿತ ಪಂದ್ಯದ ನಂತರ, 38 ನೇ ನಿಮಿಷದಲ್ಲಿ ಜುಗ್ರಾಜ್ ಸಿಂಗ್ ಪೆನಾಲ್ಟಿ ಕಾರ್ನರ್ ಅನ್ನು ಗೋಲ್ ಆಗಿ ಪರಿವರ್ತಿಸುವ ಮೂಲಕ ಭಾರತವು ಡೆಡ್‌ಲಾಕ್ ಅನ್ನು ಮುರಿದಿತು. ಬುಧವಾರದ ಅದ್ಭುತ 3-1 ಗೆಲುವಿನ ನಂತರ ಭಾರತವು ಜರ್ಮನಿಯ ವಿರುದ್ಧ ಸತತ ಎರಡನೇ ಗೆಲುವಿನ ಹಾದಿಯಲ್ಲಿ ಸಾಗಿತು. ಆದರೆ ಜರ್ಮನ್ನರು ಕಂಬ್ಯಾಕ್ ಮಾಡಿ ಗೆಲುವು ಸಾಧಿಸಿದರು.

ಶ್ರೇಯಾಂಕಾ ಹೊರಕ್ಕೆ, ಪ್ರೇಮಾ ಬದಲಿ ಆಟಗಾರ್ತಿ

ಲೀಡ್ಸ್: ಸ್ಪಿನ್ನರ್ ಶ್ರೇಯಾಂಕಾ ಪಾಟೀಲ್ ಅವರು ಗಾಯದಿಂದಾಗಿ ಪ್ರತಿಷ್ಠಿತ ಮಹಿಳಾ ಟಿ20 ವಿಶ್ವಕಪ್ ಪಂದ್ಯಾವಳಿಯಿಂದಲೇ ಹೊರಬಿದ್ದಿದ್ದಾರೆ. ಅವರ ಬದಲಿಗೆ ಪ್ರೇಮಾ ರಾವತ್ ಭಾರತ ತಂಡವನ್ನು ಸೇರಿಕೊಳ್ಳಲು ಸಿದ್ಧರಾಗಿದ್ದಾರೆ. ತಮ್ಮ ಕರಾರುವಾಕ್ ಬೌಲಿಂಗ್ ದಾಳಿಯೊಂದಿಗೆ ಪಂದ್ಯಗಳ ಮೇಲೆ ಇಂಪ್ಯಾಕ್ಟ್ ಮಾಡುತ್ತಾ ತಂಡದ ಪ್ರಮುಖ ಆಟಗಾರ್ತಿ ಅನಿಸಿಕೊಂಡಿದ್ದ ಶ್ರೇಯಾಂಕಾ ಪಾಟೀಲ್ ನೆದರ್ಲೆಂಡ್ಸ್ ವಿರುದ್ಧ ನಡೆದ ಪಂದ್ಯದಲ್ಲಿ ಗಾಯಗೊಂಡರು. ಬೌಲಿಂಗ್ ಮಾಡುವ ವೇಳೆ ಗಾಯಗೊಂಡ ಅವರು ಚೇತರಿಸಿಕೊಳ್ಳಲು ಸಮಯ ತೆಗೆದುಕೊಳ್ಳಲಿದ್ದಾರೆ. ಅವರ ಬದಲಿಗೆ ಹಿಂದೆಂದೂ ಆಡದ ಪ್ರೇಮಾ ರಾವತ್ ಅವರನ್ನು ತಂಡದಲ್ಲಿ ಆಯ್ಕೆ ಮಾಡಲಾಗಿದೆ. ಬಿಸಿಸಿಐ ಮನವಿಯನ್ನು ಐಸಿಸಿ ಪುರಸ್ಕರಿಸಿದೆ. ಮಹಿಳಾ ಪ್ರೀಮಿಯರ್ ಲೀಗ್ ಪಂದ್ಯಾವಳಿ ಮತ್ತು ರೈಸಿಂಗ್ ಏಷ್ಯಾಕಪ್‌ನಲ್ಲಿ ಮಿಂಚಿರುವ ಅವರು ಮುಂದಿನ ದ.ಆಫ್ರಿಕಾ ವಿರುದ್ಧದ ಪಂದ್ಯಕ್ಕೂ ಮುನ್ನವೇ ತಂಡ ಸೇರಿಕೊಳ್ಳಲಿದ್ದಾರೆ.

ರಗ್ಬಿ: ಮುಂಬೈ, ದೆಹಲಿ ತಂಡಗಳಿಗೆ ಜಯ

ಹೈದರಾಬಾದ್: ಇಲ್ಲಿನ ಗಚಿಬೌಲ್‌ನ ಗಂತಿ ಮೋಹನ ಚಂದ್ರ ಬಾಲಯೋಗಿ ಅಥ್ಲೆಟಿಕ್ ಕ್ರೀಡಾಂಗಣದಲ್ಲಿ ನಡೆದ ರಗ್ಬಿ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಪಂದ್ಯಗಳಲ್ಲಿ ಮುಂಬೈ ಡ್ರೀಮರ್ಸ್ ತಂಡವು ದೆಹಲಿ ರೆಡ್ಜ್ ವಿರುದ್ಧ ಸುಲಭ ಜಯ ಸಾಧಿಸಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು. ಮಹಿಳಾ ವಿಭಾಗದಲ್ಲಿ ಚೆನ್ನೈ ಬುಲ್ಸ್ ತಂಡವು ದೆಹಲಿ ರೆಡ್ಜ್ ವಿರುದ್ಧ ರೋಚಕ ಗೆಲುವು ದಾಖಲಿಸಿತು. ಮುಂಬೈ ಡ್ರೀಮರ್ಸ್ 31-14ರಿಂದ ದೆಹಲಿ ರೆಡ್ಜ್‌ನ್ನು ಮಣಿಸಿತು. ಮಹಿಳೆಯರ ವಿಭಾಗದಲ್ಲಿ ಚೆನ್ನೈ ಬುಲ್ಸ್ 31-27ರಿಂದ ದೆಹಲಿ ರೆಡ್ಜ್‌ನ್ನು ಮಣಿಸಿತು.

ಆತಿಥ್ಯ ತಂಡಕ್ಕೆ ಸತತ ಎರಡನೇ ಗೆಲುವು | 32ರ ಸುತ್ತಿಗೆ ಲಗ್ಗೆ

ನಾಕೌಟ್‌ಗೇರಿದ ಮೆಕ್ಸಿಕೊ!

ಗ್ವಾಡಲಹಾರಾ (ಮೆಕ್ಸಿಕೊ): ಆತಿಥೇಯ ಮೆಕ್ಸಿಕೊ ತಂಡ ಫಿಫಾ ವಿಶ್ವಕಪ್ 2026ರಲ್ಲಿ ತನ್ನ ಗೆಲುವಿನ ಓಟವನ್ನು ಮುಂದುವರಿಸಿದ್ದು, ದಕ್ಷಿಣ ಕೊರಿಯಾವನ್ನು 1-0 ಗೋಲುಗಳಿಂದ ಮಣಿಸಿ ನಾಕೌಟ್ ಹಂತ ಪ್ರವೇಶಿಸಿದ ಮೊದಲ ತಂಡವಾಗಿದೆ.

ದೊಡ್ಡಸಂಖ್ಯೆಯ ಪ್ರೇಕ್ಷಕರಸಮ್ಮುಖದಲ್ಲಿನಡೆದ ಪಂದ್ಯದಲ್ಲಿ ಎರಡೂ ತಂಡಗಳು ಮೊದಲಾರ್ಧದಲ್ಲಿ ಪರಿಣಾಮಕಾರಿ ದಾಳಿ ನಡೆಸಲು ವಿಫಲವಾದವು. ಗೋಲು ಅವಕಾಶಗಳು ವಿರಳವಾಗಿದ್ದ ಕಾರಣ ಮೊದಲ 45 ನಿಮಿಷ ಗೋಲುರಹಿತವಾಗಿತ್ತು.

ಆದರೆ ದ್ವಿತೀಯಾರ್ಧ ಆರಂಭವಾದ ಐದು ನಿಮಿಷ ನಂತರ 50ನೇ ನಿಮಿಷದಲ್ಲಿ ದಕ್ಷಿಣ ಕೊರಿಯಾ ಗೋಲ್‌ಕೀಪರ್ ಕಿಮ್ ಸೆಯುಂಗ್-ಗ್ಯೂ ಹಾಗೂ ರಕ್ಷಣಾ ಆಟಗಾರ ಲೀ ಜೆ-ಹ್ಯುಕ್ ನಡುವೆ ಉಂಟಾದ ಗೊಂದಲದಿಂದ ಚೆಂಡು ಕೈತಪ್ಪಿತು. ಅದನ್ನು ಸದುಪಯೋಗಪಡಿಸಿಕೊಂಡ ಲೂಯಿಸ್ ರೋಮೊ ಖಾಲಿ ಗೋಲ್‌ಪೋಸ್ಟ್‌ಗೆ ಚೆಂಡು ತಳ್ಳಿ ಮೆಕ್ಸಿಕೊಗೆ ಮುನ್ನಡೆ ತಂದುಕೊಟ್ಟರು.

ಗೋಲು ಬಿಟ್ಟ ನಂತರ ದಕ್ಷಿಣ ಕೊರಿಯಾ ಆಕ್ರಮಣಕಾರಿ ಆಟಕ್ಕೆ ಮೊರೆ ಹೋದರೂ, ಮೆಕ್ಸಿಕೊ ಗೋಲ್‌ಕೀಪರ್ ರೌಲ್ ರಾಂಗೆಲ್ ಗೋಡೆ ರೀತಿಯಲ್ಲಿ ನಿಂತರು. 87ನೇ ನಿಮಿಷದಲ್ಲಿ ಚೋ ಗುಯೆ-ಸುಂಗ್ ಅವರ ಹೆಡರ್ ಅನ್ನು ಅದ್ಭುತವಾಗಿ ತಡೆದ ರಾಂಗೆಲ್, ಅದರ ತಕ್ಷಣವೇ ಯಾಂಗ್ ಹ್ಯೂನ್-ಜುನ್ ಅವರ ರೀಬೌಂಡ್ ಪ್ರಯತ್ನವನ್ನೂ ವಿಫಲಗೊಳಿಸಿ ತಂಡದ ಗೆಲುವು ಖಚಿತಪಡಿಸಿದರು.

ಅಗ್ರಸ್ಥಾನದೊಂದಿಗೆ ನಾಕೌಟ್‌ಗೆ ಲಗ್ಗೆ: ಈ ಗೆಲುವಿನೊಂದಿಗೆ ಮೆಕ್ಸಿಕೊ ಎರಡು ಪಂದ್ಯಗಳಿಂದ ಆರು ಅಂಕಗಳನ್ನು ಪಡೆದು ಎ ಗುಂಪಿನಲ್ಲಿ ಅಗ್ರಸ್ಥಾನವನ್ನು ಭದ್ರಪಡಿಸಿಕೊಂಡಿದೆ. 2022ರ ವಿಶ್ವಕಪ್‌ನಲ್ಲಿ ಗುಂಪು ಹಂತದಲ್ಲೇ ಹೊರಬಿದ್ದಿದ್ದ ಮೆಕ್ಸಿಕೊ, ಈ ಬಾರಿ ತವರಿನ ಅಭಿಮಾನಿಗಳ ಬೆಂಬಲದೊಂದಿಗೆ ಭರ್ಜರಿ ಪುನರಾಗಮನ ಮಾಡಿದೆ. ಮೊದಲ ಪಂದ್ಯದಲ್ಲೇ ಆಫ್ರಿಕಾ ವಿರುದ್ಧ ಗೆದ್ದಿದ್ದ ಮೆಕ್ಸಿಕೊ ಈ ಗೆಲುವಿನೊಂದಿಗೆ ನಾಕೌಟ್ ಗೇರಿದೆ.

- ಲೂಯಿಸ್ ರೋಮೊ (50ನೇ ನಿ.) ಮೆಕ್ಸಿಕೊ
- ಪಂದ್ಯಶ್ರೇಷ್ಠ: ರೌಲ್ ರಾಂಗೆಲ್ (ಮೆಕ್ಸಿಕೊ)
- 87ನೇ ನಿಮಿಷದಲ್ಲಿ ಸತತ ಎರಡು ಅದ್ಭುತ ಸೇವ್‌ಗಳ ಮೂಲಕ ತಂಡದ ಗೆಲುವು ಉಳಿಸಿದರು.



ಸ್ವಿಟ್ಜರ್ಲೆಂಡ್ ಜಯಭೇರಿ

- ಪಂದ್ಯಶ್ರೇಷ್ಠ ಜೋಹಾನ್ ಮಂಜಾಂಬಿ (ಸ್ವಿಟ್ಜರ್ಲೆಂಡ್)
- ಬದಲಿಯಾಗಿ ಕಣಕ್ಕಿಳಿದು ಎರಡು ಗೋಲು ಬಾರಿಸಿ ಪಂದ್ಯದ ಹೀರೋ ಎನಿಸಿದರು.

ಇಂಗಲ್‌ವುಡ್ (ಅಮೆರಿಕ): ಬದಲಿ ಆಟಗಾರ ಜೋಹಾನ್ ಮಂಜಾಂಬಿ ಅವರ ಮಿಂಚಿನ ಪ್ರದರ್ಶನದ ನೆರವಿನಿಂದ ಸ್ವಿಟ್ಜರ್ಲೆಂಡ್ ತಂಡವು ಬೋಸ್ನಿಯಾ-ಹರ್ಜೆಗೋವಿನಾವನ್ನು 4-1 ಅಂತರದಿಂದ ಮಣಿಸಿ ಬಿ ಗುಂಪಿನಲ್ಲಿ ತನ್ನ ಅಗ್ರಸ್ಥಾನವನ್ನು ಭದ್ರಪಡಿಸಿಕೊಂಡಿತು.ಸೋಫಿ ಸ್ಟೇಡಿಯಂನಲ್ಲಿ ನಡೆದ ಪಂದ್ಯದಲ್ಲಿ ಸ್ವಿಟ್ಜರ್ಲೆಂಡ್ ಹೆಚ್ಚಿನ ಸಮಯ ಚೆಂಡಿನ ಮೇಲಿನ ಹಿಡಿತ ಸಾಧಿಸಿದ್ದರೂ, ಬೋಸ್ನಿಯಾದ ಹೋರಾಟದಿಂದಾಗಿ ಗೋಲುಗಳಿಗಾಗಿ 74ನೇ ನಿಮಿಷದವರೆಗೆ ಕಾಯಬೇಕಾಯಿತು.

ಸ್ವಿಟ್ಜರ್ಲೆಂಡ್ ಪ್ರಾಬಲ್ಯ: ಪಂದ್ಯದಲ್ಲಿ ಬದಲಿಯಾಗಿ ಕಣಕ್ಕಿಳಿದ ಕೇವಲ ಮೂರು ನಿಮಿಷಗಳಲ್ಲೇ ಜೋಹಾನ್ ಮಂಜಾಂಬಿ ಅದ್ಭುತ ವಾಲಿ ಮೂಲಕ ಗೋಲು ಬಾರಿಸಿ ಸ್ವಿಟ್ಜರ್ಲೆಂಡ್‌ಗೆ ಮುನ್ನಡೆ ತಂದುಕೊಟ್ಟರು. ಈ ಗೋಲು ವಿಶ್ವಕಪ್‌ನಲ್ಲಿ ಅವರ ಮೊದಲ ಗೋಲಾಗಿತ್ತು. ಪಂದ್ಯದ ತಿರುವು 80ನೇ ನಿಮಿಷದಲ್ಲಿ ಎದುರಾಯಿತು. ಬೋಸ್ನಿಯಾದ ತಾರಿಕ್ ಮುಹರೆಮೊವಿಕ್ ಅಪಾಯಕಾರಿ ಟ್ಯಾಕಲ್‌ಗೆ ಕೆಂಪು ಕಾರ್ಡ್ ಪಡೆದು ಹೊರನಡೆದ ಕಾರಣ ತಂಡ 10 ಆಟಗಾರರೊಂದಿಗೆ ಉಳಿಯಬೇಕಾಯಿತು.

ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡ ಸ್ವಿಸ್ ಪಡೆ 84ನೇ ನಿಮಿಷದಲ್ಲಿ ರೂಬೆನ್ ವರ್ಗಾಸ್ ಮೂಲಕ ಎರಡನೇ ಗೋಲು ಗಳಿಸಿತು. ನಂತರ 90ನೇ ನಿಮಿಷದಲ್ಲಿ ವರ್ಗಾಸ್ ನೀಡಿದ ಪಾಸ್ ಅನ್ನು ಮತ್ತೊಮ್ಮೆ ಗೋಲಾಗಿ ಪರಿವರ್ತಿಸಿದ ಮಂಜಾಂಬಿ ತಮ್ಮ ಎರಡನೇ ಗೋಲು ದಾಖಲಿಸಿದರು.

ಹೆಚ್ಚುವರಿ ಸಮಯದಲ್ಲಿ ಬೋಸ್ನಿಯಾದ ಎರ್ಮಿನ್ ಮಾಹ್ಮಿಕ್ ಒಂದು ಗೋಲು ಬಾರಿಸಿ ಅಂತರವನ್ನು ಕಡಿಮೆ ಮಾಡಿದರೂ, ಪಂದ್ಯದ ಕೊನೆಯ ಕಿಕ್‌ನಲ್ಲಿ ನಾಯಕ ಗ್ರಾನಿಟ್ ಶಾಕಾ ಪೆನಾಲ್ಟಿ ಗೋಲಿನ ಮೂಲಕ ಸ್ವಿಟ್ಜರ್‌ಲೆಂಡ್‌ಗೆ 4-1ರ ಭರ್ಜರಿ ಜಯ ತಂದುಕೊಟ್ಟರು.

- ಸ್ವಿಟ್ಜರ್ಲೆಂಡ್ 4-1 ಬೋಸ್ನಿಯಾ-ಹರ್ಜೆಗೋವಿನಾ ಸ್ವಿಟ್ಜರ್ಲೆಂಡ್
- ಜೋಹಾನ್ ಮಂಜಾಂಬಿ (74, 90 ನೇ ನಿ.)
- ರೂಬೆನ್ ವರ್ಗಾಸ್ (84ನೇ ನಿ.)
- ಗ್ರಾನಿಟ್ ಶಾಕಾ (90ನೇ ನಿ.)
- ಬೋಸ್ನಿಯಾ-ಹರ್ಜೆಗೋವಿನಾ: ಎರ್ಮಿನ್ ಮಾಹ್ಮಿಕ್ (90ನೇ ನಿ.)

ದಕ್ಷಿಣ ಆಫ್ರಿಕಾ-ಚೆಕ್ ರಿಪಬ್ಲಿಕ್ 1-1 ಡ್ರಾ

ಅಟ್ಲಾಂಟಾ: ಟೆಬೊಹೋ ಮೊಕೊಯೆನಾ ಅವರ ನಿರ್ಣಾಯಕ ಪೆನಾಲ್ಟಿ ಗೋಲಿನ ನೆರವಿನಿಂದ ದಕ್ಷಿಣ ಆಫ್ರಿಕಾ ತಂಡವು ಫಿಫಾ ವಿಶ್ವಕಪ್ 2026ರ ಗ್ರೂಪ್ ಎ ಪಂದ್ಯದಲ್ಲಿ ಚೆಕ್ ರಿಪಬ್ಲಿಕ್ ವಿರುದ್ಧ 1-1 ಗೋಲುಗಳ ಸಮಬಲ ಸಾಧಿಸಿತು.ಗುರುವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಚೆಕ್ ರಿಪಬ್ಲಿಕ್ ಆರಂಭದಲ್ಲೇ ಮುನ್ನಡೆ ಸಾಧಿಸಿತು. ಕೇವಲ 6ನೇ ನಿಮಿಷದಲ್ಲಿ ಮಿಚಲ್ ಸಡಿಲೆಕ್ ಗೋಲು ಬಾರಿಸಿ ಯುರೋಪಿಯನ್ ತಂಡಕ್ಕೆ 1-0 ಮುನ್ನಡೆ ತಂದುಕೊಟ್ಟರು. ಅಲೆಕ್ಸಾಂಡರ್ ಸೊಯ್ಕಾ ನೀಡಿದ ಪಾಸ್ ಅನ್ನು ಸಡಿಲೆಕ್ ಗೋಲಾಗಿ ಪರಿವರ್ತಿಸಿದರು. 83ನೇ ನಿಮಿಷದಲ್ಲಿ ಪೆನಾಲ್ಟಿ ತೆಗೆದುಕೊಂಡ ಟೆಬೊಹೋ ಮೊಕೊಯೆನಾ ಚೆಂಡನ್ನು ಗೋಲ್‌ಕೀಪರ್ ಮಟೇಜ್ ಕೋವಾರ್ ಅವರ ಕೈಗೆಟುಕದಂತೆ ಬಲೆಗೆ ಸೇರಿಸಿ ಸಮಬಲ ಸಾಧಿಸಿದರು.

ಗೋಲುಗಳ ವಿವರ

- ಚೆಕ್ ರಿಪಬ್ಲಿಕ್: ಮಿಚಲ್ ಸಡಿಲೆಕ್ (6ನೇ ನಿ.)
- ದಕ್ಷಿಣ ಆಫ್ರಿಕಾ: ಟೆಬೊಹೋ ಮೊಕೊಯೆನಾ (83ನೇ ನಿ. ಪೆನಾಲ್ಟಿ)

- ದಕ್ಷಿಣ ಆಫ್ರಿಕಾ ವಿಶ್ವಕಪ್‌ನಲ್ಲಿ ತನ್ನ ಆಶೆಯನ್ನು ಜೀವಂತವಾಗಿರಿಸಿಕೊಂಡಿತು.
- ಚೆಕ್ ರಿಪಬ್ಲಿಕ್ ಎರಡು ಪಂದ್ಯಗಳ ಬಳಿಕವೂ ಮೊದಲ ಗೆಲುವಿಗಾಗಿ ಕಾಯುತ್ತಿದೆ.

ಪಂದ್ಯಶ್ರೇಷ್ಠ:
ಟೆಬೊಹೋ ಮೊಕೊಯೆನಾ (ದಕ್ಷಿಣ ಆಫ್ರಿಕಾ)

ಡೇವಿಡ್ ಹ್ಯಾಟ್ರಿಕ್, ಕೆನಡಾಗೆ ಐತಿಹಾಸಿಕ ಜಯ

ಕತಾರ್ ವಿರುದ್ಧ 6-0 ಗೆಲುವು

ವ್ಯಾಂಕೂವರ್: ಗ್ರೂಪ್ ಬಿ ಪಂದ್ಯದಲ್ಲಿ ಆತಿಥೇಯ ಕೆನಡಾ ತಂಡ ಕತಾರ್ ವಿರುದ್ಧ 6-0 ಗೋಲುಗಳ ಭರ್ಜರಿ ಜಯ ಸಾಧಿಸಿ ವಿಶ್ವಕಪ್ ಇತಿಹಾಸದ ಮೊದಲ ಗೆಲುವು ದಾಖಲಿಸಿತು. ಈ ಗೆಲುವಿನೊಂದಿಗೆ ಕೆನಡಾ ನಾಕೌಟ್ ಹಂತದತ್ತ ಬಹುತೇಕ ತನ್ನ ಸ್ಥಾನವನ್ನು ಖಚಿತಪಡಿಸಿ ಕೊಂಡಿದೆ.

ಆರಂಭದಿಂದಲೇ ಆಕ್ರಮಣಕಾರಿ ಆಟ ಪ್ರದರ್ಶಿಸಿದ ಕೆನಡಾ 16ನೇ ನಿಮಿಷದಲ್ಲಿ ಕೈಲ್ ಲ್ಯಾರಿನ್ ಗೋಲಿನ ಮೂಲಕ ಮುನ್ನಡೆ ಸಾಧಿಸಿತು. ಜೋನಾಥನ್ ಡೇವಿಡ್ ಅವರ ವಾಲಿಯನ್ನು ಕತಾರ್ ಗೋಲ್‌ಕೀಪರ್ ಮಹ್ಮೂದ್ ಅಬುನಾಡಾ ತಡೆದರೂ, ರೀಬೌಂಡ್ ಆದ ಚೆಂಡನ್ನು ಲ್ಯಾರಿನ್ ಗೋಲಾಗಿ ಪರಿವರ್ತಿಸಿದರು.

29ನೇ ನಿಮಿಷದಲ್ಲಿ ಡೇವಿಡ್ ಅದ್ಭುತ ಬಲವಾದದ ವಾಲಿ ಮೂಲಕ ಅಂತರವನ್ನು 2-0ಕ್ಕೆ ಹೆಚ್ಚಿಸಿದರು. ಕತಾರ್‌ಗೆ 33ನೇ ನಿಮಿಷದಲ್ಲಿ ದೊಡ್ಡ ಆಘಾತ ಎದುರಾಯಿತು. ತಾಜೋನ್ ಬುಕಾನನ್ ವಿರುದ್ಧ ಅಪಾಯಕಾರಿ ಟ್ಯಾಕಲ್ ಮಾಡಿದ ಹೋಮನ್ ಅಹ್ಮದ್ ಮೊದಲು ಹಳದಿ ಕಾರ್ಡ್ ಪಡೆದರೂ, VAR ಪರಿಶೀಲನೆಯ ಬಳಿಕ ಅದು ಕೆಂಪು ಕಾರ್ಡ್‌ಗೆ ಪರಿವರ್ತನೆಯಾಯಿತು. ಮೊದಲಾರ್ಧದ ಹೆಚ್ಚುವರಿ ಸಮಯದಲ್ಲಿ ಡೇವಿಡ್ ಮತ್ತೊಮ್ಮೆ ಗೋಲು ಬಾರಿಸಿ ಕೆನಡಾಗೆ 3-0 ಮುನ್ನಡೆ ನೀಡಿದರು. ದ್ವಿತೀಯಾರ್ಧ ಆರಂಭದಲ್ಲಿ ಕೆನಡಾದ ಇಸ್ಮಾಯೆಲ್ ಕೋನೆ ಗಂಭೀರ ಗಾಯಕ್ಕೆ ಒಳಗಾದರು. ಈ ಘಟನೆಯ ಕಾರಣವಾದ ಅಸ್ಸಿಂ ಮಡಿಬೋ ನೇರ ಕೆಂಪು ಕಾರ್ಡ್ ಪಡೆದು ಹೊರನಡೆದ ಪರಿಣಾಮ ಕತಾರ್ ಕೇವಲ 9 ಆಟಗಾರರೊಂದಿಗೆ ಮುಂದುವರಿಯಬೇಕಾಯಿತು. 64ನೇ ನಿಮಿಷದಲ್ಲಿ ಬದಲಿ ಆಟಗಾರ ನಾಥನ್ ಸಾಲಿಬಾ ಫ್ರೀ ಕಿಕ್ ಮೂಲಕ ಗೋಲು ದಾಖಲಿಸಿದರು. 75ನೇ ನಿಮಿಷದಲ್ಲಿ ಮೊಹಮ್ಮದ್ ಮನಾಯಿ ಆತ್ಮಹತ್ಯಾ ಗೋಲು ಬಾರಿಸಿದರೆ, ಹೆಚ್ಚುವರಿ ಸಮಯದಲ್ಲಿ ಜೋನಾಥನ್ ಡೇವಿಡ್ ಹ್ಯಾಟ್ರಿಕ್ ಪೂರ್ಣಗೊಳಿಸಿ ಕೆನಡಾದ ಐತಿಹಾಸಿಕ ಜಯಕ್ಕೆ ಮೆರಗು ತಂದರು.



ಗೋಲುಗಳ ವಿವರ

ಕೆನಡಾ:
- ಕೈಲ್ ಲ್ಯಾರಿನ್ (16ನೇ ನಿ.)
- ಡೇವಿಡ್ (29ನೇ, 45+1, 90+ನೇ ನಿ.)
- ನಾಥನ್ ಸಾಲಿಬಾ (64ನೇ ನಿ.)
- ಮೊಹಮ್ಮದ್ ಮನಾಯಿ (75ನೇ ನಿ.)

ಕೆಂಪು ಕಾರ್ಡ್
- ಹೋಮನ್ ಅಹ್ಮದ್ (ಕತಾರ್, 33ನೇ ನಿ.)
- ಅಸ್ಸಿಂ ಮಡಿಬೋ (ಕತಾರ್, 51ನೇ ನಿ.)

ಲಖನೌಗೆ ಕುಲ್ದೀಪ್ ಸೇರುವ ಸಾಧ್ಯತೆ

ದಿಲ್ಲಿಗೆ ಪಂತ್ ವಾಪಸ್?

ಹೊಸದಿಲ್ಲಿ: ವಿಕೆಟ್-ಕೀಪರ್, ಬ್ಯಾಟರ್ ರಿಷಭ್ ಪಂತ್ ದಿಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಮರಳಲಿದ್ದು, ಕುಲ್ದೀಪ್ ಯಾದವ್ ಲಖನೌ ತಂಡ ಸೇರಿಕೊಳ್ಳಲಿದ್ದಾರೆ ಎನ್ನಲಾಗಿದೆ.

ಐಪಿಎಲ್ ಮುಗಿದು ಕೇವಲ ಒಂದು ತಿಂಗಳಾಗಿದ್ದು, ಈಗಲೇ ಟ್ರೇಡ್ ಹವಾ ಶುರುವಾಗಿದೆ. ಮುಖ್ಯವಾಗಿ ಲಖನೌ ತಂಡದ ನಾಯಕತ್ವ ಬಿಟ್ಟಿರುವ ರಿಷಭ್ ಪಂತ್ ಅವರು ತಮ್ಮ ದಿಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಮರಳಲಿದ್ದಾರೆ. ಅವರ ಬದಲಿಗೆ ಸ್ಪಿನ್ನರ್ ಕುಲ್ದೀಪ್ ಯಾದವ್ ಲಖನೌ ಜೇಂಟ್ಸ್ ತಂಡಕ್ಕೆ ಸೇರಿಕೊಳ್ಳಲಿದ್ದಾರೆ ಎಂದು ವರದಿಯಾಗಿದೆ. 2 ಪಂದ್ಯಾವಳಿಯಲ್ಲಿ ನಿರಾಸೆ ಮೂಡಿಸಿರುವ ರಿಷಭ್ ಪಂತ್ ಐಪಿಎಲ್ ಮುಗಿದ ತಕ್ಷಣವೇ ನಾಯಕತ್ವದಿಂದ ಹೊರಬಂದಿದ್ದರು. ಆದಾಗ್ಯೂ ಬ್ಯಾಟರ್ ಆಗಿ ಮುಂದುವರೆಯಲಿದ್ದಾರಾ ಎಂಬ ಪ್ರಶ್ನೆಗೆ ಉತ್ತರ ಸಿಕ್ಕಿರಲಿಲ್ಲ. ವರದಿಗಳ ಪ್ರಕಾರ ಪಂತ್ ದಿಲ್ಲಿ ತಂಡಕ್ಕೆ ಮರಳಲಿದ್ದಾರೆ. ಅಲ್ಲದೆ ಮಾಜಿ ಕ್ರಿಕೆಟಿಗರಾದ ಸೌರವ್ ಗಂಗೂಲಿ ಮತ್ತು ಯುವರಾಜ್ ಸಿಂಗ್ ಮ್ಯಾನೇಜ್‌ಮೆಂಟ್‌ನಲ್ಲಿ ಸೇರಿಕೊಳ್ಳಲಿದ್ದಾರೆ.



ದಿಲ್ಲಿಗೆ ರಾಹುಲ್ ನಾಯಕ?

ದಿಲ್ಲಿ ತಂಡದಲ್ಲಿ ನಾಯಕತ್ವ ಬದಲಾವಣೆ ಬಗ್ಗೆಯೂ ಮಾತುಗಳು ನಡೆದಿವೆ. ಕೆ.ಎಲ್. ರಾಹುಲ್ ಮೊದಲ ಆಯ್ಕೆಯಾಗಿದ್ದು ಟ್ರೇಡ್ ನಡೆದರೆ ರಾಹುಲ್ ನಾಯಕರಾಗಲಿದ್ದಾರೆ ಎನ್ನಲಾಗಿದೆ.

ಮೊದಲ ಪಂದ್ಯದಲ್ಲಿ ಬೆಂಗಳೂರು-ಗುಲ್ಬರ್ಗಾ ಎದುರಾಳಿ

ಇಂದಿನಿಂದ ಮಹಾರಾಜ ಟ್ರೋಫಿ

ಮೈಸೂರು: ಯುವಕರಿಗೆ ವೇದಿಕೆ ಕಲ್ಪಿಸಿಕೊಡುವ, ಅಭಿಮಾನಿಗಳ ಮನರಂಜಿಸುವ ಪ್ರತಿಷ್ಠಿತ ಮಹರಾಜ ಟ್ರೋಫಿ ಪಂದ್ಯಾವಳಿಯು ಶನಿವಾರ ಶುರುವಾಗಲಿದೆ. ಮೂರು ಹಂತದಲ್ಲಿ, ಮೂರು ಪ್ರದೇಶದ ಆತಿಥ್ಯದಲ್ಲಿ ನಡೆಯಲಿರುವ ಈ ಕೂಟಕ್ಕೆ ಮೈಸೂರಿನಲ್ಲಿ ಈಗಾಗಲೇ ಔಪಚಾರಿಕ ಚಾಲನೆ ಸಿಕ್ಕಿದ್ದು, ಶನಿವಾರ ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ ಹಾಗೂ ಗುಲ್ಬರ್ಗಾ ಮ್ಯಾಸ್ಟಿಕ್ಸ್ ನಡುವೆ ಮೊದಲ ಪಂದ್ಯ ನಡೆಯಲಿದೆ.

ಆರು ಫ್ರಾಂಚೈಸಿಗಳ ನಡುವೆ ಸುಮಾರು 22 ದಿನ ಪಂದ್ಯಾವಳಿ ನಡೆಯಲಿದೆ. ಮೊದಲಿಗೆ ಮೈಸೂರಿನಲ್ಲಿ ಲೀಗ್ ಪಂದ್ಯಗಳು ನಂತರ ಹುಬ್ಬಳ್ಳಿಯಲ್ಲಿ ಮತ್ತು ಕೊನೆಯಲ್ಲಿ ನಾಕೌಟ್ ಪಂದ್ಯಗಳು ಬೆಂಗಳೂರಿನಲ್ಲಿ ನಡೆಯಲಿವೆ.

ಮೊದಲ ದಿನವೇ 2 ಪಂದ್ಯ: ಟೂರ್ನಿಯ ಮೊದಲ ದಿನವೇ ಎರಡು ಪಂದ್ಯಗಳು ನಡೆಯಲಿದೆ. ಮೈಸೂರಿನ ಮಹಾರಾಜ ಕ್ರೀಡಾಂಗಣದಲ್ಲಿ ಮೊದಲ ಪಂದ್ಯ ಬೆಂಗಳೂರು ಮತ್ತು ಗುಲ್ಬರ್ಗಾ ತಂಡಗಳ ನಡುವೆ ನಡೆಯಲಿದೆ. ಎರಡನೇ ಪಂದ್ಯದಲ್ಲಿ ಶಿವಮೊಗ್ಗ ಯೋಧಾಸ್ ಮತ್ತು ಮೈಸೂರು ವಾರಿಯರ್ಸ್ ನಡುವೆ ನಡೆಯಲಿದೆ.



ಆರಂಭ: ಶನಿವಾರ
ಫೈನಲ್: ಜೂನ್ 12
ಟೂರ್ನಿಯ ಒಟ್ಟು ಪಂದ್ಯ: 34

ಮೊದಲ ಹಂತದ ಪಂದ್ಯಗಳಿಗೆ ಮೈಸೂರು ಆತಿಥ್ಯ

ಆರು ತಂಡಗಳು	ನಾಯಕರು
ಬೆಂಗಳೂರು ಬ್ಲಾಸ್ಟರ್ಸ್	ಶುಭಾಂಗ್ ಹೆಗ್ಡೆ
ಗುಲ್ಬರ್ಗಾ ಮ್ಯಾಸ್ಟಿಕ್ಸ್	ಮನೀಷ್ ಪಾಂಡೆ
ಹುಬ್ಬಳ್ಳಿ ಟೈಗರ್ಸ್	ಅನೀಶ್ವರ್ ಗೌತಮ್
ಕೋಸ್ಟಲ್ ಕಿಂಗ್ಸ್ ಮಂಗಳೂರು	ಕರುಣ್ ನಾಯರ್
ಶಿವಮೊಗ್ಗ ಯೋಧಾಸ್	ಸ್ಮರಣ್ ರವೀಚಂದ್ರನ್
ಮೈಸೂರು ವಾರಿಯರ್ಸ್	ವಿಜಯ್‌ಕುಮಾರ್ ವೈಶಾಖ್

ಮಕಾವು ಓಪನ್: ಅಶ್ಮಿತಾ ಸೆಮಿಗೆ

ಹೊಸದಿಲ್ಲಿ: ಕೊರಿಯಾದ ಕಿಮ್ ಮಿನ್ ಅವರನ್ನು ಸೋಲಿಸಿರುವ ಅಶ್ಮಿತಾ ಚಲಿಹಾ ಅವರು ಬ್ಯಾಡ್ಮಿಂಟನ್ ಕ್ಷೇತ್ರಕ್ಕೆ ಭರ್ಜರಿ ಕಂಬ್ಯಾಕ್ ಮಾಡಿದ್ದಾರೆ. ಮಕಾವು ಓಪನ್ ಪಂದ್ಯಾವಳಿಯಲ್ಲಿ ಉಳಿದ ಏಕೈಕ ಭಾರತೀಯ ಆಟಗಾತಿಯಾಗಿರುವ ಅವರು, ಸೆಮಿಫೈನಲ್‌ಗೇರಿದ್ದಾರೆ.

ಶುಕ್ರವಾರ ನಡೆದ ಪಂದ್ಯದಲ್ಲಿ ಉತ್ತಮ ಪ್ರದರ್ಶನ ನೀಡುತ್ತಾ ಗಮನ ಸೆಳೆದಿದ್ದು ಒಂದು ಕಡೆಯಾದರೆ, ಪ್ರಮುಖ ಆಟಗಾರ್ತಿ ಅನ್ಮೋಲ್ ಖಾರ್ಬ್ ಸೋಲಿನೊಂದಿಗೆ ಹೊರಬಿದ್ದರು. ನೇರ ಸೆಟ್ ಗೆಲುವಿನಲ್ಲಿ ಅಶ್ಮಿತಾ ವಿಶ್ವದ ನಂಬರ್ 9ನೇ ಶ್ರೇಯಾಂಕದ ಆಟಗಾರ್ತಿ ಕಿಮ್ ಅವರನ್ನು ಹೊರಹಾಕಿದರು. ಮೊದಲನೇ ಸೆಟ್‌ನಲ್ಲಿ 21-16ರಿಂದ ಗೆದ್ದ ಅವರು, ಎರಡನೇ ಸೆಟ್‌ನಲ್ಲಿ 21-18ರಿಂದ ಗೆಲುವು ಸಾಧಿಸಿದರು. ವಿಶ್ವದ 63ನೇ ಶ್ರೇಯಾಂಕ ಹೊಂದಿರುವ ಅಶ್ಮಿತಾ ಕೊರಿಯಾ ಓಪನ್ ಪಂದ್ಯಾವಳಿಯಲ್ಲಿ ಪಾದದ ಗಾಯದಿಂದಾಗಿ ಹೊರಬಿದ್ದಿದ್ದರು.

ವಿಂಡೀಸ್‌ಗೆ 7 ರನ್‌ಗಳ ರೋಚಕ ಜಯ

ಲೀಡ್ಸ್: ಸ್ಟೆಫ್ನಿ ಟೇಯ್ಲರ್ ಅವರ ಸ್ಫೋಟಕ ಬ್ಯಾಟಿಂಗ್ ಮತ್ತು ಮ್ಯಾಥೀವ್ಸ್, ಆಲಿಯಾ ಅವರ ಕರಾರುವಾಕ್ ಬೌಲಿಂಗ್ ದಾಳಿಯ ಬಲದಿಂದ ವೆಸ್ಟ್ ಇಂಡೀಸ್ ಮಹಿಳಾ ತಂಡವು ಸ್ಕಾಟ್ಲೆಂಡ್ ವಿರುದ್ಧ ರೋಚಕ ಗೆಲುವು ಸಾಧಿಸಿದೆ.

ಮಹಿಳೆಯರ ವಿಶ್ವಕಪ್ ಪಂದ್ಯಾವಳಿ ರೋಚಕ ಘಟ್ಟಕ್ಕೆ ತಲುಪಿದ್ದು, ಸ್ಕಾಟ್ಲೆಂಡ್ ಮತ್ತು ವಿಂಡೀಸ್ ತಂಡಗಳು ಶುಕ್ರವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಎದುರಾಗಿದ್ದವು. ವಿಂಡೀಸ್ ಮೊದಲು ಬ್ಯಾಟಿಂಗ್ ಮಾಡಿತು. 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 153 ರನ್ ಗಳಿಸಿತು. ಸ್ಟೆಫ್ನಿ 47★ ರನ್ ಗಳಿಸಿದರೆ, ಕ್ಯಾಂಪ್‌ಬೆಲ್ 36 ರನ್‌ನೊಂದಿಗೆ ತಂಡಕ್ಕೆ ಆಸರೆಯಾದರು. ಡರ್ಸೀ ಕಟ್ಟರ್ ಅವರ ತಾಳ್ಮೆಯುತ ಬ್ಯಾಟಿಂಗ್‌ನೊಂದಿಗೆ ಸ್ಕಾಟ್ಲೆಂಡ್ ಗೆಲುವಿನತ್ತ ಸಾಗಿತ್ತು. ಮಧ್ಯಮ ಕ್ರಮಾಂಕದಲ್ಲಿ ಅಲಿಸಾ ಲಿಸ್ಟರ್ 37 ರನ್‌ಗಳ ಬ್ಯಾಟಿಂಗ್‌ನೊಂದಿಗೆ ಸ್ಕಾಟ್ಲೆಂಡ್, ವಿಂಡೀಸ್ ಮೇಲೆ ಒತ್ತಡ ಹೇರಿತ್ತು. ಆದರೆ ಕೊನೆಯಲ್ಲಿ ವಿಂಡೀಸ್‌ನ ಮ್ಯಾಥೀವ್ಸ್ ಮತ್ತು ಆಲಿಯಾ ಕರಾರುವಾಕ್ ದಾಳಿ ಸಂಘಟಿಸಿ ಪಂದ್ಯ ಕಸಿದರು.



ಪವರ್‌ಪ್ಲೇನಲ್ಲಿ ವಿಂಡೀಸ್ 33 ರನ್ ಗಳಿಸಿತು. ಸ್ಕಾಟ್ಲೆಂಡ್ ಅದಕ್ಕೂ ಹೆಚ್ಚು 55 ರನ್ ಗಳಿಸಿತ್ತು. ಮಧ್ಯಮ ಓವರ್‌ಗಳಲ್ಲಿ ವಿಂಡೀಸ್ ಕ್ಯಾಂಪ್‌ಬೆಲ್ ಅವರ ಬ್ಯಾಟಿಂಗ್‌ನೊಂದಿಗೆ 69 ರನ್ ಗಳಿಸಿತು. ಅತ್ತ ಸ್ಕಾಟ್ಲೆಂಡ್ ಕೂಡ ಕಟ್ಟರ್ ಮತ್ತು ಲಿಸ್ಟರ್ ಅವರ ಆಟದೊಂದಿಗೆ 51 ರನ್ ಗಳಿಸಿತ್ತು. ಡೆತ್ ಓವರ್‌ಗಳಲ್ಲಿ ಸ್ಟೆಫ್ನಿ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ವಿಂಡೀಸ್ 51 ರನ್ ಬಾರಿಸಿತು. ಆದರೆ ಸ್ಕಾಟ್ಲೆಂಡ್ ಮ್ಯಾಥೀವ್ಸ್ ದಾಳಿಗೆ ತತ್ತರಿಸಿತು. 40 ರನ್ ಗಳಿಸುವಷ್ಟರಲ್ಲಿ 5 ವಿಕೆಟ್ ಕಳೆದುಕೊಂಡ ಸ್ಕಾಟ್ಲೆಂಡ್ 7 ರನ್‌ಗಳಿಂದ ಸೋತಿತು. ಒಟ್ಟು 146 ರನ್ ಗಳಿಸಿತು.

ಇಂದು 3 ಪಂದ್ಯ

ಶನಿವಾರದಂದು ಮತ್ತೆ ಮೂರು ಪಂದ್ಯಗಳು ನಡೆಯಲಿವೆ. ಮಧ್ಯಾಹ್ನ 3 ಗಂಟೆಗೆ ಆಸ್ಟ್ರೇಲಿಯಾ ಹಾಗೂ ನೆದರ್ಲೆಂಡ್ಸ್ ತಂಡಗಳು ಮುಖಾಮುಖಿಯಾದರೆ, ಸಂಜೆ 7ಕ್ಕೆ ಬಾಂಗ್ಲಾದೇಶ ಮತ್ತು ಪಾಕಿಸ್ತಾನ ತಂಡಗಳು ಎದುರಾಗಲಿವೆ. ತಡರಾತ್ರಿ 11ಕ್ಕೆ ನಡೆಯಲಿರುವ ಪಂದ್ಯದಲ್ಲಿ ಸ್ಕಾಟ್ಲೆಂಡ್ ಮತ್ತು ಇಂಗ್ಲೆಂಡ್ ತಂಡಗಳು ಎದುರಾಗಲಿವೆ.


ಸಂಕ್ಷಿಪ್ತ ಸ್ಕೋರ್

ವೆಸ್ಟ್ ಇಂಡೀಸ್ 20 ಓವರ್‌ಗಳಲ್ಲಿ 153/6: ಸ್ಟೆಫ್ನಿ ಟೇಯ್ಲರ್ 47★, ಕ್ಯಾಂಪ್‌ಬೆಲ್ 36; ಫ್ರೇಸರ್ 34/2

ಸ್ಕಾಟ್ಲೆಂಡ್ 20 ಓವರ್‌ಗಳಲ್ಲಿ 146/10: ಡರ್ಸೀ 59, ಲಿಸ್ಟರ್ 33; ಆಲಿಯಾ 11/3, ಮ್ಯಾಥೀವ್ಸ್ 19/3

ಪದಬಂಧ

ರಾಜಾ ಸಂಗಮೇಶ ಹಿರೇಮಠ



6020

ಎಡದಿಂದ ಬಲಕ್ಕೆ
1.ಸಮೇತವಾಗಿ-ಹಿತದಿಂದ ಕೂಡಿದೆ (3)
5.ಈತ ದಯೆಯುಳ್ಳವನು (4)
6.ಗೋವರ್ಧನ ಬೆಟ್ಟ ಎತ್ತಿದವನು (4)
7.ಮರದ ಬಳಿ ಕಾಣಿಸಿದ ಹೆಂಡತಿ (3)
9.ಕೈ-ಕಾಲುಗಳಿಗೆ ಹಾಕುವ ಸಂಕೋಲೆ (2)
10.ಭೂಮಿ-ಅವನಿ ಇದು (2)
11.ದ್ರವರೂಪದ ಲೋಹವಿಲ್ಲಿ ತಿರುಗಿದೆ (3)
13.ಉಂಡಾಡಿ-ಅಪ್ರಯೋಜಕನೀತ (4)
14.ಪತಿಗೆ ಈ ನಡುವೆ ಸಿಕ್ಕ ನೈಪುಣ್ಯತೆ (4)
15.ಬಿಳಿಯ ಬಣ್ಣದ ಲೋಹ-ಬೆಳ್ಳಿ (3)

ಮೇಲಿನಿಂದ ಕೆಳಕ್ಕೆ
1.ಸುದ್ದಿ-ವಿಷಯ ಸರದ ನಡುವೆ ಇದೆ (4)
2.ತಣಿಯ ನಡುವೆ ನದಿ ಹರಿಯುತ್ತಿದೆ (4)
3.ಶುಭಪ್ರದನಾದವನು-ಶಿವ (3)
4.ದವಸ-ಧಾನ್ಯವನ್ನು ಹೀಗೂ ಹೇಳಬಹುದು (4)
8.ಅಮಲೇರಿಸುವಂತಹ ಪೇಯ (3)
9.ಬೇಜಾರಿನ ಕಡೆಯಲ್ಲಿ ಹಾರವಿದೆ (3)
10.ಸಂಪತ್ತಿನ ಒಡೆಯ ಈ ಕುಬೇರ (4)
11.ನೀರನ್ನು ಹೊತ್ತು ನಿಂತ ಮೋಡ (4)
12.ಪಾತದ ನಡುವೆ ವಿದ್ವಾಂಸನಿದ್ದಾನೆ (4)
13.ದನಿ ಎತ್ತಿ ಕೂಗಿದ ಹೆಣ್ಣಾನೆ (3)

6019 ಉತ್ತರ

ಎಡದಿಂದ ಬಲಕ್ಕೆ:
1.ಅನಕ್ಷರ 3.ಅಧಿಕೃತ
5.ಪರಾಮರ್ಶೆ 6.ರವಿಜ
8.ಕುಂಡ 9.ದಂತ
11.ಬಳಪ 13.ವಂಗಭಂಗ
15.ತವರಾಜ 16.ತಲೆಕಟ್ಟು

ಮೇಲಿನಿಂದ ಕೆಳಕ್ಕೆ :
1.ಅಧಿಕಾರ 2.ಪರಾಗ
3.ಅತ್ತಿಮಬ್ಬೆ 4.ತಲೆದಂಡ
7.ವಿಜೇತ 8.ಕುಂಬಳ
9.ದಂಡಾಹತ
10.ಮೃಗರಾಜ
12.ಪಟ್ಟಕಟ್ಟು 14.ಗಣಿತ

ಕಿರುಸುದ್ದಿ

ಅಂಗಡಿ ಮುಂಗಟ್ಟು ತೆರವುಗೊಳಿಸಿ

ನರಗುಂದ: ಸಾರ್ವಜನಿಕರ ಹಾಗೂ ವಾಹನಗಳ ಸುಗಮ ಸಂಚಾರಕ್ಕೆ ದಂಡಾಪೂರ ಸವದತ್ತಿ ರಸ್ತೆ ಮಾರ್ಗದ ಬದಿಯಲ್ಲಿನ ಅಂಗಡಿ ಮುಂಗಟ್ಟುಗಳನ್ನು ಕೂಡಲೇ ತೆರವುಗೊಳಿಸಬೇಕೆಂದು ದಂಡಾಪೂರ ನಿವಾಸಿ ನೀಲಪ್ಪ ಮಾಟರಂಗಿ ಅವರು ಒತ್ತಾಯಿಸಿದ್ದಾರೆ. ಶುಕ್ರವಾರ ಪಟ್ಟಣದ ಪುರಸಭೆ ಕಾರ್ಯಾಲಯದಲ್ಲಿ ದಂಡಾಪೂರ ಭಾಗದ ಸಾರ್ವಜನಿಕರು ಪುರಸಭೆ ಮುಖ್ಯಾಧಿಕಾರಿಗಳಿಗೆ ಮನವಿ ಅರ್ಪಿಸಿ ಮಾತನಾಡಿದರು. ಗೂಡಂಗಡಿಗಳು ಫುಟ್‌ಪಾತ್‌ಗೆ ಬಂದಿವೆ. ಫುಟ್‌ಪಾತ್‌ನಲ್ಲಿ ಸಂಚರಿಸಬೇಕಾದ ಜನರು ರಸ್ತೆ ಮೇಲೆ ಬಂದಿದ್ದಾರೆ. ಗೂಡಂಗಡಿಗಳನ್ನು ತೆಗೆಯರೆಂದು ಅಂಗಡಿಕಾರರಿಗೆ ಹಲವು ಬಾರಿ ಹೇಳಿದರೂ ತೆಗೆಯುತ್ತಿಲ್ಲ. ಅನಧಿಕೃತವಾಗಿ ರಸ್ತೆಯ ಜಾಗಗಳನ್ನು ಅತಿಕ್ರಮಣ ಮಾಡುತ್ತಿದ್ದಾರೆ. ಅಪಘಾತಗಳು ಸಂಭವಿಸುತ್ತಿವೆ. ಹೀಗಾಗಿ ಪುರಸಭೆ ಅಧಿಕಾರಿಗಳು ತೆರವು ಕಾರ್ಯಾಚರಣೆಗೆ ಮುಂದಾಗಬೇಕು ಎಂದರು. ಈ ಸಂದರ್ಭದಲ್ಲಿ ಮಹಾಂತೇಶ ಕೊಪ್ಪದ, ಜೆ.ಪಿ. ಬೆಳವಟಗಿ, ಗಂಗಮ್ಮ ತೇಗೂರ, ವಿರೇಶ ನವಲಗುಂದ, ಕರಿಯಪ್ಪ ಹಣಸಿ, ನೀಲಪ್ಪ ಮಾಟರಂಗಿ, ಬಿ ಎಮ್ ಪಾಟೀಲ, ಸಿದ್ದಲಿಂಗಯ್ಯ ಹಿರೇಮಠ, ವಿ.ಎಸ್. ನಾಯ್ಕರ, ಎನ್.ಎಸ್. ಕಮತರ, ರಂಗಪ್ಪ ಇತರರಿದ್ದರು.

ವಿದ್ಯುತ್ ವ್ಯತ್ಯಯ ಇಲ್ಲ

ಗದಗ: ಜೂ.20ರಂದು 110 ಕೆವ್ಹಿ ಗದಗ ಉಪ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣಾ ಕೆಲಸವನ್ನು ಸಾಮೂಹಿಕ ಮದುವೆ ಕಾರ್ಯಕ್ರಮಗಳ ನಿಮಿತ್ತ ಮುಂದೂಡಲಾಗಿದ್ದು, ನಿಗದಿತ ವೇಳಾಪಟ್ಟಿಯಂತೆ ವಿದ್ಯುತ್ ಸರಬರಾಜು ಇರುತ್ತದೆ.


ಯೋಗ ದಿನಾಚರಣೆ ನಾಳೆ

ಮುಂಡರಗಿ: ತಾಲೂಕು ಆಡಳಿತ, ಜಗದ್ಗುರು ಅನ್ನದಾನೀಶ್ವರ ವಿದ್ಯಾ ಸಮಿತಿ, ಪತಂಜಲಿ ಯೋಗ ಸಮಿತಿ, ಅನ್ಮೋಲ್ ಯೋಗ ಕೇಂದ್ರ, ಹಿಮಾಲಯ ಯೋಗ ಕೇಂದ್ರ, ಚೈತನ್ಯ ಶಿಕ್ಷಣ ಸಮಿತಿ ಇವುಗಳ ಸಂಯುಕ್ತ ಆಶ್ರಯದಲ್ಲಿ ಜೂನ್ 21ರಂದು ಬೆಳಗ್ಗೆ 6.30ಕ್ಕೆ ಪಟ್ಟಣದ ಅನ್ನದಾನೀಶ್ವರ ಮಠದ ಆವರಣದಲ್ಲಿ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮ ಜರುಗಲಿದೆ ಎಂದು ಶ್ರೀ ಜ.ಅನ್ನದಾನೀಶ್ವರ ವಿದ್ಯಾ ಸಮಿತಿ ಆಡಳಿತಾಧಿಕಾರಿ ಡಾ. ಬಿ. ಜಿ. ಜವಳಿ ತಿಳಿಸಿದರು. ಅವರು ಶುಕ್ರವಾರ ಈ ಕುರಿತು ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ಪ್ರತಿ ವರ್ಷದಂತೆ ಎಲ್ಲ ಸಂಘಟನೆ ಅವರು ಸೇರಿಕೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸೋಣ ಎಂದರು. ಸಂಘಟನೆಗಳ ಪೈಕಿ ಮಂಜುಳಾ ಇಟಗಿ ನೇತೃತ್ವದಲ್ಲಿ, 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದ ಸಾನ್ನಿಧ್ಯವನ್ನು ಜ. ನಾಡೋಜ ಡಾ. ಅನ್ನದಾನೀಶ್ವರ ಸ್ವಾಮೀಜಿ ವಹಿಸಲಿದ್ದಾರೆ. ತಹಶೀಲ್ದಾರ್ ಎರ್ರಿಸ್ವಾಮಿ ಪಿ.ಎಸ್. ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಪತಂಜಲಿ ಯೋಗ ಸಮಿತಿಯ ಮಂಜುನಾಥ ಅಳವಂಡಿ ಯೋಗದ ಪ್ರಾತ್ಯಕ್ಷಿಕೆ ಮಡಿ ತೋರಿಸುವರು. ಅನ್ಮೋಲ್ ಯೋಗ ಕೇಂದ್ರದ ಮಕ್ಕಳಿಂದ ಯೋಗ ಪ್ರದರ್ಶನ ನೆರವೇರಲಿದೆ. ಪಟ್ಟಣದ ವಿವಿಧ ಶಾಲಾ ಕಾಲೇಜುಗಳ ಹಾಗೂ ವಸತಿ ನಿಲಯಗಳ ಸುಮಾರು 500ಕ್ಕೂ ಹೆಚ್ಚು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಪಾಲ್ಗೊಳ್ಳಲಿದ್ದಾರೆ. ಅಲ್ಲದೇ ತಾಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಅಶೋಕ ಸವಣೂರು, ಆರ್. ಎಂ.ಕುಲಕರ್ಣಿ, ನಾರಾಯಣಪ್ಪ ಗುಬ್ಬಿ, ಸುವರ್ಣ ವಡ್ಡಟ್ಟಿ, ನಿಂಗಪ್ಪ ಬಡಿಗೇಪ, ಆರ್.ಆರ್. ಹಿರೇಮಠ ಉಪಸ್ಥಿತರಿದ್ದರು.

ರಾಮೇನಹಳ್ಳಿಯಲ್ಲಿ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ರಾಮೇನಹಳ್ಳಿಯಲ್ಲಿ ಜೂನ್ 21 ರಂದು ಬೆಳಗ್ಗೆ 8 ಕ್ಕೆ 12ನೇ ವಿಶ್ವ ಯೋಗ ದಿನಾಚರಣೆಯನ್ನು ಆಚರಿಸಲಾಗುವುದು. ಈ ವೇಳೆ ಸಾಮೂಹಿಕ ಯೋಗ, ಮಕ್ಕಳಿಂದ ಕಲಾತ್ಮಕ ಯೋಗ ಪ್ರದರ್ಶನ, ಉಪನ್ಯಾಸ, ಯೋಗ ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ಅನ್ಮೋಲ್ ಯೋಗ ಕೇಂದ್ರದ ಸಹಕಾರದೊಂದಿಗೆ ಆಚರಿಸಲಾಗುವುದು ಎಂದು ಮುಖ್ಯೋಪಾಧ್ಯಾಯ ಡಾ.ನಿಂಗು ಸೊಲಗಿ ತಿಳಿಸಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್.ಡಿ.ಎಂ.ಸಿ ಅಧ್ಯಕ್ಷ ಉಮೇಶ ದಂಡಿನ ವಹಿಸುವರು. ಮುಖ್ಯ ಅತಿಥಿಗಳಾಗಿ ಕರಬಸಪ್ಪ ಹಂಚಿನಾಳ, ಆನಂದಗೌಡ ಪಾಟೀಲ, ಗಂಗಾಧರ ಅಣ್ಣಿಗೇರಿ, ಡಿ.ಸಿ.ಮಠ, ಅಶೋಕ ಹುಬ್ಬಳ್ಳಿ, ಎಂ.ಟಿ.ಮಾಳಾಪೂರ ಭಾಗವಹಿಸುವರು.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಕಡಲೆಕಾಳು	5400-6200
ಉದ್ದಿನಕಾಳು	4841-4814
ಅಲಸಂದೆ	5386-5709
ಹೆಸರುಕಾಳು	1169-6894
ಶೇಂಗಾ	6027-7590
ಜೋಳ	3844-4821
ಮೆಕ್ಕೆಜೋಳ	2111-2111
ಕುಸುಬೆ	2769-4970
ಸೂರ್ಯಕಾಂತಿ	7022-7512
ತೊಗರಿ	4819-5569
ಗೋಧಿ	2283-2939



ನರಗುಂದ: ದಂಡಾಪೂರ ಸವದತ್ತಿ ರಸ್ತೆ ಮಾರ್ಗದ ಬದಿಯಲ್ಲಿನ ಅಂಗಡಿ ಮುಂಗಟ್ಟುಗಳನ್ನು ಕೂಡಲೇ ತೆರವುಗೊಳಿಸಬೇಕೆಂದು ಶುಕ್ರವಾರ ಪಟ್ಟಣದ ಪುರಸಭೆ ಕಾರ್ಯಾಲಯದಲ್ಲಿ ದಂಡಾಪೂರ ಭಾಗದ ಸಾರ್ವಜನಿಕರು ಪುರಸಭೆ ಮುಖ್ಯಾಧಿಕಾರಿಗಳಿಗೆ ಮನವಿ ಅರ್ಪಿಸಿದರು.

ಶೇ.10ರಷ್ಟು ಮಾತ್ರ ಹೆಚ್ಚಿಸಲು ತಾವರೆ ಆಗ್ರಹ

ನರಗುಂದ: ಬೀದಿಬದಿ ವ್ಯಾಪಾರಿಗಳು ಸಣ್ಣ ವ್ಯಾಪಾರಸ್ಥರಾಗಿದ್ದಾರೆ. ಸದ್ಯ ಪುರಸಭೆ ನಿಗದಿಪಡಿಸಿದ ಠೇವಣಿ ಮತ್ತು ಬಾಡಿಗೆ ದರವು ಮೊದಲಿಗಿಂತ ಹೆಚ್ಚಾಗಿದೆ. ಈಗಿನ ದರವನ್ನು ಭರಿಸಲು ಸಣ್ಣ ವ್ಯಾಪಾರಿಗಳಿಗೆ ಆಗಲ್ಲ, ಸರ್ಕಾರದ ನಿಯಮಾವಳಿ ಪ್ರಕಾರ ಶೇ.10ರಷ್ಟು ಮಾತ್ರ ಹೆಚ್ಚಳ ಮಾಡಿ, ತರಕಾರಿ ಮಾರುಕಟ್ಟೆಯ ಕಟ್ಟೆಗಳನ್ನು ನೀಡಬೇಕೆಂದು ಪಟ್ಟಣದ ಬೀದಿಬದಿ ವ್ಯಾಪಾರಸ್ಥರ ಸಂಘದ ಮುಖಂಡ ಬಸವರಾಜ ತಾವರೆ ಮನವಿ ಮಾಡಿದರು.

ತಾಲೂಕು ಬೀದಿಬದಿ ವ್ಯಾಪಾರಸ್ಥರ ವಿವಿಧೋದ್ದೇಶಗಳ ಸಂಘದಿಂದ ನೂತನ ತರಕಾರಿ ಮಾರುಕಟ್ಟೆಯ ಬಾಡಿಗೆ ಮತ್ತು ಠೇವಣಿ ದರವನ್ನು ಪರಿಷ್ಕರಿಸುವಂತೆ ಆಗ್ರಹಿಸಿ ಪುರಸಭೆಯ ಹಿರಿಯ ಆರೋಗ್ಯ ನಿರೀಕ್ಷಕ ಎಸ್.ಎಸ್. ಬ್ಯಾಳಿ ಅವರಿಗೆ ಮನವಿ ಅರ್ಪಿಸಿ ಮಾತನಾಡಿದರು. ನಗರದ ಸುಸಜ್ಜಿತ ವ್ಯವಸ್ಥೆ ಕಾರಣದಿಂದ ಗದಗ-ಬೆಟಗೇರಿಯ ತರಕಾರಿ ಮಾರುಕಟ್ಟೆಯಲ್ಲಿ ನಿಗದಿಪಡಿಸಿದ ಬಾಡಿಗೆಯನ್ನು ನರಗುಂದ ನೂತನ ತರಕಾರಿ ಮಾರುಕಟ್ಟೆಯಲ್ಲಿ ನಿಗದಿ ಪಡಿಸಬೇಕು ಎಂದರು. ಹಿರಿಯ ಆರೋಗ್ಯ ನಿರೀಕ್ಷಕ ಎಸ್.ಎಸ್. ಬ್ಯಾಳಿ ಅವರು ಸಂವಾದ ಸಂಪರ್ಕಿಸಿದಾಗ, ನೂತನ ತರಕಾರಿ ಮಾರುಕಟ್ಟೆ ಆವರಣದಲ್ಲಿ ಒಟ್ಟು 22 ವಾಣಿಜ್ಯ ಮಳಿಗೆಗಳಿವೆ. 12x8 ದೊಡ್ಡ ಕಟ್ಟೆಗೆ ದಿನಕ್ಕೆ ರೂ.50 ದರ ನಿಗದಿಯಾಗಿದೆ. 8x7 ಸಣ್ಣ ಕಟ್ಟೆಗೆ ದಿನಕ್ಕೆ ರೂ.30 ದರ ನಿಗದಿಯಾಗಿದೆ. ಲೀಲಾವು ಕರೆದು ವ್ಯಾಪಾರಿಗಳಿಗೆ ನೀಡಲು ಜಿಲ್ಲಾಧಿಕಾರಿಗಳು ನರಗುಂದ ಪುರಸಭೆಗೆ ಅನುಮತಿ ನೀಡಬೇಕೆಂದು ಮನವಿ ಮಾಡಲಾಗಿದೆ. 2-3 ದಿನಗಳಲ್ಲಿ ಲೀಲಾವು ಕರೆಯಲಾಗುವುದು ಎಂದರು.



ನರಗುಂದ: ತಾಲೂಕು ಬೀದಿಬದಿ ವ್ಯಾಪಾರಸ್ಥರ ವಿವಿಧೋದ್ದೇಶಗಳ ಸಂಘದಿಂದ ನೂತನ ತರಕಾರಿ ಮಾರುಕಟ್ಟೆಯ ಬಾಡಿಗೆ ಮತ್ತು ಠೇವಣಿ ದರವನ್ನು ಪರಿಷ್ಕರಿಸುವಂತೆ ಆಗ್ರಹಿಸಿ ಪುರಸಭೆಯ ಹಿರಿಯ ಆರೋಗ್ಯ ನಿರೀಕ್ಷಕ ಎಸ್.ಎಸ್. ಬ್ಯಾಳಿ ಅವರಿಗೆ ಮನವಿ. ವಿಕಾಸ ಮುಧೋಳೆ, ಅಮಿನವ್ವ ಅತ್ತಾರ, ಮಂಜುನಾಥ ಕುಂಕುಮಗಾರ, ಫಕೀರಮ್ಮ ಮೇಲಿನಮನಿ, ಇಮಾಮ ಪರಾಸ್, ಚಾಂದಸಾಬ ಬಾಣಕಾರ, ಅಯ್ಯಪ್ಪ ಬೆಳದಡಿ, ನಬಿಸಾಬ ಅತ್ತಾರ, ಪ್ರಕಾಶ ಲಮಾಣಿ, ಎಂ.ಎಂ. ಕುಷ್ಟಗಿ, ಎಂ.ಡಿ. ಸಿಂದಗಿ, ಮುತ್ತಪ್ಪ ಕಲಾಲ, ಎಂ.ಎಚ್. ಸಕಲಿ, ಮುಬಾರಕ ಕಲಬುರ್ಗಿ, ರಾಯೇಸಾಬ ಬಡಿಗೇರ, ರಫೀಕ ಸೇರಿದಂತೆ ಅನೇಕರಿದ್ದರು.

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಸಭೆ | ಡಿಸಿ ಸೂಚನೆ

ಪರಿಷ್ಕರಣೆ ಪಾರದರ್ಶಕವಾಗಿರಲಿ



ಗದಗ: ಜಿಲ್ಲೆಯಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯವನ್ನು ಯಶಸ್ವಿಯಾಗಿ ಮತ್ತು ಪಾರದರ್ಶಕವಾಗಿ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ಸೂಚಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಜರುಗಿದ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಹೈಸ್ಕೂಲ್ ಮತ್ತು ಪಿಯುಸಿ ಮಟ್ಟದಲ್ಲಿ 9, 10, 11 ಮತ್ತು 12ನೇ ತರಗತಿಯ ವಿದ್ಯಾರ್ಥಿಗಳನ್ನು ಒಳಗೊಂಡಂತೆ ಇಎಲ್‌ಸಿ ಕ್ಲಬ್‌ಗಳ ಮೂಲಕ ಜೂನ್ ತಿಂಗಳಿನಲ್ಲಿ ವಿವಿಧ ಚಟುವಟಿಕೆ ಆಯೋಜಿಸಲು ನಿರ್ದೇಶಿಸಲಾಗಿದೆ. ಕಾಲೇಜಿನ ಮುಖ್ಯಸ್ಥರು ಅಥವಾ ಪ್ರಾಂಶುಪಾಲರು ಇದರ ಅಧ್ಯಕ್ಷರಾಗಿದ್ದು, ಒಬ್ಬರು ಶಿಕ್ಷಕರು ಇದರ ನೋಡಲ್ ಅಧಿಕಾರಿಯಾಗಿ ಕಾರ್ಯನಿರ್ವಹಿಸಲಿದ್ದಾರೆ. ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ಪೈಕಿ ಇಬ್ಬರನ್ನು ಕ್ಯಾಂಪಸ್ ಅಂಬಾಸಿಡರ್ಸ್ ಆಗಿ ನೇಮಕ ಮಾಡಲಾಗುವುದು. ಚುನಾವಣೆ ಆಯೋಗ ನೀಡಿರುವ ಶಾಲಾ-ಕಾಲೇಜುಗಳಲ್ಲಿ ಮತದಾನ ಜಾಗೃತಿ ಮತ್ತು ಕ್ಯಾಲೆಂಡರ್ ಆಫ್ ಇವೆಂಟ್ಸ್ ಕ್ಯಾಂಪಸ್ ಇವೆಂಟ್ಸ್ ಅಡಿಯಲ್ಲಿ ಜೂ.30ರ ಒಳಗಾಗಿ ಎಸ್‌ಐಆರ್‌ಗೆ ಸಂಬಂಧಿಸಿದ 30 ನಿಮಿಷಗಳ ಚಟುವಟಿಕೆ ಎಲ್ಲಾ ಕ್ಲಬ್‌ಗಳಲ್ಲಿ ಕಡ್ಡಾಯವಾಗಿ ಹಮ್ಮಿಕೊಂಡು, ಅದರ ಫೋಟೋ ಮತ್ತು ವಿವರಗಳನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲು ತಿಳಿಸಿದರು. ಜಿಪಂ ಉಪಕಾರ್ಯದರ್ಶಿ ಸಿ.ಆರ್. ಮುಂಡರಗಿ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬಸವನಗೌಡ ಕೊಟೂರು, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ಡಾ. ನಂದಾ ಹಣಬರಹಟ್ಟಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ರಾಧ ಮಣ್ಣೂರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪ ನಿರ್ದೇಶಕ ಆರ್. ಎಸ್. ಬುರಡಿ, ಪದವಿ-ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಎಸ್. ಬಿ ಮಾಸ ನಾಯಕ ಇತರರಿದ್ದರು.

ಆಕ್ಟಿವೇಟ್‌ಗೆ ಗಡುವು

ಜಿಲ್ಲೆಯಲ್ಲಿ ಮತದಾರರ ಜಾಗೃತಿಯನ್ನು ಮತ್ತಷ್ಟು ಹೆಚ್ಚಿಸಲು ಸರ್ಕಾರಿ ಇಲಾಖೆಗಳು ಹಾಗೂ ಖಾಸಗಿ ವಲಯಗಳಲ್ಲಿ ವೋಟರ್ಸ್ ಅವೇರ್ನೆಸ್ ಫೋರಂ ಸ್ಥಾಪಿಸಲು ನಿರ್ಧರಿಸಲಾಗಿದೆ. ಎಲ್ಲಾ ಇಒಗಳಿಗೆ ಈ ಕುರಿತು ಲಾಗಿನ್ ಐಡಿ ನೀಡಲಾಗಿದ್ದು, ಮಾಸ್ಟರ್ ಟ್ರೈನರ್ಸ್ ಮೂಲಕ ಇವುಗಳನ್ನು ಶೀಘ್ರ ಆಕ್ಟಿವೇಟ್ ಮಾಡಲು ಗಡುವು ನೀಡಲಾಗಿದೆ ಎಂದು ಡಿಸಿ ಹೇಳಿದರು.

ಪ್ರತಿ ಬೂತ್‌ಲ್ಲಿ ಚುನಾವಣಾ ಪಾಠಶಾಲೆ

ಚುನಾವಣಾ ಸಾಕ್ಷರತೆಯನ್ನು ತಳಮಟ್ಟಕ್ಕೆ ಕೊಂಡೊಯ್ಯುವ ಉದ್ದೇಶದಿಂದ ಪ್ರತಿ ಬೂತ್ ಮಟ್ಟದಲ್ಲಿ ಚುನಾವಣಾ ಪಾಠಶಾಲೆ (ಚುನಾವಣಾ ಜಾಗೃತಿ ಸಮಿತಿ) ಯನ್ನು ರಚಿಸಲಾಗುವುದು. ಇದರ ನೋಡಲ್ ಅಧಿಕಾರಿಯಾಗಿ ಆಯಾ ಭಾಗದ ಬಿಎಲ್‌ಒ ಕಾರ್ಯನಿರ್ವಹಿಸಲಿದ್ದಾರೆ. ಕಾಲೇಜು ವಿದ್ಯಾರ್ಥಿಗಳನ್ನು ಹೊರತುಪಡಿಸಿ ಸ್ಥಳೀಯ ಯುವಕರು, ರೈತರು, ಮಹಿಳೆಯರು ಮತ್ತು ಸಮುದಾಯದ ಇತರ ಸದಸ್ಯರನ್ನು ಈ ಸಮಿತಿಯಲ್ಲಿ ಒಳಗೊಳ್ಳುವ ಮೂಲಕ ವ್ಯಾಪಕ ಜಾಗೃತಿ ಮೂಡಿಸಲು ಯೋಜನೆ ರೂಪಿಸಲಾಗಿದೆ ಎಂದು ಡಿಸಿ ಹೇಳಿದರು.

- ಜಿಲ್ಲೆಯಲ್ಲಿ ಒಟ್ಟು 536 ಇಎಲ್‌ಸಿ ಕ್ಲಬ್
- ಇದರಲ್ಲಿ 325 ಶಾಲೆಗಳು, 101 ಪಿಯು ಬೋರ್ಡ್, 57 ಕಾಲೇಜುಗಳು ಹಾಗೂ ಐಟಿಐ ಮತ್ತು ಡಿಪ್ಲೊಮಾ ಸೇರಿದಂತೆ 53 ಸ್ವತಂತ್ರ ಸಂಸ್ಥೆಗಳು
- ಸದ್ಯ 402 ಕ್ಲಬ್‌ಗಳು ಸಕ್ರಿಯವಾಗಿದ್ದು, ಇನ್ನುಳಿದ 134 ಕ್ಲಬ್‌ಗಳನ್ನು ಶೀಘ್ರದಲ್ಲೇ ಸಕ್ರಿಯಗೊಳಿಸಲು ಕ್ರಮ ವಹಿಸಲು ಸೂಚಿಸಿದ ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಎ.ಎ.ಕಂಬಾಳಿಮಠ

2002ರ ಮತದಾರರ ಪಟ್ಟಿಯನ್ನು ಆಧಾರವಾಗಿಟ್ಟುಕೊಂಡು ಪ್ರಸ್ತುತ 2025ರ ಪಟ್ಟಿಯೊಂದಿಗೆ ಮ್ಯಾಪಿಂಗ್ ಮಾಡಲಾಗಿದೆ. 2002ರ ನಂತರ ಹೊಸದಾಗಿ ಸೇರ್ಪಡೆಯಾದವರು ಅಥವಾ 18 ವರ್ಷದ ಯುವ ಮತದಾರರ ವಿವರಗಳನ್ನು ಅವರ ಪೋಷಕರು ಅಥವಾ ರಕ್ತಸಂಬಂಧಿಗಳ ವಿವರಗಳೊಂದಿಗೆ ಲಿಂಕ್ ಮಾಡುವ ಮೂಲಕ ಎನ್ಯುಮರೇಷನ್ ಫಾರ್ಮ್ ಭರ್ತಿ ಮಾಡಿಕೊಳ್ಳಬೇಕು.

■ ಸಿ.ಎನ್. ಶ್ರೀಧರ, ಜಿಲ್ಲಾಧಿಕಾರಿ

ಶರಣರ ಸಾಹಿತ್ಯ ಹೆಚ್ಚು ಪ್ರಚಲಿತವಾಗಲಿ



ಮುಂಡರಗಿ: ಯುವ ಪೀಳಿಗೆ ದಾರಿ ತಪ್ಪುತ್ತಿದೆ. ಅವರನ್ನು ಸರಿದಾರಿಗೆ ತರಲು ಶರಣ ಸಾಹಿತ್ಯ ಪರಿಷತ್ತು ಶರಣರ ಆದರ್ಶ ಜೀವನದ ಬಗ್ಗೆ ತಿಳಿಸುವ ಕೆಲಸವನ್ನು ಮಾಡಬೇಕು. ಶರಣರ ಸಾಹಿತ್ಯವು ಹೆಚ್ಚು ಪ್ರಚಲಿತವಾಗಬೇಕು ಎಂದು ನಾಡೋಜ ಡಾ.ಅನ್ನದಾನೀಶ್ವರ ಮಹಾಶಿವಯೋಗಿಗಳು ಹೇಳಿದರು.

ಪಟ್ಟಣದ ಜಗದ್ಗುರು ಅನ್ನದಾನೀಶ್ವರ ಮಠದ ಶಿಲಾ ಮಂಟಪದಲ್ಲಿ ನಡೆದ ಅಖಿಲ ಕರ್ನಾಟಕ ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ತಾಲೂಕು ಶರಣ ಸಾಹಿತ್ಯ ಪರಿಷತ್ತಿನ ನೂತನ ಪದಾಧಿಕಾರಿಗಳಿಗೆ ಸೇವಾ ದೀಕ್ಷಾ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು. ತಾಲೂಕಿನಲ್ಲಿ ಶರಣ ಸಾಹಿತ್ಯ ಸಮ್ಮೇಳನ ಆಯೋಜಿಸುವ ಮೂಲಕ ಶರಣ ಸಾಹಿತ್ಯ ಪರಂಪರೆಯು ಮತ್ತಷ್ಟು ಬೆಳೆಸುವ ಕಾರ್ಯ ಮಾಡಬೇಕು. ಶರಣರ ವಚನಗಳ ತಾತ್ಪರ್ಯವನ್ನು ಹೇಳುವುದರ ಮೂಲಕ ಶರಣರ ವಿಚಾರಗಳನ್ನು ಯುವಕರಿಗೆ ಮುಟ್ಟುವಂತೆ ಮಾಡಬೇಕು. ವಚನಗಳು ಸಮಾಜದ ಡೊಂಕನ್ನು ಎತ್ತಿ ತೋರಿಸುವದರೊಂದಿಗೆ ಅವುಗಳನ್ನು ತಿದ್ದುವ ಶಕ್ತಿಯನ್ನು ಹೊಂದಿವೆ ಎಂದರು.


ಸಮಾರಂಭ ಉದ್ಘಾಟಿಸಿದ ಶಸಾಪ ಜಿಲ್ಲಾಧ್ಯಕ್ಷ ಕೆ.ಎ.ಬಳಿಗೇರ ಮಾತನಾಡಿ, ಶಸಾಪನಿಂದ ಬಸವಾದಿ ಶಿವಶರಣರು ಮನುಕುಲಕ್ಕೆ ನೀಡಿದ ತತ್ವಾದರ್ಶಗಳನ್ನು ಸರ್ವರಿಗೂ ತಲುಪಿಸುವ ಕೆಲಸ ಮಾಡಲಾಗುತ್ತಿದೆ. ಎಲ್ಲ ಸಾಹಿತ್ಯಗಳಲ್ಲಿ ವಚನ ಸಾಹಿತ್ಯವು ಅತಿ ಶ್ರೇಷ್ಠವಾಗಿದೆ. ವಚನ ಸಾಹಿತ್ಯವು ಮನುಷ್ಯನನ್ನು ಪರಿಶುದ್ಧಗೊಳಿಸುವ ಕೆಲಸ ಮಾಡುತ್ತದೆ ಎಂದರು.

ಕಸಾಪ ತಾಲೂಕಾಧ್ಯಕ್ಷ ಎಂ.ಜಿ.ಗಚ್ಚಣ್ಣವರ ಮಾತನಾಡಿ, ಸದ್ಗುಣ ಶೀಲತೆಯು ಯುವಕರಲ್ಲಿ ಮೂಡಿಸಬೇಕು. ಸಂಸ್ಕಾರ ಇದ್ದರೆ ಬದುಕು ಸುಂದರವಾಗಿರುತ್ತದೆ. ಯುವಕರು ಸಂಸ್ಕಾರವಂತರಾಗಿ ಬಾಳಬೇಕು ಎಂದದರು. ತಾಲೂಕಾಧ್ಯಕ್ಷ ವೀರಣ್ಣ ಮಡಿವಾಳರ ಮಾತನಾಡಿ, ತಾಲೂಕಿನಲ್ಲಿ ಶಸಾಪನಿಂದ ಉಪಯುಕ್ತವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗುವುದು. ಈಗ 6 ಇರುವ ದತ್ತಿಯನ್ನು 12 ಆಗುವಂತೆ ಪ್ರೇರೇಪಿಸಲಾಗುವುದು. ತಾಲೂಕಿನಲ್ಲಿ ಶಸಾಪ ಸದಸ್ಯತ್ವ ಅಭಿಯಾನ ಹಾಕಿಕೊಂಡು ಕನಿಷ್ಠ 500 ಸದಸ್ಯರನ್ನು ಮಾಡಲಾಗುವುದು ಎಂದರು. ಅಧ್ಯಕ್ಷತೆ ವಹಿಸಿದ್ದ ನಿಕಟಪೂರ್ವ ತಾಲೂಕಾಧ್ಯಕ್ಷ ಡಾ.ಸಂತೋಷ ಹಿರೇಮಠ, ಕದಳಿ ಮಹಿಳಾ ವೇದಿಕೆ ತಾಲೂಕಾಧ್ಯಕ್ಷೆ ಸೀತಾ ಬಸಾಪೂರ ಮಾತನಾಡಿದರು. ಎಸ್. ಆರ್.ಬಸಾಪೂರ ಸೇವಾದೀಕ್ಷೆ ಬೋಧನೆ ನಡೆಸಿಕೊಟ್ಟರು. ಪದಾಧಿಕಾರಿಗಳಿಗೆ ರುದ್ರಾಕ್ಷಿ ಹಾಕಿ, ವಚನ ಪುಸ್ತಕ ನೀಡಿ ಸೇವಾ ದೀಕ್ಷೆ ಬೋಧಿಸಲಾಯಿತು. ಎಂ.ಕೆ.ಲಮಾಣಿ ಹಾಗೂ ಶಸಾಪ, ಕದಳಿ ಮಹಿಳಾ ವೇದಿಕೆ ಪದಾಧಿಕಾರಿಗಳು ಉಪಸ್ಥಿತರರಿದ್ದರು. ಶಸಾಪ ತಾಲೂಕು ಗೌರವಾಧ್ಯಕ್ಷ ಆರ್. ಎಲ್.ಪೋಲೀಸಪಾಟೀಲ ಪ್ರಾಸ್ತಾವಿಸಿದರು. ಎಂ.ಪಿ.ಶೀರನಹಳ್ಳಿ ಸ್ವಾಗತಿಸಿದರು. ಬಸವರಾಜ ಹೆಬಲಿ ನಿರೂಪಿಸಿದರು.

ಜಲಾಗಾರ ನಿರ್ಮಾಣ ನಿಗದಿತ ಸ್ಥಳದಲ್ಲಿ ನಡೆಯಲಿ

ಲಕ್ಷ್ಮೇಶ್ವರ: ಇಲ್ಲಿನ ಪುರಸಭೆ ಕಲಾ ಮಹಾವಿದ್ಯಾಲಯದ ಆವರಣದಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ನಿರ್ಮಾಣ ಮಾಡುತ್ತಿರುವ ಬೃಹತ್ ಜಲಾಗಾರ ನಿರ್ಮಾಣ ಕಾಮಗಾರಿಯನ್ನು ಸ್ಥಳಾಂತರಗೊಳಿಸಬೇಕು ಎಂದು ಕಾಲೇಜಿನ ಹಳೆ ವಿದ್ಯಾರ್ಥಿಗಳು ಒತ್ತಾಯಿಸಿದ್ದರು. ಸುಮಾರು 2 ತಿಂಗಳಿಂದ ನನೆಗುದಿಗೆ ಬಿದ್ದಿದ್ದ ಈ ಕಾಮಗಾರಿ ಸ್ಥಳಕ್ಕೆ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ಅವರು ಭೇಟಿ ನೀಡಿ ಕಾಮಗಾರಿ ನಿಗದಿತ ಸ್ಥಳದಲ್ಲಿ ಕಾಮಗಾರಿ ಪ್ರಾರಂಭಿಸಲು ಸೂಚಿಸಿದರು.

ಕಳೆದ ಮೇ ತಿಂಗಳಲ್ಲಿ ಹಳೆ ವಿದ್ಯಾರ್ಥಿಗಳು ಈ ಕಾಮಗಾರಿಯ ಬಗ್ಗೆ ತಕರಾರು ಸಲ್ಲಿಸಿದ್ದು, ಪತ್ರಿಕಾಗೋಷ್ಠಿ, ಪ್ರತಿಭಟನೆ ಮುಂತಾದವುಗಳನ್ನು ಮಾಡಿ ಈ ಜಾಗದಲ್ಲಿ ಕಾಮಗಾರಿ ಪ್ರಾರಂಭಿಸಬಾರದು ಎಂದು ಕೆಲಸವನ್ನು ಭಾರೀ ಒತ್ತಡವನ್ನು ಹೇರಲಾಗಿತ್ತು, ಕುಡಿಯುವ ನೀರಿನ ಯೋಜನೆ ಮತ್ತು ಜಲಾಗಾರ ನಿರ್ಮಾಣಕ್ಕೆ ನಮ್ಮ ವಿರೋಧವಿಲ್ಲ, ಆದರೆ ಕಾಲೇಜು ಆವರಣದಲ್ಲಿ ಬೃಹತ್ ಜಲಾಗಾರ ನಿರ್ಮಾಣದಿಂದ ಭವಿಷ್ಯದಲ್ಲಿ ಶೈಕ್ಷಣಿಕ ಚಟುವಟಿಕೆಗಳು, ಕ್ರೀಡೆ ಇತರೇ ಪಠ್ಯೇತರ ಚಟುವಟಿಕೆಗಳಿಗೆ ಜಾಗವೇ ಇಲ್ಲದಂತಾಗುತ್ತದೆ. ಪದವಿ ಕಾಲೇಜು ಸರ್ಕಾರಕ್ಕೆ ಹಸ್ತಾಂತರವಾಗುವುದರಿಂದ ಜಾಗದ ಸಮಸ್ಯೆ ಉಂಟಾಗುತ್ತದೆ. ಹಾಗಾಗಿ ಇಲ್ಲಿ ಜಲಾಗಾರ ನಿರ್ಮಾಣವಾಗಕೂಡದು ಎಂದು ಹಳೆ ವಿದ್ಯಾರ್ಥಿಗಳ ಬೇಡಿಕೆಯಾಗಿತ್ತು. ಈ ಹಿನ್ನೆಲೆಯಲ್ಲಿ ಕಾಮಗಾರಿ ನಿಂತು ಹೋಗಿತ್ತು. ಶುಕ್ರವಾರ ಕಾಮಗಾರಿ ನಿರ್ಮಾಣ ಸ್ಥಳಕ್ಕೆ ಜಿಲ್ಲಾಧಿಕಾರಿಗಳು ಭೇಟಿ ನೀಡಿ ಕಾಲೇಜಿಗೆ ಈ ಕಟ್ಟಡ ನಿರ್ಮಾಣದಿಂದ ಯಾವುದೇ ತೊಂದರೆಯಾಗುವುದಿಲ್ಲ. ಜಲಾಗಾರ ಸರಿಯಾದ ಜಾಗದಲ್ಲಿ ನಿರ್ಮಾಣವಾಗುತ್ತಿದೆ. ಇದು ಪುರಸಭೆ ಆಸ್ತಿ. ಸರ್ಕಾರದ ಕೆಲಸಕ್ಕೆ ವಿರೋಧ ಯಾಕೆ ಎಂದು ಪ್ರಶ್ನಿಸಿದರು. ಈ ವೇಳೆ ಹಳೆಯ ವಿದ್ಯಾರ್ಥಿಗಳು ಈ ಜಲಾಗಾರ ನಿರ್ಮಾಣಕ್ಕೆ ಬೇರೆ ಜಾಗ ನಿಗದಿಯಾಗಿತ್ತು ಎಂದು ಹೇಳಿದಾಗ, ಜಲಾಗಾರ ಕಟ್ಟಡಕ್ಕೆ ಬೇರೆ ಕಡೆ ಜಾಗ ನಿಗದಿಯಾದ ಠರಾವು ಆಗಿದ್ದರೆ ಅವುಗಳ ದಾಖಲಾತಿಯನ್ನು ಸಲ್ಲಿಸಿ ಪರಿಶೀಲನೆ ಮಾಡುತ್ತೇನೆ. ಈಗ ಇಲ್ಲಿ ನಡೆಯುತ್ತಿರುವ ಕಟ್ಟಡ ಕಾಮಗಾರಿ ಮುಂದುವರೆಯಲಿ. ಸೋಮವಾರದಿಂದಲೇ ಕೆಲಸ ಪ್ರಾರಂಭಿಸಿ ಮತ್ತು ನಿಗದಿತ ವೇಳೆಯಲ್ಲಿ ಪೂರ್ಣಗೊಳಿಸಬೇಕು. ವಿದ್ಯಾರ್ಥಿಗಳಿಗೆ ತೊಂದರೆ ಆಗದಂತೆ ತಮಗೆ ನಿಗದಿ ಪಡಿಸಿದ ಜಾಗದಲ್ಲಿ ನಿರ್ದಿಷ್ಟಪಡಿಸಿದ ಅಳತೆಯಲ್ಲಿ ಜಲಾಗಾರ ನಿರ್ಮಿಸಿ ಎಂದು ಸೂಚಿಸಿದರು. ಉಪವಿಭಾಗಾಧಿಕಾರಿ ಗಂಗಪ್ಪ ಎಂ., ಕರ್ನಾಟಕ ನೀರು ಸರಬರಾಜು ಒಳಚರಂಡಿ ಮಂಡಳಿ ಎಂಜಿನಿಯರ್ ಜೆ.ಬಿ. ಹೊಸಮನಿ, ಗ್ರೇಡ್ 2ತಹಶೀಲ್ದಾರ್ ಮಂಜುನಾಥ ಅಮಾಸಿ ಇತರರಿದ್ದರು.



ಮಾರನಬಸರಿ ಗ್ರಾಮದಲ್ಲಿ ಮೊಹರಂ ಹಬ್ಬದ ಸಿದ್ಧತೆ ಜೋರು

ರೋಣ: ಐತಿಹಾಸಿಕ ಹಿನ್ನೆಲೆಯುಳ್ಳ ಮೊಹರಂ ಹಬ್ಬದ ಆಚರಣೆಗೆ ಕ್ಷಣಗಣನೆ ಆರಂಭಗೊಂಡಿದ್ದು, ಕೋಮು ಸೌಹಾರ್ದತೆಗೆ ಹೆಸರಾದ ಮಾರನಬಸರಿ ಗ್ರಾಮ ಹಬ್ಬದ ಆಚರಣೆಗೆ ಸಿದ್ಧತೆ ಕೈಗೊಳ್ಳಲಾಗುತ್ತಿದೆ.

ಗದಗ ಜಿಲ್ಲೆಯಲ್ಲಿ ವಿಜೃಂಭಣೆಯಿಂದ ಮಾರನಬಸರಿ ಗ್ರಾಮದಲ್ಲಿ ಮೊಹರಂ ಹಬ್ಬವನ್ನು ಸರ್ವ ಜನಾಂಗದವರು ಆಚರಿಸುತ್ತಾರೆ. ಸಾವಿರಾರು ಭಕ್ತರು ಗ್ರಾಮಕ್ಕೆ ಆಗಮಿಸುವ ಮೂಲಕ ಅಲೈ ದೇವರ ದರ್ಶನವನ್ನು ಪಡೆದುಕೊಂಡು ಪುನೀತರಾಗುತ್ತಾರೆ. ಗ್ರಾಮದಲ್ಲಿ ಜರುಗುವ ಮೊಹರಂ ಹಬ್ಬಕ್ಕೆ ತಿಂಗಳ ಮುಂಚೆಯೇ ಗ್ರಾಮಸ್ಥರು ತಮ್ಮ ಮನೆಗಳ ಸ್ವಚ್ಛತಾ ಕಾರ್ಯದಲ್ಲಿ ತೊಡಗಿಕೊಳ್ಳುತ್ತಾರೆ. ಮನೆಗಳನ್ನು ಸುಣ್ಣ ಬಣ್ಣಗಳಿಂದ ಶೃಂಗಾರ ಮಾಡಿದ್ದಾರೆ.



ಜೂ.22ರಿಂದ ಮೊಹರಂ ಹಬ್ಬ ಆರಂಭಗೊಂಡು ಜೂ.26ರಂದು ಕೊನೆಗೊಳ್ಳುತ್ತದೆ. ಹಬ್ಬಕ್ಕೆ ಇನ್ನೂ ಸ್ವಲ್ಪ ಸಮಯವಿದ್ದರೂ ಸಹ ಎರಡು ಮಸೂತಿಗಳ ಮುಖಂಡರುಗಳು ಮಸೀದಿಗಳ ಶೃಂಗಾರ ಕಾಯಕದಲ್ಲಿ ತೊಡಗಿಕೊಂಡಿದ್ದಾರೆ. ಈಗಾಗಲೇ ಸ್ವಾಗತ ಕಮಾನ್‌ಗಳ ಜೋಡಣೆ ಕಾರ್ಯ ನಡೆಯುತ್ತಿದ್ದು, ಝಗಮಗಿಸುವ ವರ್ಣ ರಂಜಿತ ವಿದ್ಯುತ್ ಅಲಂಕಾರ ಮಾಡುವುದನ್ನು ಅಷ್ಟೆ ಬಾಕಿಯಿಟ್ಟಾದ್ದಾರೆ. ಗ್ರಾಮದ ದ್ವಾರ ಬಾಗಿಲು ಬಣ್ಣದಿಂದ ಮಿಂಚ ತೊಡಗಿದ್ದು, ದ್ವಾರ ಬಾಗಿಲು ಜೋಡಿಸುವ ವಿದ್ಯುತ್ ದೀಪಗಳು ಭಕ್ತರ ಮನವನ್ನು ತಣಿಸುತ್ತವೆ ಅಷ್ಟರ ಮಟ್ಟಿಗೆ ದೀಪಾಲಂಕಾರವನ್ನು ಕಮಿಟಿಯವರು ಮಾಡಿದ್ದಾರೆ. ಬೇರೆ ರಾಜ್ಯಗಳಿಂದಲೂ ಗ್ರಾಮಕ್ಕೆ ಆಗಮಿಸಿ ಎರಡು ಮಸೂತಿಗಳ ಅಲೈದೇವರಿಗೆ ಸಕ್ಕರೆ ನೈವೇದ್ಯವನ್ನು ಸಮರ್ಪಿಸಿ ತಮ್ಮ ಇಷ್ಟಾರ್ಥ ಸಿದ್ಧಿಗಳಿಗೆ ಪ್ರಾರ್ಥಿಸುತ್ತಾರೆ.

ಸಮಾಜ ನಿರ್ಮಾಣಕ್ಕೆ ಪ್ರತಿಯೊಬ್ಬರೂ ಕೊಡುಗೆ ನೀಡಲಿ: ಗವಿಸಿದ್ದೇಶ್ವರ ಶ್ರೀ

ಗಜೇಂದ್ರಗಡ: ಸಮಾಜಮುಖಿ ಚಿಂತನೆ ಮತ್ತು ಸೇವಾ ಮನೋಭಾವದಿಂದ ಬದುಕಿದ ಚನ್ನು ಪಾಟೀಲರ ಆದರ್ಶಗಳು ಇಂದಿನ ಯುವಜನತೆಗೆ ಮಾದರಿಯಾಗಿವೆ. ಶಿಕ್ಷಣ ಹಾಗೂ ಸಾಮಾಜಿಕ ಸೇವೆ ಮೂಲಕ ಸಮಾಜ ನಿರ್ಮಾಣಕ್ಕೆ ಕೊಡುಗೆ ನೀಡುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ಕೊಪ್ಪಳದ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ ಹೇಳಿದರು.

ಸಮೀಪದ ಸೂಡಿ ಗ್ರಾಮದ ಶ್ರೀ ಅನ್ನದಾನೇಶ್ವರ ಸಾಂಸ್ಕೃತಿಕ ಭವನದಲ್ಲಿ ನಡೆದ ಸಮಾಜಮುಖಿ ಚಿಂತಕರಾಗಿದ್ದ ಚನ್ನು ಪಾಟೀಲರ ಸಂಸ್ಮರಣೋತ್ಸವ, ಹಿರೇಅಳಗುಂಡಿಯ ಚನ್ನು ಪಾಟೀಲ ಫೌಂಡೇಷನ್‌ನ 5ನೇ ವಾರ್ಷಿಕೋತ್ಸವ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಪ್ರದಾನ ಸಮಾರಂಭವು ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು.

ರೋಣದ ಗುಲಗಂಜಿಮಠ ಗುರುಪಾದ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ, ಸಮಾಜದ ಅಭಿವೃದ್ಧಿಗೆ ಶಿಕ್ಷಣ ಮತ್ತು ಸಂಸ್ಕಾರಗಳು ಅವಶ್ಯಕ. ಸಮಾಜಮುಖಿ ಚಿಂತನೆಗಳನ್ನು ಅಳವಡಿಸಿಕೊಂಡು ಯುವಜನರು ಉತ್ತಮ ನಾಗರಿಕರಾಗಿ ಬೆಳೆಯಬೇಕು ಎಂದರು. ನಿಡಗುಂದಿಕೊಪ್ಪದ ಅಭಿನವ ಚನ್ನಬಸವ ಸ್ವಾಮೀಜಿ ಆಶೀರ್ವಚನ ನೀಡಿ, ಸೇವಾ ಮನೋಭಾವ, ಮಾನವೀಯ ಮೌಲ್ಯಗಳು ಹಾಗೂ ಶಿಕ್ಷಣದ ಮೂಲಕ ಸಮಾಜದಲ್ಲಿ ಪರಿವರ್ತನೆ ತರಲು ಸಾಧ್ಯ ಎಂದರು. ರೋಣದ ಬೂದಿಶ್ವರ ಮಠದ ಡಾ. ವಿಶ್ವನಾಥ ಸ್ವಾಮೀಜಿ ಆರ್ಶಿವಚನ ನೀಡಿದರು. ಅಧ್ಯಕ್ಷತೆಯನ್ನು ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷೆ ಬಸವರಾಜೇಶ್ವರಿ ಪಾಟೀಲ ವಹಿಸಿದ್ದರು. ಜಿ.ಜಿ. ಪಾಟೀಲ, ಗಂಗಾಧರ ಅಡಗತ್ತಿ, ಮಲ್ಲಿಕಾರ್ಜುನ ಬಾಳಿಕಾಯಿ, ಸಿ.ವಿ. ವಂಕಲಕುಂಟಿ, ಎಸ್. ಎಲ್. ಹಂಚಿನಾಳ, ಸಿ.ಆರ್. ಗುದಗಿ, ರವಿತೇಜ ಅಬ್ಬಿಗೇರಿ, ಕಲ್ಲಿನಾಥಶಾಸ್ತ್ರಿಗಳು ಸಂಗಯ್ಯ ಹಿರೇಮಠ, ಮುತ್ತಣ್ಣ ಪಲ್ಲೇದ, ವೀರಣ್ಣ ಅಂಗಡಿ, ಬಾಬುಗೌಡ ಪಾಟೀಲ, ರಮೇಶ ಕವಲೂರ, ಅರಣ ಕುಲಕರ್ಣಿ, ಎಸ್.ಬಿ.ಕುಂಬಾರ, ಪ್ರಭು ಚವಡಿ, ಶರಣಪ್ಪ ಲಕ್ಕಲಕಟ್ಟಿ, ಮುತ್ತಣ್ಣ ಲಿಂಗನಗೌಡರ, ಉಮೇಶ ಚನ್ನು ಪಾಟೀಲ, ಪೃಥ್ವಿರಾಜ ಚನ್ನು ಪಾಟೀಲ ಸೇರಿದಂತೆ ಅನೇಕರಿದ್ದರು.



ವಿದ್ಯುತ್ ಖಾಸಗೀಕರಣ ಕೈಬಿಡಲು ಒತ್ತಾಯ



ಶಿರಹಟ್ಟಿ: ವಿದ್ಯುತ್ ನಿಗಮಗಳ ಖಾಸಗೀಕರಣಕ್ಕೆ ಟಾಟಾ ಪವರ್ ಕಂಪನಿ ಸಲ್ಲಿಸಿರುವ ಅರ್ಜಿಯನ್ನು ತಿರಸ್ಕರಿಸಬೇಕೆಂದು ಆಗ್ರಹಿಸಿ ವಿವಿಧ ರೈತ ಸಂಘಟನೆಗಳ ವತಿಯಿಂದ ಗ್ರಾಹಕ ಜಾಗೃತಿ ಮತ್ತು ಕರಪತ್ರ ಹಂಚಿಕೆ ಕಾರ್ಯಕ್ರಮ ಸ್ಥಳೀಯ ಕೆಇಬಿ ಆವರಣದಲ್ಲಿ ನಡೆಯಿತು.

ವಿದ್ಯುತ್ ಖಾಸಗೀಕರಣದ ಕುರಿತು ಹೆಸ್ಕಾಂನ ಜಿಲ್ಲಾ ಅಧೀಕ್ಷಕ ಅಭಿಯಂತರರು, ಕಾರ್ಯ ಮತ್ತು ಪಾಲನಾ ಅಧಿಕಾರಿ ನಜ್ಮುನ್ನಿಸ ಕೆ. ಮಾತನಾಡಿ, ಕರ್ನಾಟಕ ರಾಜ್ಯದಲ್ಲಿ ಕೆಇಆರ್‌ಸಿ ವತಿಯಿಂದ ವಿದ್ಯುತ್ ವಿತರಣಾ ಪರವಾನಗಿಯನ್ನು ಟಾಟಾ ಪವರ್ ಕಂಪನಿಯವರಿಗೆ ನೀಡಿದರೆ ರೈತರಿಗೆ, ವಿದ್ಯುತ್ ಬಳಕೆದಾರರಿಗೆ ಹಾಗೂ ನೌಕರರಿಗೆ ಮಾರಕವಾಗಲಿದೆ. ರೈತರಿಗೆ ನೀಡುತ್ತಿರುವ ಉಚಿತ ಸೌಲಭ್ಯ ರದ್ದಾಗುವ ಸಾಧ್ಯತೆ ಇದ್ದು, ರೈತರ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಕೆ ಕಡ್ಡಾಯಗೊಳಿಸಬಹುದು. ಸಣ್ಣ ಕೈಗಾರಿಕೆಗಳಿಗೆ ರಿಯಾಯತಿ ದರದಲ್ಲಿ ನೀಡುತ್ತಿರುವ ವಿದ್ಯುತ್, ಕೈಮಗ್ಗ ನೇಕಾರರಿಗೆ ಹಾಗೂ ಕಾಫಿ ಬೆಳೆಗಾರರಿಗೆ ನೀಡುವ ಸಬ್ಸಿಡಿ ಬಂದ್ ಮಾಡಿದರೂ ಯಾವುದೇ ಆಶ್ಚರ್ಯ ಪಡಬೇಕಾಗಿಲ್ಲ, ನೂರಾರು ರೈತರು ಹಾಗೂ ವಿದ್ಯುತ್ ಬಳಕೆದಾರರು ಸರ್ಕಾರದ ಧೋರಣೆಯ ವಿರುದ್ಧ ಆಕ್ಷೇಪಣಾ ಅರ್ಜಿ ಸಲ್ಲಿಸಿದರು. ಹೆಸ್ಕಾಂನ ಎಇಇ ಆಂಜನೇಯಪ್ಪ, ಶಾಖಾಧಿಕಾರಿ ಆಶಿಪ್ ಮಕಾಂದಾರ, ವಿ.ವಿ. ಕಪ್ಪತನವರ, ಜಾನು ಲಮಾಣಿ, ಚಾಂದಸಾಬ ಮುಳಗುಂದ, ಸಂದೀಪ ಕಪ್ಪತ್ತನವರ, ರಾಮಣ್ಣ ಕಂಬಳಿ, ಅಕ್ಬರ್ ಯಾದಗಿರಿ, ಶ್ರೀನಿವಾಸ ಬಾರಬಾರ್, ಹಮೀದ್ ಸನದಿ, ನಜೀರ್ ಡಂಬಳ, ಐ.ಕೆ. ಶೇಖಸನದಿ, ಎಸ್.ಎಸ್.ಚಿಕ್ಕಮಠ, ಸಂತೋಷ ಕುಬೇರ, ಮಂಜುನಾಥ ಹುಬ್ಬಳ್ಳಿ ಸೇರಿದಂತೆ ಕೆಇಬಿ ಸಿಬ್ಬಂದಿ ಇದ್ದರು.

ವರುಣನ ಕೃಪೆಗಾಗಿ ಮದುವೆ, ನೀರೆರಚುವ ಹಬ್ಬ

ಲಕ್ಷ್ಮೇಶ್ವರ: ಪಟ್ಟಣದ ಕದರಗೇರಿ ಓಣಿಯಲ್ಲಿ ನಾಗರಿಕರು ವರುಣನ ಕೃಪೆಗಾಗಿ ಕಪ್ಪೆ ಮದುವೆ ಮತ್ತು ನೀರೆರಚುವ ಹಬ್ಬ ಆಚರಿಸಿದರು.

ಮೇ ಅಂತ್ಯ ಮತ್ತು ಜೂನ್ ಮೊದಲ ವಾರದಲ್ಲಿ ರೈತರು ಬಿತ್ತನೆ ಮಾಡಿರುವ ಬೆಳೆಗೆ ಸದ್ಯ ಮಳೆಯ ಅವಶ್ಯಕತೆಯಿದೆ. ಕಳೆದ ಎಂಟತ್ತು ದಿನಗಳಿಂದ ಮಳೆ ಮಾಯವಾಗಿದ್ದು ಬಿರುಬಿಸಿಲು ಇದೀಗ ಮೊಳಕೆಯೊಡೆದು ಚಿಗುರಿರುವ ಸಸಿ ಬೆಳೆ ಬಾಡುವಂತಾಗಿದೆ. ಇದರಿಂದ ಚಿಂತೆಗೀಡಾಗಿರುವ ರೈತರು ಮಳೆರಾಯನ ಮೊರೆ ಹೋಗಿದ್ದಾರೆ. ಕದರಗೇರಿ ಓಣಿಯ ಜನರು ಪರಸ್ಪರ ನೀರೆರಚುವ ಆಚರಣೆ ಮಾಡಿದರು. ಕಪ್ಪೆಗಳಿಗೆ ಮದುವೆ ಮಾಡಿದರೆ ಮಳೆರಾಯ ಬರುತ್ತಾನೆ ಎಂಬ ನಂಬಿಕೆಯಿಂದ ಗ್ರಾಮೀಣ ಪ್ರದೇಶದಲ್ಲಿ ಈ ರೀತಿಯ ಮದುವೆಗಳನ್ನು ಮಾಡಲಾಗುತ್ತದೆ. ದೇವಸ್ಥಾನದ ಆವರಣದಲ್ಲಿ ರಂಗೋಲಿ ಹಾಕಿ, ತಳಿ-ತೋರಣ ಕಟ್ಟಲಾಗಿತ್ತು. ಎರಡು ಪುಟ್ಟ ಮಕ್ಕಳನ್ನು ಮದು ಮಕ್ಕಳನ್ನಾಗಿ ಮಾಡಿ ಅವರಿಗೆ ಅರಿಷಿನ ಶಾಸ್ತ್ರ, ಮದುವೆ ಶಾಸ್ತ್ರವನ್ನು ನೆರವೇರಿಸಿದರು. ಸಿದ್ಧಪಡಿಸಿದ್ದ ಸಂಗಟಿ- ಸಾರಿನ ಮದುವೆ ಊಟ ಸವಿದರು. ಓಣಿಯ ಲಕ್ಷ್ಮವ್ವ ಗಿಡಿಬಿಡಿ, ದೀಪಾ ಗಿಡಿಬಿಡಿ, ರೇವತಿ ಉಪನಾಳ, ವಾಣಿ ಹತ್ತಿ, ನಿಂಗವ್ವ ಟೋಕಾಳಿ, ಗದಿಗೆವ್ವ ಟೋಕಾಳಿ, ಮಂಜವ್ವ ಗಿಡಿಬಿಡಿ, ಬಸಮ್ಮ ಗಿಡಿಬಿಡಿ, ಗಂಗಮ್ಮ ಗಡೆಪ್ಪನವರ, ಸಾವಿತ್ರಿ ಗಡೆಪ್ಪನವರ, ಶಾಂತಾ ಡಂಬಳ, ಅನ್ನಪೂರ್ಣ ಲಿಂಗಶೆಟ್ಟಿ, ಲಕ್ಷ್ಮವ್ವ ಹುರಕನವರ, ರೇಣುಕಾ ಅಡರಕಟ್ಟಿ, ನೀಲಪ್ಪ ಹತ್ತಿ, ಸೋಮೇಶ ಉಪನಾಳ, ಮಹಾದೇವಪ್ಪ ಗಿಡಿಬಿಡಿ ಇತರರಿದ್ದರು.



ಗಾಂಜಾ ಮಾರಾಟ: ಮೂವರ ಬಂಧನ



ಲಕ್ಷ್ಮೇಶ್ವರ: ಇಲ್ಲಿನ ಮುಕ್ತಿನಗರದ ಅಗಸ್ತ್ಯತೀರ್ಥದ ದೇವಸ್ಥಾನದ ಹತ್ತಿರ ಗಾಂಜಾ ಸೇವಿಸುತಿದ್ದ ಸಂತೋಷ ಉಪ್ಪಾರ ಹಾಗೂ ಸಾಧಿಕ್ ರಿತ್ತಿ ಅವರನ್ನು ಪೊಲೀಸರು ಬಂಧಿಸಿ ಎ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಅಲ್ಲದೇ ಗದಗದಿಂದ ಲಕ್ಷೇಶ್ವರ ಬರುವ ದಾರಿಯಲ್ಲಿ ಗಾಂಜಾ ಮಾರಾಟ ಮಾಡುತಿದ್ದ ಆರೋಪಿತರಾದ ನಾಗರಾಜ ಮುತಗಾರ ಪ್ರಶಾಂತ ಕಟಗೇರಿ, ಗಂಗಪ್ಪ ಚವ್ಹಾಣ, ಗದಗ-ಬೆಟಗೇರಿ ನಿವಾಸಿಗಳಾಗಿದ್ದು ಇವರನ್ನು ಪೊಲೀಸರು ಬಂಧಿಸಿ ಅವರ ವಶದಲ್ಲಿದ್ದ ಒಟ್ಟು 2.365 ಕಿಲೋ. ಗ್ರಾಂ. ತೂಕದ 1,18,250 ಮೌಲ್ಯದ ಗಾಂಜಾವನ್ನು ವಶಪಡಿಸಿಕೊಂಡಿದ್ದು ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಾರೆ

ಈ ಪ್ರಕರಣದಲ್ಲಿ ರೇಡ್ ಮಾಡಿ ದೂರು ನೀಡಿದ ಅಪರಾಧ ವಿಭಾಗದ ಪಿಎಸ್‌ಐ ಟಿ.ಕೆ.ರಾಠೋಡ ಸಿಬ್ಬಂದಿ ವರ್ಗ ಹಾಗೂ ತನಿಖಾಧಿಕಾರಿ ಪಿಎಸ್‌ಐ ನಾಗರಾಜ ಗಡದ ಅವರಿಗೆ ಮಾರ್ಗದರ್ಶನ ನೀಡಿದ ಡಿ.ಎಸ್.ಪಿ ಗದಗ ಉಪ-ವಿಭಾಗ ಗದಗ ಹಾಗೂ ಸಿಪಿಐ ಬಿ.ವಿ.ನ್ಯಾಮಗೌಡ ಶಿರಹಟ್ಟಿ ವೃತ್ತ ಅವರಿಗೆ ಜಿಲ್ಲಾ ಪೊಲೀಸ್ ಅಧೀಕ್ಷಕ ರೋಹನ ಜಗದೀಶ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಅನುಷ್ಠಾನ ಆತ್ಮಶುದ್ಧಿಯ ಮಾರ್ಗ

ನರಗುಂದ: ಅನುಷ್ಠಾನ ಆಧ್ಯಾತ್ಮ ಸಾಧನೆ ಮತ್ತು ಆತ್ಮಶುದ್ಧಿಯ ಒಂದು ಮಾರ್ಗವಾಗಿದೆ. ಮಾತನ್ನು ಹಾಗೂ ಆಹಾರವನ್ನು ನಿಯಂತ್ರಿಸುವುದರಿಂದ ಮನಸ್ಸಿನ ಏಕಾಗ್ರತೆ ಹಾಗೂ ಅಂತರ್ಮುಖಿ ಸಾಧನೆಯ ಜೊತೆಗೆ ಲೋಕಕಲ್ಯಾಣವನ್ನು ಮಾಡುವುದು ಮೌನಲಿಂಗಾನುಷ್ಠಾನದ ಪ್ರಮುಖ ಉದ್ದೇಶವಾಗಿದೆ ಎಂದು ಡಾ. ತೋಂಟದ ಸಿದ್ಧರಾಮ ಸ್ವಾಮೀಜಿ ಹೇಳಿದರು.

ಅವರು ತಾಲೂಕಿನ ಕಲ್ಲೂರು ಶ್ರೀ ಸಿದ್ದೇಶ್ವರ ದೇವಸ್ಥಾನದಲ್ಲಿ ಶಾಂತಲಿಂಗ ಶ್ರೀಗಳು ಕೈಗೊಂಡಿದ್ದ 31 ದಿನಗಳ ಮೌನಲಿಂಗಾನುಷ್ಠಾನ ಮಂಗಲೋತ್ಸವ ಸಮಾರಂಭದಲ್ಲಿ ಆಶೀರ್ವಚನ ನೀಡಿದರು. ಅನುಷ್ಠಾನಕ್ಕೆ ಎಲ್ಲವನ್ನೂ ನಿಗ್ರಹಿಸುವ ಶಕ್ತಿಯಿದೆ ಎಂದರು.

ಚಿಪ್ಪಲಕಟ್ಟಿ ಬೃಹನ್ಮಠದ ಸಿದ್ದಲಿಂಗ ಸ್ವಾಮೀಜಿ ಮಾತನಾಡಿದರು. ಧಾರವಾಡದ ಹಿರೇಮಲ್ಲೂರ ಈಶ್ವರನ್ ಪದವಿಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯ ಶಶಿಧರ ತೋಡಕರ ಹಾಗೂ ಧಾರವಾಡದ ಜಿಪಂ ಮಾಜಿ ಸದಸ್ಯ ಎ.ಎಂ. ಮನ್ನಿ ಮಾತನಾಡಿದರು. ಖ್ಯಾತ ಉದ್ಯಮಿಗಳಾದ ಬಸವರಾಜ ಸಿಂದನೂರ ದಂಪತಿಯನ್ನು ಸನ್ಮಾನಿಸಲಾಯಿತು. ಮುಳ್ಳೂರು ಹಿರೇಮಠದ ಚಂದ್ರಶೇಖರ ಶಿವಾಚಾರ್ಯರು, ರಾಮದುರ್ಗ ಶಾಂತವೀರ ಸ್ವಾಮೀಜಿ, ಚಂದ್ರಶೇಖರ ಮಟ್ಟಿ, ಬಸವರಾಜ ಚಿಕ್ಕಮಠ, ಸುರೇಶ ಸಿ. ಪೂಜಾರ ಉಪಸ್ಥಿತರಿದ್ದರು. ಚಂದ್ರಶೇಖರ ಸೊಬರದ ನಿರ್ವಹಿಸಿದರು.



ಕಿರುಸುದ್ದಿ

ಬೃಹತ್ ಗಾತ್ರದ ಹೆಬ್ಬಾವು ರಕ್ಷಣೆ



ಮುಂಡಗೋಡ: ತಾಲೂಕಿನ ಕೊಪ್ಪ ಗ್ರಾಮದ ಮನೆಯ ಕಾಂಪೌಂಡ್‌ವೊಂದರಲ್ಲಿ ಕೋಳಿ ಆಸೆಗೆ ಬಂದಿದ್ದ ಹೆಬ್ಬಾವುವನ್ನು ಗಸ್ತು ವನಪಾಲಕ ಮುತ್ತುರಾಜ ಹಳ್ಳಿ ಅವರು ರಕ್ಷಣೆ ಮಾಡಿ ಅರಣ್ಯಕ್ಕೆ ಬಿಟ್ಟಿದ್ದಾರೆ. ಕೊಪ್ಪ ಗ್ರಾಮದ ಜಾರ್ಜ್ ಪಾರಲ್ ಎಂಬುವರ ಮನೆಯ ಕಾಂಪೌಂಡ್‌ನಲ್ಲಿ ಬೃಹತ್ ಗಾತ್ರದ ಹೆಬ್ಬಾವು ಬಂದಿತ್ತು. ಇನ್ನೇನು ಕೋಳಿಗಳನ್ನು ಹಿಡಿದು ತಿನ್ನುವ ಪರಿಸ್ಥಿಯಲ್ಲಿದ್ದಾಗ ಕೂಡಲೇ ಗಸ್ತು ವನಪಾಲಕ ಮುತ್ತುರಾಜ ಹಳ್ಳಿ ಅವರಿಗೆ ಮಾಹಿತಿ ತಿಳಿಸಿದ್ದಾರೆ. ವಿಷಯ ತಿಳಿದು ಗಸ್ತು ವನಪಾಲಕ ಬಂದು ಹೆಬ್ಬಾವನ್ನು ರಕ್ಷಿಸಿ ಅರಣ್ಯಕ್ಕೆ ಬಿಟ್ಟಿದ್ದಾರೆ.

ಮಹಾಲಕ್ಷ್ಮೀ ದೇವಸ್ಥಾನದಲ್ಲಿ ಕಳ್ಳತನ

ಗದಗ: ದೇವಸ್ಥಾನಕ್ಕೂ ಖದೀಮರು ಕನ್ನ ಹಾಕಿದ್ದು, ದೇವರ ಬೆಳ್ಳಿ ಕಿರೀಟ, ಹಸ್ತ, ಬಂಗಾರದ ಮಾಂಗಲ್ಯ ಸರ ಸೇರಿದಂತೆ ಅನೇಕ ವಸ್ತುಗಳ ಕಳ್ಳತನವಾದ ಘಟನೆ ನಗರದ ಹಾತಲಗೇರಿ ನಾಕಾ ಬಳಿಯ ಮಹಾಲಕ್ಷ್ಮೀ ದೇವಸ್ಥಾನದಲ್ಲಿ ನಡೆದಿದೆ.

ಲಕ್ಷ್ಮೀ ದೇವರ ಅನೇಕ ಆಭರಣಗಳು ಸೇರಿದಂತೆ ಪೂಜಾ ಸಾಮಗ್ರಿಗಳು ಅನೇಕ ವಸ್ತುಗಳು ಕಳ್ಳತನವಾಗಿದೆ. ದೇವಸ್ಥಾನ ಹುಂಡಿ ಒಡೆಯಲು ಯತ್ನಿಸಿದ್ದಾರೆ. ಆದರೆ, ಹುಂಡಿ ಬೇಗ ಓಪನ್ ಆಗದಕ್ಕೆ ಕೈ ಬಿಟ್ಟು ಬೇರೆ ವಸ್ತುಗಳ ಕಳ್ಳತನ ಮಾಡಿದ್ದಾನೆ. ಇನ್ನು ಸಾಕ್ಷಿ ನಾಶಕ್ಕಾಗಿ ದೇವಸ್ಥಾನ ಒಳಗೆ ಚಪ್ಪಲಿ ಧರಿಸಿಕೊಂಡು ಹೋಗಿದ್ದಾರೆ. ಮುಖಕ್ಕೆ ಮಾಸ್ಕ್, ಹ್ಯಾಂಡ್ ಗ್ಲೋಸ್, ಕ್ಯಾಪ್ ಹಾಕಿಕೊಂಡು ಗುರುತು ಪತ್ತೆಯಗದಂತೆ ಸಾಕ್ಷಿ ಮಾಡಲು ಯತ್ನಿಸಿದ್ದಾರೆ. ದೇವಸ್ಥಾನದಲ್ಲಿ ಸಿಸಿ ಕ್ಯಾಮೆರಾ ಇದ್ದರೂ ಅದರ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ಸ್ಥಳಕ್ಕೆ ಡಿವೈಎಸ್ಪಿ ಮುರ್ತುಜಾ ಖಾದ್ರಿ, ಪಿಎಸ್ಐ ಮಾರುತಿ ಸೇರಿದಂತೆ ಅನೇಕ ಸಿಬ್ಬಂದಿ ಭೇಟಿ ಪರಿಶೀಲನೆ ನಡೆಸಿದ್ದಾರೆ. ಈ ಕುರಿತು ಬೆಟಗೇರಿ ಬಡಾವಣೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಳ್ಳತನ ಪತ್ತೆಗಾಗಿ ಪೊಲೀಸರು ಶೋಧ ಕಾರ್ಯ ನಡೆಸಿದ್ದಾರೆ.

ರೈತ ಆತ್ಮಹತ್ಯೆ

ಹಾವೇರಿ: ಸಾಲಬಾಧೆ ತಾಳಲಾರದೆ ರೈತರೊಬ್ಬರು ದನದ ಕೊಟ್ಟಿಗೆಯಲ್ಲಿ ನೇಣು ಬಿಗಿದುಕೊಂಡು ಮೃತಪಟ್ಟಿರುವ ಘಟನೆ ರಟ್ಟೀಹಳ್ಳಿ ತಾಲೂಕು ಕಡೂರು ಗ್ರಾಮದಲ್ಲಿ ನಡೆದಿದೆ.

ಕಡೂರು ಗ್ರಾಮದ ಪರ್ವತಗೌಡ ನಂದೆಪ್ಪಗೌಡ ಲಕ್ಕನಗೌಡ್ರ (60) ಮೃತಪಟ್ಟ ರೈತ. ಇವರು ಜಮೀನಿನಲ್ಲಿ ಬೋರವೆಲ್ ಕೊರೆಸಲು ಹಾಗೂ ಮನೆ ಕಟ್ಟಲೆಂದು 3.50ಲಕ್ಷ ರೂ.ಸಾಲ ಹಾಗೂ ಜಮೀನು ಕೃಷಿ ಚಟುವಟಿಕೆಗಳ ಅಡಚಣೆಗಾಗಿ ಕೆಜಿಬಿ ಬ್ಯಾಂಕಿನಲ್ಲಿ 60 ಸಾವಿರ ರೂ.ಸಾಲವನ್ನು ಮಾಡಿಕೊಂಡಿದ್ದರು. ಕಳೆದ ವರ್ಷ ಅತಿವೃಷ್ಟಿ ಮಳೆಯಿಂದಾಗಿ ಬೆಳೆಗಳು ಸರಿಯಾಗಿ ಬಾರದೆ ನಷ್ಟವಾಗಿದ್ದರಿಂದ ಮಾಡಿದ ಸಾಲವನ್ನು ತೀರಿಸುವುದು ಹೇಗೆ ಎಂಬ ಚಿಂತೆಗೀಡಾಗಿದ್ದರು.

ಇದರಿಂದ ಬೇಸತ್ತ ರೈತ ಮನೆಯ ಹಿಂದಿನ ದನದ ಕೊಟ್ಟಿಗೆಯಲ್ಲಿ ಆಂಗ್ಲರ್ ಪೈಪ್‌ಗೆ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ಮೃತರ ಪತ್ನಿ ಸಿದ್ದಮ್ಮ ಲಕ್ಕನಗೌಡ್ರ ಪೊಲೀಸರ ದೂರಿನಲ್ಲಿ ತಿಳಿಸಿದ್ದಾರೆ. ರಟ್ಟಿಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೃಷ್ಣಾ ನದಿಗೆ 2 ಟಿಎಂಸಿ ನೀರು ಬಿಡುಗಡೆ | ಡಿಸಿ ಮಹಮ್ಮದ್ ರೋಷನ್ ಮಾಹಿತಿ

ಮುಂಬೈನಲ್ಲಿ ಇಂದು ಮಹತ್ವದ ಸಭೆ



ಬೆಳಗಾವಿ: ಕೃಷ್ಣಾ ನದಿಗೆ 2 ಟಿಎಂಸಿ ನೀರು ಬಿಡುಗಡೆ ಮಾಡುವ ಕುರಿತು ಜೂನ್ 20ರಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರು ಮಹಾರಾಷ್ಟ್ರ ಮುಖ್ಯಮಂತ್ರಿ, ದೇವೇಂದ್ರ ಫಡ್ನವೀಸ್ ಅವರೊಂದಿಗೆ ಮುಂಬೈನಲ್ಲಿ ಮಹತ್ವದ ಸಭೆ ನಡೆಸಲಿದ್ದು, ಈ ಬಾರಿ ನೀರು ಬಿಡುಗಡೆ ಆಗುವ ವಿಶ್ವಾಸವಿದೆ ಎಂದು ಜಿಲ್ಲಾಧಿಕಾರಿ ಮಹಮ್ಮದ್ ರೋಷನ್ ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ಬೇಸಿಗೆ ಅವಧಿಯಲ್ಲಿ ಮಹಾರಾಷ್ಟ್ರದಿಂದ ನಿಯಮಿತವಾಗಿ 2 ಟಿಎಂಸಿ ನೀರು ಬಿಡುಗಡೆ ಮಾಡಲಾಗುತ್ತಿತ್ತು. ಆದರೆ, ಕಳೆದ ಐದಾರು ವರ್ಷಗಳಿಂದ ನೀರು ಹರಿಸಲಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಹಿಂದಿನಂತೆ ನೀರು ಬಿಡುಗಡೆ ಮಾಡುವಂತೆ ಕರ್ನಾಟಕ ಸರ್ಕಾರ ಮನವಿ ಸಲ್ಲಿಸಲಿದ್ದು, ಮುಂದಿನ ಹತ್ತು ದಿನಗಳಲ್ಲಿ ನೀರು ದೊರೆಯುವ ನಿರೀಕ್ಷೆಯಿದೆ ಎಂದರು.

ಹಿಪ್ಪರಗಿ ಬ್ಯಾರೇಜ್ ಗೇಟ್ ಹಾನಿಯಿಂದ ನಷ್ಟ: ಹಿಪ್ಪರಗಿ ಬ್ಯಾರೇಜ್‌ನ ಗೇಟ್ ಮುರಿದ ಪರಿಣಾಮ ಸುಮಾರು ಒಂದೂವರೆ ಟಿಎಂಸಿ ನೀರು ನಷ್ಟವಾಗಿದೆ. ಪ್ರಸ್ತುತ ಅಲ್ಲಿ ಕೇವಲ 0.08 ಟಿಎಂಸಿ ನೀರು ಮಾತ್ರ ಸಂಗ್ರಹವಿದೆ. ಈ ಕುರಿತು ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗಿದ್ದು, ಮಹಾರಾಷ್ಟ್ರ ಸರ್ಕಾರದೊಂದಿಗೆ ನೇರವಾಗಿ ಚರ್ಚಿಸಿ ನೀರು ಬಿಡುಗಡೆಗೆ ಮನವರಿಕೆ ಮಾಡುವ ಪ್ರಯತ್ನ ನಡೆಯಲಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಕುಡಿಯುವ ನೀರಿನ ಸಮಸ್ಯೆ ಇಲ್ಲ: ಘಟಪ್ರಭಾ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿರುವ ರಾಜಾ ಲಖಮಗೌಡ ಜಲಾಶಯದಲ್ಲಿ ಪ್ರಸ್ತುತ 5.5 ಟಿಎಂಸಿ ನೀರು ಲಭ್ಯವಿದೆ. ಕೃಷಿ ಚಟುವಟಿಕೆಗಳಿಗೆ ನೀರು ಪೂರೈಕೆ ಸ್ಥಗಿತಗೊಳಿಸಲಾಗಿದ್ದು, ಈ ನೀರನ್ನು ಕುಡಿಯುವ ಉದ್ದೇಶಕ್ಕಾಗಿ ಮಾತ್ರ ಬಳಸಲಾಗುತ್ತದೆ ಎಂದು ಹೇಳಿದರು.

ಅದೇ ರೀತಿ ಮಲಪ್ರಭಾ ನದಿಯಲ್ಲಿ 8 ಟಿಎಂಸಿ ನೀರು ಸಂಗ್ರಹವಿದ್ದು, ಅದರಲ್ಲಿ 5 ಟಿಎಂಸಿ ನೀರು ಆಡಳಿತದ ನಿಯಂತ್ರಣದಲ್ಲಿದೆ. ಧಾರವಾಡ ಜಿಲ್ಲೆಗೆ ಜುಲೈ ಅಂತ್ಯದವರೆಗೆ 0.36 ಟಿಎಂಸಿ ಹಾಗೂ ಸವದತ್ತಿ ಮತ್ತು ಬೈಲಹೊಂಗಲ ಪ್ರದೇಶಗಳಿಗೆ 0.03 ಟಿಎಂಸಿ ನೀರಿನ ಅಗತ್ಯವಿದೆ. ಹೀಗಾಗಿ ಹಿಡಕಲ್ ಹಾಗೂ ನವಿಲುತೀರ್ಥ ಜಲಾಶಯಗಳಿಂದ ಕುಡಿಯುವ ನೀರಿನ ಸಮಸ್ಯೆ ಎದುರಾಗುವುದಿಲ್ಲ ಎಂದು ಭರವಸೆ ನೀಡಿದರು.

ತುರ್ತು ನಿಗಾ ಯೋಜನೆ ಸಿದ್ಧಪಡಿಸಲು ಸೂಚನೆ: ಬೆಳಗಾವಿ ನಗರದಲ್ಲಿ ಸಂಭವನೀಯ ನೀರಿನ ಬಿಕ್ಕಟ್ಟನ್ನು ಎದುರಿಸಲು ತಕ್ಷಣವೇ 'ತುರ್ತು ನಿಗಾ ಯೋಜನೆ' ರೂಪಿಸುವಂತೆ ಪಾಲಿಕೆ ಆಯುಕ್ತರಿಗೆ ಸೂಚನೆ ನೀಡಲಾಗಿದೆ. ಖಾಸಗಿ ಬೋರ್‌ವೆಲ್‌ಗಳು ಮತ್ತು ಟ್ಯಾಂಕರ್‌ಗಳನ್ನು ಗುರುತಿಸಿ ಅಗತ್ಯವಿದ್ದಲ್ಲಿ ಬಾಡಿಗೆ ಆಧಾರದಲ್ಲಿ ಬಳಸಿಕೊಳ್ಳಲಾಗುವುದು. ಟ್ಯಾಂಕರ್ ದರ ನಿಗದಿಯ ಬಗ್ಗೆ ವರದಿ ಪಡೆದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದಲ್ಲಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಮುಂಗಾರು ಮಳೆ ವೈಫಲ್ಯದ ಆತಂಕ: ಈ ವರ್ಷ ಸೂಪರ್ ಎಲ್ ನಿನೋ ಪರಿಣಾಮದಿಂದ ರಾಜ್ಯದಲ್ಲಿ ಮಳೆ ಕೊರತೆ ಉಂಟಾಗುವ ಸಾಧ್ಯತೆ ಇದೆ. ಪೆಸಿಫಿಕ್ ಮಹಾಸಾಗರದ ಮೇಲ್ಮೈ ತಾಪಮಾನದಲ್ಲಿ ಉಂಟಾಗುವ ಬದಲಾವಣೆ ಜಾಗತಿಕ ಹವಾಮಾನದಲ್ಲಿ ವ್ಯತ್ಯಾಸ ಉಂಟುಮಾಡಲಿದ್ದು, ಇದರ ಪರಿಣಾಮವಾಗಿ ಬರಗಾಲ ಹಾಗೂ ಕೃಷಿ ಕ್ಷೇತ್ರದ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ವಿವರಿಸಿದರು.

ಈ ಬಾರಿ ಶೇ.60ರಷ್ಟು ಮುಂಗಾರು ಮಳೆ ವೈಫಲ್ಯವಾಗುವ ಸಾಧ್ಯತೆ ಇರುವುದಾಗಿ ಹೇಳಿದ ಅವರು, ಸುಮಾರು 140 ವರ್ಷಕ್ಕೊಮ್ಮೆ ಇಂತಹ ಸೂಪರ್ ಎಲ್ ನಿನೋ ಪರಿಸ್ಥಿತಿ ಎದುರಾಗುತ್ತದೆ. ಇಂತಹ ಸಂದರ್ಭದಲ್ಲಿ ಕುಡಿಯುವ ನೀರಿಗೆ ಮೊದಲ ಆದ್ಯತೆ ನೀಡಲಾಗುವುದು. ನೀರಿನ ಲಭ್ಯತೆ ಖಚಿತವಾದ ನಂತರವೇ ಕೃಷಿ ಚಟುವಟಿಕೆಗಳ ಕುರಿತು ನಿರ್ಧಾರ ಕೈಗೊಳ್ಳಲಾಗುವುದು. ಬೆಳೆ ಹಾನಿಯಾದಲ್ಲಿ ಬರಗಾಲ ಘೋಷಿಸಿ ಪರಿಹಾರ ನೀಡುವ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ನೀರಿನ ಮಿತಬಳಕೆಗೆ ಮನವಿ

ಜಿಲ್ಲೆಯಲ್ಲಿ ಪ್ರಸ್ತುತ 36 ವಾರಗಳಿಗೆ ಸಾಕಾಗುವಷ್ಟು ಮೇವಿನ ಲಭ್ಯತೆ ಇದೆ. ಮುಂಗಾರು ಅವಧಿ ಮುಗಿಯುವವರೆಗೆ ಮೇವಿನ ಕೊರತೆ ಉಂಟಾಗುವ ಸಾಧ್ಯತೆ ಇಲ್ಲ. ಜಾನುವಾರುಗಳಿಗೆ ಅಗತ್ಯ ನೀರಿನ ವ್ಯವಸ್ಥೆಯನ್ನು ಗ್ರಾಮ ಪಂಚಾಯಿತಿಗಳು ಹಾಗೂ ಸ್ಥಳೀಯ ಸಂಸ್ಥೆಗಳು ಮಾಡಲಿದ್ದು, ಗೋಶಾಲೆಗಳಲ್ಲಿ ನೀರು ಸಂಗ್ರಹಿಸಲು ಕ್ರಮ ಕೈಗೊಳ್ಳಲಾಗುತ್ತದೆ. ಈ ಎಲ್ಲ ವ್ಯವಸ್ಥೆಗಳ ಮೇಲ್ವಿಚಾರಣೆಯನ್ನು ಜಿಲ್ಲಾ ಮಟ್ಟದ ಟಾಸ್ಕ್ ಫೋರ್ಸ್ ಸಮಿತಿ ನಡೆಸಲಿದೆ ಎಂದು ತಿಳಿಸಿದರು.

ಶಾಲೆಯ ಮಾನ್ಯತೆ ರದ್ದು: ಮುಖ್ಯಸ್ಥನ ಬಂಧನ



ಹುಬ್ಬಳ್ಳಿ/ ನವಲಗುಂದ: ನವಲಗುಂದ ಖಾಸಗಿ ಶಾಲೆಯ ಕಟ್ಟಡದ ಮೇಲಿಂದ 10 ವರ್ಷದ ಬಾಲಕ ಬಿದ್ದು ಮೃತಪಟ್ಟಿರುವ ಪ್ರಕರಣಕ್ಕೆ ಸಂಬಂಧಿಸಿ ಪೊಲೀಸರು ಆರೋಪಿ ಹಾಗೂ ಶಾಲೆ ಮುಖ್ಯಸ್ಥ ಭರತೇಶನನ್ನು ಬಂಧಿಸಿ ನ್ಯಾಯಾಲಯಕ್ಕೆ ಒಪ್ಪಿಸಿದ್ದಾರೆ. ಶಾಲಾ ಶಿಕ್ಷಣ ಇಲಾಖೆಯೂ ಶಾಲೆಯಲ್ಲಿ ಸುರಕ್ಷತಾ ಕ್ರಮ ಕೈಗೊಂಡಿಲ್ಲ ಎಂಬ ಕಾರಣಕ್ಕೆ ಶಾಲೆಯ ಮಾನ್ಯತೆಯನ್ನು ರದ್ದು ಮಾಡಿದೆ.

ಪ್ರಕರಣ ಹಿನ್ನೆಲೆ: ನವಲಗುಂದದ ವಿದ್ಯಾಜ್ಯೋತಿ ವಸತಿ ಶಾಲೆಯಲ್ಲಿ 4ನೆಯ ತರಗತಿ ಓದುತ್ತಿದ್ದ ಬಾಲಕ ಆಕಾಶ ನೀಲಣ್ಣವರ (10) ಕಟ್ಟಡ ಮೇಲಿಂದ ಬಿದ್ದು ಮೃತಪಟ್ಟಿದ್ದ. ಮೃತ ಬಾಲಕ ಸಾವಿಗೆ ಶಿಕ್ಷಕರ ಕಿರುಕುಳ ಕಾರಣವೆಂದು ಆರೋಪಿಸಿ ಕುಟುಂಬಸ್ಥರು ಹಾಗೂ ಸಾರ್ವಜನಿಕರು ಪ್ರತಿಭಟನೆ ನಡೆಸಿದ್ದರು. ನವಲಗುಂದ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ.

ಮುಗಿಲು ಮುಟ್ಟಿದ ಆಕ್ರಂದನ: ಮೃತಪಟ್ಟಿರುವ ಬಾಲಕ ಆಕಾಶನ ಮರಣೋತ್ತರ ಪರೀಕ್ಷೆಯೂ ಹುಬ್ಬಳ್ಳಿ ಕೆಎಂಸಿಆರ್‌ಐನಲ್ಲಿ ನಡೆದ ಬಳಿಕ ಅಂತ್ಯಕ್ರಿಯೆ ಸ್ವಗ್ರಾಮ ಶಾನವಾಡದಲ್ಲಿ ಶುಕ್ರವಾರ ನಡೆಯಿತು. ಬಾಲಕನ ಸಾವು ಇಡೀ ಗ್ರಾಮದಲ್ಲಿ ಸ್ಮಶಾನ ಮೌನ ಆವರಿಸಿದೆ. ತಂದೆ ತಾಯಿ ಹಾಗೂ ಕುಟುಂಬಸ್ಥರ ದುಃಖ ಮುಗಿಲು ಮುಟ್ಟಿತ್ತು.

ಶಾಲೆಯ ಮಾನ್ಯತೆ ರದ್ದು: ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತ ಈಶ್ವರ ಉಳ್ಳಾಗಡ್ಡಿ ನಗರದ ಕೆಎಂಸಿಆರ್‌ಐ ಆಸ್ಪತ್ರೆಗೆ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವಾನ ಹೇಳಿದರು. ಅಲ್ಲದೇ, ತಪ್ಪಿತಸ್ಥರಿಗೆ ತಕ್ಕ ಶಿಕ್ಷೆಯಾಗುತ್ತದೆ ಎಂದು ಭರವಸೆ ನೀಡಿದರು. ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಶಾಲಾ ಆಡಳಿತ ಮಂಡಳಿಯ ನಿರ್ಲಕ್ಷ್ಯದಿಂದ ಮಗು ಮೃತಪಟ್ಟಿದೆ. ಶಾಲೆಯಲ್ಲಿ ಸುರಕ್ಷತಾ ಕ್ರಮ ಕೈಗೊಳ್ಳದೆ ಇರುವುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಹೀಗಾಗಿ ಶಾಲೆಯ ಮಾನ್ಯತೆಯನ್ನು ರದ್ದು ಮಾಡುತ್ತೇವೆ ಎಂದು ತಿಳಿಸಿದರು.

ಪ್ರಕರಣಕ್ಕೆ ಸಂಬಂಧಪಟ್ಟಂತೆ ಶಾಲೆಯ ಮುಖ್ಯಸ್ಥ ಭರತೇಶ ಅವರನ್ನು ಬಂಧಿಸಲಾಗಿದೆ. ತನಿಖೆ ಮುಂದುವರಿದಿದೆ ಎಂದು ಧಾರವಾಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗುಂಜನ್ ಆರ್ಯ ತಿಳಿಸಿದರು.

ಖಾಸಗಿ ಶಾಲೆಯ ಕಟ್ಟಡದ ಮೇಲಿಂದ ಬಿದ್ದು ಬಾಲಕ ಸಾವು ಪ್ರಕರಣ

ಮಗನ ಮೇಲೆ ನಿರಂತರ ಹಲ್ಲೆ

ನನ್ನ ಮಗನಿಗೆ ಅಲ್ಲಿನ ಶಿಕ್ಷಕರು ಹೊಡೆದಿದ್ದಾರೆ. ಇದೇ ಮೊದಲಲ್ಲ. ಹಿಂದೆ ಕೂಡ ಇದೇ ರೀತಿ ಹೊಡೆದಿದ್ದರು. ನನ್ನ ಮಗ ಸಾಯುವ ಮುನ್ನ ಶಿಕ್ಷಕರು ಹೊಡೆದಿದ್ದನ್ನು ನನ್ನ ಮುಂದೆ ಹೇಳಿದ್ದಾನೆ. ಅವರು ಹೊಡೆದಿದ್ದಕ್ಕೆ ನನ್ನ ಮೃತಪಟ್ಟಿದ್ದಾನೆ ಎಂದು ಮೃತ ಬಾಲಕ ಆಕಾಶನ ತಂದೆ ವಸಂತ ನೀಲಣ್ಣವರ ಮಾಧ್ಯಮದವರ ಮುಂದೆ ಆರೋಪಿಸಿದ್ದಾರೆ.

ಮುಖಂಡ ಗೋವಿಂದ ನಾಯ್ಕ ಮೇಲೆ ಪ್ರಕರಣ ದಾಖಲು



ಭಟ್ಕಳ: ಪೊಲೀಸ್ ಠಾಣೆ ಎದುರು ನಡೆದ ಪ್ರತಿಭಟನೆ ವೇಳೆ ಪ್ರಚೋದನಕಾರಿ ಹಾಗೂ ಅವಾಚ್ಯ ಪದಗಳನ್ನು ಬಳಸಿ ಭಾಷಣ ಮಾಡಿದ್ದ ಆರೋಪದ ಮೇಲೆ ಹಿಂದೂ ಸಂಘಟನೆ ಮತ್ತು ಬಿಜೆಪಿ ಮುಖಂಡ ಗೋವಿಂದ ನಾಯ್ಕ ವಿರುದ್ಧ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮುಸ್ಲಿಂ ಯುವಕ ಹಿಂದೂ ಯುವತಿಯನ್ನು ಕರೆದೊಯ್ದ ಘಟನೆಗೆ ಸಂಬಂಧಿಸಿದಂತೆ ಹಿಂದೂ ಯುವತಿಯನ್ನು ರಕ್ಷಿಸಲು ಹೋದ ಹಿಂದೂ ಕಾರ್ಯಕರ್ತರಾದ ಶ್ರೀಕಾಂತ ನಾಯ್ಕ ಮತ್ತು ಕುಮಾರ ನಾಯ್ಕ ವಿರುದ್ಧ ಪ್ರಕರಣ ದಾಖಲಾಗಿತ್ತು. ಈ ಕ್ರಮವನ್ನು ವಿರೋಧಿಸಿ ಬಿಜೆಪಿ ಮತ್ತು ಹಿಂದೂ ಸಂಘಟನೆಯ ಕಾರ್ಯಕರ್ತರು ಭಟ್ಕಳ ನಗರ ಪೊಲೀಸ್ ಠಾಣೆ ಎದುರು ಬುಧವಾರ ರಾತ್ರಿ ಪ್ರತಿಭಟನೆ ನಡೆಸಿದ್ದರು.

ಪ್ರತಿಭಟನೆಯ ವೇಳೆ ಗೋವಿಂದ ನಾಯ್ಕ ಅವರು ಪೊಲೀಸ್ ಇಲಾಖೆಯ ಕಾರ್ಯವೈಖರಿಯನ್ನು ಟೀಕಿಸುವುದರ ಜೊತೆಗೆ ಧಾರ್ಮಿಕ ಭಾವನೆಗಳನ್ನು ಕೆರಳಿಸುವ ಹಾಗೂ ಸಮಾಜದಲ್ಲಿ ಅಶಾಂತಿ ಸೃಷ್ಟಿಸುವ ಸಾಧ್ಯತೆ ಇರುವ ಹೇಳಿಕೆಗಳನ್ನು ನೀಡಿರುವುದಾಗಿ ದೂರಿನಲ್ಲಿ ಆರೋಪಿಸಲಾಗಿದೆ.

ಈ ಕುರಿತು ಭಟ್ಕಳ ಗ್ರಾಮೀಣ ಠಾಣೆಯ ಇನ್ಸ್‌ಪೆಕ್ಟರ್ ವೆಂಕಟೇಶ ಮುರನಾಳ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ. ಮುಂಜಾಗ್ರತಾ ಕ್ರಮವಾಗಿ ಭಟ್ಕಳದಲ್ಲಿ ಬಿಗು ಬಂದೋಬಸ್ತ್ ಮುಂದುವರಿಸಲಾಗಿದೆ.

ರಸಗೊಬ್ಬರ ಅಕ್ರಮಗಳ ತನಿಖೆಗೆ ಡಾ.ಸುಧಾ ಹಾಲಕಾಯಿ ಆಗ್ರಹ

ರೈತರ ಸಮಸ್ಯೆಗೆ ಕಾಂಗ್ರೆಸ್ ಸರ್ಕಾರ ಉತ್ತರಿಸಲಿ



ಕಲಬುರಗಿ: ಜಿಲ್ಲೆಯ ರೈತರು ತೀವ್ರ ಸಂಕಷ್ಟದ ಪರಿಸ್ಥಿತಿಯನ್ನು ಎದುರಿಸುತ್ತಿದ್ದು, ಮಳೆಯ ಕೊರತೆಯಿಂದ ಕೃಷಿ ಚಟುವಟಿಕೆಗಳು ಹಿನ್ನಡೆಯಾಗಿವೆ. ರೈತರಿಗೆ ಅಗತ್ಯ ಪ್ರಮಾಣದಲ್ಲಿ ರಸಗೊಬ್ಬರ ಪೂರೈಕೆಯಾಗುತ್ತಿಲ್ಲ ಎಂಬ ದೂರುಗಳು ವ್ಯಾಪಕವಾಗಿ ಕೇಳಿಬರುತ್ತಿದ್ದು, ಕೆಲವು ಕಡೆಗಳಲ್ಲಿ ರಸಗೊಬ್ಬರಕ್ಕೆ ಮಣ್ಣು, ಮರಳು ಹಾಗೂ ಇತರ ವಸ್ತುಗಳನ್ನು ಬೆರೆಸಿ ಮಾರಾಟ ಮಾಡಲಾಗುತ್ತಿದೆ ಎಂದು ಬಿಜೆಪಿ ರಾಜ್ಯ ವಕ್ತಾರೆ ಡಾ.ಸುಧಾ ಹಾಲಕಾಯಿ ಆರೋಪಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಅಲ್ಲದೇ ರಸಗೊಬ್ಬರವನ್ನು ಕಾಳಸಂತೆಯಲ್ಲಿ ಮಾರಾಟ ಮಾಡಲಾಗುತ್ತಿದೆ ಎಂಬ ದೂರುಗಳು ರೈತರಿಂದ ಕೇಳಿಬರುತ್ತಿವೆ. ರೈತರಿಗೆ ದೊರೆಯಬೇಕಿದ್ದ ಬೆಳೆ ವಿಮೆ ಪರಿಹಾರ ಮೊತ್ತವೂ ಅನೇಕ ಫಲಾನುಭವಿಗಳಿಗೆ ಸಂಪೂರ್ಣವಾಗಿ ತಲುಪಿಲ್ಲ. ಇದರಿಂದ ರೈತರ ಆರ್ಥಿಕ ಸಂಕಷ್ಟ ಮತ್ತಷ್ಟು ಹೆಚ್ಚಾಗಿದೆ. ಒಂದು ಕಡೆ ರೈತರು ಬೀಜ ಹಾಗೂ ಕೃಷಿ ಸಾಮಗ್ರಿಗಳನ್ನು ಖರೀದಿಸಲು ಹಣವಿಲ್ಲದೆ ಪರದಾಡುತ್ತಿದ್ದರೆ, ಮತ್ತೊಂದು ಕಡೆ ಕಾಳಸಂತೆ ದಂಧೆ ನಿರ್ಬಂಧವಿಲ್ಲದೆ ನಡೆಯುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ ಎಂದು ಆರೋಪಿಸಿದರು.

ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಸಾವಿರಾರು ರೈತರು ಆತ್ಮಹತ್ಯೆ ಮಾಡಿಕೊಂಡಿರುವ ವರದಿಗಳು ರಾಜ್ಯದ ಕೃಷಿ ವಲಯದ ದುಸ್ಥಿತಿಯನ್ನು ಎತ್ತಿ ತೋರಿಸುತ್ತಿವೆ. ಇಂತಹ ಸಂದರ್ಭದಲ್ಲಿ ರಸಗೊಬ್ಬರ ವಿತರಣೆಯಲ್ಲಿ ನಡೆಯುತ್ತಿರುವ ಅಕ್ರಮಗಳ ಕುರಿತು ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಜಿಲ್ಲಾ ಆಡಳಿತ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ತಕ್ಷಣ ಮಧ್ಯಪ್ರವೇಶಿಸಿ ರೈತರ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಬೇಕು. ಕೃಷಿಯೇ ಸಮಾಜದ ಬೆನ್ನೆಲುಬಾಗಿರುವುದರಿಂದ ರೈತರನ್ನು ನಿರ್ಲಕ್ಷಿಸದೆ ಅಗತ್ಯ ನೆರವು, ರಕ್ಷಣೆ ಮತ್ತು ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಿ ಅವರು, ರೈತರು ಎತ್ತುತ್ತಿರುವ ಪ್ರಶ್ನೆಗಳಿಗೆ ಕಾಂಗ್ರೆಸ್ ಸರ್ಕಾರ ಉತ್ತರ ನೀಡಬೇಕು. ಕೃಷಿ ಮತ್ತು ರೈತರ ಹಿತಾಸಕ್ತಿಗೆ ಸಂಬಂಧಿಸಿದ ಎಲ್ಲ ವಿಷಯಗಳಲ್ಲಿ ಪಾರದರ್ಶಕತೆ, ಜವಾಬ್ದಾರಿ ಹಾಗೂ ನ್ಯಾಯವನ್ನು ಖಚಿತಪಡಿಸಬೇಕು ಎಂದು ಆಗ್ರಹಿಸಿದರು. ನವ ಕರ್ನಾಟಕ ರೈತ ಸಂಘದ ರಾಜ್ಯ ಯುವ ಅಧ್ಯಕ್ಷ ನಾಯಕ ಶಿವರಾಜ ನೆಲ್ಲೂರ ಇದ್ದರು.

ಸೇತುವೆಗೆ ಕಾರು ಡಿಕ್ಕಿ: ಮೂವರಿಗೆ ಗಾಯ

ಅಂಕೋಲಾ: ಸೇತುವೆಗೆ ಕಾರು ಡಿಕ್ಕಿ ಹೊಡೆದು ಮೂವರು ಗಾಯಗೊಂಡ ಘಟನೆ ತಾಲೂಕಿನ ಮಂಗನಕಾನ ಕ್ರಾಸ್ ಬಳಿ ಸಂಭವಿಸಿದೆ. ಕಾರು ಚಾಲಕ ವಿಜಯನಗರ ಜಿಲ್ಲೆಯ ಹರಪನಹಳ್ಳಿ ನಿವಾಸಿ ಮದನಿ ಮಲ್ಲಿಕಾರ್ಜುನ(30) ಮತ್ತು ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಹರಪನಹಳ್ಳಿ ಕೊಟ್ಟುರು ರಸ್ತೆಯ ನಿವಾಸಿ ಸಿದ್ಧಾರೂಡಸ್ವಾಮಿ ಬಸಣಪ್ಪ ಪಟಗಿ(67) ಮತ್ತು ಅವರ ಪತ್ನಿ ರೇಣುಕಾ ಸಿದ್ಧಾರೂಡಸ್ವಾಮಿ(65) ಎನ್ನುವವರು ತೀವ್ರವಾಗಿ ಗಾಯಗೊಂಡಿದ್ದು ಅಂಕೋಲಾ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿ ದಾವಣಗೆರೆಯ ಖಾಸಗಿ ಆಸ್ಪತ್ರೆಗೆ ಸಾಗಿಸಲಾಗಿದೆ.

ಹುಬ್ಬಳ್ಳಿ ಕಡೆಯಿಂದ ರಾಷ್ಟ್ರೀಯ ಹೆದ್ದಾರಿಯಲ್ಲಿ ಬಂದ ಕೆಎ17ಎಂ.ಸಿ 9060 ನೋಂದಣಿ ಸಂಖ್ಯೆಯ ಕಾರನ್ನು ಚಾಲಕ ಗೋಕರ್ಣ ಕಡೆ ಹೋಗಲು ಹೊಸಕಂಬಿ ಕ್ರಾಸಿನಿಂದ ಒಳಗೆ ರಸ್ತೆಯಲ್ಲಿ ಅತಿ ವೇಗ ಮತ್ತು ನಿರ್ಲಕ್ಷ್ಯದಿಂದ ಚಲಾಯಿಸಿ ಮಂಗನಕಾನ ಕ್ರಾಸಿನ ಬಳಿ ನಿಯಂತ್ರಣ ತಪ್ಪಿ ರಸ್ತೆಯ ಎಡಬದಿಗೆ ಹೋಗಿ ಸೇತುವೆಗೆ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿದೆ. ಈ ಸಂಬಂಸಿದಂತೆ ಅಂಕೋಲಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ನ್ಯಾಯಾಲಯಕ್ಕೆ ಬಾಂಬ್ ಬೆದರಿಕೆ | ಬಾಂಬ್ ನಿಷ್ಕ್ರಿಯ ದಳ ತಪಾಸಣೆ

ಧಾರವಾಡದಲ್ಲಿ ಪುನಃ ಬಾಂಬ್ ಆತಂಕ



ಧಾರವಾಡ: ನಗರದ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಆವರಣಕ್ಕೆ ಬಾಂಬ್ ಬೆದರಿಕೆ ಇಮೇಲ್ ಬಂದ ಹಿನ್ನೆಲೆಯಲ್ಲಿ ನ್ಯಾಯಾಲಯದ ಆವರಣದಲ್ಲಿ ಕೆಲ ಹೊತ್ತು ತೀವ್ರ ಆತಂಕದ ಜೊತೆಗೆ ಸುಪ್ತ ಗೊಂದಲದ ವಾತಾವರಣ ಶುಕ್ರವಾರ ನಿರ್ಮಾಣವಾಗಿತ್ತು.

ಪೊಲೀಸ್ ಸಿಬ್ಬಂದಿ ಹರಸಾಹಸ: ಕೋರ್ಟ್ ಆವರಣದಲ್ಲಿ ಬಾಂಬ್ ಇಟ್ಟಿರುವ ಬಗ್ಗೆ ಇಮೇಲ್ ವಿಳಾಸಕ್ಕೆ ಸಂದೇಶ ಬಂದಿತ್ತು. ತಕ್ಷಣ ಎಚ್ಚೆತ್ತ ಸಿಬ್ಬಂದಿ ಪೊಲೀಸರಿಗೆ ಮಾಹಿತಿ ನೀಡಿದರು. ಸ್ಥಳಕ್ಕೆ ಧಾವಿಸಿದ ಬಾಂಬ್ ಪತ್ತೆ-ನಿಷ್ಕ್ರಿಯ ಮತ್ತು ಶ್ವಾನದಳದ ಸಿಬ್ಬಂದಿ ಆವರಣ ತಪಾಸಣೆ ನಡೆಸಿದರು.

ಸ್ಥಳೀಯ ಪೊಲೀಸರು ಹಾಗೂ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಜಂಟಿಯಾಗಿ ಕಾರ್ಯಾಚರಣೆ ಕೈಗೊಂಡು, ಕೋರ್ಟ್ ಒಳಗಿನ ಕೊಠಡಿ, ವಕೀಲರ ಸಂಘದ ಕಟ್ಟಡ, ವಾಹನ ನಿಲುಗಡೆ ಸ್ಥಳ, ಆವರಣದ ಮೂಲೆ ಮೂಲೆ ಜಾಲಾಡಿ ತಪಾಸಣೆ ಕೈಗೊಂಡರು.

ಸುಮಾರು ಎರಡು ಗಂಟೆಗಳ ಕಾಲ ನಡೆದ ತೀವ್ರ ಶೋಧದ ಬಳಿಕ ಯಾವುದೇ ಸ್ಫೋಟಕ ವಸ್ತು ಪತ್ತೆಯಾಗದ ಕಾರಣ, ಇದೊಂದು ಹುಸಿ ಬಾಂಬ್ ಬೆದರಿಕೆ ಎಂಬುದು ಖಚಿತವಾದ ಬಳಿಕ ಸಾರ್ವಜನಿಕರು ಹಾಗೂ ಅಧಿಕಾರಿಗಳು ನಿಟ್ಟುಸಿರು ಬಿಟ್ಟರು.

ಹುಸಿ ಇಮೇಲ್ ಕಾಟ: ನ್ಯಾಯಾಲಯಗಳಿಗೆ ಈ ರೀತಿಯ ಹುಸಿ ಬಾಂಬ್ ಇಮೇಲ್ ಬರುವುದು ಇದೇ ಮೊದಲಲ್ಲ. ಕಳೆದ ಕೆಲವು ತಿಂಗಳಿಂದ ಸರಣಿ ಇಂತಹ ಇಮೇಲ್ ಬೆದರಿಕೆಗಳು ಬರುತ್ತಿರುವುದು ಪೊಲೀಸರಿಗೆ ಹಾಗೂ ನ್ಯಾಯಾಂಗ ಇಲಾಖೆಗೆ ತಲೆನೋವಾಗಿ ಪರಿಣಮಿಸಿದೆ.

ಕೋರ್ಟ್ ಕಲಾಪಗಳಿಗೆ ಅಡ್ಡಿ: ಪದೇ ಪದೇ ಇಂತಹ ಬೆದರಿಕೆಗಳು ಸಂದೇಶ ಬರುವುದರಿಂದ ನ್ಯಾಯಾಲಯದ ಅಮೂಲ್ಯ ಸಮಯ ಹಾಳಾಗುತ್ತಿದ್ದು, ಸಾರ್ವಜನಿಕರ ಹಾಗೂ ಕಕ್ಷಿದಾರರ ದೈನಂದಿನ ಕಲಾಪಗಳಿಗೆ ತೀವ್ರ ವ್ಯತ್ಯಯ ಉಂಟಾಗುತ್ತಿದೆ.

ಸದ್ಯ ಕೋರ್ಟ್ ಆವರಣದಲ್ಲಿ ಭದ್ರತೆಯನ್ನು ಮತ್ತಷ್ಟು ಬಿಗಿಗೊಳಿಸಲಾಗಿದ್ದು, ಸಾರ್ವಜನಿಕರು ಯಾವುದೇ ಆತಂಕ ಪಡುವ ಅಗತ್ಯವಿಲ್ಲ ಎಂದು ಪೊಲೀಸ್ ಇಲಾಖೆ ತಿಳಿಸಿದೆ. ಪ್ರಕರಣ ದಾಖಲಿಸಿಕೊಂಡ ಪೊಲೀಸರು, ಕಿಡಿಗೇಡಿಗಳ ಪತ್ತೆಗೆ ಬಲೆ ಬೀಸಿದ್ದಾರೆ.

ಭದ್ರತಾ ಸವಾಲು: ಪ್ರತಿ ಬಾರಿಯೂ ಇಮೇಲ್ ಬಂದಾಗ ಪೊಲೀಸರು ಗಂಭೀರ ಪರಿಗಣಿಸಿ ತಪಾಸಣೆ ನಡೆಸಬೇಕಾಗುತ್ತದೆ. ಇದು ಭದ್ರತಾ ಸಿಬ್ಬಂದಿಯ ಮೇಲಿನ ಒತ್ತಡವನ್ನು ಹೆಚ್ಚಿಸಿದೆ.

ಸೈಬರ್ ಪೊಲೀಸರ ತನಿಖೆ ಚುರುಕು?

ಈ ಸರಣಿ ಹುಸಿ ಇಮೇಲ್‌ಗಳ ಹಿಂದೆ ಯಾರಿದ್ದಾರೆ? ಸಾರ್ವಜನಿಕರಲ್ಲಿ ಭಯ ಹುಟ್ಟಿಸಲು ಹಾಗೂ ನ್ಯಾಯಾಲಯದ ಕಲಾಪಗಳಿಗೆ ಧಕ್ಕೆ ತರಲು ಯಾರಾದರೂ ಉದ್ದೇಶ ಪೂರ್ವಕವಾಗಿ ವಿಪಿಎನ್ ಅಥವಾ ಡಾರ್ಕ್ ವೆಬ್ ಬಳಸಿ ಇಮೇಲ್ ಕಳುಹಿಸುವ ನಿಟ್ಟಿನಲ್ಲಿ ಸೈಬರ್ ಕ್ರೈಂ ಪೊಲೀಸರು ತನಿಖೆ ತೀವ್ರಗೊಳಿಸಿದ್ದಾರೆಯೇ ಎಂಬ ಪ್ರಶ್ನೆ ಸಾರ್ವಜನಿಕ ವಲಯದಲ್ಲಿ ಮೂಡಿದೆ.

ಹೆಚ್ಚುವರಿ ಶುಲ್ಕ ಖಂಡಿಸಿ ಎಬಿವಿಪಿ ಪ್ರತಿಭಟನೆ



ಹುಬ್ಬಳ್ಳಿ: ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದಲ್ಲಿ ಹೆಚ್ಚುವರಿ ದಾಖಲಾತಿ ಶುಲ್ಕ ಪಡೆಯುತ್ತಿರುವುದನ್ನು ಖಂಡಿಸಿ, ವಿಶ್ವವಿದ್ಯಾಲಯದಲ್ಲಿ ವಿದ್ಯೆ ನೀಡುವ ಬದಲು ವ್ಯವಹಾರ ಮಾಡಲಾಗುತ್ತಿದೆ ಎಂದು ಆರೋಪಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಕಾರ್ಯಕರ್ತರು ಹಾಗೂ ವಿದ್ಯಾರ್ಥಿಗಳು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಇಲ್ಲಿಯ ನವನಗರ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಎದುರು ಸಮಾವೇಶಗೊಂಡ ಪ್ರತಿಭಟನಾಕಾರರು ವಿಶ್ವವಿದ್ಯಾಲಯದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ವಿಶ್ವವಿದ್ಯಾಲಯಕ್ಕೆ ಮುತ್ತಿಗೆ ಹಾಕಲು ಯತ್ನಿಸಿದರು. ಸ್ಥಳದಲ್ಲಿದ್ದ ಪೊಲೀಸರು ಅವರನ್ನು ತಡೆದರು. ಸ್ಥಳಕ್ಕೆ ವಿವಿ ಕುಲಪತಿ ಬರಬೇಕು ಎಂದು ಪಟ್ಟು ಹಿಡಿದರು. ಈ ವೇಳೆ ವಿದ್ಯಾರ್ಥಿಗಳು ಹಾಗೂ ಪೊಲೀಸರು ನಡುವೆ ಮಾತಿನ ಚಕಮಕಿ ನಡೆಯಿತು.

ವಿಶ್ವವಿದ್ಯಾಲಯದ ದಾಖಲಾತಿಯ ಶುಲ್ಕ 3700 ರೂ.ನಿಂದ 8580 ರೂ.ಗೆ ಏರಿಸಲಾಗಿದೆ. ವಿಶ್ವವಿದ್ಯಾಲಯದ ನಿರ್ಧಾರ ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿ ಹೆಚ್ಚಿಸಲಾದ ಶುಲ್ಕ ವಿದ್ಯಾರ್ಥಿಗಳಿಗೆ ಮರುಪಾವತಿಸಲು ಆದೇಶ ನೀಡಿದ್ದರೂಸಹ ವಿಶ್ವವಿದ್ಯಾಲಯ ಪಾಲಿಸುತ್ತಿಲ್ಲ ಎಂದು ವಿದ್ಯಾರ್ಥಿಗಳು ಅಸಮಾಧಾನ ವ್ಯಕ್ತಪಡಿಸಿದರು.

ಪರೀಕ್ಷಾ ಶುಲ್ಕವನ್ನು ಸಹ ಹೆಚ್ಚಿಸಲಾಗಿದೆ. ತಕ್ಷಣ ಈ ನಿರ್ಧಾರ ಕೈಬಿಡಬೇಕು. 2023ರಲ್ಲಿದ್ದ 260 ರೂಪಾಯಿಂದ 2026 368ರೂ ಮಾಡಲಾಗಿದೆ. ಯುಜಿಸಿ ನಿಯಮಾವಳಿ ಪ್ರಕಾರ 3ವರ್ಷಕ್ಕೆ ಶೇ.15ರಷ್ಟು ಹೆಚ್ಚಿಸಲು ಅವಕಾಶವಿದೆ. ಆದರೆ, ವಿಶ್ವವಿದ್ಯಾಲಯ ಶೇ.31ರಷ್ಟು ಹೆಚ್ಚಿಸಿದೆ. 2021-22,2022-23 ಹಾಗೂ 2023-24 ಶೈಕ್ಷಣಿಕ ಸಾಲಿನಲ್ಲಿ ವಿನಾಯಿತಿ ಪರೀಕ್ಷಾ ಶುಲ್ಕ ಪಾವತಿಸಲು ಎಸ್‌ಸಿ, ಎಸ್‌ಟಿ ಹಾಗೂ ಒಬಿಸಿ ವಿದ್ಯಾರ್ಥಿಗಳಿಗೆ ಈ ವರ್ಷ ಹಿಂದಿನ ಸಾಲಿನ ಪೂರ್ಣ ಶುಲ್ಕ ಪಾವತಿಸಲು ಸೂಚಿಸಿರುವುದು ಖಂಡನೀಯ.

ಪ್ರಸಕ್ತ ವರ್ಷದ ಘಟಿಕೋತ್ಸವದಲ್ಲಿ ಎಲ್ಲ ವಿದ್ಯಾರ್ಥಿಗಳಿಗೆ ಸಮಾನ ಅವಕಾಶ ನೀಡಬೇಕು. ಘಟಿಕೋತ್ಸವ ಶುಲ್ಕವನ್ನು ಸಮನಾಗಿ ಪರಿಗಣಿಸಿ ಕಡಿಮೆ ಮಾಡಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ವಿವಿ ಕುಲಪತಿ ಡಿ.ಬಸುರಾಜು ಅವರಿಗೆ ಮನವಿ ಸಲ್ಲಿಸಿದರು. ಎಬಿವಿಪಿ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ಸಚಿನ ಕುಳಗೇರಿ, ರಾಜ್ಯ ಸಂಘಟನಾ ಕಾರ್ಯದರ್ಶಿ ವೆಂಕಟೇಶ್ ಡಾಂಗೆ, ಅಭಿಷೇಕ್ ದೊಡ್ಡಮನಿ, ಸನತ್ ತೋಟಗೇರ್, ಮಣಿಕಂಠ ದೇಸಾಯಿ, ಲೋಕೇಶ್, ಫಣಿ ರಾಘವೇಂದ್ರ, ಅಮರ, ದರ್ಶನ್, ಇಶಿಕಾ, ಸಂಜನಾ, ಮನೋಜ್ ಇದ್ದರು.

ಇತಿಹಾಸ ಸಂಶೋಧಕ ಶ್ಯಾಮಸುಂದರ ಗೌಡರಿಂದ ಶಾಸನಪ್ರತಿಯ ಸಮಗ್ರ ಅಧ್ಯಯನ

ಐತಿಹಾಸಿಕವಾಗಿ ನೈಜವಾದ ದಾನ ಶಾಸನ!

ಶಿರಸಿ: ಉತ್ತರ ಕನ್ನಡ ಜಿಲ್ಲೆಯ ಶಿರಸಿಯ ಶ್ರೀ ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನದ ಇತಿಹಾಸಕ್ಕೆ ಸಂಬಂಧಿಸಿದ ಅತ್ಯಂತ ಮಹತ್ವದ ಸಂಶೋಧನಾ ಅಧ್ಯಯನವೊಂದು ಬೆಳಕಿಗೆ ಬಂದಿದೆ.

ಇತಿಹಾಸ ಸಂಶೋಧಕ ಶ್ಯಾಮಸುಂದರ ಗೌಡ ಅಂಕೋಲಾ ಅವರು ಸ್ವರ್ಣವಲ್ಲಿ ಮಹಾಸಂಸ್ಥಾನದ ಸಂಗ್ರಹದಲ್ಲಿರುವ ಅಪರೂಪದ ಶಾಸನಪ್ರತಿಯ ಸಮಗ್ರ ಅಧ್ಯಯನ ನಡೆಸಿ, ಇದುವರೆಗೆ ಅನುಮಾನ ಮತ್ತು ನಿರ್ಲಕ್ಷ್ಯದ ನೆರಳಿನಲ್ಲಿ ಉಳಿದಿದ್ದ ಈ ದಾಖಲೆಯ ಐತಿಹಾಸಿಕ ಮಹತ್ವವನ್ನು ಹೊಸ ಸಾಕ್ಷ್ಯಾಧಾರಗಳೊಂದಿಗೆ ಸ್ಥಾಪಿಸಿದ್ದಾರೆ. ಈ ದಾಖಲೆ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಪ್ರಕಟಿಸಿರುವ ''ಶ್ರೀ ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನದ ಐತಿಹಾಸಿಕ ದಾಖಲೆಗಳು ಸಂಪುಟ-1'' ಕೃತಿಯಲ್ಲಿ ಶಾಸನಪಾಠ ಪ್ರಕಟವಾಗಿ 30 ವರ್ಷಗಳು ಕಳೆದಿದ್ದರೂ ಅದರ ಕುರಿತು ಇದುವರೆಗೆ ಯಾವುದೇ ಆಳವಾದ ವಿಮರ್ಶಾತ್ಮಕ ಅಧ್ಯಯನ ನಡೆದಿರಲಿಲ್ಲ. ಶಾಸನದ ಪಾಠವನ್ನು ಪ್ರಕಟಿಸಿದ್ದ ಖ್ಯಾತ ಇತಿಹಾಸಕಾರ ಡಾ.ಎ.ಕೆ.ಶಾಸ್ತ್ರಿಯವರು ಶಾಸನದಲ್ಲಿರುವ ಕಾಲನಿರ್ದೇಶವನ್ನು ವಿಕ್ರಮ ವರ್ಷ 961 ಎಂದು ಓದಿ, ಅದನ್ನು ಕ್ರಿ.ಶ. 905ರ ಕಾಲಕ್ಕೆ ಸೇರಿಸಿದ್ದರು. ಆದರೆ ಆ ಕಾಲಗಣನೆ ಶಾಸನದಲ್ಲೇ ಉಲ್ಲೇಖವಾಗಿರುವ ''ಕ್ರೋಧನ'' ಸಂವತ್ಸರದೊಂದಿಗೆ ಹೊಂದಿಕೆಯಾಗುತ್ತಿರಲಿಲ್ಲ.

ಅಲ್ಲದೇ ಶಾಸನದಲ್ಲಿ ದಾನದಾತನಾಗಿರುವ ವಿಕ್ರಮಾಂಕ ರಾಜ ಆ ಸಮಯದ ಇತಿಹಾಸದಲ್ಲಿ ಇಲ್ಲ. ಈ ಕಾರಣಗಳಿಂದ ಶಾಸನದ ವಿಶ್ವಾಸಾರ್ಹತೆಯ ಬಗ್ಗೆ ಅನುಮಾನಗಳು ವ್ಯಕ್ತವಾಗಿದ್ದವು. ಹೊಸ ಸಂಶೋಧನೆಯಲ್ಲಿ ಈ ಸಮಸ್ಯೆಯನ್ನು ಮರುಪರಿಶೀಲಿಸಲಾಗಿದೆ. ಹೊಸ ಅಧ್ಯಯನದ ಅತ್ಯಂತ ಮಹತ್ವದ ನಿರ್ಣಯ ಇದುವರೆಗೆ ಕೃತಕ ಅಥವಾ ಕೂಟಶಾಸನವಾಗಿರಬಹುದೆಂಬ ಅನುಮಾನದಲ್ಲಿದ್ದ ಈ ದಾಖಲೆ ವಾಸ್ತವವಾಗಿ ಐತಿಹಾಸಿಕವಾಗಿ ನೈಜವಾದ ದಾನ ಶಾಸನವಾಗಿದೆ ಎಂದು ದೃಢೀಕರಿಸಿದೆ. ಶಾಸನದಲ್ಲಿನ ಕಾಲಗಣನೆ, ಸಂವತ್ಸರನಾಮ, ಗುರುಪರಂಪರೆಯ ಉಲ್ಲೇಖಗಳು, ಉತ್ತರ ಭಾರತದ ರಾಜಕೀಯ ಪರಿಸ್ಥಿತಿಯೊಂದಿಗೆ ಕಂಡುಬರುವ ಹೊಂದಾಣಿಕೆ ಹಾಗೂ ಮಿಹಿರ ಭೋಜನ ಕಾಲದ ಐತಿಹಾಸಿಕ ಹಿನ್ನೆಲೆ ಇವೆಲ್ಲವೂ ಸೇರಿ ಈ ದಾಖಲೆಯ ಪ್ರಾಮಾಣಿಕತೆಯನ್ನು ದೃಢಪಡಿಸುತ್ತವೆ ಎಂದು ಅಧ್ಯಯನಕಾರರು ತಿಳಿಸಿದ್ದಾರೆ. ಅಧ್ಯಯನದ ಮತ್ತೊಂದು ಮಹತ್ವದ ಅಂಶವೆಂದರೆ, ಸ್ವರ್ಣವಲ್ಲಿ ಮಠದ ಮೂಲ ಪರಂಪರೆಯು ಕಾಶಿ, ಉಜ್ಜಯಿನಿ, ಗೋಕರ್ಣ, ಕಡತೋಕ, ಸಹಸ್ರಲಿಂಗ ಮತ್ತು ಸ್ವರ್ಣವಲ್ಲಿ ಎಂಬ ಸ್ಥಳಾಂತರಗಳ ಮೂಲಕ ಬೆಳೆದಿದೆ ಎಂಬ ಮಠದ ಗುರುಪರಂಪರೆಯ ವಿವರಗಳಿಗೆ ಈ ಶಾಸನವು ಪೂರಕ ಸಾಕ್ಷ್ಯ ಒದಗಿಸುತ್ತಿರುವುದು. ಉಜ್ಜಯಿನಿಯಲ್ಲಿ ಮಠದ ಅಸ್ತಿತ್ವವಿದ್ದುದಕ್ಕೆ ಹಾಗೂ ಅಲ್ಲಿನ ರಾಜಾಶ್ರಯ ದೊರೆತಿದ್ದುದಕ್ಕೆ ಈ ದಾಖಲೆ ಮಹತ್ವದ ಐತಿಹಾಸಿಕ ಬೆಂಬಲ ನೀಡುತ್ತದೆ.

ಸಂಶೋಧಕರಾದ ಶ್ಯಾಮಸುಂದರ ಗೌಡ, ಅಂಕೋಲಾ ಅವರ ಅಭಿಪ್ರಾಯದಂತೆ, ಈ ಶಾಸನಪ್ರತಿ ಕೇವಲ ಧಾರ್ಮಿಕ ದಾನಪತ್ರವಲ್ಲ; ಅದು ಉತ್ತರ ಭಾರತದ ಉಜ್ಜಯಿನಿ ಪರಂಪರೆ ಮತ್ತು ದಕ್ಷಿಣ ಭಾರತದ ಶಂಕರ ಮಠ ಪರಂಪರೆಯ ನಡುವಿನ ಸಂಪರ್ಕವನ್ನು ಸೂಚಿಸುವ ಅಪರೂಪದ ದಾಖಲೆಯಾಗಿದೆ. ದೀರ್ಘಕಾಲದಿಂದ ಅನುಮಾನಾಸ್ಪದವೆಂದು ಪರಿಗಣಿಸಲ್ಪಟ್ಟಿದ್ದ ದಾಖಲೆಯೊಂದನ್ನು ಐತಿಹಾಸಿಕವಾಗಿ ನೈಜ ಮತ್ತು ವಿಶ್ವಾಸಾರ್ಹ ಮೂಲವೆಂದು ಸ್ಥಾಪಿಸುವ ಮೂಲಕ ಸ್ವರ್ಣವಲ್ಲಿ ಮಠದ ಪ್ರಾಚೀನತೆ ಹಾಗೂ ಉಜ್ಜಯಿನಿಯೊಂದಿಗಿನ ಅದರ ಸಂಬಂಧದ ಅಧ್ಯಯನಕ್ಕೆ ಹೊಸ ದಿಕ್ಕನ್ನು ನೀಡಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ವಿದ್ಯಾರ್ಥಿಗಳಿಗೆ ಪಾಠೋಪಕರಣ ವಿತರಣೆ

• **ಗೋಕರ್ಣ:** ಇಲ್ಲಿನ ಶ್ರೀಕ್ಷೇತ್ರ ಗೋಕರ್ಣ ಹವ್ಯಕ ಬ್ರಾಹ್ಮಣರ ಕ್ಷೇಮಾಭಿವೃದ್ಧಿ ಸಂಘದವತಿಯಿಂದ ಆಡುಕಟ್ಟೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಪಟ್ಟಿ ಹಾಗೂ ಪಾಠೋಪಕರಣಗಳನ್ನ ವಿತರಿಸಲಾಯಿತು. ಸಂಘದ ಅಧ್ಯಕ್ಷ ರಮೇಶ ಪ್ರಸಾದ ಮಾತನಾಡಿದರು. ಈ ವೇಳೆ ಸಂಘದ ಉಪಾಧ್ಯಕ್ಷ ರವೀಂದ್ರ ಕೊಡ್ಲೆಕೆರೆ, ಕಾರ್ಯದರ್ಶಿ ಶಂಕರ ಜೋಶಿ, ಸದಸ್ಯರಾದ ವಸಂತರಾಜನ್ ಕೊಡ್ಲೆಕೆರೆ, ಕಿರಣ ಹೊಸ್ಮನೆ, ಕುಮಾರ ಜೋಶಿ, ವಿಶ್ವನಾಥ ಕೊಡ್ಲೆಕೆರೆ, ಲಂಬೋದರ ಸಭಾಹಿತ, ಗಣೇಶ ಹೊಸ್ಮನೆ(ಶಾಸ್ತ್ರಿ), ಗಜಾನನ ಉಗ್ರು, ಲಕ್ಷ್ಮೀನಾರಾಯಣ ಜಂಭೆ, ಪ್ರಭಾಕರ ಪ್ರಸಾದ, ರಾಮಚಂದ್ರ ಮಾಸ್ಕೇರಿ, ಶಾಲಾ ಮುಖ್ಯಾಧ್ಯಾಪಕರು, ಶಿಕ್ಷಕ ವೃಂದದವರು ಉಪಸ್ಥಿತರಿದ್ದರು. ಒಟ್ಟು 190 ವಿದ್ಯಾರ್ಥಿಗಳಿಗೆ ಪಾಠೋಪಕರಣ ನೀಡಲಾಯಿತು.

ವಕೀಲರಾಗಿ ಹೆಗಡೆ ನೇಮಕ

• **ಸಿದ್ದಾಪುರ:** ತಾಲೂಕಿನ ಗೋಳಗೋಡ ಮೂಲದ ಪ್ರಸ್ತುತ ಧಾರವಾಡದಲ್ಲಿ ವಕೀಲ ವೃತ್ತಿಯಲ್ಲಿರುವ ವಿನಾಯಕ ಬಾಲಚಂದ್ರ ಹೆಗಡೆ ಅವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಕೇಂದ್ರ ಸರ್ಕಾರದ ಪರವಾಗಿ ಮೊಕದ್ದಮೆಗಳನ್ನು ನಡೆಸಲು ಅಧಿಕೃತ ವಕೀಲರಾಗಿ ನೇಮಕಗೊಂಡಿದ್ದಾರೆ. ಭಾರತ ಸರ್ಕಾರದ ಕಾನೂನು ಮತ್ತು ನ್ಯಾಯ ಸಚಿವಾಲಯವು ಈ ಕುರಿತು ಮಹತ್ವದ ಆದೇಶ ಹೊರಡಿಸಿದೆ. ಗೌರವಾನ್ವಿತ ರಾಷ್ಟ್ರಪತಿಗಳ ಅನುಮೋದನೆಯೊಂದಿಗೆ ಹೊರಬಿದ್ದಿರುವ ಈ ಆದೇಶವು ತಕ್ಷಣದಿಂದಲೇ ಜಾರಿಗೆ ಬರಲಿದ್ದು ಮುಂದಿನ ಮೂರು ವರ್ಷಗಳ ಅವಧಿಗೆ ಇಲ್ಲವೇ ಮುಂದಿನ ಆದೇಶದವರೆಗೆ ವಿನಾಯಕ ಹೆಗಡೆಯವರು ಈ ಹುದ್ದೆಯಲ್ಲಿ ಕಾರ್ಯನಿರ್ವಹಿಸಲಿದ್ದಾರೆ. ಈ ಮಹತ್ವದ ಆದೇಶದ ಪ್ರಕಾರ ವಿನಾಯಕ ಹೆಗಡೆ ಅವರು ಧಾರವಾಡ ಪೀಠದಲ್ಲಿ ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳಿಗೆ ಸಂಬಂಧಿಸಿದ ಪ್ರಮುಖ ವ್ಯಾಜ್ಯಗಳನ್ನು ಸರ್ಕಾರದ ಪರವಾಗಿ ಮುನ್ನಡೆಸಲಿದ್ದಾರೆ.

ಹಲ್ಲೆ ಪ್ರಕರಣ: ತಡೆಯಾಜ್ಞೆಗೆ ಆದೇಶ

• **ಶಿರಸಿ:** ಅರಣ್ಯ ಇಲಾಖೆ ಸಿಬ್ಬಂದಿಗಳಿಂದ ಶಿರಸಿ ವಲಯ ವ್ಯಾಪ್ತಿಯಲ್ಲಿ ನಾಣಿಕಟ್ಟಾದಲ್ಲಿ ನಡೆದ ಎನ್ನಲಾಗಿದ್ದ ದಲಿತ ಯುವಕನ ಮೇಲಿನ ಹಲ್ಲೆಯ ಪ್ರಕರಣಕ್ಕೆ ಧಾರವಾಡ ಉಚ್ಚನ್ಯಾಯಾಲಯ ತಡೆಯಾಜ್ಞೆ ನೀಡಿ ಆದೇಶ ಹೊರಡಿಸಿದೆ ಎಂಬ ಮಾಹಿತಿ ಲಭ್ಯವಾಗಿದೆ. ನಾಣಿಕಟ್ಟಾ ಸಮೀಪದಲ್ಲಿ ಕಡವೆಯೊಂದನ್ನು ಕೊಲ್ಲಲಾಗಿತ್ತು. ಅದಕ್ಕೆ ಸಂಬಂಧಿಸಿ ನಾಗರಾಜ ಚನ್ನಯ್ಯ ಎಂಬ ದಲಿತ ವ್ಯಕ್ತಿಯನ್ನು ಅರಣ್ಯ ಇಲಾಖೆ ಸಿಬ್ಬಂದಿ ತನಿಖೆಗೆ ಕರೆದೊಯ್ದಾಗ ಹಲ್ಲೆ ನಡೆಸಿದ್ದರು ಎಂದು ಆರೋಪಿಸಿ ಸಿಬ್ಬಂದಿಗಳಾದ ಕಾರ್ತಿಕ್ ನಾರ್ವೇಕರ್ ಹಾಗೂ ರೋಹಿತ್ ನಾಯ್ಕ ಮೇಲೆ ಅಟ್ರಾಸಿಟಿ ಸಹಿತ ವಿವಿಧ ಪ್ರಕರಣ ದಾಖಲಿಸಲಾಗಿತ್ತು. ಇದರ ವಿರುದ್ಧ ಅರಣ್ಯ ಇಲಾಖೆಯ ಸಿಬ್ಬಂದಿಗಳು ತಾವು ಕರ್ತವ್ಯ ನಿರ್ವಹಣೆ ಮಾಡಿದ್ದು, ಇದೊಂದು ಉದ್ದೇಶ ಪೂರ್ವಕ ಪ್ರಕರಣ ಎಂದು ಧಾರವಾಡ ಉಚ್ಚನ್ಯಾಯಾಲಯಕ್ಕೆ ಮೊರೆ ಹೋಗಿದ್ದರು. ಅದಕ್ಕೆ ಸಂಬಂಧಿಸಿ ನ್ಯಾಯಾಧೀಶರಾದ ಸಚಿನ್‌ರವರು ಪ್ರಕರಣಕ್ಕೆ ತಡೆ ನೀಡಿ ಆದೇಶ ಹೊರಡಿಸಿದ್ದಾರೆ. ಇದರ ಜೊತೆಗೆ ಕಡವೆ ಹೊಡೆದ ಪ್ರಕರಣ ತನಿಖೆ ನಡೆಸಲು ಅನುಮತಿ ನೀಡಿದ್ದಾಗಿ ತಿಳಿದು ಬಂದಿದೆ. ಆ ಮೂಲಕ ಪ್ರಕರಣದ ಕಾನೂನು ಕ್ರಮಗಳಿಗೆ ತಡೆಯಾಜ್ಞೆ ಬಂದಂತಾಗಿದೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	61899	68300
ಬಿಳಿಗೋಟು	27199	35199
ಕೆಂಪುಗೋಟು	29118	35099
ಬೆಟ್ಟೆ	34699	45869
ರಾಶಿ	49299	52400
ಚಾಲಿ	44100	48459
ಬಿ.ಕಾಳುಮೆಣಸು	91619	91619

ಯಲ್ಲಾಪುರ	ಕನಿಷ್ಠ	ಗರಿಷ್ಠ
ರಾಶಿ	48499	53519
ಬೆಟ್ಟೆ	36715	47469
ಕೆಂಪುಗೋಟು	22699	35799
ಬಿಳಿಗೋಟು	16899	36999
ಚಾಲಿ	37778	48509
ಕೋಕಾ	17000	30899
ಕಾಳುಮೆಣಸು	52109	66299



ಗೋಕರ್ಣ: ಇಲ್ಲಿನ ಶ್ರೀಕ್ಷೇತ್ರ ಗೋಕರ್ಣ ಹವ್ಯಕ ಬ್ರಾಹ್ಮಣರ ಕ್ಷೇಮಾಭಿವೃದ್ಧಿ ಸಂಘದವತಿಯಿಂದ ಆಡುಕಟ್ಟೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಪಟ್ಟಿ ಹಾಗೂ ಪಾಠೋಪಕರಣಗಳನ್ನ ವಿತರಿಸಲಾಯಿತು.

ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ

• **ಸಿದ್ದಾಪುರ:** ನಮ್ಮ ಸುತ್ತಲಿನ ವಾತಾವರಣ ಪರಿಶುದ್ಧವಾಗಿದ್ದರೆ ನಾವು ಆರೋಗ್ಯಕರ ಜೀವನ ನಡೆಸಲು ಸಾಧ್ಯ. ಗಿಡ ಮರಗಳನ್ನು ಸಂರಕ್ಷಿಸುವುದರ ಜೊತೆಗೆ ನಮ್ಮ ಸುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಲು ಗಮನಹರಿಸಬೇಕು ಎಂದು ಸಿದ್ದಾಪುರ ವಲಯದ ವಲಯ ಅರಣ್ಯಾಧಿಕಾರಿ ಅಜಯ ಕುಮಾರ ಎಂ.ಎಸ್. ಹೇಳಿದರು. ಪಟ್ಟಣದ ಬಾಲಭವನದಲ್ಲಿ ಭಾರತಿ ಸಂಪದ ವಡ್ಡಿನಗದ್ದೆ, ಅರಣ್ಯ ಇಲಾಖೆ, ಕಾಂತಾರ ಯಜ್ಞ ಕೆರೆಕೊಪ್ಪ ಇವುಗಳ ಸಂಯುಕ್ತ ಆಶ್ರಯದಲ್ಲಿ ನಡೆದ ಬರ್ಕಬಾಳೆ ಪುನರ್ ಉತ್ಪತ್ತಿ, ಅನಾವರಣ, ಅರಣ್ಯ ಇಲಾಖೆಗೆ ಹಸ್ತಾಂತರ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಗಣಪತಿ ಹೆಗಡೆ ವಡ್ಡಿನಗದ್ದೆಯವರು ಅಪರೂಪದ ಮರಗಳ ಸಂರಕ್ಷಣೆಗೆ ಪಣ ತೊಟ್ಟು ವಿನಾಶದಂಚಿನಲ್ಲಿರುವ ಹಲವಾರು ಪ್ರಭೇದದ ಮರಗಳನ್ನು ಸಂರಕ್ಷಿಸುತ್ತಿದ್ದಾರೆ. ಅವರ ಈ ಕಾರ್ಯ ಮಾದರಿಯಾದದ್ದು ಎಂದರು. ಅತಿಥಿಗಳಾಗಿ ಪರಿಸರ ತಜ್ಞ ಎಂ.ಬಿ.ನಾಯ್ಕ ಕಡಕೇರಿ ಮಾತನಾಡಿದರು. ಸ್ಥಳೀಯ ಲಯನ್ಸ್ ಕ್ಲಬ್ ಅಧ್ಯಕ್ಷ ರಾಘವೇಂದ್ರ ಭಟ್ಟ ಕಲ್ಲಾಳ, ಸಂಕಲ್ಪ ಸೇವಾ ಸಂಸ್ಥೆಯ ಪಿ.ಬಿ.ಹೊಸೂರು, ಸಾಹಿತಿ ಗಂಗಾಧರ ಕೊಳಗಿ, ಪತ್ರಕರ್ತ ಸುಜಯ ಭಟ್ಟ ಮಾತನಾಡಿದರು. ಕಾರ್ಯಕ್ರಮದಲ್ಲಿ ಗಣಪತಿ ಹೆಗಡೆ ವಡ್ಡಿನಗದ್ದೆಯವರು ಸಂರಕ್ಷಿಸಿರ್ಕಬಾಳೆ ಗಿಡವನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸಲಾಯಿತು. ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಸಿದ್ದಾಪುರ ಅರಣ್ಯ ಇಲಾಖೆಯ ವನಪಾಲಕಿ ಅಕ್ಷತಾ ನಾಯ್ಕ ಇದ್ದರು. ಗಣಪತಿ ಹೆಗಡೆ ವಡ್ಡಿನಗದ್ದೆ ಪ್ರಸ್ತಾವಿಕ ಮಾತನಾಡಿದರು. ಮಂಜುನಾಥ ಹೆಗಡೆ ಕೆರೆಕೊಪ್ಪ ಸ್ವಾಗತಿಸಿ, ನಿರೂಪಿಸಿದರು.



ಸಿದ್ದಾಪುರ: ಪಟ್ಟಣದ ಬಾಲಭವನದಲ್ಲಿ ಭಾರತಿ ಸಂಪದ ವಡ್ಡಿನಗದ್ದೆ, ಅರಣ್ಯ ಇಲಾಖೆ, ಕಾಂತಾರ ಯಜ್ಞ ಕೆರೇಕೊಪ್ಪ ಇವುಗಳ ಸಂಯುಕ್ತ ಆಶ್ರಯದಲ್ಲಿ ನಡೆದ ಬರ್ಕಬಾಳೆ ಪುನರ್ ಉತ್ಪತ್ತಿ, ಅನಾವರಣ, ಅರಣ್ಯ ಇಲಾಖೆಗೆ ಹಸ್ತಾಂತರ ಕಾರ್ಯಕ್ರಮವನ್ನುದ್ದಾಪುರ ವಲಯದ ವಲಯ ಅರಣ್ಯಾಧಿಕಾರಿ ಅಜಯ ಕುಮಾರ ಎಂ.ಎಸ್. ಉದ್ಘಾಟಿಸಿದರು.

ಹೊಯ್ಸಳ ಶೈಲಿಯ ಭವ್ಯ ದೇವಾಲಯ ಲೋಕಾರ್ಪಣೆ

• **ಶಿರಸಿ:** ಶ್ರೀ ಮಠದ ಅಂಗ ಸಂಸ್ಥೆಯಾದ ಬೆಂಗಳೂರಿನ ಶ್ರೀ ಸ್ವಾನಂದಾಶ್ರಮ ಗಣೇಶ ಸಂಸ್ಥಾನದ ಆವರಣದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಹೊಯ್ಸಳ ಶೈಲಿಯ ಭವ್ಯ ದೇವಾಲಯದ ಪ್ರಥಮ ಹಂತದ ಲೋಕಾರ್ಪಣೆಯನ್ನು ಶ್ರೀಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನದ ಮಠಾಧೀಶ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀಗಂಗಾಧರೇಂದ್ರ ಸರಸ್ವತೀ ಸ್ವಾಮಿಗಳು ನೆರವೇರಿಸಿದರು.

ಈ ಮಹೋತ್ಸವದ ಅಂಗವಾಗಿ ಶ್ರೀ ಏಕಾಕ್ಷರ ಮಹಾಗಣಪತಿಯ ಅಷ್ಟಬಂಧ ಪ್ರತಿಷ್ಠಾಪನೆ, ಮುದ್ಗಲ ಪುರಾಣೋಕ್ತ 32 ಗಣಪತಿಗಳು ಹಾಗೂ ಗಣೇಶ ಪುರಾಣದಲ್ಲಿ ಉಲ್ಲೇಖಗೊಂಡಿರುವ 4 ಯುಗ ಗಣಪತಿಗಳ ಪ್ರತಿಷ್ಠಾಪನೆ ಕಾರ್ಯಕ್ರಮಗಳು ಶ್ರೀಗಳ ದಿವ್ಯ ಸಾನ್ನಿಧ್ಯದಲ್ಲಿ ಶಾಸ್ತ್ರೋಕ್ತವಾಗಿ ಜರುಗಿದವು.

ಬೆಳಗ್ಗೆ ಕರ್ಕ ಲಗ್ನದ ಶುಭ ಮುಹೂರ್ತದಲ್ಲಿ ವೇದಘೋಷ, ಮಂತ್ರೋಚ್ಚಾರಣೆ ಹಾಗೂ ಧಾರ್ಮಿಕ ವಿಧಿವಿಧಾನಗಳ ಮಧ್ಯೆ ಗಣಪತಿ ದೇವರ ಮೂರ್ತಿ ಪ್ರತಿಷ್ಠಾಪನೆ ನೆರವೇರಿತು. ದೇಶದ ವಿವಿಧ ಭಾಗಗಳಿಂದ ಆಗಮಿಸಿದ್ದ ನೂರಾರು ಭಕ್ತರು ಈ ಅಪೂರ್ವ ಕ್ಷಣಕ್ಕೆ ಸಾಕ್ಷಿಯಾದರು.

ಈ ಸಂದರ್ಭದಲ್ಲಿ ಪರಮ ಪೂಜ್ಯ ಶ್ರೀಗುರುಗಳ ಶಿಷ್ಯರಾದ ಶ್ರೀ ಶ್ರೀಮದ್ ಆನಂದಬೋಧೇಂದ್ರ ಸರಸ್ವತೀ ಸ್ವಾಮಿಗಳು ರಚಿಸಿದ ಗಣಪತಿಯ ಸ್ತುತಿಸುವ ಅದ್ಭುತ ಶ್ಲೋಕಗಳನ್ನು ಸಮರ್ಪಿಸಿದರು.

ಬಳಿಕ ಆಶ್ರಮದ ಸಭಾಂಗಣದಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ಶ್ರೀಗಳು, ಭಕ್ತಿ, ಧರ್ಮ ಹಾಗೂ ಭಾರತೀಯ ಶಿಲ್ಪಕಲೆಯ ಮಹತ್ವವನ್ನು ವಿವರಿಸಿದರು.

ಗಣೇಶ ವಿಗ್ರಹ ನಿರ್ಮಾಣ ಮಾಡುವ ಶಿಲ್ಪಿಗಳಿಗೆ ಈ ದೇವಾಲಯ ಮಾದರಿಯಾಗುವಂತಾಗಲಿ ಎಂದು ಆಶೀರ್ವದಿಸಿದರು.

ಕಾರ್ಯಕ್ರಮದಲ್ಲಿ ಹರಿಹರಪುರದ ಆದಿಶಂಕರಾಚಾರ್ಯ ಶಾರದಾ ಲಕ್ಷ್ಮೀನೃಸಿಂಹ ಪೀಠದ ಪರಮಪೂಜ್ಯ ಶ್ರೀಮದ್ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಮಹಾಸ್ವಾಮಿಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಆಶೀರ್ವಚನ ನೀಡಿದರು.

ಮೈಸೂರಿನ ಭಾರತೀಯ ಯೋಗಧಾಮದ ಅಧ್ಯಕ್ಷ ಡಾ. ಕೆ.ಎಲ್.ಶಂಕರನಾರಾಯಣ ಜೋಯಿಸ್ ಹಾಗೂ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.



> ಹೊಯ್ಸಳ ಶೈಲಿಯ ಈ ದೇವಾಲಯವು ಸಮಾಜಕ್ಕೆ ಶಾಂತಿ, ಸೌಹಾರ್ದ ಹಾಗೂ ಆಧ್ಯಾತ್ಮಿಕ ಚೈತನ್ಯವನ್ನು ನೀಡುವ ಕೇಂದ್ರವಾಗಲಿ ಎಂದು ಹಾರೈಸಿದ ಅವರು, ಎಲ್ಲರೂ ದೇವಸ್ಥಾನಗಳಿಗೆ ಹೋಗುವ ಹಾಗೆ ಆಗಲಿ. ವಿಶೇಷವಾಗಿ ಇಂದಿನ ಮಕ್ಕಳಿಗೆ ತಮ್ಮ ಪಾಲಕರು ದೇವಸ್ಥಾನಗಳನ್ನು ತೋರಿಸಿ ಚಿಕ್ಕಂದಿನಿಂದಲೇ ದೇವರ ಮೇಲೆ ಶ್ರದ್ಧಾ ಭಕ್ತಿಗಳು ಜಾಗೃತವಾಗುವ ಹಾಗೆ ಮಾಡಿ.
>
> ■ ಶ್ರೀ ಆನಂದಬೋಧೇಂದ್ರ ಸರಸ್ವತೀ ಶ್ರೀಗಳು

ರಾತ್ರಿ ವೇಳೆ ಬಸ್‌ಗಳು ನಿಲ್ದಾಣದೊಳಗೆ ಬರಲಿ

• **ಅಂಕೋಲಾ:** ರಾತ್ರಿ ಸಮಯದಲ್ಲಿ ದೂರದ ಊರುಗಳಿಗೆ ಹೋಗುವ ಬಸ್‌ಗಳು ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣದ ಒಳಗಡೆ ಬರದೇ ಹೊರಗಿನಿಂದಲೇ ಹೋಗುತ್ತಿರುವುದಕ್ಕೆ ಪ್ರಯಾಣಿಕರು ಅಸಮಾಧಾನ ವ್ಯಕ್ತಪಡಿಸಿದ್ದು, ಹೊರಗಡೆಯಿಂದ ಹೋಗುತ್ತಿದ್ದ ಬಸ್‌ಗಳನ್ನು ನಿಲ್ದಾಣದ ಒಳಗಡೆ ಬರುವಂತೆ ಒತ್ತಾಯಿಸಿದ ಘಟನೆ ನಡೆದಿದೆ.



ತಾಲೂಕಿನ ಬಸ್ ನಿಲ್ದಾಣಕ್ಕೆ ರಾತ್ರಿ10.30ರ ನಂತರ ದೂರದ ಊರುಗಳಿಗೆ ತೆರಳುವ ಹೊರ ಜಿಲ್ಲೆಯ ಡೀಪೊಗಳಿಗೆ ಸೇರಿದ ಸಾರಿಗೆ ಸಂಸ್ಥೆಯ ಬಸ್‌ಗಳು ನಿಲ್ದಾಣದ ಒಳಗಡೆ ಹೋಗದೆ ಹೊರಗೆ ರಸ್ತೆಯ ಮೇಲೆ ಪ್ರಯಾಣಿಕರನ್ನು ಇಳಿಸಿ ಹೋಗುತ್ತಿರುವುದನ್ನು ಪ್ರಶ್ನಿಸಿದ ಸಾರ್ವಜನಿಕರು ಸರ್ಕಾರಿ ಬಸ್ ನಿಲ್ದಾಣದ ಒಳಗೆ ಬರದಿರಲು ಕಾರಣಗಳೇನು ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾತ್ರಿ ಸಮಯದಲ್ಲಿ ಜಿಲ್ಲೆಯ ಶಿರಸಿ ಮತ್ತು ಕುಮಟಾ ಬಸ್ ನಿಲ್ದಾಣಗಳನ್ನು ಹೊರತುಪಡಿಸಿ ಬೇರೆ ನಿಲ್ದಾಣಗಳಲ್ಲಿ ಎಂಟ್ರಿ ಹಾಕಲು ಯಾವುದೇ ವ್ಯವಸ್ಥೆ ಇಲ್ಲ. ಬಸ್‌ಗಳು ನಿಲ್ದಾಣದ ಒಳಗಡೆ ಬರದೆ ಹೊರಗಿನಿಂದಲೇ ಹೋಗುತ್ತಿರುವುದು ಕೋಟ್ಯಂತರ ರೂಪಾಯಿ ವೆಚ್ಚದ ಬಸ್ ನಿಲ್ದಾಣಗಳು ಇದ್ದರೂ ಅದಕ್ಕೆ ಯಾವುದೇ ಬೆಲೆ ಇಲ್ಲದಂತಾಗುತ್ತದೆ ಎಂದು ಪ್ರಯಾಣಿಕರು ಅಸಮಾಧಾನ ವ್ಯಕ್ತಪಡಿಸಿದ್ದು, ಬಸ್‌ಗಳ ಚಾಲಕ, ನಿರ್ವಾಹಕರು ಮತ್ತು ಸ್ಥಳೀಯ ಸಾರ್ವಜನಿಕರ ನಡುವೆ ಕೆಲಕಾಲ ವಾಗ್ವಾದಕ್ಕೆ ಕಾರಣವಾಯಿತು.

ರಾತ್ರಿ 10.30ರ ನಂತರ ಮಂಗಳೂರಿನಿಂದ ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕದ ಕಡೆ ಮತ್ತು ಆ ಭಾಗದಿಂದ ಉಡುಪಿ, ಧರ್ಮಸ್ಥಳ, ಮಂಗಳೂರು ಕಡೆ ಬಸ್‌ಗಳ ಸಂಚಾರವಿದ್ದು, ಅಂಕೋಲಾ ಬಸ್ ನಿಲ್ದಾಣದಿಂದಲೂ ಪ್ರಯಾಣಿಕರ ಓಡಾಟ ಇರುತ್ತದೆ ಆದರೆ ಬಸ್‌ಗಳು ನಿಲ್ದಾಣದ ಒಳಗಡೆ ಬಾರದಿರುವುದು, ನಿಲ್ದಾಣದ ಎದುರಿನ ರಸ್ತೆಯಲ್ಲಿ ಪ್ರಯಾಣಿಕರನ್ನು ಇಳಿಸುವುದು ಸ್ಥಳೀಯ ಪ್ರಯಾಣಿಕರಿಗೆ ಅನಾನುಕೂಲವಾಗಿ ಪರಿಣಮಿಸಿದೆ ಆಸ್ಪತ್ರೆಗಳಿಗೆ ತೆರಳುವ ರೋಗಿಗಳು, ಹಿರಿಯ ನಾಗರಿಕರು, ಮಹಿಳೆಯರು, ಮಕ್ಕಳು ದೂರದಿಂದ ರಸ್ತೆಗೆ ಓಡಿ ಬರಬೇಕಿದ್ದು ಕೆಲವೊಮ್ಮೆ ರಸ್ತೆಗೆ ತಲಪುವಷ್ಟರಲ್ಲಿ ಬಸ್ ಬಿಟ್ಟು ಮುಂದೆ ಸಾಗಿರುತ್ತದೆ ಬಸ್ ನಿಲ್ದಾಣ ಇದ್ದಾಗ ಪ್ರಯಾಣಿಕರಿಗೆ ಈ ಅವಸ್ಥೆ ಯಾಕೆ ಎನ್ನುವುದು ಸಾರ್ವಜನಿಕರ ಪ್ರಶ್ನೆಯಾಗಿದೆ.

ಕೆಲವೊಮ್ಮೆ ರಾಷ್ಟ್ರೀಯ ಹೆದ್ದಾರಿಯಲ್ಲೇ ಪ್ರಯಾಣಿಕರನ್ನು ಇಳಿಸಿ ಮುಂದೆ ಹೋಗುವುದು ಇತ್ತೀಚಿನ ದಿನಗಳಲ್ಲಿ ರಾತ್ರಿ ಸಮಯದಲ್ಲಿ ಹೆಚ್ಚಿದ್ದು ಇದರಿಂದ ಪ್ರಯಾಣಿಕರು ಪರದಾಟ ನಡೆಸುವಂತಾಗುತ್ತದೆ. ಇದೇ ರೀತಿ ಮುಂದುವರಿದರೆ ಪ್ರತಿಭಟನೆ ಅನಿವಾರ್ಯ ಎಂದು ಸಾಮಾಜಿಕ ಕಾರ್ಯಕರ್ತ ಮಾದೇವ ಗೌಡ ತಿಳಿಸಿದ್ದಾರೆ.

ವಿದ್ಯುತ್ ಖಾಸಗೀಕರಣ ವಿರೋಧಿಸಿ ಪ್ರತಿಭಟನೆ

• **ಹಳಿಯಾಳ:** ರಾಜ್ಯದಲ್ಲಿ ವಿದ್ಯುತ್ ವಿತರಣಾ ಕ್ಷೇತ್ರಕ್ಕೆ ಖಾಸಗಿ ಕಂಪನಿಗಳ ಪ್ರವೇಶಕ್ಕೆ ಅವಕಾಶ ಕಲ್ಪಿಸುವ ಪ್ರಕ್ರಿಯೆಗೆ ವಿರೋಧ ವ್ಯಕ್ತಪಡಿಸಿ, ಕಬ್ಬು ಬೆಳೆಗಾರರ ಹಿತ ಸಂರಕ್ಷಣಾ ಸಮಿತಿಯು ಶುಕ್ರವಾರ ತಾಲೂಕು ಆಡಳಿತ ಕಚೇರಿ ಎದುರು ಪ್ರತಿಭಟನೆ ನಡೆಸಿ, ಟಾಟಾ ಪವರ್ ಕಂಪನಿಯ ಅರ್ಜಿಯನ್ನು ತಕ್ಷಣವೇ ತಿರಸ್ಕರಿಸುವಂತೆ ಆಗ್ರಹಿಸಿತು.

ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದ ಸಮಿತಿಯ ಅಧ್ಯಕ್ಷ ನಾಗೇಂದ್ರ ಜಿವೋಜಿ, ವಿದ್ಯುತ್ ಸೇವೆ ಎನ್ನುವುದು ಜನಸಾಮಾನ್ಯರಿಗೆ ಅಗತ್ಯವಾಗಿರುವ ಮೂಲಭೂತ ಸೇವೆಯಾಗಿದ್ದು, ಅದನ್ನು ಖಾಸಗಿ ಸಂಸ್ಥೆಗಳ ನಿಯಂತ್ರಣಕ್ಕೆ ಒಪ್ಪಿಸುವುದು ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾದ ಕ್ರಮವಾಗಲಿದೆ. ರಾಜ್ಯ ಸರ್ಕಾರವು ಸಾರ್ವಜನಿಕ ವಲಯದ ವಿದ್ಯುತ್ ಸಂಸ್ಥೆಗಳ ಬಲವರ್ಧನೆಗೆ ಒತ್ತು ನೀಡಬೇಕೇ ಹೊರತು, ಖಾಸಗಿ ಕಂಪನಿಗಳಿಗೆ ಅವಕಾಶ ಕಲ್ಪಿಸುವ ನಿರ್ಧಾರ ಕೈಗೊಳ್ಳಬಾರದು ಎಂದು ಒತ್ತಾಯಿಸಿದರು.

ವಿದ್ಯುತ್ ಖಾಸಗೀಕರಣ ಜಾರಿಯಾದರೆ ರೈತರು, ನೌಕರರು ಹಾಗೂ ಸಾಮಾನ್ಯ ಗ್ರಾಹಕರು ಹಲವು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ರೈತರಿಗೆ ನೀಡಲಾಗುತ್ತಿರುವ ಉಚಿತ ವಿದ್ಯುತ್ ಯೋಜನೆಗಳ ಮೇಲೆ ಪರಿಣಾಮ ಬೀಳುವ ಸಾಧ್ಯತೆ ಇದ್ದು, ವಿದ್ಯುತ್ ದರ ಏರಿಕೆಯಿಂದ ಜನರ ಮೇಲಿನ ಆರ್ಥಿಕ ಹೊರೆ ಹೆಚ್ಚಾಗಲಿದೆ. ಜೊತೆಗೆ, ಸರ್ಕಾರಿ ನೌಕರರ ಉದ್ಯೋಗ ಭದ್ರತೆಯೂ ಪ್ರಶ್ನಾರ್ಥಕವಾಗುವ ಅಪಾಯವಿದೆ.

ಒಂದು ವೇಳೆ ಸರ್ಕಾರ ಖಾಸಗೀಕರಣ ಪ್ರಕ್ರಿಯೆಯನ್ನು ಮುಂದುವರಿಸಿದರೆ ರಾಜ್ಯಾದ್ಯಂತ ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಿದ ಪ್ರತಿಭಟನಾಕಾರರು, ಜನಸಾಮಾನ್ಯರ ಹಿತಾಸಕ್ತಿಯನ್ನು ಕಾಪಾಡುವ ನಿಟ್ಟಿನಲ್ಲಿ ಟಾಟಾ ಪವರ್ ಕಂಪನಿಯ ಅರ್ಜಿಯನ್ನು ಕರ್ನಾಟಕ ವಿದ್ಯುತ್‌ಶಕ್ತಿ ನಿಯಂತ್ರಣ ಆಯೋಗ ತಿರಸ್ಕರಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಕಬ್ಬು ಬೆಳೆಗಾರರ ಸಂಘದ ತಾಲೂಕ ಅಧ್ಯಕ್ಷ ಶಂಕರ ಕಾಜಗಾರ, ಪ್ರಮುಖರಾದ ರಾಮದಾಸ ಬೆಳಗಾಂವಕರ, ನಕುಲ ಕೆಂಚಣ್ಣನವರ, ಮಹೇಶ ಪಾಳೇಕರ, ಬಳಿರಾಮ ಮೋರೆ, ಮಂಗಲಾ ಕಶೀಲಕರ, ಸುರೇಶ ಶಿವಣ್ಣನವರ ಇತರರು ಇದ್ದರು.



ವಾಡಿಕೆಗಿಂತ ಕಡಿಮೆ ಮಳೆ

• **ಯಲ್ಲಾಪುರ:** ಏಪ್ರಿಲ್‌ನಲ್ಲಿ ಮಳೆಯಾಗಿದ್ದರಿಂದ ಮುಂಗಾರು ಪೂರ್ವ ಬಿತ್ತನೆ ಉತ್ತಮವಾಗಿದ್ದು, ಆದರೆ ಜೂನನಲ್ಲಿ ಮಳೆ ವಾಡಿಕೆಗಿಂತ ಕಡಿಮೆಯಾಗಿದ್ದು ಮುಂಗಾರು ದುರ್ಬಲವಾಗಿದೆ ತಾಲೂಕಿನಲ್ಲಿ ವಾಡಿಕೆ ಮಳೆ 233.70 ಆಗಬೇಕಿತ್ತು ಆದರೆ 99.90 ಮಿಮೀ ಮಳೆಯಾಗಿದ್ದು, ಹೀಗೆ ಒಂದೆರಡು ವಾರ ಮುಂದುವರೆದರೆ ಬಿತ್ತನೆಗೆ ಹಾನಿಯಾಗಲಿದೆ ಎಂದು ಸಹಾಯಕ ಕೃಷಿ ನಿರ್ದೇಶಕ ನಾಗರಾಜ ನಾಯ್ಕ ಹೇಳಿದರು.



ಅವರು ಶುಕ್ರವಾರ ಕೃಷಿ ಇಲಾಖೆ ಕಚೇರಿಯಲ್ಲಿ ಮುಂಗಾರು ಕೃಷಿಗೆ ಸಿದ್ಧತೆ ಕುರಿತು ಮಾಧ್ಯಮದವರಿಗೆ ಮಾಹಿತಿ ನೀಡಿ ತಾಲೂಕಿನಲ್ಲಿ ಭತ್ತದ ಕೃಷಿಕ್ಷೇತ್ರ ಕಡಿಮೆಯಾಗಿದ್ದು, ಕಬ್ಬು ಬೆಳೆ ಕ್ಷೇತ್ರ ಹೆಚ್ಚಾಗಿದೆ. ಸುಮಾರು 1900 ಹೆಕ್ಟೇರ್ ಭತ್ತ, 280 ಹೇ, 147ಹೇ ಮೆಕ್ಕೆಜೋಳ ಹಾಗೂ 20 ಹೇ ಹತ್ತಿ ಬೆಳೆಯುವ ಪ್ರದೇಶವಿದೆ. ರೈತರಿಗೆ ಬಿತ್ತನೆ ಬೀಜ ,ರಸಗೊಬ್ಬರ ಪೂರೈಸಲು ಗೋದಾಮಿನಲ್ಲಿ 168 ಕ್ವಿಂಟಲ್ ಬಿತ್ತನೆ ಬೀಜ,1185.82 ಟನ್ ರಸಗೊಬ್ಬರ ದಾಸ್ತಾನು ಇದೆ.

ತಾಲೂಕಿನ ಪೂರ್ವಭಾಗದ ಕಿರವತ್ತಿ ಮದನೂರು ಕಣ್ಣೆಗೇರಿ ಗ್ರಾಪಂಗಳಲ್ಲಿ ಒಟ್ಟು 2600 ಎಕರೆಗಳಷ್ಟು ಅತಿಕ್ರಮಣ ಕ್ಷೇತ್ರವಿದ್ದು, ಈ ಕ್ಷೇತ್ರದ ಪೈಕಿ ಶೇ.80% ಕ್ಷೇತ್ರದಲ್ಲಿ ಪ್ರಮುಖ ವಾಣಿಜ್ಯ ಬೆಳೆಗಳಾದ ಕಬ್ಬು, ಮುಸುಕಿನಜೋಳ ಹಾಗೂ ಭತ್ತವನ ಬೆಳೆಯುತ್ತಿದ್ದು, ಭತ್ತ ಮತ್ತು ಮುಸುಕಿನ ಜೋಳದ ಬಿತ್ತನೆ ಕಾರ್ಯ ಪ್ರಗತಿಯಲ್ಲಿದೆ. ರೈತರು ಬೆಳೆ ಸಮೀಕ್ಷೆ ಮಾಡುವಾಗ ಮರಗಳ ಸಂಖ್ಯೆಗಳನ್ನು ನಮೂದಾಯಿಸಬೇಕು ಎಂದರಲ್ಲದೆ ಸಾವಯವ ಕೃಷಿಗೆ ಪ್ರಚೋದನೆ ನೀಡಲು ಮೂರು ಗುಚ್ಚಗಳಲ್ಲಿ ಸುಮಾರು 400 ಜನ ರೈತರಿಗೆ ಒಟ್ಟು 7.50 ಲಕ್ಷ ರೂ ಟಿ ಬಿ ಟಿ ಮೂಲಕ ನೀಡಲಾಗಿದೆ. ತಾಲೂಕಿನಲ್ಲಿ ಶೇ 80ರಷ್ಟು ಸಾವಯವ ಕೃಷಿ ಪ್ರದೇಶವಿದೆ.

ಕಚೇರಿಯಲ್ಲಿ ತಾಂತ್ರಿಕ ವಿಭಾಗದ ಅಧಿಕಾರಿ ಸೇರಿ ಒಟ್ಟು 12 ಹುದ್ದೆಗಳು ಖಾಲಿ ಇವೆ. ಸಹಾಯಕ ಕೃಷಿ ನಿರ್ದೇಶಕರ ಕ್ಷೇತ್ರ ಭೇಟಿ, ಬೆಳೆವಿಮೆ ಸೇರಿದಂತೆ ಹಲವಾರು ಕಾರ್ಯಗಳನ್ನು ನಿಭಾಯಿಸುವದು ದುಸ್ತರವಾಗುತ್ತಿದೆ. ಆದರೂ ಸಿಬ್ಬಂದಿಗಳ ಕೊರತೆಯಿದ್ದರೂ ಸಕಾಲದಲ್ಲಿ ರೈತರಿಗೆ ಸೇವೆ ಒದಗಿಸಲು ಪ್ರಯತ್ನಿಸುತ್ತಿದ್ದೇವೆ ಎಂದರು.

ಪೊಲೀಸ್ ಅಧಿಕಾರಿಗಳ ಅಮಾನತಿಗೆ ಆಗ್ರಹ

• **ಸಿದ್ದಾಪುರ:** ಶಿರಸಿಯ ಡಿವೈಎಸ್‌ಪಿ ಗೀತಾ ಪಾಟೀಲ್ ಮತ್ತು ಸಿದ್ದಾಪುರ ಸಿಪಿಐ ಜೆ.ಬಿ.ಸೀತಾರಾಮ ಅವರನ್ನು ಅಮಾನತ್ತು ಮಾಡಿ ಜಿಲ್ಲೆಯಿಂದ 15 ದಿನದೊಳಗೆ ವರ್ಗಾವಣೆ ಮಾಡುವಂತೆ ಆಗ್ರಹಿಸಿ ಪಟ್ಟಣದಲ್ಲಿ ಪ್ರತಿಭಟನೆ ನಡೆಸಲಾಯಿತು. ಈ ಕುರಿತು ಮುಖ್ಯಮಂತ್ರಿಗಳಿಗೆ ಹಾಗೂ ರಾಜ್ಯ ಗೃಹ ಸಚಿವರಿಗೆ ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಸಂತ ನಾಯ್ಕ ಮನಮನೆ ನೇತೃತ್ವದಲ್ಲಿ ಕಾರ್ಯಕರ್ತರು ತಹಶೀಲ್ದಾರ ಅವರ ಮೂಲಕ ಮನವಿ ಸಲ್ಲಿಸಿದರು.

ಪಟ್ಟಣದ ರಾಮಕೃಷ್ಣ ಹೆಗಡೆ ವೃತ್ತದಿಂದ ಪ್ರತಿಭಟನಾ ಮೆರವಣಿಗೆ ಹೊರಟು ಪ್ರಮುಖ ಬೀದಿಗಳಲ್ಲಿ ಸಂಚರಿಸಿ ನಂತರ ತಾಲೂಕು ಕಚೇರಿ ಎದುರು ಸಭೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಸಂತ ನಾಯ್ಕ ಮನಮನೆ ಇಂದಿನ ಪ್ರತಿಭಟನೆ ಪೊಲೀಸ್ ಇಲಾಖೆ ವಿರುದ್ಧವಲ್ಲ. ಶಿರಸಿ ಡಿವೈಎಸ್‌ಪಿ ಗೀತಾ ಪಾಟೀಲ ಹಾಗೂ ಸಿದ್ದಾಪುರ ಸಿಪಿಐ ಜೆ.ಬಿ.ಸೀತಾರಾಮ ಅವರ ವಿರುದ್ಧವಾಗಿದೆ. ತಾಲೂಕಿನಲ್ಲಿ ಓಸಿ, ಮಟ್ಕಾ, ಅಕ್ರಮ ಸಾರಾಯಿ ಮಾರಾಟ, ಗಾಂಜಾ ಮಾರಾಟ ನಿರಂತರವಾಗಿ ನಡೆಯುತ್ತಿದೆ. ಕಲ್ಲು ಲಾರಿ, ಮರಳು ಲಾರಿಗಳವರಿಂದ ಹಣ ಸಂಗ್ರಹಿಸಿ ಲೂಟಿ ಮಾಡಲಾಗುತ್ತಿದೆ. ಸುಲಿಗೆ ಮತ್ತಿತರ ಪ್ರಕರಣಗಳನ್ನು ಸರಿಯಾಗಿ ಇತ್ಯರ್ಥಪಡಿಸದೇ ಕಾನೂನನ್ನು ಪಾಲಿಸುತ್ತಿಲ್ಲ. ಪೊಲೀಸ್ ವ್ಯವಸ್ಥೆ ಹದಗೆಟ್ಟಿದೆ. ಅಲ್ಲದೇ ಡಿವೈಎಸ್‌ಪಿಯವರು ಯಾವುದೇ ಕಾರಣ ಇಲ್ಲದೇ ಎಲ್ಲ ವಿಷಯದಲ್ಲಿಯೂ ನನ್ನನ್ನೇ ಟಾರ್ಗೆಟ್ ಮಾಡುತಿದ್ದಾರೆ. ನನಗೇನಾದರೂ ಆದರೆ ಡಿವೈಎಸ್‌ಪಿಯವರೇ ನೇರ ಹೊಣೆಗಾರರಾಗುತ್ತಾರೆ. ಸಿದ್ದಾಪುರ ಪೊಲೀಸ್ ಠಾಣೆಗೆ ಹೋಗುವುದಕ್ಕೆ ಜನ ಭಯ ಪಡುವಂತಾಗಿದೆ ಎಂದು ಹೇಳಿದರು. ಜಿಪಂ ಮಾಜಿ ಸದಸ್ಯೆ ಸುಮಂಗಲಾ ನಾಯ್ಕ, ಸಾಗರದ ವಕೀಲ ಭೋಜರಾಜ, ಪ್ರಶಾಂತ ನಾಯ್ಕ, ಅಣ್ಣಪ್ಪ ನಾಯ್ಕ ಮತ್ತಿತರರು ಮಾತನಾಡಿ ಡಿವೈಎಸ್‌ಪಿ ಗೀತಾ ಪಾಟೀಲ್ ಹಾಗೂ ಸಿಪಿಐ ಜೆ.ಬಿ.ಸೀತಾರಾಮ ಕಾರ್ಯವೈಖರಿ ಕುರಿತು ಆಕ್ಷೇಪವ್ಯಕ್ತಪಡಿಸಿದರು. ತಹಶೀಲ್ದಾರ ರಮೇಶ ಹೆಗಡೆ ಅವರ ಮೂಲಕ ಮುಖ್ಯಮಂತ್ರಿಯವರಿಗೆ, ಗೃಹ ಸಚಿವರಿಗೆ, ಪೊಲೀಸ್ ಮಹಾ ನಿರ್ದೇಶಕರು ಪಶ್ಚಿಮವಲಯ, ಜಿಲ್ಲಾಧಿಕಾರಿಗಳಿಗೆ ಹಾಗೂ ಎಸ್‌ಪಿ ಕಾರವಾರ ಅವರಿಗೆ ವಸಂತ ನಾಯ್ಕ, ಸುಮಂಗಲಾ ನಾಯ್ಕ, ಭೋಜರಾಜ, ಲಲಿತಾ ಕಟ್ಟೆಮನೆ ಇತರರು ಮನವಿ ಸಲ್ಲಿಸಿದರು. ಈ ವೇಳೆ ಕಾಂಗ್ರೆಸ್ ಕಾರ್ಯಕರ್ತರು, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಸಾರ್ವಜನಿಕರಿದ್ದರು.



ಸಮೀಕ್ಷಾ ಹೆಗಡೆಗೆ ಚಿನ್ನದ ಪದಕ



• **ಶಿರಸಿ:** ಬೆಂಗಳೂರಿನ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ ನಡೆಸಿದ ಸ್ನಾತಕೋತ್ತರ ಪರೀಕ್ಷೆಯಲ್ಲಿ ಉತ್ತರಕನ್ನಡ ಮೂಲದ ಯುವ ವೈದ್ಯೆ ಡಾ.ಸಮೀಕ್ಷಾ ಶ್ರೀಕಾಂತ ಹೆಗಡೆ ಅವರು ಮೈಕ್ರೋಬಯಾಲಜಿ ವಿಷಯದಲ್ಲಿ ಅತೀ ಹೆಚ್ಚು ಅಂಕಗಳಿಸಿ ರಾಜ್ಯಪಾಲರಿಂದ ಚಿನ್ನದ ಪದಕ ಸ್ವೀಕರಿಸಿದರು.

ಬೆಂಗಳೂರಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ 28ನೇ ವಾರ್ಷಿಕ ಘಟಿಕೋತ್ಸವದಲ್ಲಿ ರಾಜ್ಯಪಾಲ ತಾವರ್‌ಚಂದ್ ಗೆಹ್ಲೋಟ್ ಮತ್ತು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಂದ ಚಿನ್ನದ ಪದಕ ಸಹಿತ ಪ್ರಶಸ್ತಿ ಪತ್ರ ಸ್ವೀಕರಿಸಿದರು.

ಇವರು ಮತ್ತಿಹಳ್ಳಿಯ ಶ್ರೀಕಾಂತ ಹೆಗಡೆ ಮತ್ತು ಸುವರ್ಣಾ ಹೆಗಡೆ ಅವರ ಪುತ್ರಿ. ಭರತನಾಟ್ಯವನ್ನೂ ಅಭ್ಯಾಸಗೈದಿದ್ದಾರೆ.

ಪ್ರಸ್ತುತ ಬೆಂಗಳೂರಿನಲ್ಲಿ ವೈದ್ಯಕೀಯ ಸೇವೆ ನೀಡುತ್ತಿದ್ದು, ಸಮೀಕ್ಷಾ ಪತಿ ಮಿಜಾರಿನ ಡಾ. ಲಕ್ಷ್ಮೀಶ ಜಯರಾಮ ಹೆಗಡೆ ಅರಿವಳಿಕೆ ತಜ್ಞರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸಹೋದರ ಸಾತ್ವಿಕ ಶ್ರೀಕಾಂತ ಹೆಗಡೆ ಕೂಡಾ ಬಿಎಂಸಿ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಎಂಬಿಬಿಎಸ್ ಮಾಡುತ್ತಿದ್ದಾರೆ.

ವಿದ್ಯಾರ್ಥಿಗಳಿಗೆ ಪೂರ್ವಭಾವಿ ಯೋಗಭ್ಯಾಸ



• **ಹಳಿಯಾಳ :** ದೇಶಪಾಂಡೆ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ವಿದ್ಯಾರ್ಥಿಗಳಿಗಾಗಿ ಮತ್ತು ಶಿಕ್ಷಕರಿಗಾಗಿ ಯೋಗ ಮತ್ತು ಧ್ಯಾನದ ಕುರಿತು ಪೂರ್ವಭಾವಿ ಯೋಗಭ್ಯಾಸವನ್ನು ನಡೆಸಲಾಯಿತು.

ಋಷಿ ಮುನಿಗಳಿಂದ ಬಳುವಳಿಯಾಗಿ ಬಂದ ಯೋಗ, ಪ್ರಾಣಾಯಾಮ ಧ್ಯಾನಕ್ಕೆ ವಿಶ್ವಮಟ್ಟದ ಮಾನ್ಯತೆ ದೊರಕಿರುವುದು ನಮಗೆಲ್ಲ ಅಭಿಮಾನದ ಸಂಗತಿ. ಪ್ರತಿನಿತ್ಯ ಯೋಗಾಭ್ಯಾಸವನ್ನು ಮಾಡುವ ಮೂಲಕ ಸದೃಢ ಆರೋಗ್ಯ ಕಟ್ಟೋಣ ಎಂದು ಪತಂಜಲಿ ಯೋಗ ಶಿಕ್ಷಕ ಈರಣ್ಣ ಕಾಜಗಾರ್ ಯೋಗದ ಮಹತ್ವವನ್ನು ತಿಳಿಸಿದರು.

ಆರೋಗ್ಯಕರ ಜೀವನಕ್ಕಾಗಿ, ಆರೋಗ್ಯಕರ ವೃದ್ಧಾಪ್ಯಗಾಗಿ ಯೋಗ ಎನ್ನುವ ಈ ವರ್ಷದ ಧ್ಯೇಯ ವಾಕ್ಯದಂತೆ ಯೋಗದ ವಿವಿಧ ಆಸನಗಳನ್ನು, ಪ್ರಾಣಾಯಾಮ ಹಾಗೂ ಧ್ಯಾನದ ಕುರಿತು ತಿಳಿಸಿದರು.

ಸಂಸ್ಥೆಯ ಪ್ರಾಚಾರ್ಯರಾದ ದಿನೇಶ್ ಆರ್ ನಾಯ್ಕ್ ಸ್ವಾಗತಿಸಿ ಪರಿಚಯಿಸಿದರು. ಸಾಂಸ್ಕೃತಿಕ ಸಮಿತಿಯ ಡಿಡಿ ನಾಯಕ್ ಕಾರ್ಯಕ್ರಮವನ್ನು ಯಶಸ್ವಿಯಾಗಿ ಸಂಘಟಿಸಿದರು.

ವಿದ್ಯುತ್ ಖಾಸಗೀಕರಣಕ್ಕೆ ವಿರೋಧ

• **ಕುಮಟಾ:** ರಾಜ್ಯದಲ್ಲಿ ವಿದ್ಯುತ್ ಕ್ಷೇತ್ರದ ಖಾಸಗೀಕರಣ ಪ್ರಕ್ರಿಯೆ ಕೈಬಿಡುವಂತೆ ಆಗ್ರಹಿಸಿ ಕರ್ನಾಟಕ ವಿದ್ಯುತ್ ಪ್ರಸರಣ ಹಾಗೂ ವಿತರಣಾ ನಿಗಮಗಳ ಅಧಿಕಾರಿಗಳು ಮತ್ತು ನೌಕರರ ಸಂಘದ ಕುಮಟಾ ಪ್ರಾಥಮಿಕ ಸಮಿತಿಯ ವತಿಯಿಂದ ಶುಕ್ರವಾರ ಹೆಸ್ಕಾಂ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.



ಸಂಘದ ತಾಲೂಕು ಅಧ್ಯಕ್ಷ ಬೀರಾ ಗೌಡ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ನೌಕರರು ಹಾಗೂ ವಿವಿಧ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಿ, ವಿದ್ಯುತ್ ಕ್ಷೇತ್ರದ ಖಾಸಗೀಕರಣ ಹಾಗೂ 2026ರ ವಿದ್ಯುತ್ ಕಾಯ್ದೆ ತಿದ್ದುಪಡಿಗೆ ವಿರೋಧ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಸರ್ಕಾರಕ್ಕೆ ಮನವಿ ಸಲ್ಲಿಸುವ ಜೊತೆಗೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಸಾರ್ವಜನಿಕರು ಹಾಗೂ ವಿವಿಧ ಸಂಘಟನೆಗಳು ತಮ್ಮ ಆಕ್ಷೇಪಣೆಗಳನ್ನು ದಾಖಲಿಸಬೇಕು ಎಂದು ಸಲಹೆ ನೀಡಲಾಯಿತು.

ಪ್ರತಿಭಟನಾಕಾರರು ವಿದ್ಯುತ್ ಕ್ಷೇತ್ರದಲ್ಲಿ ಖಾಸಗೀಕರಣ ಬೇಡ, ಹೊರಗುತ್ತಿಗೆ ವ್ಯವಸ್ಥೆ ರದ್ದುಪಡಿಸಬೇಕು. ಕಾರ್ಮಿಕ ವಿರೋಧಿ ನೀತಿಗಳನ್ನು ಕೈಬಿಡಿ ಎಂಬ ಘೋಷಣೆಗಳನ್ನು ಕೂಗಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಸಮಿತಿ ಸದಸ್ಯ ರಾಮ ಪೂಜಾರಿ, ಕೇಂದ್ರ ಸಮಿತಿ ಸದಸ್ಯ ರಾಘು ನಾಯ್ಕ, ಕಾರ್ಯದರ್ಶಿ ಮೋಹನ ಮಡಿವಾಳ, ಕೃಷಿಕ ಸಮಾಜದ ತಾಲೂಕು ಅಧ್ಯಕ್ಷ ಪ್ರದೀಪ ಹೆಗಡೆ, ಎಇಇ ಲೋಕೇಶ್ ಶಾನಭಾಗ, ಸಂದೇಶ ಬೊಮ್ಕರ್, ನವೀನ್ ನಾಯ್ಕ ಸೇರಿದಂತೆ ಹೆಸ್ಕಾಂ ಸಿಬ್ಬಂದಿ, ಲೈನ್ ಮನ್‌ಗಳು, ಗುತ್ತಿಗೆದಾರರು ಹಾಗೂ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಭಾಗವಹಿಸಿದ್ದರು.

ಸಂತ್ರಸ್ತ ಮಕ್ಕಳಿಗೆ ಅಗತ್ಯ ಸಾಮಗ್ರಿ ವಿತರಣೆ

• **ಭಟ್ಕಳ:** ತಾಲೂಕಿನ ಪಡುಶಿರಾಲಿಯಲ್ಲಿ ಕಳೆದ ಕೆಲವು ದಿನಗಳ ಹಿಂದೆ ಚಿಪ್ಪಿಕಲ್ಲು ತೆಗೆಯಲು ನದಿಗೆ ಹೋಗಿ ಸಾವಿಗೀಡಾಗಿದ್ದ 11 ಜನರ ಸಂತ್ರಸ್ತ ಮಕ್ಕಳನ್ನು ಭೇಟಿಯಾದ ಕನ್ನಡ ಸಾಹಿತ್ಯ ಪರಿಷತ್ತು ಅವರಿಗೆ ಪಾಠೋಪಕರಣಗಳು ಹಾಗೂ ಇತರೆ ಅಗತ್ಯ ಸಾಮಗ್ರಿಗಳನ್ನು ನೀಡಿ ಮಾನವೀಯ ನೆಲೆಯಲ್ಲಿ ಸ್ಪಂದಿಸುವ ಕಾರ್ಯ ಮಾಡಿತು.

ಸಂತ್ರಸ್ತ ಮಕ್ಕಳಿಗೆ ಬಟ್ಟೆ ಬ್ಯಾಗು, ನೋಟ್ ಬುಕ್, ಕಂಪಾಸ್ ಬಾಕ್ಸ್, ರೇನ್ ಕೋಟ್, ಛತ್ರಿ, ನೋಟ್ ಬುಕ್ ಹಾಗೂ ಇತರೆ ಕಲಿಕಾ ಸಾಮಗ್ರಿ ವಿತರಿಸಾಯಿತು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ.ಎನ್. ವಾಸರೆ ಮಾತನಾಡಿದರು.

ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಗೌರವ ಕಾರ್ಯದರ್ಶಿ ಪಿ.ಆರ್ ನಾಯ್ಕ, ಭಟ್ಕಳ ತಾಲೂಕು ಘಟಕದ ಅಧ್ಯಕ್ಷ ಗಂಗಾಧರ ನಾಯ್ಕ, ಶಿಕ್ಷಕ ಸಂಘದ ಅಧ್ಯಕ್ಷರಾದ ಉಮೇಶ ಕೆರೆಕಟ್ಟೆ, ಸಾಹಿತಿಗಳಾದ ಶಂಭು ಹೆಗಡೆ, ಶ್ರೀಧರ ಶೇಟ್,ಜಿಲ್ಲಾ ಪದಾಧಿಕಾರಿ ಪಿ.ಎಮ್.ಮುಕ್ರಿ, ಪತ್ರಕರ್ತರಾದ ವಿಷ್ಣುದೇವಡಿಗ, ಅಕ್ಷಯಗಿರಿ ಗೋಸಾವಿ, ಮಂಜುನಾಥ ಅಂಬಿಗೇರ, ಊರ ಪ್ರಮುಖರಾದ ವಾಸು ನಾಯ್ಕ, ಕೃಷ್ಣ ನಾಯ್ಕ, ಮಂಜುನಾಥ ನಾಯ್ಕ, ಮಾದೇವ ನಾಯ್ಕ ಮತ್ತು ವಿದ್ಯಾರ್ಥಿಗಳ ಕುಟುಂಬಸ್ಥರು ಉಪಸ್ಥಿತರಿದ್ದರು.



ಕಿರುಸುದ್ದಿ

ಸಾವಯವ ಕೃಷಿ ಕಾರ್ಯಾಗಾರ ಇಂದು

ಹಾವೇರಿ: ಜಿಲ್ಲೆಯ ರಾಣೇಬೆನ್ನೂರ ತಾಲೂಕು ಹಲಗೇರಿ ಗ್ರಾಮದ ರೈತ ಶಿವಪುತ್ರಪ್ಪ ದೇಸಾಯಿ ಅವರ ಕಾಂಕ್ರೀಟ್ ಫ್ರೊಡ್ಕ್ ಫ್ಯಾಕ್ಟರಿ ಆವರಣದಲ್ಲಿ ಬಿಜೆಪಿ ರೈತ ಮೋರ್ಚಾ ಜಿಲ್ಲಾ ಘಟಕದಿಂದ ಜೂ.20ರಂದು ಬೆಳಗ್ಗೆ 11ಕ್ಕೆ ಸಾವಯವ ಕೃಷಿ ಕಾರ್ಯಾಗಾರವನ್ನು ಆಯೋಜಿಸಲಿದೆ. ಮಾಜಿ ಮುಖ್ಯಮಂತ್ರಿ, ಸಂಸದ ಬಸವರಾಜ ಬೊಮ್ಮಾಯಿ ಕಾರ್ಯಾಗಾರವನ್ನು ಉದ್ಘಾಟಿಸಲಿದ್ದು, ರೈತ ಮೋರ್ಚಾ ಜಿಲ್ಲಾಧ್ಯಕ್ಷ ಗಂಗಾಧರ ಬಾಣದ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಬಿಜೆಪಿ ಜಿಲ್ಲಾಧ್ಯಕ್ಷ ವಿರುಪಾಕ್ಷಪ್ಪ ಬಳ್ಳಾರಿ, ಮಾಜಿ ಸಚಿವ ಬಿ.ಸಿ ಪಾಟೀಲ, ಮಾಜಿ ಶಾಸಕರಾದ ಶಿವರಾಜ ಸಜ್ಜನರ, ಅರುಣಕುಮಾರ ಪೂಜಾರ, ರಾಜ್ಯ ಪದಾಕಾರಿಗಳಾದ ಮಂಜುನಾಥ ಓಲೇಕಾರ, ಡಾ.ಬಸವರಾಜ ಕೇಲಗಾರ, ಭೋಜರಾಜ ಕರೂದಿ, ಭಾರತಿ ಅಳವಂಡಿ, ಮುಖಂಡರಾದ ಭರತ್ ಬೊಮ್ಮಾಯಿ, ಗವಿಸಿದ್ದಪ್ಪ ದ್ಯಾಮಣ್ಣನವರ, ಪರಮೇಶಪ್ಪ ಗೂಳಣ್ಣನವರ, ಸುರೇಶ ದ್ಯಾವಕ್ಕಳವರ, ಸುಭಾಸ್ ಶಿರಗೇರಿ ಸೇರಿದಂತೆ ಜಿಲ್ಲೆಯ ಮುಖಂಡರು ಪದಾಕಾರಿಗಳು ಭಾಗವಹಿಸಲಿದ್ದಾರೆ. ಕಾರ್ಯಾಗಾರದಲ್ಲಿ ಹನುಮನಮಟ್ಟಿ ಕೆವಿಕೆ ಮುಖ್ಯಸ್ಥರಾದ ಹಿರಿಯ ವಿಜ್ಞಾನಿ ಡಾ.ಎ.ಹೆಚ್ ಬಿರಾದಾರ ಅವರು ನೈಸರ್ಗಿಕ ಕೃಷಿಯಲ್ಲಿ ಕೀಟ ಮತ್ತು ರೋಗದ ಹತೋಟಿಗೆ ಕ್ರಮಗಳು ವಿಷಯದ ಕುರಿತು, ಬೇಸಾಯ ಶಾಸ್ತ್ರ ವಿಭಾಗದ ಡಾ.ಪ್ರಿಯಾ ಪಿ. ಅವರು, ನೈಸರ್ಗಿಕ ಕೃಷಿಯಲ್ಲಿ ಪೋಷಕಾಂಶಗಳ ನಿರ್ವಹಣೆ ಕುರಿತು, ಸೂಕ್ಷ್ಮಾಣು ಜೀವಿಗಳ ವಿಭಾಗದ ಡಾ.ನೂರನವಾಜ್ ಎ.ಎಸ್ ಅವರು ನೈಸರ್ಗಿಕ ಕೃಷಿಯಲ್ಲಿ ಸೂಕ್ಷ್ಮಾಣು ಜೀವಿಗಳ ಪಾತ್ರ ಕುರಿತು ಉಪನ್ಯಾಸ ನೀಡಲಿದ್ದಾರೆ ಎಂದು ಜಿಲ್ಲಾ ವಕ್ತಾರ ನಿರಂಜನ್ ಹೇರೂರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ವಿದ್ಯುತ್ ವ್ಯತ್ಯಯ

ರಾಣೇಬೆನ್ನೂರ: ಪರಿವರ್ತಕ ಸ್ಥಳಾಂತರ ಕಾಮಗಾರಿ ಪ್ರಯುಕ್ತ ಜೂ.21ರಂದು ಬೆಳಗ್ಗೆ 10 ರಿಂದ ಸಂಜೆ 6ಗಂಟೆಯವರೆಗೆ 220 ಕೆವಿ ರಾಣೇಬೆನ್ನೂರು ಉಪ-ಕೇಂದ್ರದಿಂದ ಹೊರಡುವ ಎಫ್-06 ಸಿದ್ದಾರೂಢ ಮಠ ಫೀಡರ್‌ನ ಶಾಂತಿನಗರ, ನೇಕಾರ ಕಾಲೋನಿ ಹಾಗೂ ಕೆ.ಹೆಚ್.ಡಿ.ಸಿ ಇಂಡಸ್ಟ್ರಿಯಲ್ ಏರಿಯಾ ಗಳಿಗೆ ವಿದ್ಯುತ್ ಸರಬರಾಜು ಇರುವುದಿಲ್ಲ, ಆದ್ದರಿಂದ ಸದರಿ ಏರಿಯಾಗಳ ಗ್ರಾಹಕರು ಸಹಕರಿಸಬೇಕೆಂದು ಹೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ನೇಮಕಾತಿಗೆ ಅರ್ಜಿ ಆಹ್ವಾನ

ಹಾವೇರಿ: ಭಾರತದ ಸರ್ಕಾರದ ಸಿಬ್ಬಂದಿ ನೇಮಕಾತಿ ಆಯೋಗದಿಂದ ಖಾಲಿ ಇರುವ ಸಂಯೋಜಿತ ಪದವಿ ಮಟ್ಟದ ಪರೀಕ್ಷೆ-2026 ಗ್ರೂಪ್ ಬಿ (ನಾನ್ ಗೆಜೆಟೆಡ್) ಮತ್ತು ಗ್ರೂಪ್ ಸಿ ವಿವಿಧ ಹುದ್ದೆಗಳ ನೇಮಕಾತಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಹುದ್ದೆಗಳ ನೇಮಕಾತಿಗೆ ಮುಕ್ತ ಸ್ಪರ್ಧಾತ್ಮಕ ಕಂಪ್ಯೂಟರ್ ಆಧಾರಿತ ಪರೀಕ್ಷೆ ನಡೆಸಲಾಗುತ್ತದೆ. ಪರೀಕ್ಷೆ ಆಗಸ್ಟ್-ಸೆಪ್ಟೆಂಬರ್-2026ರಲ್ಲಿ ನಡೆಯಲಿದೆ. ಪರೀಕ್ಷೆಯ ನಿಖರ ದಿನಾಂಕವನ್ನು ಎಸ್‌ಎಸ್‌ಸಿ ವೆಬ್‌ಸೈಟ್ ಮೂಲಕ ತಿಳಿಸಲಾಗುವುದು. ಅಭ್ಯರ್ಥಿಗಳು 18ರಿಂದ 32ವರ್ಷದೊಳಗಿರಬೇಕು. ಇತರೆ ವರ್ಗದವರಿಗೆ ಸಡಿಲಿಕೆ ಇದೆ. ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪದವಿ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು. ಆಸಕ್ತ ಅಭ್ಯರ್ಥಿಗಳು ಅಗತ್ಯ ದಾಖಲೆಗಳೊಂದಿಗೆ ಜೂ.22ರೊಳಗಾಗಿ ವೆಬ್‌ಸೈಟ್ https://ssc.gov.inನಲ್ಲಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಎಸ್ಸೆಸ್ಸಿ ಮುಖ್ಯ ಕಚೇರಿ ನವದೆಹಲಿ ವೆಬ್‌ಸೈಟ್ https://ssc.nic.inಮತ್ತು ಕರ್ನಾಟಕ-ಕೇರಳದ ಶಾಖಾ www.ssckkr.kar.nic.in ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಹಾವೇರಿ: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ 2026-27ನೇ ಸಾಲಿನ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ಸೌಲಭ್ಯಕ್ಕೆ ಅಲ್ಪಸಂಖ್ಯಾತರಾದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್, ಬೌದ್ಧ ಮತ್ತು ಪಾರ್ಸಿ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಥಿಯು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರಾಗಿರಬೇಕು, ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು. ಕುಟುಂಬದ ವಾರ್ಷಿಕ ಆದಾಯ ರೂ.1.00 ಲಕ್ಷದೊಳಗಿರಬೇಕು. ಅರ್ಹ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಸೆ.30ರೊಳಗಾಗಿ https://dom.karnataka.gov.inರಲ್ಲಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ದೂರವಾಣಿ ಸಂಖ್ಯೆ 08375-234505 ಅಥವಾ ತಾಲ್ಲೂಕು ಮಾಹಿತಿ ಕೇಂದ್ರಗಳಾದ ಹಾವೇರಿ, ಬ್ಯಾಡಗಿ, ರಾಣೇಬೆನ್ನೂರು, ಸವಣೂರು, ಹಿರೇಕೆರೂರು, ಹಾನಗಲ್ ಮತ್ತು ಶಿಗ್ಗಾಂವ್ ಮಾಹಿತಿ ಕೇಂದ್ರಗಳಲ್ಲಿ ಸಂಪರ್ಕಿಸಬಹುದೆಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹಾವೇರಿ: ನಗರದ ಡಾ.ಬಿ.ಆರ್.ಅಂಬೇಡ್ಕರ ಸಭಾಭವನದಲ್ಲಿ ಶುಕ್ರವಾರ ಜಿಲ್ಲಾಡಳಿತ, ಜಿಲ್ಲಾ ನಗರಾಭಿವೃದ್ಧಿ ಕೋಶ ಜಂಟಿಯಾಗಿ ಹಮ್ಮಿಕೊಂಡಿದ್ದ ಘನತ್ಯಾಜ್ಯ ವಸ್ತು ನಿರ್ವಹಣೆ ನಿಯಮಗಳು 2026-27ರ ಅಂಗವಾಗಿ ಜರುಗಿದ ಜಿಲ್ಲಾ ಮಟ್ಟದ ಒಂದು ದಿನದ ತರಬೇತಿ ಕಾರ್ಯಾಗಾರವನ್ನು ಜಿಲ್ಲಾಧಿಕಾರಿ ಹಾಗೂ ನಗರಸಭೆ ಆಡಳಿತಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಉದ್ಘಾಟಿಸಿ ಮಾತನಾಡಿದರು.

ಪ್ರತಿ ಜೀವಿಗೆ ಸಮತೋಲನ ಪರಿಸರ ಅಗತ್ಯ

ಹಾವೇರಿ: ಪ್ರತಿ ಜೀವಿಯ ಬದುಕಿಗೆ ಉತ್ತಮ ಸಮತೋಲನ ಪರಿಸರ ಅಗತ್ಯವಾಗಿದ್ದು, ಪರಿಸರ ಉಳಿಸಿ, ಬೆಳೆಸುವ ಕೆಲಸ ನಾವೆಲ್ಲರೂ ಮಾಡಬೇಕಿದೆ ಎಂದು ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಜಿಲ್ಲಾ ಗೌರವ ಕಾರ್ಯಾಧ್ಯಕ್ಷರಾದ ಸಂಜೀವಕುಮಾರ ನೀರಲಗಿ ಹೇಳಿದರು. ನಗರದ ರೆಡ್ ಕ್ರಾಸ್ ಸಂಸ್ಥೆ ಜಿಲ್ಲಾ ಘಟಕ ಹಾಗೂ ವಿಕಲಚೇತನರ ಪುನರ್ವಸತಿ ಕೇಂದ್ರದ ಸಹಯೋಗದೊಂದಿಗೆ ಜಿಲ್ಲಾಸ್ಪತ್ರೆ ಆವರಣದಲ್ಲಿ ಆಯೋಜಿಸಿದ ವಿಶ್ವ ಪರಿಸರ ದಿನಾಚರಣೆ ನಿಮಿತ್ತ ಸಸಿ ನೆಟ್ಟು ಮಾತನಾಡಿ, ಉತ್ತಮ ಆರೋಗ್ಯಯುತ ಬದುಕಿಗೆ ಪರಿಸರ ಬಹಳ ಮುಖ್ಯವಾಗಿದೆ. ಸಾರ್ವಜನಿಕರು ಸಾಧ್ಯವಾದಷ್ಟು ಗಿಡ ನೆಡುವ ಕಾರ್ಯ ಮಾಡಬೇಕಾಗಿದೆ. ಸರ್ಕಾರ ಅರಣ್ಯ ಇಲಾಖೆಯ ಜೊತೆಗೆ ಸಹಕಾರ ನೀಡೋಣ ಎಂದರು. ರೆಡ್ ಕ್ರಾಸ್ ಸಂಸ್ಥೆಯ ಪರಿಸರ ಜಾಗೃತಿ ಘಟಕದ ಚೇರಮನರಾದ ಸಿದ್ದರಾಜ ಕಲಕೋಟಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ರೆಡ್ ಕ್ರಾಸ್ ಸಂಸ್ಥೆಯ ರಾಜ್ಯ ಸಮಿತಿ ಸದಸ್ಯ ರವಿ ಮೆಣಸಿನಕಾಯಿ, ಜಿಲ್ಲಾ ಗೌರವ ಕಾರ್ಯದರ್ಶಿ ನಿಂಗಪ್ಪ ಆರೇರ, ಸಹಕಾರ್ಯದರ್ಶಿ ಡಾ.ಪ್ರದೀಪ ದೊಡ್ಡಗೌಡ್ರ, ಖಜಾಂಚಿ ಪ್ರಭು ಹಿಟ್ನಳ್ಳಿ, ಸದಸ್ಯರುಗಳಾದ ರವಿ ಹಿಂಚಿಗೇರಿ, ಹನುಮಂತಗೌಡ ಗೊಲ್ಲರ, ಉಡಚಪ್ಪ ಮಾಳಗಿ, ನಾಗಪ್ಪ ಈರಪ್ಪ ಇಚ್ಚಂಗಿ, ಶಿವಯೋಗಯ್ಯ ಹಿರೇಮಠ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಪಿ.ಆರ್ ಹಾವನೂರ, ವಿಜಯಕುಮಾರ ಚಿನ್ನಿಕಟ್ಟಿ, ಮಲ್ಲಿಕಾರ್ಜುನ ಕೊಟುರ, ಉಜ್ವಲ್ ಹಿರೇಗೌಡರ್, ಡಿ.ಡಿ.ಆರ್.ಸಿ ನೋಡಲ್ ಅಧಿಕಾರಿ ಪೂರ್ಣಿಮಾ ಮಠದ, ಫಿಜಿಯೋಥೆರಪಿಸ್ಟ್ ಡಾ.ಅಂಕಿತ ಅನಂದ ಇತರರು ಉಪಸ್ಥಿತರಿದ್ದರು.



ಹಾವೇರಿ: ನಗರದ ರೆಡ್ ಕ್ರಾಸ್ ಸಂಸ್ಥೆ ಜಿಲ್ಲಾ ಘಟಕ ಹಾಗೂ ವಿಕಲಚೇತನರ ಪುನರ್ವಸತಿ ಕೇಂದ್ರದ ಸಹಯೋಗದೊಂದಿಗೆ ಜಿಲ್ಲಾಸ್ಪತ್ರೆ ಆವರಣದಲ್ಲಿ ಆಯೋಜಿಸಿದ ವಿಶ್ವ ಪರಿಸರ ದಿನಾಚರಣೆ ನಿಮಿತ್ಯ ಸಸಿ ನೆಡಲಾಯಿತು.

ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಹೇಳಿಕೆ

ನಗರ ಸ್ವಚ್ಛತೆಗೆ ಎಲ್ಲರೂ ಶ್ರಮಿಸಿ

ಹಾವೇರಿ: ಕಸ ಸಂಗ್ರಹಣೆ, ಕಸ ವಿಲೇವಾರಿ, ಸಂಸ್ಕರಣೆಗೆ ಸಹಕಾರ ನೀಡುವ ಮೂಲಕ ಹಾವೇರಿ ನಗರದ ಸೌಂದರ್ಯ ಹೆಚ್ಚಿಸಲು ಪ್ರತಿಯೊಬ್ಬರು ಶ್ರಮಿಸಬೇಕು ಎಂದು ಜಿಲ್ಲಾಧಿಕಾರಿ ಹಾಗೂ ನಗರಸಭೆ ಆಡಳಿತಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ತಿಳಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ ಸಭಾ ಭವನದಲ್ಲಿ ಶುಕ್ರವಾರ ಜಿಲ್ಲಾಡಳಿತ, ಜಿಲ್ಲಾ ನಗರಾಭಿವೃದ್ಧಿ ಕೋಶ ಜಂಟಿಯಾಗಿ ಹಮ್ಮಿಕೊಂಡಿದ್ದ ಘನತ್ಯಾಜ್ಯ ವಸ್ತು ನಿರ್ವಹಣೆ ನಿಯಮಗಳು 2026-27ರ ಅಂಗವಾಗಿ ಜರುಗಿದ ಜಿಲ್ಲಾ ಮಟ್ಟದ ಒಂದು ದಿನದ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿ, ನಗರಸಭೆ ಪೌರ ಕಾರ್ಮಿಕರಾಗಲಿ, ಸ್ವಚ್ಛತಾ ಸಿಬ್ಬಂದಿಗಳಾಗಲಿ, ಕಮ್ಯೂನಿಟಿ ಮೊಬೈಲೈಸರ್‌ಗಳಾಗಲಿ, ಆರೋಗ್ಯ ನಿರೀಕ್ಷಕರಾಗಲಿ ಎಲ್ಲರೂ ತಮ್ಮ ತಮ್ಮ ಕೆಲಸವನ್ನು ಶ್ರದ್ಧೆ, ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಮಾಡಬೇಕು ಎಂದರು.

ಹಾವೇರಿ ನಗರದಲ್ಲಿ 31 ವಾರ್ಡ್‌ಗಳು ಇದ್ದು, ಸುಮಾರು 90 ಸಾವಿರ ಜನಸಂಖ್ಯೆ ಇದೆ. ನಗರದ ಜನತೆ ಹೆಚ್ಚು ನಿರೀಕ್ಷೆ ಮಾಡುತ್ತಾರೆ. ಸಾರ್ವಜನಿಕರಿಗೆ ಉತ್ತಮ ಸೇವೆ ನೀಡುವುದು, ನಗರವನ್ನು ಸುಂದರವಾಗಿ ಇಡುವುದು ನಗರಸಭೆಯ ಕೆಲಸವಾಗಿದೆ. ಚಿಕ್ಕ ಏರಿಯಾ ಇದ್ದು, ಆ ಏರಿಯಾ ನಮ್ ವ್ಯಾಪ್ತಿಗೆ ಬರುವುದಿಲ್ಲ, ನಾನ್ಯಾಕೆ ಸ್ವಚ್ಛತೆ ಮಾಡಲಿ ಎಂಬುವ ಮನಸ್ಥಿತಿ ಹಾಗೂ ಪರಸ್ಪರ ದೂರು ನೀಡುವುದನ್ನು ಬಿಡಬೇಕು. ಎಲ್ಲರೂ ಒಂದಾಗಿ ಕೆಲಸ ಮಾಡುವ ಮನಸ್ಥಿತಿ ಬೆಳೆಸಿಕೊಳ್ಳಬೇಕು. ಸರ್ಕಾರ ಹಾಗೂ ಜಿಲ್ಲಾಡಳಿತ ಪೌರ ಕಾರ್ಮಿಕರಿಗೆ, ಸ್ವಚ್ಛತಾಗಾರರಿಗೆ ಅನೇಕ ಸೌಲಭ್ಯಗಳನ್ನು ನೀಡುತ್ತದೆ. ಅವುಗಳನ್ನು ಸದ್ಬಳಕೆ ಮಾಡಿಕೊಂಡು ಪ್ರತಿಯೊಬ್ಬರು ಶ್ರದ್ಧೆ ಮತ್ತು ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸಬೇಕು. ಹಾವೇರಿ ನಗರವನ್ನು ಸುಂದರ ನಗರವಾಗಿಸಬೇಕು ಎಂದು ತಿಳಿಸಿದರು.



> ಎಲ್ಲೆಂದರಲ್ಲಿ ಕಸ ಎಸೆಯದಂತೆ, ಹಸಿ -ಒಣ ಕಸ ಬೇರ್ಪಡಿಸುವಂತೆ ಜನರಲ್ಲಿ ಇನ್ನೂ ಹೆಚ್ಚಿನ ಜಾಗೃತಿ ಮೂಡಿಸಬೇಕು. ಆದಾಗ್ಯೂ ತ್ಯಾಜ್ಯ ಎಸೆಯುವುದು ಕಂಡುಬಂದರೆ, ಅಂತಹವರಿಗೆ ತ್ಯಾಜ್ಯ ಕಸ ಎಸೆಯದಂತೆ ಮನವರಿಕೆ ಮಾಡಿ. ಅಷ್ಟಕ್ಕೂ ಕೇಳಲಿಲ್ಲ ಎಂದಾದರೆ ದಂಡ ವಿಧಿಸಿ, ವಸೂಲಿ ಮಾಡಿರಿ
>
> ■ ಡಾ.ವಿಜಮಹಾಂತೇಶ ದಾನಮ್ಮನವರ, ಡಿಸಿ, ಹಾವೇರಿ

15 ದಿನಗಳ ಗಡುವು: ಪೌರ ಕಾರ್ಮಿಕರು, ಮೇಲ್ವಿಚಾರಕರು ನಗರವನ್ನು ಸುತ್ತಾಡಬೇಕು. ಎಲ್ಲಿ, ಯಾವ ಏರಿಯಾದಲ್ಲಿ ಕಸ ತ್ಯಾಜ್ಯ ಸಂಗ್ರಹಗೊಂಡಿದೆ. ಚರಂಡಿ ಎಲ್ಲಿ ಬ್ಲಾಕ್ ಆಗಿದೆ, ಜನರಿಗೆ ಏನು ತೊಂದರೆ ಆಗುತ್ತಿದೆಎಂಬುದರಬಗ್ಗೆಸಂಪೂರ್ಣ ಮಾಹಿತಿಯನ್ನು ಗಮನಿಸಬೇಕು. ಇಲ್ಲಿ ಯಾವ ಸಿಬ್ಬಂದಿಯೂ ಕೂಡ ಆರಾಮಾಗಿ ಎಸಿ ರೂಂನಲ್ಲಿ ಕೂತು ಹೋಗಲು ಬಂದಿಲ್ಲ, ಎಲ್ಲರಿಗೂ 15 ದಿನಗಳ ಕಾಲಾವಕಾಶ ಕೊಡುತ್ತೇನೆ, ರಸ್ತೆ ಬದಿಯಲ್ಲಿ, ಏರಿಯಾಗಳಲ್ಲಿ ಕಸ ಸಂಗ್ರಹಗೊಂಡಿದ್ದರ ಬಗ್ಗೆ ದೂರು ಬರಬಾರದು. ಹಾಗೇನಾದರೂ ದೂರು ಬಂದರೆ ಸಂಬಂದಿಸಿದ ಪೌರ ಕಾರ್ಮಿಕರು, ಮೇಲ್ವಿಚಾರಕರು, ಸಿಬ್ಬಂದಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಈವೇಳೆಪೌರಾಯುಕ್ತ ಹೆಚ್.ಕಾಂತರಾಜು, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಸಿ.ಚಂದ್ರಪ್ಪ ಸೇರಿದಂತೆ ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳು, ಪರಿಸರ ಅಭಿಯಂತರರು, ಆರೋಗ್ಯ ನಿರೀಕ್ಷಕರು, ಕಮ್ಯೂನಿಟಿ ಮೊಬೈಲೈಸರ್‌ಗಳು, ಪೌರ ಕಾರ್ಮಿಕರು ಹಾಗೂ ಸ್ವಚ್ಛತಾ ಸಿಬ್ಬಂದಿ ಹಾಜರಿದ್ದರು.

ಮಕ್ಕಳನ್ನೇ ಜೋಡೆತ್ತು ಮಾಡಿಕೊಂಡಿದ್ದ ರೈತನಿಗೆ ನೆರವಾದ ಹಾವೇರಿ ಜಿಲ್ಲಾಡಳಿತ

ಹಾವೇರಿ: ಕೃಷಿಗೆ ಅಗತ್ಯವಾದ ಜಾನುವಾರುಗಳನ್ನು ಕೊಳ್ಳುವ ಶಕ್ತಿ ಇಲ್ಲದೇ, ಬಾಡಿಗೆ ಪಡೆಯಲೂ ಆರ್ಥಿಕ ವಾಗಿ ಹಿಂದುಳಿದಿದ್ದ ಕುಟುಂಬಕ್ಕೆ ಜಿಲ್ಲಾಡಳಿತ ನೆರವಿನ ಹಸ್ತ ಚಾಚಿದೆ.

ಮಕ್ಕಳನ್ನೇ ಜೋಡೆತ್ತು ಮಾಡಿಕೊಂಡು ಎಡೆಕುಂಟೆ ಹೊಡೆದಿದ್ದ ರಾಣಿಬೆನ್ನೂರು ತಾಲೂಕಿನ ವೆಂಕಟಾಪುರ ತಾಂಡಾದ ರೈತನ ಸಂಕಷ್ಟಕ್ಕೆ ಜಿಲ್ಲಾಡಳಿತ ಸ್ಪಂದಿಸಿ, ಸರ್ಕಾರದ ಸಬ್ಸಿಡಿ ಯೋಜನೆಯಡಿ ಬಡ ರೈತನಿಗೆ ಕಳೆ ತೆಗೆಯುವ ರೋಟರ್ ವೀಡರ್ ನೀಡುವ ಮೂಲಕ ನೆರವಿಗೆ ನಿಂತಿದೆ.

ವೆಂಕಟಾಪುರ ತಾಂಡಾದ ರೈತ ಶಂಕರಪ್ಪ ಲಮಾಣಿ ಎಂಬ ರೈತ ಎಲೆಕೋಸು ಬೆಳೆಯ ಮಧ್ಯೆ ಬೆಳೆದ ಕಳೆ ನಾಶಮಾಡಲು ಎತ್ತುಗಳ ಕೊರತೆಯಿಂದಾಗಿ ತನ್ನ ಇಬ್ಬರು ಮಕ್ಕಳನ್ನೇ ಜೋಡೆತ್ತುಗಳಾಗಿ ಮಾಡಿಕೊಂಡು ಎಡೆಕುಂಟೆ ಹೊಡೆದಿದ್ದ. ಈ ವಿಡಿಯೋ ವೈರಲ್ ಆಗಿತ್ತು. ಈ ಹಿನ್ನೆಲೆಯಲ್ಲಿ ಬುಧವಾರ ರೈತನನ್ನು ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಭೇಟಿ ಮಾಡಿ ನೆರವಿನ ಭರವಸೆ ನೀಡಿದ್ದರು.

ಕೃಷಿ ಇಲಾಖೆಯ ಕೃಷಿ ಯಾಂತ್ರೀಕರಣ ಯೋಜನೆ ಅಡಿಯಲ್ಲಿ 48 ಸಾವಿರ ರೂ. ಮೊತ್ತದ ಕಳೆ ಹೊಡೆಯುವ ರೋಟರ್ ವೀಡರ್ ಯಂತ್ರವನ್ನು ಶುಕ್ರವಾರ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಧಿಕಾರಿಗಳು ರೈತನಿಗೆ ಹಸ್ತಾಂತರಿಸಿದರು.

ಮಕ್ಕಳನ್ನು ಈ ರೀತಿ ಕೆಲಸಕ್ಕೆ ಬಳಸಿಕೊಳ್ಳುವುದನ್ನು ಯಾರೂ ಮಾಡಬಾರದು. ಮಕ್ಕಳ ಭವಿಷ್ಯವನ್ನು ನಾವೇ ಹಾಳು ಮಾಡಿದಂತಾಗುತ್ತದೆ. ನಿಮ್ಮ ಸಂಕಷ್ಟ ಅರಿತು ರೋಟರ್ ವೀಡರ್ ಯಂತ್ರವನ್ನು ನೀಡಲಾಗುತ್ತಿದೆ. ಇದನ್ನು ಉಪಯೋಗಿಸಿಕೊಂಡು ಕೃಷಿ ಕೆಲಸ ಮಾಡಿ. ಜತೆಗೆ, ಗ್ರಾಮದಲ್ಲಿ ಅಗತ್ಯ ಇರುವವರಿಗೆ ಬಾಡಿಗೆ ನೀಡುವುದರಿಂದ ಇಬ್ಬರಿಗೂ ಅನುಕೂಲವಾಗುತ್ತದೆ ಎಂದು ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಹೇಳಿದರು. ಜಂಟಿ ಕೃಷಿ ನಿರ್ದೇಶಕ ಮಲ್ಲಿಕಾರ್ಜುನ ಕೆ., ಇತರರು ಇದ್ದರು.



ಫಸಲ್ ಬಿಮಾ ಸದುಪಯೋಗ ಪಡೆದುಕೊಳ್ಳಿ: ಜಿಲ್ಲಾಧಿಕಾರಿ

ಹಾವೇರಿ: ರಾಜ್ಯದಲ್ಲಿ 2026-27ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯನ್ನು ಅನುಷ್ಠಾನಗೊಳಿಸಲು ಜಿಲ್ಲೆಯ ಎಂಟು ತಾಲೂಕುಗಳಲ್ಲಿ ನಾಲ್ಕು ಮುಖ್ಯ ಬೆಳೆಗಳನ್ನು ಗ್ರಾಪಂ ಮಟ್ಟಕ್ಕೆ ಹಾಗೂ ಉಳಿದ ಬೆಳೆಗಳನ್ನು ಹೋಬಳಿ ಮಟ್ಟದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ತಿಳಿಸಿದ್ದಾರೆ.

ಈ ಯೋಜನೆಗೆ ಒಳಪಡುವ ವಿವಿಧ ಬೆಳೆಗಳಿಗೆ ರೈತರು ಬ್ಯಾಂಕುಗಳಿಗೆ ಘೋಷಣೆಗಳನ್ನು ಸಲ್ಲಿಸಲು ಗ್ರಾಮ ಪಂಚಾಯತಿವಾರು ಹೋಬಳಿವಾರು ಅಂತಿಮ ದಿನಾಂಕ ನಿಗದಿಪಡಿಸಲಾಗಿದೆ.

ಮುಂಗಾರು ಹಂಗಾಮಿಗೆ ಶೇಂಗಾ, ಭತ್ತ(ಮಳೆ ಆಶ್ರಿತ), ಭತ್ತ (ನೀರಾವರಿ), ಮುಸುಕಿನ ಜೋಳ (ಮಳೆ ಆಶ್ರಿತ) ವಿಮಾ ಕಂತನ್ನು ಜು.31ರೊಳಗಾಗಿ, ಈರುಳ್ಳಿ (ನೀರಾವರಿ), ಈರುಳ್ಳಿ (ಮಳೆ ಆಶ್ರಿತ), ಎಲೆಕೋಸು, ಹೆಸರು (ಮಳೆ ಆಶ್ರಿತ), ಕೆಂಪು ಮೆಣಸಿನಕಾಯಿ (ಮಳೆ ಆಶ್ರಿತ) ಬೆಳೆಗಳಿಗೆ ಜು.15ರೊಳಗಾಗಿ ಹಾಗೂ ಹತ್ತಿ (ನೀರಾವರಿ), ಹತ್ತಿ (ಮಳೆ ಆಶ್ರಿತ), ಶೇಂಗಾ (ನೀರಾವರಿ), ಶೇಂಗಾ (ಮಳೆ ಆಶ್ರಿತ), ಮುಸುಕಿನ ಜೋಳ (ನೀರಾವರಿ), ಭತ್ತ (ನೀರಾವರಿ), ಭತ್ತ (ಮಳೆ ಆಶ್ರಿತ), ತೊಗರಿ (ಮಳೆ ಆಶ್ರಿತ '), ಸೋಯಾಅವರೆ (ಮಳೆ ಆಶ್ರಿತ) ಮತ್ತು ಟೊಮ್ಯಾಟೋ ಬೆಳೆಗಳಿಗೆ ಜು.31ರೊಳಗಾಗಿ ವಿಮೆ ಕಂತು ತುಂಬಬೇಕು.

ಬೆಳೆ ಸಾಲ ಪಡೆಯದ ರೈತರು ಅರ್ಜಿಯೊಂದಿಗೆ ಭೂಮಿ ಹೊಂದಿರುವುದಕ್ಕೆ ದಾಖಲೆಗಳಾದ ಪಹಣಿ/ ಕಂದಾಯ ರಶೀದಿ, ಖಾತೆ ಪುಸ್ತಕ, ಪಾಸ್ ಪುಸ್ತಕ ಹಾಗೂ ಆಧಾರ ಕಾರ್ಡ್ ಸಂಖ್ಯೆನೀಡಿ ಬ್ಯಾಂಕ್, ಸಾಮಾನ್ಯ ಸೇವಾ ಕೇಂದ್ರ, ಬೆಂಗಳೂರು ಒನ್, ಕರ್ನಾಟಕ ಒನ್ ಹಾಗೂ ಗ್ರಾಮ ಒನ್ ಕೇಂದ್ರಗಳಲ್ಲಿ ನೊಂದಾಯಿಸಬಹುದಾಗಿರುತ್ತದೆ ಹಾಗೂ ರೈತ ಬಾಂಧವರು ತಮ್ಮ ಅರ್ಜಿಯಲ್ಲಿ ಯಾವ ಬೆಳೆ, ಮಳೆ ಆಶ್ರಿತವೋ ಅಥವಾ ನಿರಾವರಿಯೋ ಎಂಬುದನ್ನು ಪರಿಶೀಲಿಸಿ ಖಚಿತಪಡಿಸಿಕೊಂಡು ನೊಂದಾಯಿಸಿಕೊಳ್ಳಲು ಕೋರಲಾಗಿದೆ. ಜಿಲ್ಲೆಯ ರೈತರು ಪ್ರಕೃತಿ ವಿಕೋಪದ ಸಂದರ್ಭದಲ್ಲಿ ಬೆಳೆ ಹಾನಿಯಿಂದ ಉಂಟಾಗುವ ಆರ್ಥಿಕ ನಷ್ಟವನ್ನು ಬೆಳೆ ವಿಮೆಯನ್ನು ಪಡೆಯವುದರ ಮೂಲಕ ಸ್ಥಿರ ಆದಾಯವನ್ನು ಪಡೆಯಬಹುದು. ಆದ್ದರಿಂದ ಜಿಲ್ಲೆಯ ರೈತರು ಈ ಯೋಜನೆಯ ಲಾಭ ಪಡೆಯಲು ಕೋರಿದೆ. ಹೆಚ್ಚಿನ ವಿವರಗಳಿಗಾಗಿ ಇಂಡಸ್ ಇಂಡ್ ಜನರಲ್ ಇನ್ಸೂರೆನ್ಸ್ ಕಂಪನಿಪ್ರತಿನಿಧಿಗಳು, ಸಂಸ್ಥೆಗೆ ಸಂಪರ್ಕಿಸುವ ಶುಲ್ಕರಹಿತ ಸಹಾಯವಾಣಿ 1800 1024088 ಅಥವಾ ಸಮೀಪದ ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಹತ್ತಿರದ ರೈತ ಸಂಪರ್ಕ ಕೇಂದ್ರ, ಹಾಗೂ ಬ್ಯಾಂಕ್ ಶಾಖೆಯವರನ್ನು ಸಂಪರ್ಕಿಸಬಹುದೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವೇಕಾನಂದರ ತತ್ವಾದರ್ಶ ಮೈಗೂಡಿಸಿಕೊಳ್ಳಿ: ಶ್ರೀಗಳು

ರಾಣೇಬೆನ್ನೂರ: ಜೀವನದಲ್ಲಿ ಉತ್ತಮ ಗುರಿ ಇಟ್ಟುಕೊಳ್ಳುವ ಸಂಕಲ್ಪ ಮಾಡಬೇಕು ನಾವು ನಮ್ಮ ಸಮಾಜದ ಮತ್ತು ದೇಶದ ಬಗ್ಗೆ ವಿಚಾರ ಮಾಡಬೇಕಾದರೆ ಒಳ್ಳೆಯ ಬುದ್ದಿ ಇರಬೇಕೆಂದರೆ ಎಲ್ಲಾ ವಿಚಾರಗಳನ್ನು ಮೌಲ್ಯಮಾಪನ ಮಾಡುವುದನ್ನು ಕಲಿಯಬೇಕು ಎಂದು ಸ್ಥಳೀಯ ವಿವೇಕಾನಂದ ಆಶ್ರಮದ ಪ್ರಕಾಶಾನಂದ ಮಹಾರಾಜ ಶ್ರೀಗಳು ಹೇಳಿದರು.

ನಗರದ ರಾಜರಾಜೇಶ್ವರಿ ಕಾಲೇಜಿನಲ್ಲಿ ನಡೆದ ಸಂಕಲ್ಪ ಎಂಬ ಕಾರ್ಯಕ್ರಮದ ಸಾನಿಧ್ಯ ವಹಿಸಿ ಅವರು ಮಾತನಾಡಿದರು. ವೀರಸನ್ಯಾಸಿಸ್ವಾಮಿವಿವೇಕಾನಂದರತತ್ವಗಳನ್ನ ಅನುಸರಿಸುತ್ತಾ ವಿದ್ಯಾರ್ಥಿನಿಯರು ದೇಶಪ್ರೇಮ ಹಾಗೂ ದೇಶ ಕಟ್ಟುವ ಕೆಲಸವನ್ನ ಯುವಕರು ಸಮರ್ಥವಾಗಿ ನಿಭಾಯಿಸುವುದು ಜವಾಬ್ದಾರಿಯಾಗಿದೆ. ಸ್ವಾಮಿ ವಿವೇಕಾನಂದರು ಹೇಳುವ ಹಾಗೆ ಎಲ್ಲರೂ ಒಳ್ಳೆಯವರೆ ಹೊರತು ಕೆಟ್ಟವರಲ್ಲ ಆದರೆ ಅವರವರ ಬುದ್ಧಿಯಿಂದ ಒಳ್ಳೆಯವರು ಅಥವಾ ಕೆಟ್ಟವರು ಎಂದು ಗುರಿತಿಸಿಕೊಳ್ಳುತ್ತಾರೆ. ನಾವು ಬೇರೆಯವರಿಂದ ಒಳ್ಳೆಯದನ್ನು ಬಯಸುವುದನ್ನು ಬಿಟ್ಟು ನಾವು ಒಳ್ಳೆಯದನ್ನು ಮಾಡುವುದನ್ನು ಕಲಿತಾಗ ಮಾತ್ರ ಮೌಲ್ಯಯುತ ಜೀವನ ರೂಪಗೊಳ್ಳುತ್ತದೆ ಎಂದರು.



ಪ್ರತಿಯೊಬ್ಬರು ಮಾಡುವ ಕೆಲಸದಲ್ಲಿ ಶ್ರದ್ಧೆ ಜಾವಾಬ್ದಾರಿತನ ಪ್ರಾಮಾಣಿಕತನ ಇರಬೇಕು ಇದಕ್ಕೆ ಇರುವ ಮೂಲ ಗುಣವೆಂದರೆ ದೊಡ್ಡಗುರಿ ಇಟ್ಟುಕೊಂಡರೆ ಮಾತ್ರ ಸಾಧ್ಯ ಎಂದರು.

ಕಾಲೇಜಿನ ಪ್ರಾಚಾರ್ಯ ಪ್ರೊ ನಾರಾಯಣ ನಾಯಕ ಎ, ಪ್ರೊ. ಕೃಷ್ಣ ಎಲ್ ಎಚ್, ಪ್ರೊ. ಅನುರಾಧ ಎಸ್, ಪ್ರೊ. ನಾಗರಾಜ ಗವಿಯಪ್ಪನವರ, ಪ್ರೊ.ಸೋಮಶೇಖರ ಹೊನ್ನಾಳಿ, ಪ್ರೊ. ಅನುಷಾ ಸೇರಿದಂತೆ ಸಿಬ್ಬಂದಿ, ವಿದ್ಯಾರ್ಥಿ ಒಕ್ಕೂಟ ದವರು ಇದ್ದರು. ಪೃಥ್ವಿ ಎ.ಬಿ ಕಾರ್ಯನಿರ್ವಹಿಸಿದರು.

ಫಸಲ್ ಬಿಮಾ ಯೋಜನೆ: ನೋಂದಣಿಗೆ ಜುಲೈ 31 ಕೊನೆ ದಿನ

ಬ್ಯಾಡಗಿ: ಪ್ರಸಕ್ತ ಮುಂಗಾರು ಹಂಗಾಮಿನ 2026-27ನೇ ಸಾಲಿನ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯನ್ನು ಬ್ಯಾಡಗಿ ತಾಲೂಕಿನಲ್ಲಿ ಗ್ರಾಪಂ ಹಾಗೂ ಹೋಬಳಿ ಮಟ್ಟದಲ್ಲಿ ಇಂಡಸ್ ಇಂಡ್ ಜನರಲ್ ಇನ್ಸೂರೆನ್ಸ್ ಕಂಪನಿ ಸಹಯೋಗದೊಂದಿಗೆ ಅನುಷ್ಠಾನಗೊಳಿ ಸಲಾಗುತ್ತಿದೆ ಎಂದು ಸಹಾಯಕ ಕೃಷಿ ನಿರ್ದೇಶಕ ಗಣೇಶ ಜೆ. ಕಮ್ಮಾರ್ ತಿಳಿಸಿದ್ದಾರೆ.



ತಾಲೂಕಿನ ಎಲ್ಲಾ ಗ್ರಾಪಂ ವ್ಯಾಪ್ತಿಯಲ್ಲಿ ಮುಸುಕಿನ ಜೋಳ (ಮಳೆ ಆಶ್ರಿತ) ಬೆಳೆಯನ್ನು ಅಧಿಸೂಚನೆ ಮಾಡಲಾಗಿದ್ದು, ಬ್ಯಾಡಗಿ ಹೋಬಳಿ ಮಟ್ಟದಲ್ಲಿ ಹತ್ತಿ (ಮಳೆ ಆಶ್ರಿತ), ಶೇಂಗಾ (ಮಳೆ ಆಶ್ರಿತ), ಮುಸುಕಿನ ಜೋಳ (ನೀರಾವರಿ) ಹಾಗೂ ಸೋಯಾ ಅವರೆ (ಮಳೆ ಆಶ್ರಿತ) ಬೆಳೆಗಳನ್ನು ಮತ್ತು ಕಾಗಿನೆಲೆ ಹೋಬಳಿ ಮಟ್ಟದಲ್ಲಿ ಭತ್ತ (ಮಳೆ ಆಶ್ರಿತ), ಭತ್ತ (ನೀರಾವರಿ), ಹತ್ತಿ (ಮಳೆ ಆಶ್ರಿತ) ಹಾಗೂ ಮುಸುಕಿನ ಜೋಳ (ನೀರಾವರಿ) ಬೆಳೆಗಳನ್ನು ಅಧಿಸೂಚನೆ ಮಾಡಲಾಗಿದೆ. ಈ ಎಲ್ಲಾ ಬೆಳೆಗಳಿಗೆ ವಿಮಾ ಕಂತು ಪಾವತಿಸಲು ಜುಲೈ 31 ಕೊನೆಯ ದಿನಾಂಕವಾಗಿರುತ್ತದೆ.

ಯೋಜನೆಯಲ್ಲಿ ಭಾಗವಹಿಸಲು ಇಚ್ಛಿಸದ ರೈತರು ಬೆಳೆ ನೋಂದಣಿಯ ಅಂತಿಮ ದಿನಾಂಕಕ್ಕಿಂತ ಏಳು ದಿನಗಳ ಮುಂಚಿತವಾಗಿ ಸಂಬಂಧಿಸಿದ ಬ್ಯಾಂಕ್ ವ್ಯವಸ್ಥಾಪಕರಿಗೆ ಲಿಖಿತ ಮುಚ್ಚಳಿಕೆ ಪತ್ರ ಸಲ್ಲಿಸಬೇಕು.

ಬೆಳೆ ಸಾಲ ಪಡೆಯದ ರೈತರು ಪಹಣಿ, ಫ್ರೂಟ್ಸ್ ಐಡಿ, ಕಂದಾಯ ರಶೀದಿ, ಖಾತೆ ಪುಸ್ತಕ, ಬ್ಯಾಂಕ್ ಪಾಸ್ ಪುಸ್ತಕ ಹಾಗೂ ಆಧಾರ್ ಕಾರ್ಡ್ ಸೇರಿದಂತೆ ಅಗತ್ಯ ದಾಖಲೆಗಳೊಂದಿಗೆ ಬ್ಯಾಂಕ್, ಸಾಮಾನ್ಯ ಸೇವಾ ಕೇಂದ್ರ (ATA), ಕರ್ನಾಟಕ ಒನ್ ಹಾಗೂ ಗ್ರಾಮ ಒನ್ ಕೇಂದ್ರಗಳಲ್ಲಿ ನೋಂದಾಯಿಸಿಕೊಳ್ಳಬಹುದು. ರೈತರು ಅರ್ಜಿಯಲ್ಲಿ ಬೆಳೆ ಮಳೆ ಆಶ್ರಿತವೋ ಅಥವಾ ನೀರಾವರಿಯೋ ಎಂಬುದನ್ನು ಖಚಿತಪಡಿಸಿಕೊಂಡು ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ರೈತ ಸಂಪರ್ಕ ಕೇಂದ್ರ, ಬ್ಯಾಂಕ್ ಶಾಖೆಗಳು, ಸಾಮಾನ್ಯ ಸೇವಾ ಕೇಂದ್ರ, ಕರ್ನಾಟಕ ಒನ್ ಹಾಗೂ ಗ್ರಾಮ ಒನ್ ಕೇಂದ್ರಗಳನ್ನು ಸಂಪರ್ಕಿಸಬಹುದು ಎಂದು ಗಣೇಶ ಜೆ. ಕಮ್ಮಾರ್ ತಿಳಿಸಿದ್ದಾರೆ.

ಹಾವೇರಿಯಲ್ಲಿ 250ಕ್ಕೂ ಅಧಿಕ ಶ್ವಾನಗಳಿಗೆ ಸಂತಾನಹರಣ ಶಸ್ತ್ರಚಿಕಿತ್ಸೆ

ಹಾವೇರಿ: ನಗರದಲ್ಲಿ ಹೆಚ್ಚುತ್ತಿರುವ ಬೀದಿ ನಾಯಿ ಹಾವಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಇಲ್ಲಿಯ ನಗರಸಭೆ ದಿಟ್ಟ ಹೆಜ್ಜೆ ಇರಿಸಿದ್ದು, ಕಳೆದ ನಾಲ್ಕು ತಿಂಗಳಿಂದ ನಡೆಸುತ್ತಿರುವ ಬೀದಿ ನಾಯಿಗಳ ಸಂತಾನಹರಣ ಶಸ್ತ್ರಚಿಕಿತ್ಸೆ ನಿರಂತರವಾಗಿ ಸಾಗಿದೆ. ನಾಲ್ಕು ತಿಂಗಳಲ್ಲಿ ಸುಮಾರು 250ಕ್ಕೂ ಅಧಿಕ ಬೀದಿ ನಾಯಿಗಳಿಗೆ ಶಸ್ತ್ರಚಿಕಿತ್ಸೆ ನಡೆಸಿ, ಆ ಶ್ವಾನಗಳನ್ನು ಹಿಡಿದ ಸ್ಥಳಕ್ಕೆ ಪುನಃ ಅವುಗಳನ್ನು ಬಿಡುವ ಮೂಲಕ ಅವುಗಳ ಆರೋಗ್ಯಕ್ಕೂ ಒತ್ತು ನೀಡಲಾಗುತ್ತಿದೆ.

ಬೀದಿ ನಾಯಿ ನಿಯಂತ್ರಣಕ್ಕೆ ನಗರಸಭೆ ಕ್ರಮ

ನಗರಸಭೆಯ ಪೌರಕಾರ್ಮಿಕರು ಪ್ರತಿದಿನ ಬೆಳಗಿನ ಜಾವ ವಿವಿಧ ವಾರ್ಡ್‌ಗಳು, ಪ್ರಮುಖ ರಸ್ತೆ, ಬಸ್ ನಿಲ್ದಾಣ, ಜನವಸತಿ ಪ್ರದೇಶಗಳಲ್ಲಿ ಬೀದಿ ನಾಯಿಗಳನ್ನು ಸುರಕ್ಷಿತವಾಗಿ ಹಿಡಿದು ಪುನರ್ವಸತಿ ಕೇಂದ್ರಕ್ಕೆ ಸಾಗಿಸುತ್ತಿದ್ದಾರೆ. ಅಲ್ಲಿ ಪಶುವೈದ್ಯರ ಮೇಲ್ವಿಚಾರಣೆಯಲ್ಲಿ ಸಂತಾನಹರಣ ಶಸ್ತ್ರಚಿಕಿತ್ಸೆ ನಡೆಸಿ, ಅಗತ್ಯ ಉಪಚಾರ ನೀಡಲಾಗುತ್ತಿದೆ.

ಸುಪ್ರೀಂ ಕೋರ್ಟ್ ನಿರ್ದೇಶನದ ಮೇರೆಗೆ ಇಲ್ಲಿಯ ಗುತ್ತಲ ರಸ್ತೆ ಎಪಿಎಂಸಿ ಆವರಣದಲ್ಲಿ ಬೀದಿನಾಯಿಗಳ ಸಂತಾನಹರಣ ಶಸ್ತ್ರಚಿಕಿತ್ಸೆಗೆಂದೇ ಪ್ರತ್ಯೇಕ ಪುನರ್ವಸತಿ ಕೇಂದ್ರ ತೆರೆಯಲಾಗಿದೆ. ಅಲ್ಲಿ ಸೆರೆಹಿಡಿದ ಬೀದಿ ನಾಯಿಗಳಿಗೆ ಸಂತಾನ ಹರಣ ಶಸ್ತ್ರಚಿಕಿತ್ಸೆ ಮಾಡಿ ಬಳಿಕ ಅವುಗಳನ್ನು ಕೆಲವು ದಿನಗಳ ಕಾಲ ಪುನರ್ವಸತಿ ಕೇಂದ್ರದಲ್ಲೇ ಆರೈಕೆ ಮಾಡಲಾಗುತ್ತಿದೆ. ಅವುಗಳ ಆರೋಗ್ಯ ಸ್ಥಿತಿ ಸುಧಾರಿಸಿದೆ ಎಂಬುದನ್ನು ಖಚಿತಪಡಿಸಿಕೊಂಡ ನಂತರ, ಅವುಗಳನ್ನು ಹಿಡಿದ ಸ್ಥಳದಲ್ಲೇ ಮತ್ತೆ ಬಿಡಲಾಗುತ್ತಿದೆ. ಪ್ರಾಣಿ ಕಲ್ಯಾಣ ಮಂಡಳಿಯ ಮಾರ್ಗಸೂಚಿಗಳಿಗೆ ಅನುಗುಣವಾಗಿ ಸಂಪೂರ್ಣ ಪ್ರಕ್ರಿಯೆ ಅನುಷ್ಠಾನಗೊಳ್ಳುತ್ತಿದೆ.



ನಗರಸಭೆಯ ಈ ನಿರಂತರ ಕಾರ್ಯಾಚರಣೆ ಬಳಿಕವೂ ನಗರದಲ್ಲಿ ಅಲ್ಲಲ್ಲಿ ಬೀದಿ ನಾಯಿಗಳ ಹಾವಳಿ ಸಾಕಷ್ಟಿದೆ ಎಂಬ ದೂರುಗಳಿವೆ. ಈ ಹಿಂದೆಲ್ಲ ವಿಶೇಷ ಕಾರ್ಯಾಚರಣೆ ನಡೆಸಲು ಪ್ರತ್ಯೇಕ ತಂಡಕ್ಕೆ ಗುತ್ತಿಗೆ ನೀಡಲಾಗುತ್ತಿತ್ತು. ಆ ತಂಡ ಸೆರೆ ಹಿಡಿದ ನಾಯಿಗಳನ್ನು ಬೇರೆಲ್ಲೋ ಸ್ಥಳಾಂತರ ಮಾಡುತ್ತಿತ್ತು. ಆದರೆ, ನ್ಯಾಯಾಲಯದ ಆದೇಶದ ಮೇರೆಗೆ ಬೀದಿನಾಯಿಗಳನ್ನು ಹಿಡಿದು ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮಾಡಿ ಮತ್ತೆ ಅದೇ ಜಾಗಕ್ಕೆ ಬಿಟ್ಟು ಬರಬೇಕಿದೆ. ಇರುವ ಪೌರಕಾರ್ಮಿಕರೇ ಈ ಕೆಲಸವನ್ನೂ ಮಾಡ ಬೇಕಿದೆ. ಚರಂಡಿ ಸ್ವಚ್ಛತೆ, ನಿತ್ಯ ಬೆಳಗ್ಗೆ ಮನೆಮನೆ ಕಸ ಸಂಗ್ರಹ, ತ್ಯಾಜ್ಯ ವಿಲೇವಾರಿ ಇತ್ಯಾದಿ ಕೆಲಸದ ಒತ್ತಡದ ನಡುವೆಯೂ ಪೌರಕಾರ್ಮಿಕರು ಬೀದಿನಾಯಿಗಳನ್ನು ಸೆರೆಹಿಡಿಯುವ ಕೆಲಸವನ್ನೂ ಮಾಡುತ್ತಿದ್ದಾರೆ.

> ಪ್ರಾಣಿ ಕಲ್ಯಾಣ ಮಂಡಳಿಯ ಮಾರ್ಗಸೂಚಿಯಂತೆ ಬೀದಿನಾಯಿಗಳನ್ನು ಹಿಡಿದು ಪುನರ್ವಸತಿ ಕೇಂದ್ರದಲ್ಲಿಟ್ಟು ಸಂತಾನ ಹರಣ ಶಸ್ತ್ರಚಿಕಿತ್ಸೆ ನಡೆಸಿ ಹಿಡಿದ ಜಾಗದಲ್ಲಿ ಬಿಟ್ಟು ಬರುವ ಕಾರ್ಯ ನಮ್ಮ ಪೌರಕಾರ್ಮಿಕರು ಯಶಸ್ವಿಯಾಗಿ ಮಾಡುತ್ತಿದ್ದಾರೆ. ಇದರಿಂದ ಬೀದಿ ನಾಯಿಗಳ ಹಾವಳಿ ಸ್ವಲ್ಪಮಟ್ಟಿಗೆ ನಿಯಂತ್ರಣಕ್ಕೆ ಬಂದಿದೆ. ಹಂತ ಹಂತವಾಗಿ ಕಾರ್ಯಾಚರಣೆ ಮುಂದುವರಿಸಿ ಇನ್ನಷ್ಟು ನಾಯಿಗಳಿಗೆ ಸಂತಾನಹರಣ ಶಸ್ತ್ರಚಿಕಿತ್ಸೆ ನಡೆಸಲು ನಗರಸಭೆ ಕ್ರಮ ಕೈಗೊಂಡಿದೆ.
>
> ■ ಕಾಂತರಾಜು ಎಚ್., ಪೌರಾಯುಕ್ತರು ಹಾವೇರಿ

ಪಾರದರ್ಶಕ ಚುನಾವಣೆಗೆ ಎಸ್‌ಐಆರ್ ಸೂಕ್ತ

ಹಾವೇರಿ: ಇಲ್ಲಿನ ಕಾಗಿನೆಲೆ ರಸ್ತೆಯ ಜಿಲ್ಲಾ ಬಿಜೆಪಿ ಕಾರ್ಯಾಲಯದಲ್ಲಿ ಹಾವೇರಿ ವಿಧಾನಸಭಾ ಕ್ಷೇತ್ರದ ಹಾವೇರಿ ನಗರ ಮಂಡಲದ ವತಿಯಿಂದ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್)ನ್ನು ಬಿಎಲ್‌ಎ -2ಗಳಿಗೆ ಹಮ್ಮಿಕೊಳ್ಳಲಾಯಿತು.

ಹಾವೇರಿ ವಿಧಾನಸಭಾ ಕ್ಷೇತ್ರದ ಉಸ್ತುವಾರಿ ಪಾಲಾಕ್ಷಗೌಡ ಪಾಟೀಲ ಮಾತನಾಡಿ, ಎಸ್‌ಐಆರ್ ಮಾಡುವುದರಿಂದ ಖೊಟ್ಟಿ ಮತಗಳನ್ನು ತಡೆಯಲು, ಮರಣ ಹೊಂದಿದವರ ಹಾಗೂ ಬೇರೆ ಕಡೆ ಹೋಗಿ ವಾಸಿಸುತ್ತಿರುವರನ್ನ ಮತದಾರ ಪಟ್ಟಿಯಿಂದ ತೆಗೆದು ಹಾಕುವ ಪ್ರಕ್ರಿಯೆಗೆ ಚಾಲನೆ ಸಿಗಲಿದೆ. ಮತದಾರರ ಪಟ್ಟಿ ಪರಿಷ್ಕರಣೆಯಿಂದ ನೈಜ ಮತದಾರರ ಪಟ್ಟಿ ಲಭಿಸಲಿದೆ ಹಾಗೂ ಪಾರದರ್ಶಕವಾದ ಚುನಾವಣೆಯನ್ನು ನಡೆಸುವದಕ್ಕೆ ಅನುಕೂಲವಾಗುತ್ತದೆ ಎಂದರು.



ಮಾಜಿ ಶಾಸಕ ಶಿವರಾಜ ಸಜ್ಜನರ ಮಾತನಾಡಿ, ಬಿಎಲ್‌ಒಗಳು ತಮ್ಮ ಕಾರ್ಯವನ್ನು ನಿಷ್ಠೆಯಿಂದ ನಿಭಾಯಿಸಿದಾಗನೂರಕ್ಕೆನೂರರಷ್ಟು ಮತದಾರರ ಪಟ್ಟಿಯ ಮ್ಯಾಪಿಂಗ್ ಸಾಧ್ಯವಾಗಲಿದೆ. ನಮ್ಮ ಪಕ್ಷದ ಬಿಎಲ್‌ಎ-2ಗಳು ಹಾಗೂ ಭೂತ್ ಅಧ್ಯಕ್ಷರು ಹಾಗೂ ಆಯಾ ಬೂತಿನ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರನ್ನ ಒಳಗೊಂಡು ಮ್ಯಾಪಿಂಗ್ ಮಾಡಿಸುವಲ್ಲಿ ಪಾಲ್ಗೊಳ್ಳಬೇಕು ಎಂದರು.

ಬಿಎಲ್‌ಒಗಳು ಮ್ಯಾಪಿಂಗ್ ಮಾಡಲು ಬಿಎಲ್‌ಎ-2ಗಳ ಜೊತೆ ಮುಖಂಡರು ಆಗಮಿಸುತ್ತಿಲ್ಲ ಎಂದೂ, ಹಾಗೂ ತಮ್ಮ ಇತರೆ ಸಮಸ್ಯೆಗಳ ಕುರಿತು ಉಸ್ತುವಾರಿಗಳ ಗಮನಕ್ಕೆ ತಂದರು. ಸಭೆಯ ಅಧ್ಯಕ್ಷತೆಯನ್ನು ನಗರ ಮಂಡಳದ ಅಧ್ಯಕ್ಷರಾದ ಕಿರಣ್ ಕೊಳ್ಳಿಯವರು ವಹಿಸಿದ್ದರು.

ಈ ಸಂದರ್ಭದಲ್ಲಿ ಗವಿಸಿದ್ದಪ್ಪ ದ್ಯಾಮಣ್ಣನವರ, ಪ್ರವೀಣ್ ಶೆಟ್ಟರ್, ಸಿದ್ದಣ್ಣ ಚಿಕ್ಕಬಿದರಿ, ನಾಗೇಂದ್ರ ಕಡಕೋಳ, ನಂಜುಂಡೇಶ ಕಳ್ಳೇರ, ಮುಖಂಡರಾದಈರಣ್ಣಹೇರೂರು, ಜಗದೀಶ ಬಸೆಗಣ್ಣಿ, ಜಿಲ್ಲಾ ಮಾಧ್ಯಮ ಸಂಚಾಲಕ ವಿಜಯ್ ಕುಮಾರ್ ಚಿನ್ನಿಕಟ್ಟಿನಗರಮಂಡಳದ ಎಲ್ಲಾ ಬಿಎಲ್‌ಎ-2 ಹಾಗೂ ಎಲ್ಲ ಭೂತ ಅಧ್ಯಕ್ಷರು, ಮಂಡಳದ ಪದಾಧಿಕಾರಿಗಳು ಹಾಗೂ

ಕಿರುಸುದ್ದಿ

ಕಾಲೇಜಿನಲ್ಲಿ ಕ್ರೀಡಾ ಚಟುವಟಿಕೆಗಳಿಗೆ ಚಾಲನೆ

ಚಿಕ್ಕೋಡಿ: ವಿದ್ಯಾರ್ಥಿಗಳು ಸದ್ವ್ಯಕ್ತಿತ್ವದೊಂದಿಗೆ ಸಂಶೋಧನಾತ್ಮಕ ಗುಣ ಹಾಗೂ ವೈಚಾರಿಕತೆಯನ್ನು ಬೆಳೆಸಲು ಶಾಲಾ ಕಾಲೇಜುಗಳಲ್ಲಿ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು ಅತ್ಯವಶ್ಯಕವಾಗಿದೆ'' ಎಂದು ಬೆಳಗಾವಿಯ ಬಸವರಾಜ ಕಟ್ಟಿಮನಿ ಪ್ರತಿಷ್ಠಾನದ ಅಧ್ಯಕ್ಷ, ಸಾಹಿತಿ ವೈ.ಬಿ. ಹಿಮ್ಮಡಿ ಹೇಳಿದರು.

ತಾಲೂಕಿನ ಅಂಕಲಿ ಗ್ರಾಮದ ಕೆಎಲ್ಇ ಸಂಸ್ಥೆಯ ಶಾರದಾದೇವಿ ಕೋರೆ ಪಿಯು ಕಾಲೇಜಿನಲ್ಲಿ ಗುರುವಾರ ಹಮ್ಮಿಕೊಂಡ 2026-27ನೇ ಸಾಲಿನ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ವಿಜ್ಞಾನ ತಂತ್ರಜ್ಞಾನ ಯುಗದಲ್ಲಿ ವಿದ್ಯಾರ್ಥಿಗಳು ಮಾನವೀಯತೆಯನ್ನು, ಸಹೃದಯತೆಯನ್ನು ಕಾಪಾಡಿಕೊಂಡು ಮುನ್ನಡೆಯಬೇಕು. ಬಸವಣ್ಣ, ಕವಿ ಹೋಮರ, ವಿವೇಕಾನಂದ, ಅಂಬೇಡ್ಕರ್ ಅವರ ತತ್ವ ಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಪ್ರಾಚಾರ್ಯ ಪಿ.ಎನ್. ತಳವಾರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಎಂ ಎಸ್ ಕಾನಡೆ, ಜಯಶ್ರೀ ತಮಗೊಂಡ, ಸುಧಾ ಎಂಟೆತ್ತಿನವರ, ಪಾರ್ಥಸಾರಥಿ ನಂದಾ, ಮಹಾದೇವ, ಎಸ್.ಸಿ. ಪಾಟೀಲ, ಸಂತೋಷ ಹಿರೇಮಠ ಇತರರು ಇದ್ದರು. ರೂಪಾ ಮಾನೆ ಸ್ವಾಗತಿಸಿ, ನಾಗರಾಜ ಅಮಟೆ ನಿರೂಪಿಸಿ, ವೈ ಬಿ ಮಾಳಕನೂರ ವಂದಿಸಿದರು.

ಚಿಕ್ಕೋಡಿಯ ಸ್ವಾತಿ ಜೋಶಿಗೆ ಪಿಎಚ್‌ಡಿ

ಚಿಕ್ಕೋಡಿ: ಪಟ್ಟಣದ ನಿವಾಸಿ ಸ್ವಾತಿ ಎಸ್ ಜೋಶಿಯವರಿಗೆ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದ ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ವಿಭಾಗದಿಂದ ಪಿಎಚ್‌ಡಿ ಪದವಿ ದೊರೆತಿದೆ. ವೆವ್ಲೆಟ್ ಥಿಯರಿ ಅಂಡ್ ಇಟ್ಸ್ ಅಪ್ಲಿಕೇಶನ್ಸ್ ಟು ಸಾಲ್ವ್ ಸಮ್ ಬೌಂಡರಿ ಲೇಯರ್ ಫ್ಲೂಯಿಡ್ ಫ್ಲೋ ಇಕ್ವೇಶನ್ಸ್ ಎಂಬ ಮಹಾಪ್ರಬಂಧಕ್ಕೆ ಪಿಎಚ್‌ಡಿ ಲಭಿಸಿದೆ. ಕರ್ನಾಟಕ ವಿಶ್ವವಿದ್ಯಾಲಯದ ಗಣಿತಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಹಾಗೂ ಮುಖ್ಯಸ್ಥ ಪ್ರೋ ಎಸ್ ಸಿ ಶಿರಾಳಶೆಟ್ಟಿ ಮಾರ್ಗದರ್ಶನ ಮಾಡಿದ್ದರು.



ಇಂದು ಮನವಿ ಸಲ್ಲಿಕೆ

ಸವದತ್ತಿ: ಸಾರ್ವಜನಿಕ ವಲಯದ ಸರ್ಕಾರದ ಸೌಮ್ಯತ್ವದಲ್ಲಿರುವ ವಿದ್ಯುತ್ ವಿತರಣಾ ಕಂಪನಿಗಳನ್ನು ಖಾಸಗೀಕರಣಗೊಳಿಸುವುದನ್ನು ವಿರೋಧಿಸಿ ಜೂ.20ರಂದು ಬೆಳಿಗ್ಗೆ 10 ಗಂಟೆಗೆ ಹೆಸ್ಕಾಂ ನೌಕರರು ಇಲಾಖೆಯ ಎಲ್ಲ ನೌಕರರು ಸೇರಿ ಧಾರವಾಡ ರಸ್ತೆ ಪಕ್ಕದಲ್ಲಿರುವ ಹೆಸ್ಕಾಂ ಇಲಾಖೆಯಿಂದ ಮೆರವಣಿಗೆ ಮುಖಾಂತರ ತಹಶೀಲ್ದಾರ್ ಕಾರ್ಯಾಲಯಕ್ಕೆ ತೆರಳಿ ತಹಶೀಲ್ದಾರರಿಗೆ ಮನವಿ ಸಲ್ಲಿಸಲಿದ್ದಾರೆ.

ಅಪಘಾತ: ಬಸ್ ಚಾಲಕ ರಾಜು ಸಾವು

ಸಂಕೇಶ್ವರ: ನಿಡಸೋಸಿ ಗ್ರಾಮದ ಕೆಎಸ್ಆರ್‌ಟಿಸಿ ಬಸ್ ಚಾಲಕ ರಾಜು ಭೋಜಿ ಜೊಯಿಡಾ ಬಳಿ ನಡೆದ ಬಸ್ ಅಪಘಾತದಲ್ಲಿ ಮೃತಪಟ್ಟಿದ್ದು, ಮೃತನ ಅಂತ್ಯಕ್ರಿಯೆಯಲ್ಲಿ ಕಣ್ಣೀರ ಕೋಡಿಯೇ ಹರಿಯಿತು.




ಉಳವಿ- ಇಟಲಕರಂಜಿ ಮಾರ್ಗದ ಬಸ್ ಚಲಾವಣೆ ಮಾಡಿಕೊಂಡು ಉಳವಿಯಿಂದ ಬರುತ್ತಿದ್ದ ಬಸ್‌ಗೆ ಸಾರಿಗೆ ಸಂಸ್ಥೆ ಮತ್ತೊಂದು ಬಸ್ ಜೋಯಿಡಾ ತಾಲೂಕಿನ ಬಾಪೇಲಿ ಕ್ರಾಸ್ ಬಳಿ ಮುಖಾಮುಖಿ ಡಿಕ್ಕಿ ಹೊಡೆದಿತ್ತು. ಮೊಬೈಲ್ ನೆಟವರ್ಕ್ ಇಲ್ಲದ ಕಾರಣ ಆಸ್ಪತ್ರೆಗೆ ಸೇರಿಸಲು ತುಸು ತಡವಾಗಿ ಜೊಯಿಡಾ ಸರಕಾರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಹೆಚ್ಚಿನ ಚಿಕಿತ್ಸೆಗಾಗಿ ಬೆಳಗಾವಿ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಶುಕ್ರವಾರ ಬೆಳಿಗ್ಗೆ ಚಿಕಿತ್ಸೆ ಫಲಕಾರಿಯಾಗದೇ ರಾಜು ಬಸಪ್ಪಾ ಭೋಜಿ ಇಂದು ಶುಕ್ರವಾರ ಮುಂಜಾನೆ ಮೃತಪಟ್ಟಿದ್ದಾರೆ. ಮೃತ ಚಾಲಕ ಪತ್ನಿ, ಓರ್ವ ಪುತ್ರ, ಪುತ್ರಿ, ತಾಯಿ ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾನೆ. ನಿಧನಕ್ಕೆ ಸಾರಿಗೆ ಸಂಸ್ಥೆ ಸಿಬ್ಬಂದಿ, ಮಾಜಿ ಸಂಸದ ರಮೇಶ ಕತ್ತಿ, ಶಾಸಕ ನಿಖಿಲ್ ಕತ್ತಿ ಸಂತಾಪ ಸೂಚಿಸಿದ್ದಾರೆ.

ನಿಧನ ಸುದ್ದಿ

ತುಕಾರಾಂ ಶೇಂಡುರೆ

ಚಿಕ್ಕೋಡಿ: ತಾಲೂಕಿನ ಕರೋಶಿ ಗ್ರಾಮದ ತುಕಾರಾಂ ಶಂಕರ್ ಶೇಂಡುರೆ (78) ನಿಧನರಾಗಿದ್ದಾರೆ. ಮೃತರು ಪತ್ನಿ, ಮಗ, ಸೊಸೆಯಂದಿರು ಹಾಗೂ ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.





ಚಿಕ್ಕೋಡಿ: ತಾಲೂಕಿನ ಅಂಕಲಿ ಗ್ರಾಮದ ಕೆಎಲ್ಇ ಸಂಸ್ಥೆಯ ಶಾರದಾದೇವಿ ಕೋರೆ ಪಿಯು ಕಾಲೇಜಿನಲ್ಲಿ ಗುರುವಾರ ಹಮ್ಮಿಕೊಂಡ 2026-27ನೇ ಸಾಲಿನ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳಿಗೆ ಬೆಳಗಾವಿಯ ಬಸವರಾಜ ಕಟ್ಟಿಮನಿ ಪ್ರತಿಷ್ಠಾನದ ಅಧ್ಯಕ್ಷ, ಸಾಹಿತಿ ವೈ.ಬಿ. ಹಿಮ್ಮಡಿ ಅವರು ಉದ್ಘಾಟಿದರು.

ಚಿಕ್ಕೋಡಿಯಲ್ಲಿ ರಸ್ತೆ ತಡೆದು ಪ್ರತಿಭಟನೆ

ಚಿಕ್ಕೋಡಿ: ಕೇಂದ್ರ ಹಾಗೂ ರಾಜ್ಯ ಸರ್ಕಾರ ತರಲು ಉದ್ದೇಶಿಸಿರುವ ವಿದ್ಯುತ್ ಖಾಸಗೀಕರಣವನ್ನು ಕೂಡಲೇ ಕೈಬಿಡಬೇಕು. ಸರ್ಕಾರ ವಿದ್ಯುತ್ ಖಾಸಗೀಕರಣವನ್ನು ಜಾರಿಗೆ ತಂದಿದ್ದೇ ಆದಲ್ಲಿ, ಮುಂದಿನ ದಿನಗಳಲ್ಲಿ ಗುಲ್ಬರ್ಗಾಪೂರ ಮಾದರಿಯಲ್ಲಿ ಉಗ್ರವಾದ ಹೋರಾಟ ಮಾಡಲಾಗುವುದು ಎಂದು ಕರ್ನಾಟಕ ರಾಜ್ಯ ರೈತ ಸಂಘದ ಉಪಾಧ್ಯಕ್ಷ ಸತ್ಯಪ್ಪ ಮಲ್ಲಾಪುರೆ ಹೇಳಿದರು.

ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಕರ್ನಾಟಕ ರಾಜ್ಯ ರೈತ ಸಂಘಟನೆ ವತಿಯಿಂದ ಶುಕ್ರವಾರ ಹಮ್ಮಿಕೊಂಡಿದ್ದ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ವಿದ್ಯುತ್ ಕಂಪನಿಯಲ್ಲಿ ಕೆಲಸ ಮಾಡುವ ನೌಕರರ ಹಕ್ಕುಗಳ ರಕ್ಷಣೆಗೆ ತೊಂದರೆಯಾಗುತ್ತದೆ. ಸರ್ಕಾರ ಖಾಸಗೀಕರಣ ನೀತಿಯನ್ನು ಕೈಬಿಡಬೇಕೆಂದು ಒತ್ತಾಯಿಸಿದರು.

ಚಿಕ್ಕೋಡಿ ತಾಲ್ಲೂಕು ಅಧ್ಯಕ್ಷ ಮನೋಜ ಮನಗೂಳಿ ಮಾತನಾಡಿದರು. ಚಿಕ್ಕೋಡಿ ಉಪ ವಿಭಾಗಾಧಿಕಾರಿ ಸುಭಾಷ ಸಂಪಗಾವಿ ಅವರಿಗೆ ಈ ಕುರಿತು ರೈತ ಸಂಘಟನೆಯಿಂದ ಮನವಿ ನೀಡಲಾಯಿತು. ಈ ಸಂದರ್ಭದಲ್ಲಿ ರೈತ ಮುಖಂಡರಾದ ಮಲ್ಲಪ್ಪ ಅಂಗಡಿ, ಆನಂದ ಪಾಶ್ಚಾಪೂರೆ, ರವೀಂದ್ರ ಕುಂಭೋಜೆ, ಮಾಳಪ್ಪ ತಮದಂಡಿ, ಸಲ್ಲಪ್ಪ ಬಸಗೌಡನ್ನವರ, ಕೃಷ್ಣಾಕಮಲಾನಟ್ಟಿ, ಸಿದ್ದರಾಮ ದಿವೋಜಿ, ಸಚಿನ ಕುಲಕರ್ಣಿ, ನಾಗೇಶ ಮಾಳಿ, ಸುರೇಶ ಬ್ಯಾಕೂಡ, ಭರಮಣ್ಣ ಜುಲಪೆ, ಬಾಳೇಶ ಚನ್ನವರ, ಗಜಾನನ ಪೂಜಾರಿ, ಏಕನಾಥ ನಾಯಿಕ, ಸದಾಶಿವ ಚಮ್ಮಟ ಇತರರು ಇದ್ದರು.



ಚಿಕ್ಕೋಡಿ: ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಕರ್ನಾಟಕ ರಾಜ್ಯ ರೈತ ಸಂಘಟನೆ ವತಿಯಿಂದ ಶುಕ್ರವಾರ ವಿದ್ಯುತ್ ಖಾಸಗೀಕರಣ ವಿರೋಧಿಸಿ ಪ್ರತಿಭಟನೆ ಮಾಡಲಾಯಿತು.

ಜಿಲ್ಲಾ ಸಲಹಾ ಸಮಿತಿ,ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿ ಸಭೆ

ಕೃಷಿ, ಕೈಗಾರಿಕೆಗಳಿಗೆ ಸಾಲ ನೀಡಿ

ಬೆಳಗಾವಿ: ಕೃಷಿ, ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳು, ಶಿಕ್ಷಣ, ವಸತಿ, ಮತ್ತು ಸ್ವಯಂ ಉದ್ಯೋಗಗಳಿಗೆ ಹೆಚ್ಚಿನ ಸಾಲ ಒದಗಿಸಬೇಕು. ಸರ್ಕಾರದ ವಿವಿಧ ಜನಕಲ್ಯಾಣ ಹಾಗೂ ಸಬ್ಸಿಡಿ ಆಧಾರಿತ ಸಾಲ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ಸಮರ್ಪಕವಾಗಿ ತಲುಪಿಸಬೇಕು ಎಂದು ಬೆಳಗಾವಿ ಲೋಕಸಭಾ ಸಂಸದ ಜಗದೀಶ್ ಶೆಟ್ಟರ್ ಅವರು ತಿಳಿಸಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾ ಸಲಹಾ ಸಮಿತಿ,ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿ ಸಭೆ (ಡಿಸಿಸಿ ಡಿಎಲ್ಆರ್‌ಸಿ) ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸರ್ಕಾರದ ವಿವಿಧ ಇಲಾಖೆಗಳ ಜನಪರ ಯೋಜನೆಗಳನ್ನು ಪರಿಣಾಮಕಾರಿ ಅನುಷ್ಠಾನಗೊಳಿಸುವಲ್ಲಿ ಬ್ಯಾಂಕ್‌ಗಳು ನಿರೀಕ್ಷಿತ ಮಟ್ಟದಲ್ಲಿ ಗುರಿ ತಲುಪುವಲ್ಲಿ ವಿಫಲವಾಗಿವೆ. ಸರ್ಕಾರದ ವತಿಯಿಂದ ವಿವಿಧ ಯೋಜನೆಗಳಡಿ ಬಿಡುಗಡೆಯಾಗುವಂತಹ ಸಹಾಯಧನ ಸೌಲಭ್ಯ ಹಾಗೂ ಸಾಲ ಸೌಲಭ್ಯಗಳು ಫಲಾನುಭವಿಗಳಿಗೆ ಕಾಲಮಿತಿಯೊಳಗೆ ವಿತರಣೆಯಾಗಬೇಕು. ಈ ಕಾರ್ಯದಲ್ಲಿ ಗುರಿ ಸಾಧಿಸದೆ ಇರುವಂತಹ ಬ್ಯಾಂಕ್ ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಜರುಗಿಸಲಾಗುವುದು ಎಂದು ಸೂಚನೆ ನೀಡಿದರು. ವಿವಿಧ ಸರ್ಕಾರಿ ಇಲಾಖೆಗಳಿಂದ ಬ್ಯಾಂಕುಗಳಿಗೆ ಸಬ್ಸಿಡಿಗಾಗಿ ಬಂದಿರುವ ಫಲಾನುಭವಿಗಳ ಸಾಲದ ಅರ್ಜಿಗಳನ್ನು ಅನಗತ್ಯವಾಗಿ ಬಾಕಿ ಇಟ್ಟುಕೊಳ್ಳದೆ ತಕ್ಷಣ ವಿಲೇವಾರಿ ಮಾಡಬೇಕು. ಸ್ವಯಂ ಉದ್ಯೋಗ ಮಾಡುವಂತಹ ಜನರಿಗೆ ಬ್ಯಾಂಕುಗಳಿಂದ ಸಾಲಸೌಭ್ಯಗಳು ತ್ವರಿತವಾಗಿ ದೊರೆಯಬೇಕು. ಬ್ಯಾಂಕುಗಳಿಂದ ಸಿ.ಎಸ್.ಆರ್. ಅನುದಾನದಡಿ ಕೈಗೊಳ್ಳಲಾಗುವ ಚಟುವಟಿಕೆಗಳಲ್ಲಿ ಸರಕಾರಿ ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳುವುದರ ಜೊತೆಗೆ ಕಳೆದ ಸಾಲಿನಲ್ಲಿ ಸಿಎಸ್ ಆರ್ ಅನುದಾನದಡಿ ಕೈಗೊಳ್ಳಲಾದ ಚಟುವಟಿಕೆಗಳ ವರದಿ ನೀಡುವಂತೆ ಸೂಚಿಸಿದರು. ಮೂಡಲಗಿ ತಾಲೂಕು ಯಾದವಾಡದಲ್ಲಿ ಎಸ್‌ಬಿಐ ಶಾಖೆ ತೆರೆಯುವಂತೆ ಗ್ರಾಮಸ್ಥರು ಮನವಿ ಮಾಡಿದ್ದು, ಈ ಕುರಿತು ಪರಿಶೀಲಿಸಿ ಅವಶ್ಯವಿದ್ದಲ್ಲಿ ಶಾಖೆ ಪ್ರಾರಂಭಿಸಬೇಕು ಅದೇ ರೀತಿ ಕುಲಗೋಡ, ಶಿಂಧೋಳ್ಳಿ ಗ್ರಾಮಗಳಲ್ಲಿ ಮತ್ತೊಂದು ರಾಷ್ಟ್ರೀಕೃತ ಬ್ಯಾಂಕ್ ಶಾಖೆ ಪ್ರಾರಂಭಿಸಲು ಕ್ರಮ ವಹಿಸಬೇಕು ಎಂದು ಸಂಸದರಾದ ಜಗದೀಶ ಶೆಟ್ಟರ ಅವರು ತಿಳಿಸಿದರು.



▸▸ 2026-27ನೇ ಸಾಲಿನ ಜಿಲ್ಲಾ ಸಾಲ ಯೋಜನೆಯ ಯೋಜನಾ ವೆಚ್ಚವಾಗಿ 37,035 ಕೋಟಿ ರೂ. ಗುರಿ ನೀಡಲಾಗಿದೆ. ಇದರಲ್ಲಿ ಆದ್ಯತಾ ವಲಯಕ್ಕೆ 22,123 ಕೋಟಿ ರೂ., ಕೃಷಿಗೆ 14,806 ಕೋಟಿ ರೂ. ನಿಗದಿಪಡಿಸಲಾಗಿದೆ. ಲಭ್ಯವಿರುವ ಸಂಪನ್ಮೂಲಗಳ ಅತ್ಯುತ್ತಮ ಬಳಕೆಯನ್ನು ಗುರಿಯಾಗಿಟ್ಟುಕೊಂಡು ಈ ಯೋಜನೆಯು ಆದ್ಯತಾ ವಲಯದಲ್ಲಿ 11.08% ಮತ್ತು ಕೃಷಿಯಲ್ಲಿ 10.99% ರಷ್ಟು ಬೆಳವಣಿಗೆಯನ್ನು ನಿರೀಕ್ಷಿಸಲಾಗಿದೆ.

ಅಧಿಕ ಠೇವಣಿ ಪರಿಶೀಲಿಸಿ

ಬ್ಯಾಂಕ್ ಗಳು ಸಾಲ ಒದಗಿಸಲು ಸಾಕಷ್ಟು ದಾಖಲೆ ಮತ್ತು ವಿಚಾರಣೆ ನಡೆಸುತ್ತಾರೆ ಆದರೆ ಹೆಚ್ಚು ಠೇವಣಿಗಾಗಿ ಬರುವವರಿಗೆ ಬ್ಯಾಂಕ್ ಗಳು ಯಾವುದೇ ಪೂರ್ವಾಪರ ತಿಳಿದುಕೊಳ್ಳದೆ ಠೇವಣಿ ಇರಿಸಿಕೊಳ್ಳುತ್ತಾರೆ. ಇದರಿಂದ ಅಧಿಕ ಬಡ್ಡಿ ಠೇವಣಿ ಹಗರಣಗಳು ಸಂಭವಿಸುವ ಸಾಧ್ಯತೆಯಿದೆ. ಇಂತಹ ಖಾತೆಗಳನ್ನು ಪರಿಶೀಲಿಸಿ ವ್ಯವಹಾರಗಳ ಕುರಿತು ಸಮಗ್ರ ಮಾಹಿತಿ ಪಡೆದುಕೊಳ್ಳಬೇಕು ಎಂದು ರಾಹುಲ್ ಶಿಂಧೆ ಸೂಚಿಸಿದರು.

ಜಿಪಂ ಸಿಇಒ ರಾಹುಲ್ ಶಿಂಧೆ ಅವರು ಮಾತನಾಡಿ, ಜಿಲ್ಲೆಯ ಜನ ಸಂಖ್ಯೆಗನುಗುಣವಾಗಿ ವಿವಿಧ ಗ್ರಾಮಗಳಲ್ಲಿ ಬ್ಯಾಂಕ್ ಶಾಖೆ ತೆರೆಯುವ ಸಂಬಂಧ ತಂಡಗಳನ್ನು ನಿಯೋಜಿಸುವುದರ ಮೂಲಕ ಪರಿಶೀಲಿಸಲು ತಿಳಿಸಿದರು. ಸಿಎಸ್‌ಆರ್ ಅನುದಾನದಡಿ ವಿವಿಧ ಶಾಲೆ, ಅಂಗನವಾಡಿ, ವಸತಿ ನಿಲಯಗಳಲ್ಲಿ ಕೈಗೊಳ್ಳಲಾಗುವ ಚಟುವಟಿಕೆಗಳಿಗಾಗಿ ಪೂರ್ವಾನುಮತಿ ಪಡೆಯಬೇಕು ಎಂದು ತಿಳಿಸಿದರು.

ಸಂಸ್ಕಾರದಿಂದ ಶಿಕ್ಷಣದ ಮೌಲ್ಯ ವೃದ್ಧಿ

ಮೂಡಲಗಿ: ಮನುಷ್ಯ ಬೆಳೆದಂತೆಲ್ಲ ಮಾನವೀಯತೆಯನ್ನು ಮರೆಯುತ್ತಿದ್ದಾನೆ. ಕೇವಲ ಹಣ, ಕೀರ್ತಿ, ಯಶಸ್ಸು ಮಾತ್ರ ಮನುಷ್ಯನ ವ್ಯಕ್ತಿತ್ವವನ್ನು ವೃದ್ಧಿಸುವುದಿಲ್ಲ, ನಮ್ಮ ಮಕ್ಕಳ ವಿದ್ವತ್ತಿನಲ್ಲಿ ವಿನಯವಂತಿಕೆ ಬೆರೆತಾಗ ಮಾತ್ರ ಅವರ ಸಾಧನೆಗೆ ನೈಜ ಅರ್ಥ ಬರುತ್ತದೆ ಎಂದು ವಿಧಾನ ಪರಿಷತ್ ಸದಸ್ಯ ಹಣಮಂತ ನಿರಾಣಿ ಹೇಳಿದರು.

ತಾಲೂಕಿನ ನಾಗನೂರ ಪಟ್ಟಣದ ಅಥರ್ವ ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯದಲ್ಲಿ ನಡೆದ ಅಥರ್ವ ತೇಜಸ್ವಿಭವಃ ಎಂಬ ಒಂದು ದಿನದ ಸ್ಫೂರ್ತಿದಾಯಕ ಮಾರ್ಗದರ್ಶನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಮಕ್ಕಳಿಗೆ ವಿದ್ಯಾರ್ಥಿ ದೆಸೆಯಲ್ಲಿಯೇ ಶಿಸ್ತು, ಶ್ರದ್ಧೆ, ಸಾತ್ವಿಕತೆ, ಹಿರಿಯರನ್ನು ಗೌರವಿಸುವ ಸಂಸ್ಕಾರಗಳನ್ನು ಕಲಿಸುವ ಜವಾಬ್ದಾರಿ ಶಿಕ್ಷಕರು ಮತ್ತು ಪಾಲಕರದ್ದಾಗಿದೆ. ನೈತಿಕತೆಯ ಪಾಠಗಳನ್ನು ಮಕ್ಕಳು ಪಠ್ಯದ ಹೊರತಾಗಿಯೂ ನಿತ್ಯ ಜೀವನದಲ್ಲಿ ಒಬ್ಬರನ್ನೊಬ್ಬರು ನೋಡಿ ಕಲಿಯಲು ಸಾಧ್ಯವಿದೆ. ಶಿಕ್ಷಣದಲ್ಲಿ ರಾಷ್ಟ್ರೀಯತೆಯು ವ್ಯಕ್ತಿತ್ವ ವಿಕಸನಕ್ಕೆ ಮತ್ತು ವ್ಯಕ್ತಿಯ ರಾಷ್ಟ್ರ ಸಮರ್ಪಣೆಗೆ ಬಲ ತುಂಬುತ್ತದೆ. ಸಾಮಾಜಿಕ ಜಾಲತಾಣಗಳಲ್ಲಿ ನಾವು ಓದುತ್ತಿರುವ ತಂದೆ-ತಾಯಿಯರ ವೃದ್ಧಾಪ್ಯದ ದುರಂತ ಕಥೆಗಳು ಸುಸಂಸ್ಕೃತ ಸಮಾಜವನ್ನು ತಲೆತಗ್ಗಿಸುವಂತೆ ಮಾಡುತ್ತಿವೆ ಎಂದು ಹೇಳಿದರು.

ಬೆಂಗಳೂರಿನ ಸೀಕ್ ಫೌಂಡೇಶನ್ ಅಧ್ಯಕ್ಷ ಕೆ. ರಘೋತ್ತಮರಾವ್ ಅವರು ಉಪನ್ಯಾಸ ನೀಡಿದರು. ನಿಡಸೋಸಿ ಶ್ರೀ ದುರದುಂಡೇಶ್ವರ ಸಿದ್ಧ ಸಂಸ್ಥಾನ ಮಠದ ನಿಜಲಿಂಗೇಶ್ವರ ಶ್ರೀ ಸಾನ್ನಿಧ್ಯ ವಹಿಸಿದ್ದರು.

ಅಧ್ಯಕ್ಷತೆಯನ್ನು ಮಹಾಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಬಸನಗೌಡ ಪಾಟೀಲ ವಹಿಸಿದ್ದರು. ಸಂತೋಷ ಸೋನವಾಲ್ಕರ, ಗಜಾನನ ಯರಗಣವಿ, ಸಂಸ್ಥೆಯ ಅಧ್ಯಕ್ಷರಾದ ವೆಂಕಟೇಶ ಜಂಬಗಿ ನಿರ್ದೇಶಕರಾದ ಆಶೀರ್ವಾದ ಹುಲಕುಂದ, ಶಿವಬೋಧ ಯರಝರ್ವಿ ಉಪಸ್ಥಿತರಿದ್ದರು. ಡಾ. ಸಂತೋಷ ಮಿರ್ಜಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಚೇತನ ಜೋಗನ್ನವರ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ರಾಚಯ್ಯ ನಿರ್ವಾಣಿ ಸ್ವಾಗತಿಸಿದರು. ಪ್ರಾಚಾರ್ಯ ಗಿರೀಶ ಗೋರಬಾಳ ವಂದಿಸಿದರು. ಬಸವರಾಜ ಗುರ್ಕಿ ಹಾಗೂ ಅನ್ನಪೂರ್ಣಾ ಪಾಶ್ಚಾಪೂರ ನಿರೂಪಿಸಿದರು.





ಬೆಳಗಾವಿ : ತಾಲೂಕಿನ ತುರಮುರಿ ಗ್ರಾಮ ವ್ಯಾಪ್ತಿಯಲ್ಲಿರುವ ಮಹಾನಗರ ಪಾಲಿಕೆಯ ತ್ಯಾಜ್ಯ ವಿಲೇವಾರಿ ಘಟಕದಿಂದ ಗ್ರಾಮಸ್ಥರು ತೀವ್ರ ಸಂಕಷ್ಟ ಎದುರಿಸುತ್ತಿದ್ದೇವೆ. ಇದರಿಂದ ಶಾಶ್ವತ ಪರಿಹಾರ ಒದಗಿಸಿಕೊಡಲು ಈ ಘಟಕವನ್ನು ಇಲ್ಲಿಂದ ತೆರವುಗೊಳಿಸಿ ಬೇರೆ ಕಡೆ ಸ್ಥಳಾಂತರ ಮಾಡಬೇಕು ಎಂದು ಆಗ್ರಹಿಸಿ ತುರಮರಿ ಗ್ರಾಮಸ್ಥರು ಶುಕ್ರವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟಿಸಿದರು. ನಾಗರಾಜ ಜಾಧವ, ಬಿ.ಕೆ.ಅಷ್ಟೇಕರ, ಗೋಪಾಲ, ಸುಹಾಸ ಜಾಧವ, ಡಿ.ಎಂ.ಬೆಳಗಾಂವಕರ, ತುರಮರಿ, ಉಚಗಾಂವ, ಕೊಣೆವಾಡಿ, ಬಾಚಿ, ಬಸುರ್ತೆ, ಕಲ್ಲೆಹೋಳ, ಸುಳಗಾ, ಗೋಜಗಾ, ಮನ್ನೂರ, ಹಿಂಡಗಲಾ ಗ್ರಾಮಸ್ಥರು ಸೇರಿದಂತೆ ಹಲವರು ಇದ್ದರು.

ಧನಸಹಾಯಕ್ಕಾಗಿ ಪಟ್ಟಣ ಪಂಚಾಯತಿಯಲ್ಲಿ ಅರ್ಜಿ ಆಹ್ವಾನ

ಬೆಳಗಾವಿ: ಮಚ್ಚೆ ಪಟ್ಟಣ ಪಂಚಾಯತಿಯಲ್ಲಿ 2026-27 ನೇ ಎಸ್ಎಫ್‌ಸಿ ಅನುದಾನದಲ್ಲಿ ವಿವಿಧ ಕಾರ್ಯಕ್ರಮದಡಿ ಕಾಯ್ದಿರಿಸಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಾರ್ಯಕ್ರಮದಡಿ ಧನಸಹಾಯ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ. ಶೇ.24.10% (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ವಿಶೇಷ ಆರ್ಥಿಕ ನೆರವಿಗಾಗಿ ಮತ್ತು ಪ ಜಾ.ಪ ಪಂ ಕುಟುಂಬಗಳ ಮುಖ್ಯಸ್ಥರು, ದುಡಿಯುವ ವ್ಯಕ್ತಿಗಳಿಗೆ ಜೀವ ವಿಮೆ, ಆರೋಗ್ಯ ವಿಮೆ ಮಾಡಿಸುವುದು. ಇತರ ಬಡಜನರ ಕಲ್ಯಾಣ ಕಾರ್ಯಕ್ರಮದಡಿ ಶೇ7.25% (ಇತರೆ ಬಡವರ್ಗದವರಿಗೆ ಉನ್ನತ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿಶೇಷ ಆರ್ಥಿಕ ಸಹಾಯ ನೀಡುವುದು. ವಿಶಿಷ್ಟಚೇತನರ ಕಲ್ಯಾಣ ಕಾರ್ಯಕ್ರಮದಡಿಯಲ್ಲಿ ಶೇ5% (ವಿಕಲ ಚೇತನ ಅವಲಂಬಿತ ಕುಟುಂಬಗಳಿಗೆ ಪ್ರೋತ್ಸಾಹಧನ ನೀಡುವುದು) ಜುಲೈ 18 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿರುತ್ತದ್ದೆ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ಸಮಯದಲ್ಲಿ ವಿಷಯ ನಿರ್ವಾಹಕರಿಗೆ ಅಥವಾ ಪಟ್ಟಣ ಪಂಚಾಯತಿಯ ವೆಬ್‌ಸೈಟ್ www.machchetp.mrc.gov.in ನೋಡಬಹುದು ಎಂದು ಮುಖ್ಯಾಧಿಕಾರಿ ಪಟ್ಟಣ ಪಂಚಾಯತಿ ಮಚ್ಚೆ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಾಂತಿಯುತವಾಗಿ ಹಬ್ಬ ಆಚರಿಸಿ

ರಾಮದುರ್ಗ: ಶಾಂತಿ, ಸೌಹಾರ್ದತೆಯಿಂದ ಆಚರಿಸಬೇಕಿರುವ ಮೊಹರಂ ಆಚರಣೆ ಸಂದರ್ಭದಲ್ಲಿ ಕಿಡಿಗೇಡಿಗಳು ಉದ್ಧಟತನ ಪ್ರದರ್ಶಿಸಿ ಗದ್ದಲದ ವಾತಾವರಣ ನಿರ್ಮಿಸಿದರೆ ಇಲಾಖೆ ಅಂಥವರ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳ ಬೇಕಾಗುತ್ತದೆ ಎಂದು ರಾಮದುರ್ಗದ ಡಿವೈಎಸ್‌ಪಿ ಚಿದಂಬರ ಮಡಿವಾಳರ ಎಚ್ಚರಿಕೆ ನೀಡಿದರು.

ರಾಮದುರ್ಗ ಠಾಣೆಯಲ್ಲಿ ಮೊಹರಂ ಆಚರಣೆಯ ತಾಲೂಕು ಮಟ್ಟದ ಶಾಂತಿ ಸಭೆಯಲ್ಲಿ ಮಾತನಾಡಿದ ಅವರು, ರಾಮದುರ್ಗ ತಾಲೂಕು ಶಾಂತಿ ಸೌಹಾರ್ದತೆಗೆ ಹೆಸರುವಾಸಿಯಾಗಿದೆ. ಯಾವಾಗಲೂ ಇಲ್ಲಿ ಗಲಭೆ ನಡೆದಿಲ್ಲ, ನೂರರಲ್ಲಿ ಒಬ್ಬಿಬ್ಬರು ಕಿಡಿಗೇಡಿತನ ಪ್ರದರ್ಶಿಸುತ್ತಾರೆ. ಅಂಥವರ ಬಗ್ಗೆ ಜಾಗೃತಿ ವಹಿಸಬೇಕು ಎಂದು ಹೇಳಿದರು.

ರಾಮದುರ್ಗದ ಯಾನಾಂಪೇಟೆಯ ಮಡ್ಡಿಗಲ್ಲಿಯಲ್ಲಿನ ಖುದ್ದವ್ವನ ದರ್ಗಾದಲ್ಲಿ ಮೊಹರಂ ಶತಮಾನೋತ್ಸವ ಸಮಾರಂಭ ವಿಜೃಂಭಣೆಯಿಂದ ಜರುಗಲಿದೆ. ಇದರ ಅಂಗವಾಗಿ ಸೋಮವಾರ ಮಧ್ಯಾಹ್ನ ಅನ್ನ ಸಂತರ್ಪಣೆ ಸಂಜೆ ಹೆಜ್ಜೆಮೇಳ, ಮಂಗಳವಾರ ಸಂಜೆ ಕೊತಬಾಳ ತಂಡದಿಂದ ಜಾನಪದ ಕಲಾ ವೈಭವ, ಬುಧವಾರ ರಸ ಮಂಜರಿ, ಗುರುವಾರ ಕತ್ತಲ ರಾತ್ರಿ, ಶುಕ್ರವಾರ ಪಂಜಾಗಳ ಮೆರವಣಿಗೆ ನಡೆಯಲಿದೆ ಎಂದು ಸಂಘಟಕರು ಸಭೆಗೆ ತಿಳಿಸಿದರು.

ತಾಲೂಕಿನಲ್ಲಿ ಒಟ್ಟು 134 ಕಡೆಗಳಲ್ಲಿ ಪಂಜಾಗಳ ಸ್ಥಾಪನೆ ನಡೆಯಲಿದೆ. 18 ತಾಬೂತ್‌ಗಳನ್ನು ನಿರ್ಮಿಸಲಾಗುವುದು. ಅಲ್ಲೆಲ್ಲ ಕಡೆಗಳಲ್ಲಿ ಪೊಲೀಸ್ ನಿಯೋಜನೆ ಸಾಧ್ಯವಿಲ್ಲ, ಸಾರ್ವಜನಿಕರೆ ಜವಾಬ್ದಾರಿ ಹೊತ್ತು ಶಾಂತಿ ಕಾಪಾಡ ಬೇಕು ಎಂದು ಪಿಎಸ್‌ಐ ಸವಿತಾ ಮುನ್ಯಾಳ ಮನವಿ ಮಾಡಿದರು. ರಾಮದುರ್ಗ ಪಟ್ಟಣ ಅಲ್ಲದೇ ತಾಲೂಕಿನ ಎಲ್ಲ ಗ್ರಾಮಗಳ ಮೊಹರಂ ಆಚರಣೆಯ ಹಿಂದೂ ಮುಸ್ಲಿಂ ಕಮೀಟಿ ಸದಸ್ಯರು ಸಭೆಗೆ ಆಗಮಿಸಿ ಸಲಹೆ ಸೂಚನೆಗಳನ್ನು ನೀಡಿದರು.



ಸಮತೋಲಿತ ಗೊಬ್ಬರ ಬಳಸಿ: ವಾರದ

ಯರಗಟ್ಟಿ: ಕೃಷಿ ಇಲಾಖೆ ಸವದತ್ತಿ ಮತ್ತು ಕೆವಿಕೆ ಮತ್ತಿಕೊಪ್ಪ ಸಂಯೋಗದಲ್ಲಿ ಆತ್ಮ ಯೋಜನೆಯಡಿ ರೈತರಿಗೆ ಖೇತ ಬಚಾವೋ ಅಭಿಯಾನ ತರಬೇತಿ ಕಾರ್ಯಕ್ರಮವನ್ನು ತಾಲೂಕಿನ ಸತ್ತಿಗೇರಿ ಗ್ರಾಮದ ವಿಠ್ಠಲ ಮಂದಿರದಲ್ಲಿ ಹಾಗೂ ರೈನಾಪೂರ ಗ್ರಾಮದ ಹೇಮರಡ್ಡಿ ಮಲ್ಲಮ್ಮ ದೇವಸ್ಥಾನದಲ್ಲಿ ಆಯೋಜಿಸಲಾಗಿತ್ತು.

ಅತಿಥಿ ಉಪನ್ಯಾಸಕರಾಗಿ ಆಗಮಿಸಿದ ಕೆವಿಕೆ ಮತ್ತಿಕೊಪ್ಪದ ಮಣ್ಣು ವಿಜ್ಞಾನ ವಿಭಾಗದ ವಿಜ್ಞಾನಿ ಎಮ್. ಎಸ್. ವಾರದ ಮಾತನಾಡಿ, ಈ ಅಭಿಯಾನದ ಮುಖ್ಯ ಉದ್ದೇಶವೆಂದರೆ ಮಣ್ಣನ್ನು ರಕ್ಷಣೆ ಮಾಡುವುದು, ರೈತರು ಅತಿಯಾದ ರಾಸಾಯನಿಕ ಬಳಕೆಯಿಂದ ಭೂಮಿ ಹಾಳಾಗುತ್ತಿದೆ ಆದಷ್ಟು ಸಮತೋಲಿತ ರಸಗೊಬ್ಬರ ಅಥವಾ ಮಣ್ಣು ಆರೋಗ್ಯ ಚೀಟಿ ಆಧಾರಿತ ರಸಗೊಬ್ಬರ ಬಳಕೆ ಮಾಡಿ ಕೃಷಿ ಮಾಡಿದರೆ ಮಣ್ಣು ಸುರಕ್ಷಣೆ ಮಾಡಬಹುದು ಎಂದು ತಿಳಿಸಿದರು.

ನಂತರ ಸಹಾಯಕ ಕೃಷಿ ನಿರ್ದೇಶಕ ಶಿವಪ್ರಕಾಶ ಪಾಟೀಲ ಇಲಾಖೆಯ ಯೋಜನೆಗಳ ಕುರಿತು ಮತ್ತು ಸಾವಯವ ಕೃಷಿಯ ಮಹತ್ವದ ಕುರಿತು ರೈತರಿಗೆ ಮಾಹಿತಿ ನೀಡಿದರು. ಈ ವೇಳೆ ಕೃಷಿ ಅಧಿಕಾರಿಗಳಾದ ಎಸ್. ಎಲ್. ದೇಸಾಯಿ, ಎಂ. ಜಿ. ಕಳಸಪ್ಪನವರ, ರೈನಾಪೂರ ಪಿಕೆಪಿಎಸ್ ಅಧ್ಯಕ್ಷ ವಿಠ್ಠಲ ಬಂಟನೂರ, ಮಾಜಿ ಎಪಿಎಂಸಿ ಅಧ್ಯಕ್ಷ ಚಂದ್ರಶೇಖರ ಅಳಗೋಡಿ, ವೀರನಗೌಡ ಸರನಾಡಗೌಡರ, ವಿಠ್ಠಲ ಭಾಂಗಿ, ಸಿದ್ದು ಬೆಕ್ಕನ್ನವರ, ಸುರೇಶ ತೋಟದ, ಸೋಮು ರೈನಾಪೂರ, ಕೃಷಿ ಇಲಾಖೆ ಸಿಬ್ಬಂದಿಯಾದ ಉಮೇಶ ಯರಗಟ್ಟಿ ಶ್ರವಣ ಶಿವಪೂಜಿ, ಮಂಜು ಮುಂಡೇಶಿ ಸೇರಿದಂತೆ ಪ್ರಗತಿಪರ ರೈತರು ಇದ್ದರು.

ಜೂ.21ರಂದು ವಿಶ್ವ ಯೋಗ ದಿನ

ಗೋಕಾಕ: ಇಲ್ಲಿಯ ಪತಂಜಲಿ ಯೋಗ ಸಮಿತಿಯಿಂದ ಜೂ.21ರಂದು ಬೆಳಿಗ್ಗೆ 6ಗಂಟೆಗೆ ನಗರದ ಮಯೂರ ಶಾಲೆಯ ಆವರಣದಲ್ಲಿ ವಿಶ್ವ ಯೋಗ ದಿನಾಚರಣೆಯನ್ನು ಆಯೋಜನೆ ಮಾಡಲಾಗಿದೆ.

ಈ ಸಮಾರಂಭದಲ್ಲಿ ಮುರುಘರಾಜೇಂದ್ರ ಮಹಾಸ್ವಾಮಿಗಳು ಸಾನಿಧ್ಯ ವಹಿಸಲಿದ್ದು, ಉದ್ಘಾಟನೆಯನ್ನು ಶಾಸಕ ರಮೇಶ ಜಾರಕಿಹೊಳಿ ನೆರವೇರಿಸುವರು. ಮುಖ್ಯ ಅತಿಥಿಗಳಾಗಿ ಹಿರಿಯ ದಿವಾಣಿ ನ್ಯಾಯಾಧೀಶ ಉಮೇಶ ಆತನೂರೆ, ತಹಶೀಲದಾರ ಡಾ.ಮೋಹನ ಭಸ್ಮೆ, ಬಿಇಓ ಜಿ ಬಿ ಬಳಗಾರ ಸೇರಿದಂತೆ ಅನೇಕರು ಪಾಲ್ಗೊಳ್ಳಲಿದ್ದು ಯೋಗ ಪಟುಗಳು ಹಾಗೂ ಯೋಗ ಪ್ರೀಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ತಾಲೂಕ ಪ್ರಭಾರಿ ನಿಜಲಿಂಗ ದಡ್ಡಿಮನಿ ಹಾಗೂ ಸಹಪ್ರಭಾರಿ ಯಲ್ಲಪ್ಪ ಕುರಬಗಟ್ಟಿ, ಪರಮೇಶ ಗುಲ್ಲ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಅಧಿಕಾರ ಸ್ವೀಕರಿಸದ ಶಿಕ್ಷಕಿ ವಿರುದ್ಧ ಆಕ್ರೋಶ: ಬೀಗ ಜಡಿದು ಪ್ರತಿಭಟನೆ

ಕುಡಚಿ: ಸಮೀಪದ ನಿಲಜಿ ಗ್ರಾಮದ ಪಿಎಂಶ್ರೀ ಪಬ್ಲಿಕ್ ಶಾಲೆಗೆ ಫೆಬ್ರುವರಿ 5ರಂದು ಮುಖ್ಯೋಪಾಧ್ಯಾಯರಾಗಿ ಪದನ್ನೋತಿ ಪಡೆದು ಹಾಜರಾದ ಶಿಕ್ಷಕಿ ಪಿ.ಮಾಲಾ ಅವರು ಜೂನ್ ಕಳೆಯುತ್ತ ಬಂದಿದ್ದರೂ ಅಧಿಕಾರ ಸ್ವೀಕರಿಸಿಲ್ಲ, ಕೂಡಲೇ ಬೇರೆಡೆ ವರ್ಗಾವಣೆ ಮಾಡಿ ಎಂದು ಶಾಲಾ ಸುಧಾರಣಾ ಸಮಿತಿ ಸದಸ್ಯರು ಪ್ರತಿಭಟನೆ ಮಾಡಿದರು.

ಸುಮಾರು ನಾಲ್ಕು ತಿಂಗಳು ಕಳೆದರೂ ಅಧಿಕಾರ ಸ್ವೀಕರಿಸದ ಹಿನ್ನಲೆಯಲ್ಲಿ ಶಾಲೆಯ ಆಡಳಿತದಲ್ಲಿ ಪಾಲಕರಲ್ಲಿ ಗೊಂದಲ ಉಂಟಾಗಿದೆ. 700ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿರುವ ಶಾಲೆಯನ್ನು ಸಮರ್ಪಕವಾಗಿ ನಿಭಾಯಿಸುವುದು ಕಷ್ಟಕರವಾಗಿದೆ. ಮಕ್ಕಳಿಗೆ ಸರಿಯಾಗಿ ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತಿಲ್ಲ, ದಾಖಲೆಗಳ ಕುರಿತು ಸ್ಪಂದಿಸುತ್ತಿಲ್ಲ, ಎಲ್ಲರೊಂದಿಗೂ ದುರ್ವರ್ತನೆ ತೋರುತ್ತಿದ್ದಾರೆ ಎಂದು ಆರೋಪಿಸಿದರು.



ಈ ಹಿಂದಿನ ಮುಖ್ಯೋಪಾಧ್ಯಾಯರಾದ ವಿದ್ಯಾವತಿ ಮುಸಳೆ ಕಡತಗಳೊಂದಿಗೆ ಅಧಿಕಾರ ಹಸ್ತಾಂತರಿಸಲು ಐದಾರು ಬಾರಿ ವಿನಂತಿಸಿದರು ಜಗ್ಗದ ಇವರನ್ನು ಕೂಡಲೆ ಬೇರೆಡೆಗೆ ವರ್ಗಾಯಿಸುವಂತೆ ಒತ್ತಾಯಿಸಿದರು. ಈ ಕುರಿತು ಸಂಬಂಧಪಟ್ಟ ಬಿಇಓ, ಡಿಡಿಪಿಐ ತಕ್ಷಣ ಕ್ರಮ ಕೈಗೊಳ್ಳಬೇಕು ಹಾಗೂ ಶಾಲೆಯ ನಿರ್ವಹಣೆಗೆ ಸೂಕ್ತ ವ್ಯವಸ್ಥೆ ಕಲ್ಪಿಸಬೇಕು ಎಂದು ಸಮಿತಿಯವರು ಹಲವು ಬಾರಿ ದೂರು ನೀಡಿದರ ಪ್ರಯುಕ್ತ ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಬಸವರಾಜ ಕಾಂಬಳೆ ನೇತೃತ್ವದಲ್ಲಿ ಅಧಿಕಾರಿಗಳು ಪರಿಶೀಲನೆಗೆ ಬಂದಾಗಲೂ ಅಧಿಕಾರ ಸ್ವೀಕರಿಸಲು ಒಪ್ಪದ ಶಿಕ್ಷಕಿ ವಿಮಲಾ ಬೇಜವಾಬ್ದಾರಿ ತೋರಿದ್ದು ಪಾಲಕರು, ಸಮಿತಿಯವರ ಆಕ್ರೋಶಕ್ಕೆ ಕಾರಣವಾಗಿದೆ.

ಈ ಸಂದರ್ಭದಲ್ಲಿ ತಾಲೂಕಾ ದೈಹಿಕ ಪರಿವೀಕ್ಷಕರಾದ ಎಂ.ಬಿ.ಜೀರಗ್ಯಾಳ, ಸಿಆರಸಿ ಪಿ.ಎಸ.ಕಾಂಬಳೆ, ಸದಾಶಿವ ಶಿಂಗೆ, ಶಾಲಾ ಸುಧಾರಣಾ ಸಮಿತಿ ಉಪಾಧ್ಯಕ್ಷ ಭೀಮಗೌಡ ಪಾಟೀಲ, ಸದಸ್ಯರಾದ ಸುಧಾಕರ ನಿಂಬಾಳಕರ, ಮುರಾರಿ ಭಿರಡಿ, ಯಮನಪ್ಪಾ ಕಾಂಬಳೆ, ಸುರೇಶ ಮಾನಕಾಪುರೆ, ಮಮ್ಮುಲಾಲ ನದಾಫ , ಶ್ರೀಕಾಂತ ಕಲ್ಲೋಳಿ, ಪ್ರಮುಖರಾದ ಪ್ರದೀಪ್ ಪಾಟೀಲ, ಮಾಯಗೊಂಡ ಪಾಟೀಲ, ಸಂತೋಷ ಮೋರೆ, ಅಪ್ಪಣ್ಣಾ ಕಲ್ಲೋಳಿ ಇತರರು ಉಪಸ್ಥಿತರಿದ್ದರು.

ಮನವೊಲಿಸಿದ ಅಧಿಕಾರಿಗಳು

ತುರ್ತು ಕ್ರಮ ಕೈಗೊಳ್ಳುವಂತೆ ಪಟ್ಟು ಹಿಡಿದ ಶಾಲಾ ಸುಧಾರಣಾ ಸಮಿತಿ ಅಧ್ಯಕ್ಷ ಅಜೀತ ಹಸರೆ ಹಾಗೂ ಸದಸ್ಯರು ಪಾಲಕರು ಅಧಿಕಾರಿಗಳ ಎದುರೆ ಮುಖ್ಯೋಪಾಧ್ಯಾಯರ ಕೊಠಡಿಗೆ ಬೀಗ ಹಾಕಿ ಕೆಲ ಕಾಲ ಪ್ರತಿಭಟನೆ ನಡೆಸಿದರು. ನಂತರ ಅಧಿಕಾರಿಗಳು ಶಾಲಾ ಸುಧಾರಣಾ ಸಮಿತಿಯವರನ್ನು ಮನವೊಲಿಸಿ ದೂರನ್ನು ಸ್ವೀಕರಿಸಿ ವರದಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಹಾಗೂ ಉಪ ನಿರ್ದೇಶಕರಿಗೆ ಕ್ರಮಕ್ಕೆ ಸಲ್ಲಿಸುವುದಾಗಿ ಭರವಸೆ ನೀಡಿದರು.

ಶಿಕ್ಷಕ ಹುದ್ದೆ ಅತ್ಯಂತ ಶ್ರೇಷ್ಠವಾದದ್ದು: ದೇಶಪಾಂಡೆ

ಅಥಣಿ: ದೇಶದ ಎಲ್ಲ ಉನ್ನತ ಹುದ್ದೆಗಳಲ್ಲಿ ಶಿಕ್ಷಕ ಹುದ್ದೆ ಅತ್ಯಂತ ಶ್ರೇಷ್ಠವಾದದ್ದು, ಮಕ್ಕಳಿಗೆ ಮೌಲ್ಯಯುತ ಶಿಕ್ಷಣ ಮತ್ತು ಸಂಸ್ಕಾರವನ್ನು ನೀಡುವ ಶಿಕ್ಷಕ ಮತ್ತು ಶಿಕ್ಷಕಿಯರು ಸಮಾಜದಲ್ಲಿ ಗುರುವಿನ ಸ್ಥಾನ ಪಡೆದುಕೊಳ್ಳುತ್ತಾರೆ. ಭಾರತೀಯ ಸಂಸ್ಕೃತಿಯಲ್ಲಿ ಗುರು ಪರಂಪರೆ ಮತ್ತು ಗುರುವಿನ ಸ್ಥಾನಕ್ಕೆ ಅತ್ಯಂತ ಶ್ರೇಷ್ಠವಾದ ಗೌರವವಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಾಂತ ಕಾರ್ಯಕಾರಿಣಿ ಸದಸ್ಯ ಅರವಿಂದರಾವ ದೇಶಪಾಂಡೆ ಹೇಳಿದರು.

ಅವರು ಇಲ್ಲಿನ ರಾಘವೇಂದ್ರಸ್ವಾಮಿ ಕಲ್ಯಾಣ ಮಂಟಪದಲ್ಲಿ ನಿವೃತ್ತ ಶಿಕ್ಷಕಿ ಸರೋಜನಿ ಗೋಠೆ ಅಭಿನಂದನೆ ಹಾಗೂ ಗುರುವಂದನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಅಥಣಿಯ ಇತಿಹಾಸದಲ್ಲಿ ಶತಮಾನೋತ್ಸವ ಆಚರಿಸಿಕೊಂಡ ಜಾಧವಜಿ ಶಿಕ್ಷಣ ಸಂಸ್ಥೆಯ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಳೆದ 39 ವರ್ಷಗಳಿಂದ ಸುದೀರ್ಘ ಸೇವೆ ಸಲ್ಲಿಸಿ ಇತ್ತೀಚಿಗೆ ನಿವೃತ್ತಿ ಹೊಂದಿರುವ ಸರೋಜನಿ ನರಸಿಂಹಾಚಾರ್ಯ ಗೋಠೆ ಅವರ ಶೈಕ್ಷಣಿಕ ಸೇವೆ ಅನೇಕ ಶಿಕ್ಷಕ ಮತ್ತು ಶಿಕ್ಷಕಿಯರಿಗೆ ಸ್ಫೂರ್ತಿಯಾಗಿದೆ. ಶಾಲೆಯಲ್ಲಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣದ ಜೊತೆಗೆ ಒಳ್ಳೆಯ ಸಂಸ್ಕಾರ, ಆಚಾರ, ವಿಚಾರಗಳನ್ನು ತಿಳಿಸುತ್ತಾ, ಸಾಂಸ್ಕೃತಿಕ ಕಾರ್ಯಕ್ರಮ, ಹಾಡು ಮತ್ತು ನೃತ್ಯ, ಸಂಸ್ಕೃತ ಶ್ಲೋಕಗಳ ಮಾರ್ಗದರ್ಶನ, ರಾಮಾಯಣ ಮಹಾ ಭಾರತದ ಕಥೆಗಳನ್ನು ಹೇಳುವ ಮೂಲಕ ಮಕ್ಕಳಿಗೆ ಅಚ್ಚುಮೆಚ್ಚಿನ ಶಿಕ್ಷಕಿಯಾಗಿದ್ದರು. ಅವರ ನಿವೃತ್ತಿಯ ಜೀವನ ಸುಖಕರವಾಗಿರಲಿ ಎಂದರು.



ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಹಿರಿಯ ನಿವೃತ್ತ ಶಿಕ್ಷಕ ಕುಂಬಾರ ಮಾಸ್ತರ ಮಾತನಾಡಿದರು.

ಈ ಸಮಾರಂಭದಲ್ಲಿ ಆರ್. ಬಿ. ದೇಶಪಾಂಡೆ, ಎ. ಆರ್. ಕುಲಕರ್ಣಿ, ಡಾ. ಆರ್. ಜಿ. ಗುಡಿ, ಡಾ. ಪಿ. ಪಿ. ಮಿರಜ, ಸಂದೀಪ ಸಂಗೋರಾಮ, ಸುಹಾಸ್ ದಾತಾರ, ಆನಂದ ಜಂಬಗಿ, ಗುರುರಾಜ ಜಂಬಗಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು. ಮೋಹನ ಕುಲಕರ್ಣಿ ಸ್ವಾಗತಿಸಿದರು. ವೈಭವಿ ಕುಲಕರ್ಣಿ ನಿರೂಪಿಸಿದರು. ರಾಘವೇಂದ್ರ ಜಂಬಗಿ ವಂದಿಸಿದರು.

ಸನ್ಮಾನ

ಸೇವಾ ನಿವೃತ್ತಿ ಹೊಂದಿದ ಶಿಕ್ಷಕಿ ಸರೋಜನಿ ಗೋಠೆ ಹಾಗೂ ವಾದಿರಾಜ ಜಂಬಗಿ ದಂಪತಿಗೆ ವಿವಿಧ ಸಂಘ-ಸಂಸ್ಥೆಗಳಿಂದ ಸನ್ಮಾನಿಸಲಾಯಿತು. ನಂತರ ಸರೋಜನಿ ಗೋಠೆ ಕುಟುಂಬದ ವತಿಯಿಂದ ತಮಗೆ ಕಲಿಸಿದ ಗುರುಗಳಿಗೆ ಸನ್ಮಾನಿಸಿ ಗುರು ವಂದನೆ ಸಲ್ಲಿಸಿದರು. ಗುರುಗಳ ಮಾರ್ಗದರ್ಶನ ಮತ್ತು ಅವರ ಕಾರ್ಯವೈಕರಿಯನ್ನ ಸ್ಮರಿಸಿ ತಮ್ಮ ಶೈಕ್ಷಣಿಕ ಸೇವೆಯ ಅನುಭವ ಹಂಚಿಕೊಂಡರು.

ಕಿರುಸುದ್ದಿ

ಒಂದೇ ಕುಟುಂಬದ ನಾಲ್ವರಿಂದ ನೇತ್ರದಾನ ಪ್ರತಿಜ್ಞೆ !



• **ರಾಯಬಾಗ:** ಪಟ್ಟಣದ ಮೋಹಿತೆ ಕುಟುಂಬದ ನಾಲ್ವರು ನೇತ್ರದಾನಕ್ಕೆ ಪ್ರತಿಜ್ಞೆ ಮಾಡಿದರು. ನಂತರ ಆಸ್ಪತ್ರೆ ರೋಗಿಗಳಿಗೆ ಬ್ರೆಡ್ ಬಿಸ್ಕಿಟ್ ವಿತರಿಸಿದರು. ಮನೆಯ ಯಜಮಾನರಾದ ರಾಜಾರಾಮ ಮೋಹಿತೆ (60), ತಾಯಿಯವರಾದ ಶೋಭಾ ರಾಜಾರಾಮ ಮೋಹಿತೆ (56), ಉತ್ತಮ ರಾಜಾರಾಮ ಮೋಹಿತೆ (35), ಮೇಘಾ ಉತ್ತಮ ಮೋಹಿತೆ (29) ನೇತ್ರದಾನಕ್ಕೆ ಪ್ರತಿಜ್ಞೆ ಮಾಡಿದವರು. ಹೀಗೆ ಒಂದೇ ಕುಟುಂಬದ ನಾಲ್ವರು ನೇತ್ರದಾನಕ್ಕೆ ಪ್ರತಿಜ್ಞೆ ಮಾಡಿದ್ದು ಸಮಾಜಕ್ಕೆ ಮಾದರಿ ಎಂದು ತಾಲ್ಲೂಕು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಎಸ್.ಎಮ್. ಪಾಟೀಲ ಅಭಿಪ್ರಾಯ ವ್ಯಕ್ತಪಡಿಸಿದರು. ಆಸ್ಪತ್ರೆ ದಂತವೈದ್ಯರಾದ ಡಾ.ಸಿದ್ಧಾರ್ಥ ಮಗದುಮ್ಮ ನಾಲ್ವು ಜನಗಳ ನೇತ್ರದಾನದಿಂದ ಒಟ್ಟು ಎಂಟು ಜನ ಕುರುಡುತನದಿಂದ ಮುಕ್ತರಾಗುಬಹುದು, ಇವರ ಈ ಆದರ್ಶ ನಡೆ ಉಳಿದ ನಾಗರಿಕರಿಗೆ ಮಾದರಿ ಎಂದು ಹೇಳಿದರು. ಕುಮಾರ ಯಮನಪ್ಪ ಅವಳೆ, ಉಮೇಶ ಸಿಂಗೆ, ಮಿಥುನ ಕಾಂಬಳೆ, ಮೋಹಿತೆ ಪರಿವಾರದ ಹೆಣ್ಣು ಮಕ್ಕಳು ಅಳಿಯಂದಿರು, ಮೊಮ್ಮಕ್ಕಳು ಹಾಗೂ ವಿಠ್ಠಲಾಕ್ಷೀ ಮಾದರ, ಇಲಾಖೆ ಪರವಾಗಿ ತಾಲೂಕಾ ಫಾರ್ಮಾಸಿ ಅಧಿಕಾರಿಗಳಾದ ಅರಿಹಂತ ಮಗದುಮ್ಮ, ನರ್ಸಿಂಗ್ ಅಧಿಕಾರಿಗಳಾದ ಶ್ರೀಶೈಲ ಹೊಸೂರ, ಆರೋಗ್ಯ ಮಿತ್ರರಾದ ಬಸವರಾಜ ಇದ್ದರು. ಡಿಇಓ ಪ್ರವೀಣ ಕಾಂಬಳೆ ಕಾರ್ಯಕ್ರಮ ಯಶಸ್ವಿಯಾಗಿ ನಡೆಸಿಕೊಟ್ಟರು.

ಕಸ ವಿಲೇವಾರಿ ಸಮಸ್ಯೆ: ಸಾರ್ವಜನಿಕರ ಆಕ್ರೋಶ



• **ಬೆಳಗಾವಿ:** ತಾಲೂಕು ವ್ಯಾಪ್ತಿಯಲ್ಲಿನ ಕಂಗ್ರಾಳಿ ಕೆಎಚ್ ಗ್ರಾಮದಲ್ಲಿ ಕಳೆದ ಒಂದು ತಿಂಗಳಿನಿಂದ ಕಸ ವಿಲೇವಾರಿ ಸಮರ್ಪಕವಾಗಿ ನಡೆಯದ ಹಿನ್ನೆಲೆಯಲ್ಲಿ ಸಾರ್ವಜನಿಕರು ಹಾಗೂ ಆಟೋ ಚಾಲಕರು ಮಹಾ ನಗರ ಪಾಲಿಕೆಯ ವಿರುದ್ಧ ಆಕ್ರೋಶ ಹೊರ ಹಾಕುತ್ತಿದ್ದಾರೆ. ಗ್ರಾಮದ ಪ್ರಮುಖ ರಸ್ತೆ ಬದಿಗಳಲ್ಲಿ ಕಸದ ರಾಶಿಗಳು ದಿನೇ ದಿನೇ ಹೆಚ್ಚುತ್ತಿದ್ದು ಅವು ಕೊಳೆತು ತೀವ್ರ ದುರ್ವಾಸನೆ ಹರಡುತ್ತಿದೆ. ಇದರಿಂದ ಶಾಲಾ ಮಕ್ಕಳು, ಮಹಿಳೆಯರು ಹಾಗೂ ವೃದ್ಧರು ಸೇರಿದಂತೆ ಸಾರ್ವಜನಿಕರ ಆರೋಗ್ಯ ಮೇಲೆ ಪರಿಣಾಮ ಬೀರುತ್ತಿದ್ದು ಆರೋಗ್ಯದ ಸಮಸ್ಯೆ ಎದುರಾಗುತ್ತಿದ್ದರು ಪಾಲಿಕೆ ಅಧಿಕಾರಿಗಳು ಯಾವುದೇ ತಲೆ ಕೆಡಿಸಿಕೊಳ್ಳುತ್ತಿಲ್ಲ, ಈ ವಿಚಾರದ ಬಗ್ಗೆ ಪಾಲಿಕೆಗೆ ಹಲವು ಬಾರಿ ಅಧಿಕಾರಿಗಳ ಗಮನಕ್ಕೆ ತಂದಿದ್ದರೂ ಯಾವುದೇ ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ ಕಂಗ್ರಾಳಿ ಗ್ರಾಮಸ್ಥರು ಹಾಗೂ ಆಟೋ ಚಾಲಕರು ಪಾಲಿಕೆಯ ವಿರುದ್ಧ ಬೀದಿಗೆ ಇಳಿದು ಪ್ರತಿಭಟನೆ ನಡೆಸಿದರು.

ಶಾಂತಿಯುತವಾಗಿ ಮೊಹರಂ ಹಬ್ಬ ಆಚರಿಸಿ



• **ಯಮಕನಮರಡಿ:** ಸ್ಥಳೀಯ ಪೊಲೀಸ್ ಠಾಣಾ ವ್ಯಾಪ್ತಿಯ ಪಾಶ್ಚಾಪೂರ, ಶಬಂದರ್ ಇಸ್ಲಾಂಪುರ, ಹಿಡ್ಕಲ್ ಡ್ಯಾಮ್, ಇಂಗಳಿ ಹಾಗೂ ಹತ್ತರಗಿ, ಆನಂದಪುರ ಉಳ್ಳಾಗಡ್ಡಿ ಖಾನಾಪುರ, ಪೂರ್ಣ ಕುರ್ಣಿವಾಡ, ಚಿಕ್ಕಲಗುಡ್ಡ ಯಮಕನಮರಡಿ ಗ್ರಾಮದಲ್ಲಿ ಆಚರಿಸುತ್ತಿರುವ ಮೊಹರಂ ಹಬ್ಬವನ್ನು ಶಾಂತಿ ಸೌಹಾರ್ದತೆ ಆಚರಿಸಿ ಎಂದು ಸ್ಥಳೀಯ ಪೊಲೀಸ್ ಠಾಣಾ ಸಿಪಿಐ ಜಾವೀದ್ ಮುಸಾಪುರಿ ಹೇಳಿದರು.ಪೊಲೀಸ್ ಠಾಣಾ ಆವರಣದಲ್ಲಿ ನಡೆದ ಶಾಂತಿ ಸಭೆಯಲ್ಲಿ ಮಾತನಾಡಿದ ಅವರು, ಮೆರವಣಿಗೆಗಳನ್ನು ಸಂಜೆ 5 ಗಂಟೆಗೆ ಶಾಂತಿಯುತವಾಗಿ ಮುಗಿಸುವಂತೆ ಸೂಚಿಸಿದರು.



ಯಮಕನಮರಡಿ: ಹಿಂಡಾಲ್ಕೋ, ಇಂಡಿಯನ ಕ್ಯಾನ್ಸರ್ ಸೊಸೈಟಿ ಹಾಗೂ ಮಹಿಳಾ ಕಲ್ಯಾಣ ಸಂಸ್ಥೆ, ಬೆಳಗಾವಿ ಸಂಯುಕ್ತ ಆಶ್ರಯದಲ್ಲಿ ಹಾಗೂ ಕೆಎಲ್‌ಇ ಸಂಸ್ಥೆಯ ಡಾ. ಸಂಪತಕುಮಾರ ಎಸ್ ಶಿವಣಗಿ ಕ್ಯಾನ್ಸರ್ ಆಸ್ಪತ್ರೆಯ ಸಹಯೋಗದಲ್ಲಿ ಹುಕ್ಕೇರಿ ತಾಲೂಕಿನ ಅರ್ಜುನವಾಡ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಾಗೂ ಕ್ಯಾನ್ಸರ್ ತಪಾಸಣಾ ಶಿಬಿರ ನಡೆಯಿತು.

ವಿದ್ಯುತ್ ಖಾಸಗೀಕರಣ ವಿರೋಧಿಸಿ ಪ್ರತಿಭಟನೆ

• **ಗೋಕಾಕ:** ರಾಜ್ಯದಲ್ಲಿ ವಿದ್ಯುತ್ ಖಾಸಗೀಕರಣ ಪ್ರಕ್ರಿಯೆಯನ್ನು ಕೈಬಿಡುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಕಾರ್ಯಕರ್ತರು ಶುಕ್ರವಾರದಂದು ಬಸವೇಶ್ವರ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಮುಖಾಂತರ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಕರ್ನಾಟಕ ಸರ್ಕಾರವು ರಾಜ್ಯದ ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಖಾಸಗಿ ಕಂಪನಿಗಳಿಗೆ ವಹಿಸಲು ಮುಂದಾಗಿರುವ ವಿಷಯ ಸಾರ್ವಜನಿಕರಲ್ಲಿ, ರೈತರಲ್ಲಿ, ಕಾರ್ಮಿಕರಲ್ಲಿ ಹಾಗೂ ವಿದ್ಯುತ್ ಗ್ರಾಹಕರಲ್ಲಿ ತೀವ್ರ ಆತಂಕ ಮೂಡಿಸಿದೆ. ಹೆಸ್ಕಾಂ, ಬೆಸ್ಕಾಂ ಸೇರಿದಂತೆ ರಾಜ್ಯದ ವಿದ್ಯುತ್ ವಿತರಣಾ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು ಹಾಗೂ ಗುತ್ತಿಗೆ ಕಾರ್ಮಿಕರ ಉದ್ಯೋಗ ಭದ್ರತೆಯ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇದೆ. ಆದ್ದರಿಂದ ರಾಜ್ಯ ಸರಕಾರವು ಯಾವುದೇ ಕಾರಣಕ್ಕೂ ವಿದ್ಯುತ್ ಖಾಸಗೀಕರಣ ಪ್ರಕ್ರಿಯೆಯನ್ನು ಮುಂದುವರಿಸಬಾರದು ಎಂದು ಒತ್ತಾಯಿಸಿದರು.

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಶಿದ್ದಿಂಗಪ್ಪ ಪೂಜೇರಿ, ವಾಸು ಪಂಡ್ರೋಳಿ, ಗೋಪಾಲ ಕುಕ್ಕನೂರ, ಮಂಜುನಾಥ ಪೂಜೇರಿ, ಕುಮಾರ ತಿಗಡಿ, ಪ್ರಕಾಶ ಹಾಲನ್ನವರ, ಅಡಿವೆಪ್ಪ ಬುಳ್ಳಿ, ಮಾಯಪ್ಪ ಹೆಗ್ಗಡೆ, ರಾಯಪ್ಪ ಗೌಡಪ್ಪನವರ, ಬೀರಪ್ಪ ತೋಳಿನವರ, ರಮೇಶ ತಿಗಡಿ, ಲಾಲಸಾಬ ಶಿವಾಪೂರ, ಅಡಿವೆಪ್ಪ ಅಲ್ಲನ್ನವರ, ಸಿದ್ರಾಯ ಪರಸನ್ನವರ, ಸತೀಶ ಅಪೋಜಿ, ಅಭಯಕುಮಾರ ಪಾಟೀಲ, ಹಾಲಪ್ಪ ವಾಲಿಕಾರ, ಮಹಾಲಿಂಗ ಅಂಗಡಿ, ಸಿದ್ರಾಯಿ ಮುತ್ತೆನ್ನವರ, ಮಲ್ಲಪ್ಪ ಬೆಂಗಿ ಸೇರಿದಂತೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ನೂರಾರು ಕಾರ್ಯಕರ್ತರು ಇದ್ದರು.



ಗೋಕಾಕ: ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಕಾರ್ಯಕರ್ತರು ಶುಕ್ರವಾರದಂದು ಬಸವೇಶ್ವರ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು. ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಶಿದ್ದಿಂಗಪ್ಪ ಪೂಜೇರಿ, ವಾಸು ಪಂಡ್ರೋಳಿ, ಗೋಪಾಲ ಕೂಕ್ಕನೂರ, ಮಂಜುನಾಥ ಪೂಜೇರಿ, ಕುಮಾರ ತಿಗಡಿ, ಪ್ರಕಾಶ ಹಾಲನ್ನವರ, ಅಡಿವೆಪ್ಪ ಬುಳ್ಳಿ, ಮಾಯಪ್ಪ ಹೆಗ್ಗಡೆ, ರಾಯಪ್ಪ ಗೌಡಪ್ಪನವರ, ಬೀರಪ್ಪ ತೋಳಿನವರ ಇತರರು ಇದ್ದರು.

ಎಂಇಎಸ್ ಮೆರವಣಿಗೆಗೆ ಅನುಮತಿ ನೀಡದಂತೆ ಕನ್ನಡಪರ ಸಂಘಟನೆಗಳ ಆಗ್ರಹ

ಮಸಿ ಬಳಿಯುವ ಎಚ್ಚರಿಕೆ

• **ಬೆಳಗಾವಿ:** ಕರ್ನಾಟಕ ಸರ್ಕಾರ, ಕನ್ನಡ ಭಾಷೆ ಹಾಗೂ ರಾಜ್ಯದ ಅಧಿಕಾರಿಗಳ ವಿರುದ್ಧ ನಿರಂತರವಾಗಿ ಪ್ರಚೋದನಾತ್ಮಕ ಹೇಳಿಕೆಗಳನ್ನು ನೀಡುತ್ತ ಭಾಷಾ ಸೌಹಾರ್ದತೆಯನ್ನು ಹಾಳು ಮಾಡಲು ಯತ್ನಿಸುತ್ತಿರುವ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಮತ್ತು ಅದರ ನಾಯಕರ ವಿರುದ್ಧ ರಾಜ್ಯ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕೆಂದು ವಿವಿಧ ಕನ್ನಡಪರ ಸಂಘಟನೆಗಳು ಆಗ್ರಹಿಸಿವೆ.

ಶುಕ್ರವಾರ ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ಬೆಳಗಾವಿ ನಗರದ ಪೊಲೀಸ್ ಆಯುಕ್ತರ ಕಚೇರಿಗೆ ತೆರಳಿ, ಜೂನ್ 22ರಂದು ಬೆಳಗಾವಿಯಲ್ಲಿ ಎಂಇಎಸ್ ವತಿಯಿಂದ ಮೆರವಣಿಗೆ ನಡೆಸುವ ಸಿದ್ಧತೆ ನಡೆಯುತ್ತಿರುವ ಮಾಹಿತಿ ಲಭ್ಯವಾಗಿದ್ದು, ಯಾವುದೇ ಕಾರಣಕ್ಕೂ ಈ ಕಾರ್ಯಕ್ರಮಕ್ಕೆ ಅನುಮತಿ ನೀಡಬಾರದು ಎಂದು ಸಂಘಟನೆಗಳು ಪೊಲೀಸ್ ಆಯುಕ್ತ ಭೂಷನ್ ಬೊರಸೆ ಗೋಲಾಬರಾವ್ ಅವರಿಗೆ ಮನವಿ ಸಲ್ಲಿಸಿದರು.

ಇದೇ ವೇಳೆ ಪೊಲೀಸ್ ಆಯುಕ್ತರೊಂದಿಗೆ ಮಾತನಾಡಿದ ಗಡಿನಾಡು ಕನ್ನಡಿಗ ರಾಜ್ಯಾಧ್ಯಕ್ಷ ಬಲರಾಮ್ ಮಾಸೇನಟ್ಟಿ ಅವರು, ಎಂಇಎಸ್ ಸಂಘಟನೆ ರಾಜ್ಯದ ವಿರುದ್ಧ ನಿರಂತರವಾಗಿ ಪ್ರಚೋದನಕಾರಿ ಚಟುವಟಿಕೆಗಳಲ್ಲಿ ತೊಡಗಿದ್ದು, ಭಾಷಾ ಸಾಮರಸ್ಯಕ್ಕೆ ಧಕ್ಕೆ ತರುವ ಪ್ರಯತ್ನ ನಡೆಸುತ್ತಿದೆ. ಇಂತಹ ಸಂಘಟನೆಗಳೊಂದಿಗೆ ಸರ್ಕಾರ ಅಥವಾ ಅಧಿಕಾರಿಗಳು ಯಾವುದೇ ರೀತಿಯ ಮಾತುಕತೆ ನಡೆಸಬಾರದು ಹಾಗೂ ಅವರ ಬೇಡಿಕೆಗಳ ಕುರಿತು ಚರ್ಚೆಗೆ ಅವಕಾಶ ನೀಡಬಾರದು ಎಂದು ಒತ್ತಾಯಿಸಿದರು.



▸▸ ಜೂನ್ 22ರ ಮೆರವಣಿಗೆಗೆ ಜಿಲ್ಲಾಡಳಿತ ಯಾವುದೇ ರೀತಿಯ ಅನುಮತಿ ನೀಡಬಾರದು ಒಂದು ವೇಳೆ ಮೆರವೆಣಿಗೆ ನಡೆಸಿದ್ದಲ್ಲಿ ಮೆರವಣಿಗೆಯಲ್ಲಿ ಕನ್ನಡ ಪರ ಸಂಘಟನೆಯ ಕಾರ್ಯಕರ್ತರು ಮಧ್ಯ ಪ್ರವೇಶಿಸಿ ಎಂಇಎಸ್ ಪುಂಡರಿಗೆ ಬಳಿಯುವುದಾಗಿ ಎಚ್ಚರಿಕೆ ನೀಡಿದರು.

▸▸ ಪೊಲೀಸ್ ಆಯುಕ್ತ ಭೂಷನ್ ಬೊರಸೆ ಗೋಲಾಬರಾವ್ ಅವರಿಗೆ ಮನವಿ ಸಲ್ಲಿಕೆ

ಮಹಾರಾಷ್ಟ್ರಕ್ಕೆ ಹೋಲಿಸಿದರೆ ಕರ್ನಾಟಕದ ಗಡಿ ಭಾಗದಲ್ಲಿರುವ ಭಾಷಾ ಅಲ್ಪಸಂಖ್ಯಾತರಿಗೆ ರಾಜ್ಯ ಸರ್ಕಾರ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಿದೆ. ಆದರೆ ಮಹಾರಾಷ್ಟ್ರದ ಅಕ್ಕಲಕೋಟೆ, ದಕ್ಷಿಣ ಸೊಲ್ಲಾಪುರ ಹಾಗೂ ಸಾಂಗ್ಲಿ ಜಿಲ್ಲೆಯ ಹಲವು ಕನ್ನಡಭಾಷಿಕ ಪ್ರದೇಶಗಳಲ್ಲಿ ಕನ್ನಡ ಶಾಲೆಗಳು ಮುಚ್ಚಲ್ಪಡುತ್ತಿದ್ದು, ಕನ್ನಡ ನಾಮಫಲಕಗಳೂ ಕಾಣಿಸುತ್ತಿಲ್ಲ ಎಂದು ಕಳವಳ ವ್ಯಕ್ತಪಡಿಸಿದರು.

ಈ ವೇಳೆ ಬಲರಾಮ್ ಮಾಸೇನಟ್ಟಿ, ವಾಜೀದ ಹಿರೇಕುಂಡಿ, ಈಶ್ವರಗೌಡ ಪಾಟೀಲ, ಸಿದ್ದಲಿಂಗಪ್ಪ ಸುಣಕುಪ್ಪಿ, ರಾಜು ಕೋಲಾ, ಮಲ್ಲಪ್ಪಾ ಗುಡೇನಟ್ಟಿ, ಮಾಹಾದೇವ ತಳವಾರ, ಮಹೇಶ ಶಿಗಿಹಳ್ಳಿ, ಸೇರಿದಂತೆ ಹಲವು ಕನ್ನಡಪರ ಕಾರ್ಯಕರ್ತರು ಇದ್ದರು.

ಕಿತ್ತೂರು ಕರ್ನಾಟಕ ರೈತ ಜಾಗೃತಿ ಸಂಘದ ಆಗ್ರಹ

ಭೂಮಾಪಕರನ್ನು ಕಾಯಂಗೊಳಿಸಿ

• **ಚನ್ನಮ್ಮನ ಕಿತ್ತೂರು:** ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಭೂಮಾಪಕರನ್ನು ಕಾಯಂಗೊಳಿಸಬೇಕೆಂದು ಕಿತ್ತೂರು ಕರ್ನಾಟಕ ರೈತ ಜಾಗೃತಿ ಸಂಘದಿಂದ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಅಪ್ಪೇಶ ದಳವಾಯಿ ಮುಖ್ಯ ಮಂತ್ರಿ, ಕಂದಾಯ ಮಂತ್ರಿಗಳನ್ನು ಆಗ್ರಹ ಪಡಿಸಿದರು.

ಡೊಂಬರಕೊಪ್ಪ ಪ್ರವಾಸಿ ಮಂದಿರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಗುತ್ತಿಗೆ ಆಧಾರದ ನೌಕರರಿಗೆ ಸರಕಾರವು ಸರಿಯಾಗಿ ವೇತನವನ್ನು ನೀಡುತ್ತಿಲ್ಲ ಇವರ ಕಾರ್ಯದಲ್ಲಿ ವಿಳಂಭವಾಗುತ್ತಿದ್ದು ಆದ್ದರಿಂದ ಇವರನ್ನು ತಕ್ಷಣ ಕಾಯಂ ಗೊಳಿಸುವ ಕೆಲಸವನ್ನು ಮಾಡಬೇಕೆಂದರು ಮತ್ತು ಸರಕಾರವು ವಿದ್ಯುತ್‌ನ್ನು ಖಾಸಗಿ ಕರಣ ಮಾಡಲು ಹೊರಟಿದೆ ಇದನ್ನು ತಕ್ಷಣ ಕೈ ಬಿಡಬೇಕು ಇಲ್ಲದಿದ್ದರೆ ರಾಜ್ಯದಲ್ಲಿ ದೊಡ್ಡ ಮಟ್ಟದ ಹೋರಾಟ ನಡೆಯುವುದು ಎಂದರು. ಕಿತ್ತೂರು ಕರ್ನಾಟಕ ರೈತ ಜಾಗೃತಿ ಸಂಘದ ಅಲ್ಪಸಂಖ್ಯಾತ ಘಟಕದ ತಾಲೂಕಾಧ್ಯಕ್ಷ ಕಾಸಿಂ ನೇಸರಗಿ ಮಾತನಾಡದರು.

ಘಟಕದ ಅಧ್ಯಕ್ಷ ಕಲ್ಲಪ್ಪ ಬುಡರಕಟ್ಟಿ, ಜಿಲ್ಲಾ ಎಸ್ ಸಿ ಘಟಕದ ಅಧ್ಯಕ್ಷ ಪಕ್ಕೀರಪ್ಪ ಜಾಂಗಟಿ, ತಾಲೂಕಾ ಎಸ್ ಸಿ ಘಟಕದ ಅಧ್ಯಕ್ಷ ಮಲ್ಲೇಶಪ್ಪ ಮಾದರ ಉಪಸ್ಥಿತರಿದ್ದರು.

ಹೋರಾಟಕ್ಕೆ ಬೆಂಬಲ

ರಾಜ್ಯದಲ್ಲಿದ ಸುಮಾರು 6 ಲಕ್ಷ ಹಾಗೂ ನಮ್ಮ ತಾಲೂಕಿನಲ್ಲಿ ಸುಮಾರು 16 ನೂರು ಪೋಡಿ ಪ್ರಕರಣಗಳು ಬಾಕಿ ಇವೆ. ಇದರಿಂದ ರೈತರಿಗೆ ತೊಂದರೆಯಾಗುತ್ತಿದೆ. ಸರ್ಕಾರವು ಬೇಗನೆ ಕಾಯಂ ಗೊಳಿಸಬೇಕು ಮತ್ತು ಬೆಂಗಳೂರಿನ ಪ್ರೀಥಂ ಪಾರ್ಕಿನಲ್ಲಿ ಜೂ 23 ರಂದು ನಡೆಯುತ್ತಿರುವ ಭೂಮಾಪಕರ ಹೋರಾಟದಲ್ಲಿ ನಮ್ಮ ಸಂಘಟನೆಯು ಬೆಂಬಲವಾಗಿ ಪಾಲ್ಗೊಳ್ಳಲಿದ್ದು ಈ ಪ್ರತಿಭಟನೆ ಉಗ್ರ ಸ್ವರೂಪ ತಾಳುವ ಮುನ್ನ ಸರಕಾರವು ಎಚ್ಚೆತ್ತು ಭೂಮಾಪಕರನ್ನು ಕಾಯಂ ಗೊಳಿಸಬೇಕು ಎಂದು ಕಿತ್ತೂರು ಕರ್ನಾಟ ರೈತ ಜಾಗೃತಿ ಸಂಘದ ರಾಜ್ಯ ಉಪಾಧ್ಯಕ್ಷ ವಿಜಯಕುಮಾರ ಶಿಂದೆ ಒತ್ತಾಯಿಸಿದರು.



ಗುಲಾಬಿ ಹೂ ನೀಡಿ ಹೆಲ್ಮೆಟ್ ಜಾಗೃತಿ ಮೂಡಿಸಿದ ಪೊಲೀಸ್ ಆಯುಕ್ತ

• **ಬೆಳಗಾವಿ:** ರಸ್ತೆ ಅಪಘಾತಗಳು ಹೆಚ್ಚಾಗುತ್ತಿರುವುದರಿಂದ ರಸ್ತೆ ಸುರಕ್ಷತೆ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಬೆಳಗಾವಿಯ ಪೀರನವಾಡಿ ಕ್ರಾಸ್‌ನಲ್ಲಿ ಹೆಲ್ಮೆಟ್ ಜಾಗೃತಿ ಕಾರ್ಯಕ್ರಮಕ್ಕೆ ಬೆಳಗಾವಿ ನಗರ ಪೊಲೀಸ್ ಆಯುಕ್ತ ಬೊರಸೆ ಭೂಷಣ್ ಗುಲಾಬ್ರಾವ್ ಚಾಲನೆ ನೀಡಿದರು.

ಈ ಕಾರ್ಯಕ್ರಮದಲ್ಲಿ, ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸುವ ಮಹತ್ವ ಹಾಗೂ ಸಂಚಾರ ನಿಯಮಗಳನ್ನು ಪಾಲಿಸುವ ಅಗತ್ಯತೆಯ ಕುರಿತು ಸಾರ್ವಜನಿಕರಿಗೆ ಜಾಗೃತಿ ಮುಡಿಸಿದರು.

ಈ ಜಾಗೃತಿ ಅಭಿಯಾನದ ಅಂಗವಾಗಿ, ಹೆಲ್ಮೆಟ್ ಧರಿಸಿ ಸಂಚಾರ ಸುರಕ್ಷತಾ ನಿಯಮಗಳನ್ನು ಪಾಲಿಸುತ್ತಿದ್ದ ಸವಾರರಿಗೆ ಪ್ರಮಾಣಪತ್ರಗಳನ್ನು ವಿತರಿಸಲಾಯಿತು. ಅಲ್ಲದೆ, ಸುರಕ್ಷಿತ ಸವಾರಿ ಅಭ್ಯಾಸಗಳನ್ನು ಅನುಸರಿಸುತ್ತಿದ್ದ ನಾಗರಿಕರಿಗೆ ಮೆಚ್ಚುಗೆ ಸೂಚಕವಾಗಿ ಗುಲಾಬಿ ಹೂಗಳನ್ನು ನೀಡಿ ಪ್ರೋತ್ಸಾಹಿಸಲಾಯಿತು.

ಹೆಲ್ಮೆಟ್ ಧರಿಸದೇ ಸಂಚರಿಸುತ್ತಿದ್ದ ಸವಾರರಿಗೆ ಸುರಕ್ಷತೆಯ ದೃಷ್ಟಿಯಿಂದ ಯಾವಾಗಲೂ ಹೆಲ್ಮೆಟ್ ಬಳಸುವಂತೆ ಮನವಿ ಮಾಡಿಕೊಂಡರು. ಹೆಲ್ಮೆಟ್ ಬಳಕೆ ಹಾಗೂ ಸಂಚಾರ ನಿಯಮಗಳ ಪಾಲನೆಯಿಂದ ಅಪಘಾತಗಳ ಸಂದರ್ಭದಲ್ಲಿ ಜೀವ ರಕ್ಷಿಸಬಹುದಾದ ಮಹತ್ವದ ಸಂದೇಶವನ್ನು ಅಧಿಕಾರಿಗಳು ನೀಡಿದರು.

ಪೊಲೀಸ್ ಇನ್ಸ್‌ಪೆಕ್ಟರ್ , ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಸಹಾಯಕ ಸಬ್‌ಇನ್ಸ್‌ಪೆಕ್ಟರ್ ಸೇರಿದಂತೆ ಪೊಲೀಸ್ ಠಾಣೆಯ ಇತರ ಸಿಬ್ಬಂದಿಯೂ ಭಾಗವಹಿಸಿ, ರಸ್ತೆ ಸುರಕ್ಷತೆ ಮತ್ತು ಅಪಘಾತ ತಡೆಗಟ್ಟುವಿಕೆ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕಾರ್ಯದಲ್ಲಿ ಸಕ್ರಿಯವಾಗಿ ತೊಡಗಿಸಿ ಕೊಂಡರು. ಪೊಲೀಸ್ ಇಲಾಖೆಯ ಈ ಪ್ರಯತ್ನಕ್ಕೆ ಸಾರ್ವಜನಿಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದ್ದು, ರಸ್ತೆ ಸುರಕ್ಷತೆ ಕುರಿತ ಅರಿವು ಹೆಚ್ಚಿಸುವಲ್ಲಿ ಕಾರ್ಯಕ್ರಮ ಮಹತ್ವದ ಪಾತ್ರ ವಹಿಸಿತು.



ಜೂ.21ಕ್ಕೆ ಸಾಧನ ತಪಸ್ವಿ ಪ್ರಶಸ್ತಿ ಪ್ರದಾನ

• **ಗೋಕಾಕ:** ಸ್ವರ ಸಾಧನ ಸಂಗೀತ ವಿದ್ಯಾಲಯ ಗೋಕಾಕ ಇವರ ಆಶ್ರಯದಲ್ಲಿ ಜೂ.21ರಂದು ಗೋಕಾಕದ ಕವಿ ಶಿಕ್ಷಕ ಈಶ್ವರ ಮಮದಾಪೂರ ಇವರಿಗೆ ಸಾಧನ ತಪಸ್ವಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ.



ಉಭಯಗಾನ ವಿಶಾರದ ಲಿಂ.ಶ್ರೀ ಪಂಡಿತ್ ಪಂಚಾಕ್ಷರಿ ಗವಾಯಿಗಳು ಹಾಗೂ ಪದ್ಮಭೂಷಣ ಲಿಂ. ಶ್ರೀ ಪಂಡಿತ್ ಪುಟ್ಟರಾಜ್ ಕವಿ ಗವಾಯಿಗಳ ಪುಣ್ಯಸ್ಮರಣೋತ್ಸವ ಹಾಗೂ ಸ್ವರಾಭಿಷೇಕ ಕಾರ್ಯಕ್ರಮದ ನಿಮಿತ್ತ ರೋಟರಿ ರಕ್ತ ಭಂಡಾರದ ಸಭಾಂಗಣದಲ್ಲಿ ಈ ಪ್ರಶಸ್ತಿಯನ್ನು ಪ್ರಧಾನ ಮಾಡಲಾಗುತ್ತಿದೆ.

ಶ್ರೀಯುತರು ಗಜಲ್ ಮತ್ತು ಹೈಕು ಕವಿಗಳಾಗಿದ್ದು ಕವಿತೆ, ಗಜಲ್, ಹೈಕು, ಚುಟುಕು ಇತ್ಯಾದಿ ಸಹಿತ ಒಟ್ಟು 10 ಕೃತಿಗಳನ್ನು ಸಾಹಿತ್ಯ ಲೋಕಕ್ಕೆ ಅರ್ಪಿಸಿದ್ದಾರೆ. ಇವರು '' ಗೋಕಾಕ ತಾಲೂಕಾ ದರ್ಶನ '' ಎಂಬ ವಿಶೇಷ ಕೃತಿಯನ್ನು ನೀಡಿದ್ದು ಗಮನಾರ್ಹ. ಕಾವ್ಯಕೂಟ ಕನ್ನಡ ಬಳಗದ ರಾಜ್ಯ ವೇದಿಕೆಯ ಸಂಸ್ಥಾಪಕರಾಗಿದ್ದು ನಿರಂತರ ಸಾಹಿತ್ಯಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಇವರಿಗೆ ಜಿಲ್ಲೆ ಹಾಗೂ ರಾಜ್ಯ ಮಟ್ಟದಲ್ಲಿ ಅನೇಕ ಪ್ರಶಸ್ತಿ ಪುರಸ್ಕಾರಗಳು ಲಭಿಸಿದ್ದು ಸದ್ಯ ತಮ್ಮ ತವರೂರು ಗೋಕಾಕದಲ್ಲಿ ದೊರೆಯುತ್ತಿರುವ ಈ ಪ್ರಶಸ್ತಿಯು ವಿಶೇಷವಾಗಿದ್ದು ತನ್ಮೂಲಕ ಖುಷಿ ಮತ್ತು ಹೆಮ್ಮೆ ಉಂಟಾಗಿದೆ ಎಂದು ಕವಿ ಈಶ್ವರ ಮಮದಾಪೂರ ಸಂತೋಷ ವ್ಯಕ್ತಪಡಿಸಿದ್ದಾರೆ.

ವಿದ್ಯುತ್ ಖಾಸಗೀಕರಣಕ್ಕೆ ವಿರೋಧ



• **ರಾಮದುರ್ಗ:** ವಿದ್ಯುತ್ ಕ್ಷೇತ್ರವನ್ನು ಖಾಸಗಿಕರಣ ಮಾಡುತ್ತಿರುವ ಸರ್ಕಾರಗಳ ನೀತಿಯನ್ನು ವಿರೋಧಿಸಿ ರಾಮದುರ್ಗ ಉಪ ವಿಭಾಗದ ವಿದ್ಯುತ್ ನೌಕರರು ಸಾಂಕೇತಿಕ ಧರಣಿ ನಡೆಸಿ ಪ್ರತಿಭಟಿಸಿದರು.

ವಿದ್ಯುತ್ ಕ್ಷೇತ್ರವನ್ನು ಖಾಸಗಿಕರಣಗೊಳಿಸಿದರೆ ಅಲ್ಲಿ ದುಡಿಯುವ ಅಧಿಕಾರಿಗಳು ಮತ್ತು ನೌಕರರುಬೀದಿಗೆಬರಲಿದ್ದಾರೆ.ಸರ್ಕಾರದ ಯೋಜನೆಗಳಾದ ಕುಟೀರ, ಜ್ಯೋತಿ, ಭಾಗ್ಯಜ್ಯೋತಿ, ಗೃಹಜ್ಯೋತಿ, ರೈತರ ಕೃಷಿ ಪಂಪಸೆಟ್‌ಗಳು ಹೊಂದಿರುವ ಉಚಿತ ಸೌಲಭ್ಯಗಳು ಸ್ಥಗಿತಗೊಂಡು ಜನ ಕಂಗಾಲು ಆಗಲಿದ್ದಾರೆ. ಖಾಸಗಿಕರಣ ನೀತಿಯನ್ನು ಕೈಬಿಡಬೇಕು ಎಂದು ಧರಣಿ ನಿರತರು ಆಗ್ರಹಿಸಿದರು.

ಉಪವಿಭಾಗದ ವಿದ್ಯುತ್ ನೌಕರರ ಸಂಘದ ಅಧ್ಯಕ್ಷ ಮುತ್ತು ಬನ್ನೂರ,ಸಿಇಸಿ ಮಧುಸೂದನ್, ಇಇ ಆನಂದ ನಾಯಕ ನೌಕರರ ಸಂಘದ ಪದಾಧಿಕಾರಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕಲಗೌಡ ಪಾಟೀಲರಿಗೆ ಸನ್ಮಾನ

• **ಚನ್ನಮ್ಮನ ಕಿತ್ತೂರು:** ಗ್ರೇಡ್ 2 ತಹಶೀಲ್ದಾರ ಹುದ್ದೆಯಿಂದ ಗ್ರೇಡ್ 1 ತಹಶೀಲ್ದಾರ್ ಹುದ್ದೆಗೆ ಪದೋನ್ನತಿ ಹೊಂದಿದ ಕಲಗೌಡ ಪಾಟೀಲ ಅವರನ್ನು ಸನ್ಮಾನಿಸಲಾಯಿತು. ತಹಶೀಲ್ದಾರ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಹುದ್ದೆಯಿಂದ ಗ್ರೇಡ್ 2 ತಹಶೀಲ್ದಾರ ಆಗಿದ್ದರೂ ಹೆಚ್ಚಿನ ಜವಾಬ್ದಾರಿಯಾಗಿ ತಹಶೀಲ್ದಾರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಈಗ ಸರಕಾರವು ಅಧಿಕೃತವಾಗಿ ತಹಶೀಲ್ದಾರ್ ಹುದ್ದೆಗೆ ಬಡ್ತಿ ನೀಡಿ ಆದೇಶಿಸಿದೆ. ಗ್ರೇಡ್ 2 ತಹಶೀಲ್ದಾರ ಪಿ ವಾಯ್ ಕೋರಿ, ಉಪತಹಶೀಲ್ದಾರರಾದ ಸುರೇಶ ಅಡವಿ, ಸವಿತಾ ಹರಿಜನ, ಕಂದಾಯ ನೀರಿಕ್ಷಕ ಎಮ್ ಎಮ್ ನೀರಲಗಿ, ಗ್ರಾಮ ಆಡಳಿತಾಧಿಕಾರಿ ಈರಣ್ಣ ಕರಡಿ ಸೇರಿದಂತೆ ಇನ್ನೂ ಹಲವಾರು ಸಿಬ್ಬಂದಿಗಳು ಉಪಸ್ಥಿತರಿದ್ದರು.



ಸಮಯಪ್ರಜ್ಞೆ ಅಳವಡಿಸಿಕೊಳ್ಳಿ: ಖೋತ



• **ಅಡಹಳ್ಳಿ:** ಪ್ರತಿಯೊಬ್ಬ ವಿದ್ಯಾರ್ಥಿಯೂ ಶಿಸ್ತು, ಸಮಯ ಪ್ರಜ್ಞೆ ಮತ್ತು ಶ್ರಮ ಶೀಲತೆಯನ್ನು ತನ್ನ ಜೀವನದ ಮುಖ್ಯ ಮಂತ್ರವನ್ನಾಗಿ ಮಾಡಿಕೊಂಡು ಆದರ್ಶ ವಿದ್ಯಾರ್ಥಿಯಾಗಿ ರೂಪಗೊಳ್ಳಬೇಕೆಂದು ಶಿಕ್ಷಕ ಶ್ರೀಶೈಲ ಖೋತ ಹೇಳಿದರು.

ಅವರು ಗ್ರಾಮದ ವಿದ್ಯಾರ್ಥಿ ಆದಿತ್ಯಾ ಕೆಂಚಣ್ಣವರ ಜೆಇಇ ಪರೀಕ್ಷೆಯಲ್ಲಿ 1803 ಹಾಗೂ ಸಿಇಟಿ ಪರೀಕ್ಷೆಯಲ್ಲಿ ರಾಜ್ಯಕ್ಕೆ 37 ನೇ ರ್‍ಯಾಂಕ್ ಪಡೆದ ನಿಮಿತ್ತ ವಿದ್ಯಾರ್ಥಿಯನ್ನು ಸತ್ಕರಿಸಿ ಮಾತನಾಡಿ, ಆದರ್ಶ ವಿದ್ಯಾರ್ಥಿಗಳು ದೇಶದ ನಿಜವಾದ ಆಸ್ತಿ, ಕೇವಲ ಅಂಕ ಗಳಿಕೆಯಷ್ಟೇ ಅಲ್ಲದೇ ಉತ್ತಮ ನೈತೀಕ ಮೌಲ್ಯಗಳನ್ನು ಬೆಳೆಸಿಕೊಳ್ಳುವುದು ಮುಖ್ಯವಾಗಿದೆ ವಿದ್ಯಾರ್ಥಿಗಳು ಗುರುಗಳ ಹಾಗೂ ಪಾಲಕರ ಸಲಹೆಯಂತೆ ಜ್ಞಾನ ಪಡೆದುಕೊಂಡು ಉನ್ನತ ಹುದ್ದೆ ಪಡೆಯಬೇಕೆಂದು ಹೇಳಿದರು.

ಈ ವೇಳೆ ಹಿರಿಯರಾದ ಅಡಿವೆಪ್ಪ ಕೆಂಚಣ್ಣವರ, ದಾನಪ್ಪ ಪಾಟೀಲ, ಸುರೇಶ ಅಥಣಿ, ನಾರಾಯಣ ಪೂಜಾರಿ, ಅನೀಲ ಕೆಂಚಣ್ಣವರ, ಶಿವು ಸಾತಣ್ಣವರ, ಬಾಹುರಾಜ ತಾಂವಶಿ, ಸುನೀಲ ಕೆಂಚಣ್ಣವರ, ಕುಮಾರ ಜೋಗಳ, ಲಕ್ಷ್ಮಣ ಬಾಡಗಿ, ಬಸವರಾಜ ಕೋಹಳ್ಳಿ, ಸಂಗಪ್ಪ ಹಿಪ್ಪರಗಿ, ಮಹಾಂತೇಶ ಕೆಂಚಣ್ಣವರ ಸೇರಿದಂತೆ ಅನೇಕರು ಇದ್ದರು.

ಸಾಧಕ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಅಗತ್ಯ

• **ಗೋಕಾಕ:** ತಾಲೂಕಿನ ನಲ್ಲಾನಟ್ಟಿ ಗ್ರಾಮದ ಆರ್.ಆರ್.ಬಿಲಕುಂದಿ ಕೃಷಿ ಅಭಿವೃದ್ಧಿ ಸಂಘದ ಅಧ್ಯಕ್ಷ ಅಡಿವೆಪ್ಪ ಬಿಲಕುಂದಿ ಅವರ ನೇತೃತ್ವದಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಶೇ 80 ಕ್ಕಿಂತ ಹೆಚ್ಚು ಅಂಕ ಪಡೆದ 22 ಸಾಧಕ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವ ಪ್ರೋತ್ಸಾಹ ನೀಡಲಾಯಿತು.

ಸಂಘದ ಅಧ್ಯಕ್ಷ ಅಡಿವೆಪ್ಪ ಬಿಲಕುಂದಿ ಮಾತನಾಡಿ, ಗ್ರಾಮೀಣ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ನಮ್ಮ ಸಂಘಟನೆಯು ಸಮಾಜದ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಮಾಡುವಲ್ಲಿ ಮುಂದಾಗಿರುವ ಹಿನ್ನಲೆಯಲ್ಲಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ತಾಲೂಕಿನ ವಿದ್ಯಾರ್ಥಿ, ವಿದ್ಯಾರ್ಥಿಯರನ್ನು ಸನ್ಮಾನಿಸಿ ಗೌರವಿಸಲಾಗುತ್ತಿದೆ ಎಂದರು.

ಇದೇ ಸಂದರ್ಭದಲ್ಲಿ ಗಣ್ಯರಾದ ಸಿದ್ದಪ್ಪ ವಾಲಿಕಾರ, ಬಿ, ಜೆ, ಮಂಗಿ ನಿವೃತ್ತ ಶಿಕ್ಷಕರು, ಬೀರಪ್ಪ ಸುಣಡೋಳಿ, ಧರೆಪ್ಪ ಕುಳ್ಳೂರ ಸೇರಿದಂತೆ ನಲ್ಲಾನಟ್ಟಿ ಗ್ರಾಮದ ಗುರು ಹಿರಿಯರು ಉಪಸ್ಥಿತರಿದ್ದರು.



ಶ್ರೀರಾಮನ ಆದರ್ಶ ಅಳವಡಿಸಿಕೊಳ್ಳಿ



• **ಯರಗಟ್ಟಿ:** ಶ್ರೀರಾಮನ ಆದರ್ಶ ತತ್ವ ಸಿದ್ಧಾಂತಗಳನ್ನು ಇಂದಿನ ಯುವಕರು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಶಾಸಕ ವಿಶ್ವಾಸ ವೈದ್ಯ ಹೇಳಿದರು.

ಸಮೀಪದ ಆಲದಕಟ್ಟಿ ಕೆ.ಎಂ ಗ್ರಾಮದ ಶ್ರೀರಾಮ ಮಂದಿರಕ್ಕೆ ಈಚಗೆ ಭೇಟಿ ನೀಡಿ ದರ್ಶನಾಶೀರ್ವಾದ ಪಡೆದು ಸನ್ಮಾನ ಸ್ವೀಕರಿಸಿ ಮಾತನಾಡಿ, ಗ್ರಾಮೀಣ ಜನರ ಬೇಡಿಕೆಗಳಿಗೆ ಸ್ಪಂದಿಸಿ ಅವರಿಗೆ ಅವಶ್ಯವಾಗಿರುವ ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳುವ ಮುಖಾಂತರ ಗ್ರಾಮದ ಸರ್ವಾಂಗೀಣ ಅಭಿವೃದ್ಧಿಗೆ ಬದ್ಧನಾಗಿದ್ದೇನೆ. ದೇವಸ್ಥಾನ ಜೀರ್ಣೋದ್ಧಾರಕ್ಕೆ ಅಗತ್ಯ ಅನುದಾನ ನೀಡಲಾಗುವುದು ಎಂದು ಭರವಸೆ ನೀಡಿದರು.

ಯರಗಟ್ಟಿ ಎಪಿಎಂಸಿ ಅಧ್ಯಕ್ಷ ನೀಲಕಂಠ ಶೀದಬಸನ್ನವರ ಮಾತನಾಡಿರು. ಸವದತ್ತಿ ಎಪಿಎಂಸಿ ಅಧ್ಯಕ್ಷ ಚಂದ್ರು ಜಂಬ್ರಿ, ಗ್ರಾಪಂ ಮಾಜಿ ಸದಸ್ಯ ಅಶೋಕ ಚಿಕ್ಕೊಪ್ಪ, ಪಿಕೆಪಿಎಸ್ ಅಧ್ಯಕ್ಷ ಮಲ್ಲಿಕಾರ್ಜುನ ಹೊನ್ನ್ಯಾಳ, ಮುಖಂಡ ಬಾಬನಾಯ್ಕ ದಾಗನಾಯ್ಕರ, ಸನ್ನಗೌಡ ಸನ್ನಗೌಡ್ರ, ಶಿವನಾಯ್ಕ ಸತ್ಯನಾಯ್ಕರ, ಬಸವರಾಜ ಕುರಗುಂದ, ಪರಸು ಪಚೇರ, ವಿಠ್ಠಲ ಹಲಗಲಿ, ಪ್ರಕಾಶ ತಳವಾರ, ಮುದಕಪ್ಪ ಚೌಡಪ್ಪನವರ, ಯಲ್ಲನಾಯ್ಕ ಸತ್ಯನಾಯ್ಕರ, ಅಜ್ಜಪ್ಪ ದಾಗನಾಯ್ಕರ ಮತ್ತಿತರಿದ್ದರು.

ಅಗತ್ಯ ದಾಖಲೆ ನೀಡುವಂತೆ ಮನವಿ ಸಲ್ಲಿಕೆ

• **ಚಿಕ್ಕೋಡಿ:** ತಾಲೂಕು ವ್ಯಾಪ್ತಿಯ 15 ಗ್ರಾಮಗಳಲ್ಲಿ ಮಕ್ಕಳ ಸಮೀಕ್ಷೆಯಲ್ಲಿ ಮೂಲಭೂತ ದಾಖಲೆಗಳ ಕೊರತೆ ಕಂಡು ಬಂದ ಹಿನ್ನೆಲೆಯಲ್ಲಿ ಆಕ್ಷ್ಯನ್ ಏಡ್ ಸಂಸ್ಥೆಯಿಂದ ಮಿನಿ ವಿಧಾನಸೌಧ ಕಚೇರಿಯಲ್ಲಿ ಉಪ ವಿಭಾಗಾಧಿಕಾರಿಗಳಿಗೆ ಶುಕ್ರವಾರ ಮನವಿ ಸಲ್ಲಿಸಲಾಯಿತು.

ಮಕ್ಕಳ ದಾಖಲೆಗಳ ಕೊರತೆ

ಸಂಸ್ಥೆಯು ನಡೆಸಿದ ಸಮೀಕ್ಷೆಯ ಸಂದರ್ಭದಲ್ಲಿ ಮಕ್ಕಳ ಜನನ ಪ್ರಮಾಣ ಪತ್ರ, ಆಧಾರ ಕಾರ್ಡ್, ಪಡಿತರ ಚೀಟಿ ಸೇರ್ಪಡೆ, ಜಾತಿ ಹಾಗೂ ಆದಾಯ ಪ್ರಮಾಣಪತ್ರ, ಬ್ಯಾಂಕ್ ಖಾತೆ ಮುಂತಾದವುಗಳನ್ನು ಮಕ್ಕಳು ಹೊಂದಿಲ್ಲದಿರುವುದು ಕಂಡು ಬಂದಿದ್ದು, ಮಕ್ಕಳಿಗೆ ವಿದ್ಯಾರ್ಥಿ ವೇತನ ಸೇರಿದಂತೆ ವಿವಿಧ ಸೌಲಭ್ಯ ಒದಗಿಸಿಕೊಡುವಂತೆ ಒತ್ತಾಯಿಸಲಾಯಿತು.

ಈ ಸಂದರ್ಭದಲ್ಲಿ ಆಕ್ಷ್ಯನ್ ಏಡ್ ಸಂಸ್ಥೆಯ ನಾಮದೇವ ಹಿರೇಕೋಡಿ, ಮಹೇಶ ಶಿಂಗೆ, ಅನಿಲ ಕಾಂಬಳೆ, ಸಂದೀಪ ಬಾನೆ, ಈಶ್ವರ ಕಾಂಬಳೆ, ಪೂಜಾ ಕಾಂಬಳೆ, ಸುಧಾ ನಾಗರಶಿ, ಭಾರತಿ ಸೋಲಾಪೂರೆ ಇತರರು ಇದ್ದರು.



ಕಿರುಸುದ್ದಿ

ಸಂಘಟನಾತ್ಮಕ ಸಭೆ ಇಂದು



ಲೋಕಾಪುರ: ಭಾರತೀಯ ಜನತಾ ಪಾರ್ಟಿ ಮುಧೋಳ ಗ್ರಾಮೀಣ ಮಂಡಲ, ಲೋಕಾಪುರ ಪಟ್ಟಣ ಪಂಚಾಯತಿ ಹಾಗೂ ಹೆಬ್ಬಾಳ ಜಿಲ್ಲಾ ಪಂಚಾಯತಿ ಮಹಾಶಕ್ತಿ ಕೇಂದ್ರಗಳ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣ (ಎಸ್ ಐಆರ್) ಅಭಿಯಾನ ಬಿಎಲ್‌ಎ-2 ಗಳ ಹಾಗೂ ಮಹಾಶಕ್ತಿ ಕೇಂದ್ರದ ಸಂಘಟನಾತ್ಮಕ ಸಭೆ ಜೂ.20ರಂದು ಸಂಜೆ 4 ಗಂಟೆಗೆ ಲೋಕಾಪುರದ ಲೋಕೇಶ್ವರ ದೇವಸ್ಥಾನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ಗ್ರಾಮೀಣ ಮಂಡಲದ ಅಧ್ಯಕ್ಷ ಸಂಗನಗೌಡ ಕಾತರಕಿ ತಿಳಿಸಿದ್ದಾರೆ. ಮುಖ್ಯ ಅತಿಥಿಗಳಾಗಿ ಮಾಜಿ ಉಪಮುಖ್ಯಮಂತ್ರಿಗಳು ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಸಂಸದರಾದ ಗೋವಿಂದ ಎಂ.ಕಾರಜೋಳ ಅವರು ವಹಿಸಿಕೊಳ್ಳಲಿದ್ದಾರೆ. ಕಾರಣ ಪಕ್ಷದ ಎಲ್ಲ ಪದಾಧಿಕಾರಿಗಳು, ಹಿರಿಯ ಮುಖಂಡು, ಬಿಎಲ್‌ಎ-2 ಗಳು, ಹಾಗೂ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಭೆ ಯಶಸ್ವಿಗೊಳಿಸಬೇಕಾಗಿ ವಿನಂತಿಸಿದ್ದಾರೆ.

ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಕಲಾದಗಿ: ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಆಡಳಿತ ಮಂಡಳಿಯ ತೆರವಾದ ಅಧ್ಯಕ್ಷ ಸ್ಥಾನಕ್ಕೆ ಬಸವರಾಜ ಮುಂಡಿಕಟಗಿ, ಉಪಾಧ್ಯಕ್ಷ ಸ್ಥಾನಕ್ಕೆ ಮಲ್ಲಪ್ಪ ಪರಚನಗೌಡರ ಆಯ್ಕೆಯಾದರು ಎಂದು ಚುನಾವಣಾ ರಿಟರ್ನಿಂಗ್ ಅಧಿಕಾರಿ ಮಂಜುಳಾ ಛಲವಾದಿ ಘೋಷಣೆ ಮಾಡಿದರು. ಪಿಕೆಪಿಎಸ್ ಸದಸ್ಯರುಗಳಾದ ಮಂಜುನಾಥ ಗಾಣಿಗೇರ, ಆನಂದ ಅರಕೇರಿ, ಮಹಾದೇವಿ ಶೆಟ್ಟೆಪ್ಪನವರ, ಬಸವ್ವ ಬೀರಪ್ಪ ಶಿವನಿಚ್ಚಿ, ಸದಾಶಿವ ಸಣ್ಣಕ್ಕಿ, ಮಳಿಯಪ್ಪ ಆಡಗಲ್, ಬಸಪ್ಪ ಶಿವನಿಚ್ಚಿ, ಮೆಹಬೂಬ ನದಾಫ್, ಬಶೆಟ್ಟೆಪ್ಪ ಅಂಗಡಿ, ಎಚ್.ಪಿ.ಪೂಜಾರ, ಲಕ್ಷ್ಮಣ ಶಿರಬೂರ, ಜಗದೀಶ ಬಿಲಕೇರಿ, ರಾಜೇಶ ಪೂಜಾರಿ, ಸುಭಾಸ್ ಜಕ್ಕನ್ನವರ್, ಕೆ.ಎಲ್.ಬಿಲಕೇರಿ, ಯಲ್ಲಪ್ಪ ಕರಡಿಗುಡ್ಡ, ಈರಣ್ಣ ಅಂಗಡಿ, ಶಾಸನಗೌಡ ಪಾಟೀಲ, ನಂದೀಶ ಹಿರೇಮಠ, ಡಾ.ಅಡಿಯಪ್ಪ ಹಲಗಲಿ ಇದ್ದರು.

ಮೊಹರಂ ಶಾಂತಿ ಸಭೆ



ಕೆರೂರ: ಹಿಂದೂ-ಮುಸ್ಲಿಂ ಸಮುದಾಯದ ಬಾವೈಕ್ಯತೆ ಸಾರುವ ಮೊಹರಂ ಹಬ್ಬವನ್ನು ಪಟ್ಟಣದ ಸರ್ವ ಸಮಾಜದವರು ಶಾಂತಿಯಿಂದ ಆಚರಿಸಬೇಕೆಂದು ಎಂದು ಪ್ರಭಾರಿ ಪಿಎಸ್‌ಐ ನಿತೀನಕುಮಾರ ಹೇಳಿದರು. ಪಟ್ಟಣದ ಪೊಲೀಸ್ ಠಾಣೆಯ ಕಾರ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಶಾಂತಿ ಸಭೆಯಲ್ಲಿ ಮಾತನಾಡಿದರು. ಹಿಂದೂ-ಮುಸ್ಲಿಂ ಸಮುದಾಯದ ಹಿರಿಯರು ಯುವಕರಿಗೆ ಅಹಿತಕರ ಘಟನೆಗಳು ನಡೆಯದಂತೆ ಬುದ್ಧಿ ಹೇಳಬೇಕು. ಎಲ್ಲರೂ ಹಬ್ಬವನ್ನು ಸಂಭ್ರಮಸಬೇಕು. ಮುಸ್ಲಿಂ ಸಮಾಜದ ಮುಖಂಡ ಉಸ್ಮಾನ ಮುಲ್ಲಾ ಮಾತನಾಡಿದರು. ಅಂಜುಮನ್ ಸಂಸ್ಥೆಯ ಅಧ್ಯಕ್ಷ ಮೊದಿನಸಾಬ ದೊಡಕಟ್ಟಿ, ಪರಸಪ್ಪಜ್ಜ ಚೂರಿ, ರೈತ ಮುಖಂಡ ಗೋವಿಂದಪ್ಪ ಬೆಳಗಂಟಿ, ರಾಮಚಂದ್ರ ಮೈಲಾರಿ, ಪೀತಾಂಬ್ರಪ್ಪ ಹವೇಲಿ, ಕ್ರೈಂ ಪಿಎಸ್‌ಐ ಈರಣ್ಣ ಹಿರೇಗೌಡರ,ಸಿಬ್ಬಂದಿ ಮಲ್ಲು ಪೂಜಾರ ಮುಖಂಡರು ಭಾಗವಹಿಸಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಬಾಗಲಕೋಟೆ: ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಶೇ.80ರಷ್ಟು ಅಂಕಗಳಿಸಿದ ಕಾರ್ಯನಿರತ ಪತ್ರಕರ್ತರ ಸಂಘದ ಸದಸ್ಯರ ಮಕ್ಕಳಿಗೆ ಜು.31ರಂದು ಶುಕ್ರವಾರ ಜಿಲ್ಲಾಮಟ್ಟದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಆಯೋಜಿಸಲಾಗಿದೆ. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ನಡೆಯುವ ಜಿಲ್ಲಾಮಟ್ಟದ ಪತ್ರಿಕಾ ದಿನಾಚರಣೆಯಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಲಿದೆ. ಶೇ.80ರಷ್ಟು ಅಂಕಗಳಿಸಿದ ಪತ್ರಕರ್ತರ ಮಕ್ಕಳ ಅಂಕಪಟ್ಟಿ ಹಾಗೂ ಸಂಘದ ಸದಸ್ಯತ್ವದ ಗುರುತಿನ ಚೀಟಿಯೊಂದಿಗೆ ಆಯಾ ತಾಲೂಕಿನ ಅಧ್ಯಕ್ಷರ ಬಳಿ ಜು.10ರೊಳಗೆ ಸಲ್ಲಿಸಬೇಕು. ನಂತರ ಬರುವ ಅರ್ಜಿಗಳನ್ನು ಪರಿಗಣಿಸುವುದಿಲ್ಲ, ಬಾಗಲಕೋಟೆ ತಾಲೂಕಿನವರು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಗೆ ಬಂದು ತಲುಪಿಸಬೇಕು ಎಂದು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಗದೀಶ ಗಾಣಿಗೇರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬಾದಾಮಿ: ತಾಲೂಕಿನ ನೀಲಗುಂದ ಶಾಲೆಯಲ್ಲಿ ಪೂರ್ವ ಪ್ರಾಥಮಿಕ(ಎಲ್‌ಕೆಜಿ) ತರಗತಿಗೆ ದಾಖಲಾದ 25 ಮಕ್ಕಳಿಗೆ ಮುಖ್ಯಗುರುಮಾತೆ ಎಸ್.ಎಂ.ನಾಗನೂರ ಅವರು 25 ಮಕ್ಕಳಿಗೆ ತಮ್ಮ ಸ್ವಂತ ಹಣದಲ್ಲಿ ಸ್ಕೂಲ್ ಬ್ಯಾಗ್ ವಿತರಣೆ ಮಾಡಿದರು. ಕ್ಷೇತ್ರ ಸಮನ್ವಯಾಧಿಕಾರಿ ಎಂ.ಬಿ.ದೊಡ್ಡಪ್ಪನವರ, ನೀಲಗುಂದ ಸಮೂಹ ಸಂಪನ್ಮೂಲ ವ್ಯಕ್ತಿ ಸಯ್ಯದ ಮುಲ್ಲಾ, ಸೇರಿದಂತೆ ಊರಿನ ಗಣ್ಯರು, ಪಾಲಕರು, ಮಕ್ಕಳು ಉಪಸ್ಥಿತರಿದ್ದರು.

ಕಲಿಕಾ ಗುಣಮಟ್ಟಕ್ಕೆ ಪಾಲಕರ ಪಾತ್ರ ಮುಖ್ಯ

ಬಾಗಲಕೋಟೆ: ಜಿಲ್ಲಾಡಳಿತ, ಜಿ.ಪಂ, ಕರ್ನಾಟಕ ಬಾಲವಿಕಾಸ ಅಕಾಡೆಮಿ ಧಾರವಾಡ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತ ಹಾಗೂ ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಸಹಯೋಗದಲ್ಲಿ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಬಾಲವಿಕಾಸ ನಡೆ ಪಾಲಕರ ಕಡೆ ಎಂಬ ಕಾರ್ಯಕ್ರಮ ಜರುಗಿತು.

ಕರ್ನಾಟಕ ಬಾಲವಿಕಾಸ ಅಕಾಡೆಮಿಯ ಅಧ್ಯಕ್ಷ ಅಡಿವೇಶ ಇಟಗಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮಕ್ಕಳ ಕಲಿಕಾ ಗುಣಮಟ್ಟ ಹೆಚ್ಚಿಸುವ ನಿಟ್ಟಿನಲ್ಲಿ ಪಾಲಕರ ಜವಾಬ್ದಾರಿಗಳ ಪಾತ್ರ ಮಹತ್ವದ್ದಾಗಿದೆ ಎಂದರು. ಜಿಲ್ಲಾಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಚಂದ್ರಶೇಖರ ದಿಡ್ಡಿ ಮಾತನಾಡಿ, ಪೋಷಕರಿಗೆ ಕಾನೂನಿನ ಬಗ್ಗೆ ಅರಿವು ಮೂಡಿಸುವುದರ ಜೊತೆಗೆ ಮೊಬೈಲ್ ಬಳಕೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಜಾಗೃತರಾಗಬೇಕು ಎಂದು ತಿಳಿಸಿದರು. ಕರ್ನಾಟಕ ಬಾಲವಿಕಾಸ ಅಕಾಡೆಮಿ ಯೋಜನಾ ನಿರ್ದೇಶಕ ವಿರುಪಾಕ್ಷ ಪಾಟೀಲ ಅವರು ಬಾಲವಿಕಾಸದ ಅಂಶಗಳ ಕುರಿತು ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಪ್ರಭಾಕರ ಕೆ, ಮಾತನಾಡಿ, ಈ ಕಾರ್ಯಕ್ರಮದ ಗುರಿ- ಉದ್ದೇಶ ಗಳ ಬಗ್ಗೆ ತಿಳಿಸಿದರು. ಸಿಡಿಪಿಒ ರಮೇಶ ಸೂಳಿಕೇರಿ, ನವಲಗುಂದ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಮಹ್ಮದ ರಫಿ, ಜಿಲ್ಲಾ ಮಿಷನ್ ಶಕ್ತಿ ಸಂಯೋಜಕ ಸುರೇಮ ಹುಲಮನಿ, ಆರೋಗ್ಯ ಇಲಾಖೆಯ ರಾಜು ಜಗಜಿನ್ನ ಉಪಸ್ಥಿತರಿದ್ದರು.



ಬಾಗಲಕೋಟೆ: ಜಿಲ್ಲಾಡಳಿತ, ಜಿ.ಪಂ, ಕರ್ನಾಟಕ ಬಾಲವಿಕಾಸ ಅಕಾಡೆಮಿ ಧಾರವಾಡ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತ ಹಾಗೂ ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಸಹಯೋಗದಲ್ಲಿ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಬಾಲವಿಕಾಸ ನಡೆ ಪಾಲಕರ ಕಡೆ ಎಂಬ ಕಾರ್ಯಕ್ರಮ ಜರುಗಿತು.

10 ಸಾವಿರ ಜನರಿಂದ ಏಕಕಾಲಕ್ಕೆ ಯೋಗದಿನ ಆಚರಣೆ: ಚರಂತಿಮಠ

ಬಾಗಲಕೋಟೆ: ನಗರದ ಪ್ರತಿಷ್ಠಿತ ಬಿವಿವಿ ಸಂಘದ ಆಶ್ರಯದಲ್ಲಿ ಜೂ.21ರಂದು ಬೆಳಿಗ್ಗೆ 6.30ಕ್ಕೆ ಯೋಗ ದಿನಾಚರಣೆಯನ್ನು ಬಾಗಲಕೋಟೆಯ ಬಿವ್ಹಿವ್ಹಿ ಸಂಘದ ಆವರಣ, ಎಸ್.ಎನ್.ಮೆಡಿಕಲ್ ಕಾಲೇಜ್ ಆವರಣ, ವಿದ್ಯಾಗಿರಿಯ ಬಸವೇಶ್ವರ ಎಂಜನಿಯರಿಂಗ್ ಕಾಲೇಜ್ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಮೂರು ಸ್ಥಳಗಳಲ್ಲಿ ಏಕಕಾಲಕ್ಕೆ 10 ಸಾವಿರ ಜನರಿಂದ ಯೋಗ ದಿನ ಆಚರಿಸಲಾಗುವುದು ಎಂದು ಬಿವಿವಿ ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ ಹೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿವ್ಹಿವ್ಹಿ ಸಂಘದ ಆಯುರ್ವೇದ ಮಹಾವಿದ್ಯಾಲಯದ ನುರಿತ ತಜ್ಞರಿಂದ ಯೋಗದ ಕುರಿತು ಮಾರ್ಗದರ್ಶನ ನೀಡಲಿದ್ದಾರೆ. ಪ್ರತಿವರ್ಷದಂತೆ ಈ ವರ್ಷವೂ ಯೋಗ ದಿನಾಚರಣೆಯಲ್ಲಿ ವಿದ್ಯಾರ್ಥಿಗಳು, ಶಾಲಾ ಮುಖ್ಯಸ್ಥರು, ಸಿಬ್ಬಂದಿ ಪಾಲ್ಗೊಳ್ಳಲಿದ್ದು ಇದರ ಜತೆಗೆ ಹಳೆ ಬಾಗಲಕೋಟೆ, ವಿದ್ಯಾಗಿರಿ ಮತ್ತು ನವನಗರದ ಸಾರ್ವಜನಿಕರು ಭಾಗವಹಿಸಬೇಕು ಎಂದು ಹೇಳಿದರು. ಪ್ರಧಾನಿ ನರೇಂದ್ರ ಮೋದಿಯವರ ಆರಂಭಿಸಿರುವ ಯೋಗ ದಿನಾಚರಣೆಯನ್ನು ಭಾರತೀಯರೆಲ್ಲರೂ ಸಂಭ್ರಮದಿಂದ ಆಚರಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಈ ವರ್ಷ ಪಶ್ಚಿಮ ಬಂಗಾಳದ ಕಲ್ಕತ್ತಾ ರೆಡ್ ರೋಡ್‌ನಲ್ಲಿ ನಡೆಯುವ ಯೋಗ ದಿನಾಚರಣೆಯಲ್ಲಿಪ್ರಧಾನಿನರೇಂದ್ರಮೋದಿಯವರು ಭಾಗಿಯಾಗಲಿದ್ದಾರೆ. ಈ ಕಾರ್ಯಕ್ರಮದಲ್ಲಿ 35 ಸಾವಿರ ಜನ ಯೋಗದಿನಾಚರಣೆಯಲ್ಲಿ ಭಾಗಿಯಾಗಲಿದ್ದಾರೆ. ಭಾರತವಲ್ಲದೇ ಅನೇಕ ದೇಶದಲ್ಲಿ ಯೋಗ ದಿನವನ್ನು ಆಚರಿಸಲಾಗುತ್ತಿದೆ ಎಂದರು. ಆರೋಗ್ಯಕರ ವ್ಯದ್ಯಾಪಕ್ಕಾಗಿ ಯೋಗ ಎಂಬ ಅಧಿಕೃತ ಘೋಷವಾಕ್ಯದ ಅಡಿಯಲ್ಲಿ ನಡೆಯುವಕಾರ್ಯಕ್ರಮದಲ್ಲಿಜನ ಭಾಗವಹಿಸಬೇಕು ಎಂದರು.

ಬಿವಿವಿ ಸಂಘದ ಹಳೆ ಆವರಣದಲ್ಲಿ ಬಿವ್ಹಿವ್ಹಿ ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ ನೇತೃತ್ವದಲ್ಲಿ ಯೋಗ ದಿನಾಚರಣೆ ಜರುಗಿದರೆ ಎಸ್.ಎನ್.ಮೆಡಿಕಲ್ ಕಾಲೇಜ್ ಆವರಣದಲ್ಲಿ ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಸಜ್ಜನ್ (ಬೇವೂರ) ಮತ್ತು ವಿದ್ಯಾಗಿರಿಯ ಬಸವೇಶ್ವರ ಎಂಜನೀಯರಿಂಗ್ ಕಾಲೇಜಿನ ಆವರಣದಲ್ಲಿಗೌರವಕಾರ್ಯದರ್ಶಿಮಹೇಶಅಥಣಿ ನೇತೃತ್ವದಲ್ಲಿ ಯೋಗ ದಿನ ಆಚರಿಸಲಾಗುವುದು.

ಬಿವಿವಿ ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ, ಎಸ್.ಎನ್.ವೈದ್ಯಕೀಯ ಮಹಾವಿದ್ಯಾಲಯದ ಕಾರ್ಯಾಧ್ಯಕ್ಷ ಅಶೋಕ ಸಜ್ಜನ್ (ಬೇವೂರ), ಶಾಲಾ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಮಹಾಂತೇಶ ಶೆಟ್ಟರ, ಕಾಲೇಜು ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಗುರುಬಸವ ಸೂಳಿಭಾವಿ ಇದ್ದರು.



ಇಂದು ಫಿಜಿಯೋಥೆರಫಿ ಕಾಲೇಜಿನ 3ನೇ ಪದವಿ ಪ್ರದಾನ

ಬಾಗಲಕೋಟೆ: ಬಿವಿವಿ ಸಂಘದ ಬಿವಿವಿಎಸ್ ಕಾಲೇಜ್ ಆಫ್ ಫಿಜಿಯೋಥೆರಫಿ ಮಹಾವಿದ್ಯಾಲಯದ 3ನೇ ಪದವಿ ಪ್ರದಾನ ಸಮಾರಂಭ ಜೂ.20ರಂದು ಬೆಳಗ್ಗೆ 10 ಗಂಟೆಗೆ ಫಿಜಿಯೋಥೆರಫಿ ಮಹಾವಿದ್ಯಾಲಯದ ಸಭಾಭವನದಲ್ಲಿ ಆಯೋಜಿಸಲಾಗಿದೆ ಎಂದು ಬಿವಿವಿ ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ ತಿಳಿಸಿದರು. ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರ, ರಾಜೀವ್ ಗಾಂಧಿ ವಿಜ್ಞಾನಗಳ ವಿಶ್ವವಿದ್ಯಾಲಯ ಸಿಂಡಿಕೇಟ್ ಸದಸ್ಯ ಡಾ.ಇಫ್ತಿಕರ್ ಫರೀದ್ ಚೇರಮನ್ ಪದವೀಧರರಿಗೆ ಪದವಿ ಪ್ರಮಾಣ ಪತ್ರ ವಿತರಿಸುವರು. ರಾಜೀವ್ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟ್ ಸಸ್ಯ ಪ್ರೊ.ವೈಶಾಲಿ ಶ್ರೀಜೀತ ಪದವಿ ಪ್ರದಾನ ಭಾಷಣ ಮಾಡಲಿದ್ದಾರೆ ಎಂದು ಹೇಳಿದರು. ಬಿವಿವಿಎಸ್ ಫಿಜಿಯೋಥೆರಫಿ ಮಹಾವಿದ್ಯಾಲಯದಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಫಿಜಿಯೋಥೆರಫಿ ವೈದ್ಯರಾಗಿ ಜಿಲ್ಲೆ ಮತ್ತು ರಾಜ್ಯದ ವಿವಿಧ ಭಾಗಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಆರೋಗ್ಯ ಕ್ಷೇತ್ರ ಬಲವರ್ಧನೆಗೆ ಅನುಪಮ ಕೊಡುಗೆ ನೀಡುತ್ತಿರುವ ಫಿಜಿಯೋಥೆರಪಿ ಮಹಾವಿದ್ಯಾಲಯದ ಸೇವೆ ಹೆಮ್ಮೆಯ ವಿಷಯವಾಗಿದೆ ಎಂದು ಹೇಳಿದರು.

ವಿದ್ಯುತ್ ವಲಯ ಖಾಸಗೀಕರಣಕ್ಕೆ ವಿರೋಧ



ಗುಳೇದಗುಡ್ಡ: ಸರ್ಕಾರ ವಿದ್ಯುತ್ ವಲಯವನ್ನು ಖಾಸಗಿಕರಣಗೊಳಿಸಲು ಮುಂದಾಗುತ್ತಿರುವುದು ರೈತರ ಬದುಕಿಗೆ ಇನ್ನಷ್ಟು ಸಂಕಷ್ಟ ತರಲಿದ್ದು, ವಿದ್ಯುತ್ ಖಾಸಗಿಕರಣವನ್ನು ಸರ್ಕಾರ ಕೂಡಲೇ ಕೈಬಿಡಬೇಕು ಎಂದು ಆಗ್ರಹಿಸಿ ಕರ್ನಾಟಕ ರೈತ ವಿಕಾಸ ಸಂಘ ಶುಕ್ರವಾರ ಉಪತಹಶೀಲ್ದಾರ್ ಮುನ್ನಾ ರಜಪೂತ ಅವರಿಗೆ ಮನವಿ ಸಲ್ಲಿಸಲಾಯಿತು.

ಸರ್ಕಾರ ವಿದ್ಯುತ್ ವಲಯವನ್ನು ಖಾಸಗಿಕರಣಗೊಳಿಸುವುದರಿಂದ ಸರ್ಕಾರದ ಯೋಜನೆಗಳು ರೈತರಿಗೆ ದೊರೆಯುವುದಿಲ್ಲ, ಕೃಷಿ ಪಂಪಸೆಟ್ ಹಾಗೂ ಗ್ರಾಮೀಣ ಭಾಗದ ಬಡಜನತೆಗೆ ವಿದ್ಯುತ್ ದರ ಬೇಕಾಬಿಟ್ಟಿಯಾಗಿ ದುಬಾರಿಯಾಗಬಹುದು. ಇದರಿಂದ ಅನ್ನದಾತ ರೈತನ ಮೇಲೆ ಪ್ರಹಾರ ಮಾಡಿದಂತಾಗುತ್ತದೆ. ಆದ್ದರಿಂದ ಸರ್ಕಾರ ವಿದ್ಯುತ್ ವಲಯವನ್ನು ಖಾಸಗಿಕರಣಗೊಳಿಸುವುದನ್ನು ತಕ್ಷಣ ಕೈಬಿಡಬೇಕು ಎಂದರು.

ಕರ್ನಾಟಕ ರೈತ ವಿಕಾಸ ಸಂಘದ ರಾಜ್ಯ ಮಹಿಳಾ ಅಧ್ಯಕ್ಷೆ ಜಹಿರಾಬಿ ನದಾಫ್, ಸಲಹಾ ಸಮಿತಿ ಅಧ್ಯಕ್ಷ ಚಂದಪ್ಪ ಗೌಡರ, ಹನಮಂತ ಜಗಿಯವರ, ಶೇಖರ ಚವ್ಹಾಣ, ರಂಗಪ್ಪ ನಾಗರಾಳ, ಮಲ್ಲಪ್ಪ ದೇಶಾಲರ, ರಾಚಯ್ಯ ಸರಗಣಾಚಾರಿ, ಮಹಿಬೂಬ ವಾಲೀಕಾರ, ಶಿವಪ್ಪ ಶ್ಯಾವಿ, ಮಹಾಂತೇಶ ಮಾದರ, ಉಮ್ಮಯ್ಯ ಹಿರೇಮಠ, ಚಂದ್ರು ಮುರನಾಳ, ಪಕೀರಪ್ಪ ತಳವಾರ, ಬಾಳಪ್ಪ ಶಾಂತಪ್ಪನವರ, ಗಂಗಮ್ಮ ಮೆಣಸಗಿ, ನಿಂಗಪ್ಪ ದ್ಯಾಮನಗೌಡರ, ಪರಸಪ್ಪ ಲಮಾಣಿ, ಮಲ್ಲಪ್ಪ ಕಂಠಿ ಮತ್ತಿತರರು ಇದ್ದರು.

ನಿಂದನೆ: ದೂರು ದಾಖಲು

ಜಮಖಂಡಿ: ತಾಲೂಕಿನ ಸನಾಳ ಗ್ರಾಮದಲ್ಲಿ ಕಾನೂನು ಬಾಹಿರವಾಗಿ ಕೃಷ್ಣಾ ನದಿಯಿಂದ ಮರಳು ಸಾಗಾಟ ನಿರ್ಭಂದಿಸಿದ್ದ ಗ್ರಾಮ ಆಡಳಿತಾಧಿಕಾರಿ ಗಂಗಯ್ಯ ಹಿರೇಮಠ ಅವರನ್ನು ರಸ್ತೆಯಲ್ಲಿ ನಿಲ್ಲಿಸಿ ಅವಾಚ್ಯ ಪದಗಳಿಂದ ನಿಂದಿಸಿದ್ದಾರೆ. ರಾತ್ರಿ ಸಮಯದಲ್ಲಿ ಅವರ ಮನೆಗೆ ಹೋಗಿ ಮತ್ತೆ ಹೀಯಾಳಿಸಿದ್ದಾರೆ ಎಂದು ಗ್ರಾಮ ಆಡಳಿತಾಧಿಕಾರಿ ನಗರ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಊರಿಗೆ ಬಂದರೆ ನಿಮ್ಮನ್ನು ಬಿಡುವುದಿಲ್ಲವೆಂದು ಧಮಿಕಿ ಕೂಡಾ ಹಾಕಿದ್ದಾರೆ. ಅದಕ್ಕಾಗಿ ತಹಶೀಲ್ದಾರ್ ಮತ್ತು ಎಸಿ ಸಮಾಕ್ಷಮದಲ್ಲಿ ಪೊಲೀಸ್ ಠಾಣಾಧಿಕಾರಿಗಳ ಸೂಚನೆ ಮೇರೆ ನಗರ ಠಾಣೆಯಲ್ಲಿ ದೂರು ದಾಖಲಾಗಿದೆ ಎಂದು ಎಸಿ ಶ್ವೇತಾ ಬೀಡಿಕರ ತಿಳಿಸಿದ್ದಾರೆ.

ಅಧಿಕಾರ ಹಿಡಿಯಲು ಬಿಜೆಪಿ ಹುನ್ನಾರ: ಜೆಟಿಪಾ

ಬೀಳಗಿ: ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯನ್ನು ಬಿಜೆಪಿ ವಾಮಮಾರ್ಗವಾಗಿ ಬಳಸಿಕೊಳ್ಳುತ್ತಿದ್ದು, ಈ ಮೂಲಕ ರಾಜ್ಯದಲ್ಲಿ ಕಾಂಗ್ರೆಸ್‌ನ್ನು ಅಧಿಕಾರದಿಂದ ದೂರವಿಡಲು ಸಂಚು ರೂಪಿಸಿದೆ ಎಂದು ಶಾಸಕ ಜೆ.ಟಿ.ಪಾಟೀಲ ಆರೋಪಿಸಿದರು.

ಪಟ್ಟಣದ ಕಾಂಗ್ರೆಸ್ ಕಾರ್ಯಾಲಯದಲ್ಲಿ ಶುಕ್ರವಾರ ಬ್ಲಾಕ್ ಕಾಂಗ್ರೆಸ್ ಸಮಿತಿ ಆಯೋಜಿಸಿದ್ದ ಬೂತ್ ಮಟ್ಟದ ಬಿಎಲ್‌ಎ (ಬೂತ್ ಲೆವೆಲ್ ಏಜೆಂಟ್) ಕಾರ್ಯಾಗಾರ ಹಾಗೂ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಕುರಿತ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು. ಮತದಾರರ ಪಟ್ಟಿ ಪರಿಷ್ಕರಣೆ ಬಗ್ಗೆ ಪ್ರತಿ ಗ್ರಾಮದಲ್ಲಿ ಧ್ವನಿವರ್ಧಕಗಳ ಮೂಲಕ ಜಾಗೃತಿ ಮೂಡಿಸಬೇಕು. ಮತದಾರರ ಪಟ್ಟಿಯಲ್ಲಿ ಹೆಸರಿಲ್ಲದಿದ್ದರೆ ಗ್ಯಾರಂಟಿ ಯೋಜನೆಗಳು, ವೃದ್ಧಾಪ್ಯ ವೇತನ ಸೇರಿದಂತೆ ಸರ್ಕಾರದ ಯಾವುದೇ ಸೌಲಭ್ಯಗಳು ಸಿಗುವುದಿಲ್ಲ ಎಂಬುದನ್ನು ಜನರಿಗೆ ಮನವರಿಕೆ ಮಾಡಿ ಕೊಡಬೇಕು. ಸ್ಥಳೀಯ ಸಂಸ್ಥೆಗಳು, ಜಿಪಂ ಹಾಗೂ ತಾಪಂ ಚುನಾವಣೆಗಳು ಶೀಘ್ರವೇ ನಡೆಯಲಿರುವುದರಿಂದ ಕಾರ್ಯ ಕರ್ತರು ಎಚ್ಚೆತ್ತುಕೊಂಡು ಕೆಲಸ ಮಾಡಬೇಕು ಎಂದರು.

ಕೆಪಿಸಿಸಿ ಮಾಜಿ ಕಾರ್ಯದರ್ಶಿ ಬಸವಪ್ರಭು ಸರನಾಡಗೌಡ ಮಾತನಾಡಿ, ಬಿಜೆಪಿಯವರು ತಂತ್ರ-ಕುತಂತ್ರಗಳ ಮೂಲಕ ಆಡಳಿತ ನಡೆಸುತ್ತಿದ್ದಾರೆ. ಮತದಾ ರರ ಪಟ್ಟಿಯಲ್ಲಿ ಸುಮಾರು 10 ಸಾವಿರದಷ್ಟು ನಕಲಿ ಮತಗಳು ಇರಬಹುದು ಎಂದು ಶಂಕಿಸಲಾಗಿದೆ. ಅವುಗಳನ್ನು ಪತ್ತೆ ಹಚ್ಚಿ ತೆಗೆದು ಹಾಕಬೇಕು. ಆಡಳಿತಾರೂಢ ಕೇಂದ್ರ ಸರಕಾರ ಬಿಜೆಪಿ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು ಕಾಂಗ್ರೆಸ್ ಪರ ಮತಗಳನ್ನು ಕೈಬಿಡಿಸುವ ಹುನ್ನಾರ ನಡೆಸುತ್ತಿದೆ ಬಿಎಲ್ ಎಗಳು ಅತ್ಯಂತ ಜಾಗರೂಕತೆಯಿಂದ ಕಾರ್ಯನಿರ್ವಹಿಸಬೇಕು ಎಂದು ಹೇಳಿದರು.

ಮಹಾದೇವ ಹಾದಿಮನಿ ಮಾತನಾಡಿದರು. ಬ್ಲಾಕ್ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಹನಮಂತ ಕಾಖಂಡಕಿ ಅಧ್ಯಕ್ಷತೆ ವಹಿಸಿದ್ದರು. ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಅಣವೀರಯ್ಯ ಪ್ಯಾಟಿಮಠ, ಟಿಎಪಿಎಂಎಸ್ ಅಧ್ಯಕ್ಷ ಎಂ.ಬಿ.ಕಂಬಿ, ಜಿಪಂ ಕೆಡಿಪಿ ಸದಸ್ಯ ಜಿ.ಆರ್ .ಪಾಟೀಲ, ಮುಖಂಡರಾದ ಎಂ.ಎಲ್. ಕೆಂಪಲಿಂಗಣ್ಣವರ, ಎಂ.ಎಸ್.ಕಾಳಗಿ, ರಾಮನಗೌಡರ ಜಕ್ಕನಗೌಡರ ಬಸವರಾಜ ಹಳ್ಳದಮನಿ, ಬಿ.ಎಸ್.ಮೋಖಾಶಿ, ಶಿವಾನಂದ ಗಸ್ತಿ, ಸಿದ್ದು ಸಾರಾವರಿ, ಸಿದ್ದು ಮೇಟಿ, ಸಂತೋಷ ಬಗಲಿ, ಶಿವಾನಂದ ಮಾದರ, ಕಾರ್ಯಕರ್ತರು ಉಪಸ್ಥಿತರಿದ್ದರು.



ರುದ್ರಪ್ಪ ಲಮಾಣಿಗೆ ಸಚಿವ ಸ್ಥಾನ ನೀಡಲು ಒತ್ತಾಯ

ಬಾಗಲಕೋಟೆ: 2023ರಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಬಂಜಾರ ಸಮುದಾಯ ಬೆಂಬಲಿಸಿದ ಪರಿಣಾಮ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ ಆದರೆ ಸಚಿವ ಸ್ಥಾನ ಹಂಚಿಕೆಯಲ್ಲಿ ಬಂಜಾರ ಸಮುದಾಯವನ್ನು ಕಡೆಗಣಿಸಲಾಗುತ್ತಿದೆ. 2ನೇ ಹಂತದ ಸಚಿವ ಸ್ಥಾನ ಹಂಚಿಕೆಯಲ್ಲಿ ಶಾಸಕ ರುದ್ರಪ್ಪ ಲಮಾಣಿಗೆ ಸಚಿವ ಸ್ಥಾನ ನೀಡಬೇಕು ಎಂದು ಬಂಜಾರ ಸಮುದಾಯದ ಮುಖಂಡ ಚಂದ್ರಶೇಖರ ರಾಠೋಡ ಹೇಳಿದರು.

ನವನಗರದ ಪತ್ರಿಕಾಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ 30 ಲಕ್ಷ ಜನಸಂಖ್ಯೆಯನ್ನು ಬಂಜಾರ ಸಮುದಾಯ ಹೊಂದಿದೆ. ಕಾಂಗ್ರೆಸ್ ಪಕ್ಷದ ಸೈದ್ಧಾಂತಿಕ ಮತಬ್ಯಾಂಕ್ ಆಗಿ ಬಂಜಾರ ಸಮಾಜವಿದೆ. ಏಕಪಕ್ಷೀಯವಾಗಿ ಕಾಂಗ್ರೆಸ್ ಪಕ್ಷವನ್ನು ಸಮಾಜ ಬೆಂಬಲಿಸುತ್ತಾ ಬಂದಿದೆ. ಸಚಿವ ಸ್ಥಾನ ನೀಡಲು ಸಮಾಜದವರಿಗೆ ಆದ್ಯತೆ ನೀಡಬೇಕು ಎಂದು ಒತ್ತಾಯಿಸಿದರು.

ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಸಂಪುಟದ ಮೊದಲ ಪಟ್ಟಿಯಲ್ಲೇ ರುದ್ರಪ್ಪ ಲಮಾಣಿ ಅವರಿಗೆ ಸಚಿವ ಸ್ಥಾನ ನೀಡುತ್ತಾರೆ ಎಂಬ ನಿರೀಕ್ಷೆ ಇತ್ತು ಆದರೆ ಅವಕಾಶ ನೀಡದಕ್ಕೆ ಸಮಾಜಕ್ಕೆ ಬೇಸರ ಬಂದಿದೆ. ಸರಳ ಸಜ್ಜನಿಕೆಯ, ಪ್ರಾಮಾಣಿಕ ನಾಯಕ ಹಾಗೂ ಪಕ್ಷ ನಿಷ್ಠೆ ಇರುವ ರುದ್ರಪ್ಪ ಲಮಾಣಿಗೆ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿದರು.



ಬಂಜಾರ ಸಮುದಾಯಕ್ಕೆ ಸಚಿವ ಸ್ಥಾನದ ಜತಗೆ, ಪಕ್ಷಕ್ಕಾಗಿ ಪ್ರಾಮಾಣಿಕವಾಗಿ ದುಡಿಯುವ ಯುವಕರಿಗೆ ನಿಗಮ ಮಂಡಳಿಯಲ್ಲಿ ಅವಕಾಶ ನೀಡಬೇಕು ಎಂದು ಒತ್ತಾಯಿಸಿದರು. ಇಳಕಲ್ ಸಂತೋಷ ಭಗತ್ ಮಾತನಾಡಿ, ರುದ್ರಪ್ಪ ಲಮಾಣಿಗೆ ಸಚಿವ ಸ್ಥಾನ ನೀಡದಿದ್ದರೆ ಮುಂದಿನ ದಿನಗಳಲ್ಲಿ ಸಮಾಜದಿಂದ ಕಾಂಗ್ರೆಸ್ ಪಕ್ಷಕ್ಕೆ ತಕ್ಕ ಪಾಠ ಕಲಿಸಲಾಗುವುದು ಎಂದು ಹೇಳಿದರು. ಬಲರಾಮ ಪವಾರ, ಗೋಪಾಲ ಜಾಧವ, ಆನಂದ ರಾಠೋಡ, ಬಾಬು ಚವ್ಹಾಣ್ ಇದ್ದರು.

ಆರ್.ಬಿ ತಿಮ್ಮಾಪುರಗೆ ಸಚಿವ ಸ್ಥಾನ ನೀಡಲು ಆಗ್ರಹ

ಜಮಖಂಡಿ: ಮಾಜಿ ಸಚಿವ ಆರ್.ಬಿ ತಿಮ್ಮಾಪುರ ಅವರಿಗೆ ಸಚಿವ ಸ್ಥಾನ ನೀಡಬೇಕು. ಜಾತ್ಯಾತೀತ ನಾಯಕರಿಗೆ ಸಚಿವ ಸ್ಥಾನ ನೀಡಬೇಕು ಎಂದು ತೌಫಿಕ್ ಪಾರ್ಥನಳ್ಳಿ ಹೇಳಿದರು.

ನಗರದ ರಮಾನಿವಾಸ ಆವರಣದಲ್ಲಿ ದಲಿತ ಸಂಘಗಳ ಒಕ್ಕೂಟ ಹಾಗು ಆರ್.ಬಿ ತಿಮ್ಮಾಪುರ ಅಭಿಮಾನಿಗಳಿಂದ ಪ್ರತಿಭಟನೆಯಲ್ಲಿ ಮಾತನಾಡಿದ ಅವರು, ಸೀದಾ ಸಾಮಾನ್ಯ ವ್ಯಕ್ತಿಯಾಗಿದ್ದ ದಲಿತ ನಾಯಕರಿಗೆ ಸಚಿವ ಸ್ಥಾನ ನೀಡಲೇಬೇಕು. ನೀರಾವರಿಗಾಗಿ ರೈತರ ಪರವಾಗಿ ಮುಖ್ಯ ಮಂತ್ರಿಗಳಿಗೆ ಒತ್ತಾಯಿಸಿ ಹೆಚ್ಚಿನ ಪರಿಹಾರ ನೀಡಿಸುವಲ್ಲಿ ಶ್ರಮಿಸಿದ್ದಾರೆ ಎಂದು ಹೇಳಿದರು.

ದಲಿತ ಸಂಘರ್ಷ ಸಮಿತಿ ನಾಗವಾರ ಬಣದ ರಾಜ್ಯ ಸಂಚಾಲಕ ಶ್ಯಾಮರಾವ ಘಾಟಗೆ ಮಾತನಾಡಿ, ಆರ್.ಬಿ ತಿಮ್ಮಾಪುರ ಜ್ಯಾತ್ಯಾತೀತ ವ್ಯಕ್ತಿವಾಗಿದ್ದಾರೆ. ಸಭ್ಯ ಪಾರದರ್ಶಕ ವ್ಯಕ್ತಿ ಇವರಿಗೆ ಮೊದಲನೇ ಹಂತದಲ್ಲಿಯೇ ಸಚಿವ ಸ್ಥಾನ ನೀಡಬೇಕಿತ್ತು ಆದರೆ ಅದು ಆಗಿಲ್ಲ. ಪ್ರಸ್ತುತ ಯಾವುದೇ ಖಾತೆನಿಡಿದರೂ ಸಹನಿಭಾಯಿಸುವ ಶಕ್ತಿ ಅವರಲ್ಲಿದೆ.ಇವರಿಗೆ ಸಮಾಜ ಕಲ್ಯಾಣ ಇಲಾಖೆ ನೀಡಿದ್ದರೆ ಉತ್ತಮವಾಗಿ ನಿರ್ವಹಿಸುತ್ತಿದ್ದರು. ಅಂತಹ ವ್ಯಕ್ತಿಗೆ ಸಚಿವ ಸ್ಥಾನ



ನೀಡಲೇಬೇಕು ಎಂದು ಹೇಳಿದರು. ಮುತ್ತಣ್ಣ ಮೇತ್ರಿ, ಅಬೂಬಕರ ಕುಡಚಿ, ಫಕೀರಸಾಬ ಬಾಗವಾನ ಸಂಜು ಮೀಸಿ, ದಾನೇಶ ಘಾಟಗೆ, ನಾಗಪ್ಪ ಹೆಗಡೆ, ಪ್ರೇಮ ಬಳೋಲ, ಮಾರುತಿ ಮರೇಗುದ್ದಿ, ರಾಜು ಲೋಖಂಡೆ ಸುನೀಲ ಘಾಟಗೆ, ಪರಸು ಮಾಂಗ, ರೇಣುಕಾ ಮಡ್ಡಿಮನಿ, ಗೌರವ್ವಾ ಮುಂಡಗನೂ, ಪಾರವವಾ ಅಲಕನೂರ, ಗಂಗವ್ವಾ ಮುಂಡಗನೂರ, ಗೀತಾ ಬಡಿಗೇರ, ಮಹಾದೇವಿ ಖೆಬ್ಬಾಣಿ, ಯಲ್ಲವ್ವಾ ಜಡ್ಡಿಮನಿ, ಮಹಾದೇವಿ ರೊಳ್ಳಿ, ಮಹಾದೇವಿ ಗಿರಿಸಾಗರ, ಮಂಡಲೀಕ ಮಾದರ, ಪರಸಪ್ಪಾ ಮಾದರ,ರೇಣಪ್ಪಾ ದಡ್ಡೀಮನಿ ಇದ್ದರು.

ಮೊಹರಂನಲ್ಲಿ ಕಾನೂನು ಸುವ್ಯವಸ್ಥೆ ಪಾಲಿಸಿ



ಲೋಕಾಪುರ: ಮೊಹರಂ ಆಚರಣೆ ಸಂದರ್ಭದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದು ಎಲ್ಲ ಕರ್ತವ್ಯವಾಗಿದೆ ಯಾವುದೇ ರೀತಿ ವದಂತಿಗಳಿಗೆ ಕಿವಿಗೊಡದೆ, ಶಾಂತಿ ಹಾಗೂ ಸಹಕಾರದಿಂದ ಹಬ್ಬವನ್ನು ಯಶಸ್ವಿಗೊಳಿಸಬೇಕು ಎಂದು ಪಿಎಸ್‌ಐ ಕೆ.ಬಿ.ಜಕ್ಕನ್ನವರ ಹೇಳಿದರು.

ಪಟ್ಟಣದ ಪೋಲಿಸ್ ಠಾಣೆಯಲ್ಲಿ ನಡೆದ ಮೊಹರಂ ಹಬ್ಬದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಪಟ್ಟಣವು ಸೇರಿದಂತೆ ಇಡೀ ತಾಲ್ಲೂಕು ಶಾಂತಿ, ಸೌಹಾರ್ದತೆಗೆ ಹೆಸರಾಗಿದೆ. ಮೊಹರಂ ಹಬ್ಬವನ್ನು ಅತ್ಯಂತ ಶಿಸ್ತುಬದ್ಧವಾಗಿ ಹಾಗೂ ಶಾಂತಿಯಿಂದ ಆಚರಿಸಬೇಕು. ಮುನ್ನೆಚ್ಚರಿಕೆಯಾಗಿ ಪಟ್ಟಣದ ಪ್ರಮುಖ ಸ್ಥಳಗಳಲ್ಲಿ ಸಿಸಿ ಕ್ಯಾಮೆರಾ ಅಳವಡಿಸಲಾಗುವುದು, ಗಲಾಟೆ, ಕೋಮು ಸೌಹಾರ್ದಕ್ಕೆ ಧಕ್ಕೆ ತಂದರೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.ಜಿಲ್ಲಾ ಗ್ಯಾರಂಟಿ ಯೋಜನಾ ಅನುಷ್ಠಾನ ಸಮಿತಿ ಉಪಾಧ್ಯಕ್ಷ ರಫೀಕ ಬೈರಕದಾರ ಮಾತನಾಡಿ ಗಂಧ ಮತ್ತು ಕತ್ತಲ ರಾತ್ರಿ ಕಾರ್ಯಕ್ರಮ ಶಾಂತ ಮತ್ತು ಸೌಹಾರ್ದತೆಯಿಂದ ಆಚರಿಸಬೇಕು, ಪಟ್ಟಣ ಒಳಗೊಂಡು ಎಲ್ಲ ಗ್ರಾಮೀಣ ಪ್ರದೇಶಗಳಲ್ಲಿಯೂಕೂಡಭಾವೈಕ್ಯತೆ ಸಾರುವ ಮೊಹರಂ ಹಬ್ಬವನ್ನು ಹಿಂದು ಮುಸ್ಲಿಂ ಬಾಂಧವರು ಶಾಂತಿ ಸೌಹಾರ್ದತೆಯಿಂದ ಆಚರಿಸಿ ಮೊಹರಂ ಹಬ್ಬಕ್ಕೆ ಕಳೆ ತರಬೇಕು ಎಂದರು.

ಪಟಾಕಿ ವ್ಯಾಪಾರಸ್ಥ ಆನಂದ ಹವಳಖೋಡ ಮಾತನಾಡಿ ಎಲ್ಲರೂ ಸೇರಿ ಶಾಂತಿಯಿಂದ ಮೊಹರಂ ಆಚರಿಸೋಣ ನಮ್ಮಲ್ಲಿರುವ ಕಲೆ ಮತ್ತು ಸಂಸ್ಕೃತಿ ಅನಾವರಣ ಮಾಡುವಂತಹ ಹಬ್ಬಗಳಲ್ಲಿ ಹಿರಿಯರು ಮತ್ತು ಯುವಕರು ಭಾಗಿಯಾಗಿ ಹಬ್ಬ ಆಚರಿಸೋಣ ಎಂದರು. ಮಹೇಶ ಹುಗ್ಗಿ, ಗೋವಿಂದ ಕೌಲಗಿ, ಸುರೇಶ ಹುಗ್ಗಿ, ಅಂಜುಮನ್-ಎ-ಇಸ್ಲಾಂ ಕಮಿಟಿ ಅಧ್ಯಕ್ಷ ಹಸನಡೋಂಗ್ರಿ ಮಹಾಲಿಂಗಪೂರ, ಮಾರುತಿ ರಂಗಣ್ಣವರ, ಗುಲಾಬಸಾಬ ಅತ್ತಾರ, ನಾಗೇಶ ಜಿರಗಾಳ, ಅಬ್ದುಲ್ ಮುಲ್ಲಾ, ಸೌಕತ್ತ ಕರ್ನಾಚಿ, ದಾವಲ ಮದರಖಾನ ಪೋಲಿಸ್ ಇಲಾಖೆ ಸಿಬ್ಬಂದಿ ಹಾಗೂ ಹಿಂದೂ-ಮುಸ್ಲಿಂ ಸಮಾಜದ ಪ್ರಮುಖರು ಇದ್ದರು.

ಸಾಮರಸ್ಯದಿಂದ ಮೊಹರಂ ಆಚರಿಸಿ

ತೇರದಾಳ: ಪ್ರತಿಯೊಂದು ಹಬ್ಬಗಳು ಪರಸ್ಪರರಲ್ಲಿ ಸಾಮರಸ್ಯ ಮೂಡಿಸುತ್ತವೆ. ಪ್ರತಿ ಧರ್ಮವು ನಮಗೆಲ್ಲ ಒಳ್ಳೆಯದನ್ನೇ ಹೇಳಿವೆ. ಎಂದೋ ನಡೆದು ಹೋದ ಘಟನೆಗಳನ್ನು ಮನದಲ್ಲಿಟ್ಟುಕೊಂಡು ಇವತ್ತಿನ ಸುಂದರ ಕ್ಷಣಗಳನ್ನು ಹಾಳುಮಾಡಿಕೊಳ್ಳಬೇಡಿ ಎಂದು ತೇರದಾಳ ಠಾಣೆಯ ಪಿಎಸ್‌ಐ ಎಸ್.ಸಿಂಗನ್ನವರ ಹೇಳಿದರು. ಮೋಹರಂ ಹಬ್ಬದ ನಿಮಿತ್ತ ತೇರದಾಳ ಪೊಲೀಸ್ ಠಾಣೆಯಲ್ಲಿ ಹಿಂದೂ-ಮುಸ್ಲಿಂ ಮುಖಂಡರ ಸಭೆ ಸೇರಿಸಿ ಮಾತನಾಡಿದ ಅವರು, ನಾವೆಲ್ಲ ಹಿಂದೂ ಮುಸ್ಲಿಂರೆಲ್ಲರೂ ಒಂದಾಗಿ ಆಚರಿಸುತ್ತಿದ್ದೆವು. ಈ ಹಬ್ಬ ಸಾಮರಸ್ಯದ ಸಂಕೇತವಾಗಿತ್ತು. ಸಮಾಜದಲ್ಲಿ ಕಾನೂನು ವಿರೋಧಿ ಚಟುವಟಿಕೆ ಕಂಡು ಬಂದಲ್ಲಿ ಕಾನೂನು ಕೈಗೆತ್ತಿಕೊಳ್ಳದೆ ನಿವಾರಿಸಿ ಇಲ್ಲದಿದ್ದರೆ ನಮಗೆ ತಿಳಿಸಿ. ಸಮಾಜದ ಸುವ್ಯವಸ್ಥೆಗೆ ನಿಮ್ಮ ಸಹಕಾರ ಪ್ರಮುಖವಾಗಿದೆ ಎಂದರು. ಹಲವಾರು ಪ್ರಮುಖರು ಹಬ್ಬದ ಕುರಿತು ಸೂಕ್ತ ಸಲಹೆ ನೀಡಿದರು. ರಮೇಶ ಧರೆನ್ನವರ, ನಿಂಗಪ್ಪ ಮಾಲಗಾಂವಿ, ದಯಾನಂದ ಕಾಳೆ, ಗೌತಮ ರೋಡಕರ, ಸದಾಶಿವ ಹೊಸಮನಿ, ಅನೀಲ ಗುಬ್ಬಿ, ಅಲ್ಲಾಭಕ್ಷ ಅಲಾಸ, ಶಂಕರ ಹುದ್ದಾರ, ಗೋಪಾಲ ಮಾಂಗ, ರಾಜೆಸಾಬ ನಗಾರ್ಜಿ, ಸುರೇಶ ಹಟ್ಟೆನ್ನವರ, ಲಕ್ಷ್ಮಣ ಹಟ್ಟೆನ್ನವರ, ವಿಜಯ ವಾಜಂತ್ರಿ, ಮಹಿಬೂಬ ಜಮಾದಾರ ಸೇರಿದಂತೆ ಇನ್ನಿತರರು ಇದ್ದರು.



ಮುಂದುವರಿದ ಸಂತ್ರಸ್ತರ ಹೋರಾಟ



ಹುನಗುಂದ: ತಾಲೂಕಿನ ಇದ್ದಲಗಿ ಗ್ರಾಮದ ಸಂತ್ರಸ್ತರಿಗೆ ಮೂಲ ಸೌಕರ್ಯ ಕಲ್ಪಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣಿ 44ನೇ ದಿನವಾದ ಗುರುವಾರ ಕೂಡಾ ಮುಂದುವರಿದಿದ್ದು, 40ಕ್ಕೂ ಹೆಚ್ಚು ದಿನಗಳಿಂದ ಧರಣಿಗೆ ಸರ್ಕಾರ ಮತ್ತು ಅಧಿಕಾರಿಗಳು ಸ್ಪಂದಿಸದೇ ಇರುವುದರಿಂದ ಧರಣಿಯ 41ನೇ ದಿನ ಅಹೋರಾತ್ರಿ ಧರಣಿ ಹಾಗೂ ಉಪವಾಸ ಸತ್ಯಾಗ್ರಹ ನಡೆಸಿದ್ದಾರೆ.

ಪುನರ್ವಸತಿ ಮತ್ತು ಪುನರ್ನಿರ್ಮಾಣ ಹಾಗೂ ಭೂ ಸ್ವಾಧೀನ ಇಲಾಖೆಯ ಮಹಾ ವ್ಯವಸ್ಥಾಪಕ ಗಜಾನನ ಬಾಲೆ ಹಾಗೂ ಭೂ ಸ್ವಾಧೀನ ಇಲಾಖೆಯ ಹೆಚ್ಚುವರಿ ಜಿಲ್ಲಾಧಿಕಾರಿ ಮಾರುತಿ ಬ್ಯಾಕೋಡ ಸ್ಥಳಕ್ಕೆ ಭೇಟಿ ನೀಡಿ ಪುನರ್ವಸತಿ ಕೇಂದ್ರ ಮತ್ತು ಸಂತ್ರಸ್ತರ ವಾಸಿಸುವ ಶಡ್ಡುಗಳನ್ನು ಪರಿಶೀಲಿಸಿದರು.

ಮುಖಂಡರಾದ ಹಸನಸಾಬ ಪಿಂಜಾರ, ಮಹಾಂತೇಶ ನಾಡಗೌಡ ಮಾತನಾಡಿ, ಕಳೆದ 1984ರಲ್ಲಿ ಮುಳಗಡೆಯಾಗಿರುವ ತಾಲೂಕಿನ ಮಾರೋಳ, ಹಾವರಗಿ, ಕೌಜಗನೂರ, ದಾಸಬಾಳ, ಧನ್ನೂರ ಕೂಡಲಸಂಗಮ ಸೇರಿದಂತೆ ಇತರೆ ಗ್ರಾಮಗಳ ಸಂತ್ರಸ್ತರಿಗೆ ಈಗಾಗಲೇ ನಾಲ್ಕುಗುಂಟೆನಿವೇಶನನೀಡಲಾಗಿದೆ. ಅದೇ ರೀತಿ ನಮಗೂ ಕೂಡಾ ಒಂದು ಗುಂಟೆ ಬದಲು ನಾಲ್ಕು ಗುಂಟೆ ನಿವೇಶನ ನೀಡಬೇಕು. ಪುನರ್ ವಸತಿ ಕೇಂದ್ರದಲ್ಲಿ ಮೂಲ ಸೌಲಭ್ಯಗಳನ್ನು ತುರ್ತಾಗಿ ಕೈಗೊಳ್ಳಬೇಕೆಂದು ಆಗ್ರಹಿಸಿದರು. ಮಾಜಿ ಶಾಸಕರು ಮತ್ತು ಅಧಿಕಾರಿಗಳು ನೀವು ಧರಣಿ ಕೈ ಬಿಡುವಂತೆ ಸಂತ್ರಸ್ತರಲ್ಲಿ ಮನವಿ ಮಾಡಿಕೊಂಡರು. ಆದರೆ ಬೇಡಿಕೆಗಳನ್ನು ಈಡೇರಿಸುವವರೆಗೂ ಜಾಗ ಬಿಟ್ಟು ಕದಲುವುದಿಲ್ಲ ಎಂದು ಹೋರಾಟಗಾರರು ಪಟ್ಟು ಹಿಡಿದರು.

ಬಸವರಾಜ ಬಡ್ಡಿ, ಕಲ್ಲಪ್ಪ ಆನೆಹೊಸೂರ, ಭೀಮಣ್ಣ ಅಡಿಹಾಳ, ಮಹಾಂತೇಶ ಆನೆಹೊಸೂರ, ಬಸವರಾಜ ಮುಳ್ಳೂರ,ಸರೋಜಮ್ಮ ಹಿರೇಮಠ, ಮೀನಾಕ್ಷಿ ಗಂಜೀಹಾಳ ಸೇರಿದಂತೆ ಅನೇಕರು ಇದ್ದರು.

ಕಿರುಸುದ್ದಿ

ಕಿಸಾನ್ ಸಮ್ಮಾನ್ ನಿಧಿ ಬಿಡುಗಡೆ ಇಂದು

ವಿಜಯಪುರ: ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ (ಪಿಎಂ-ಕಿಸಾನ್) ಯೋಜನೆಯ 23ನೇ ಕಂತಿನ ಆರ್ಥಿಕ ನೆರವನ್ನು ಬಿಡುಗಡೆ ಮಾಡಲು ದಿನಾಂಕ ನಿಗದಿಯಾಗಿದೆ. ಪ್ರಧಾನ ಮಂತ್ರಿಗಳು 2026ನೇ ಜೂ.20ರಂದು ಪಶ್ಚಿಮ ಬಂಗಾಳ ರಾಜ್ಯದ ತಾರಕೇಶ್ವರ್, ಹುಗ್ಲಿಯಲ್ಲಿ ಸಂಜೆ 4 'ಂಟೆಗೆ ಆಯೋಜಿಸಲಾಗಿರುವ ಕಾರ್ಯಕ್ರಮದಲ್ಲಿ ದೇಶದ ರೈತರ ಖಾತೆಗಳಿಗೆ ಆರ್ಥಿಕ ನೆರವನ್ನು ವರ್ಗಾವಣೆ ಮಾಡಲಿದ್ದಾರೆ. ಈ ವಿಶೇಷ ದಿನವನ್ನು ಪಿಎಂ ಕಿಸಾನ್ ಉತ್ಸವ ದಿವಸ್ ಎಂದು ಆಚರಿಸಲಾಗುತ್ತಿದೆ. ಈ ಯೋಜನೆಯಡಿ ಕರ್ನಾಟಕ ರಾಜ್ಯದ ಒಟ್ಟು 41,54,160 ಫಲಾನುಭವಿ ರೈತರಿಗೆ ಕೇಂದ್ರ ಸರ್ಕಾರದಿಂದ ಒಟ್ಟು 830.832 ಕೋಟಿಗಳ ರೂ. ಆರ್ಥಿಕ ನೆರವು ನೇರ ನಗದು ವರ್ಗಾವಣೆ ಮೂಲಕ ಜಮೆಯಾಗಲಿದೆ.

ಪೂರ್ವಭಾವಿ ಸಭೆ ನಾಳೆ

ಬಸವನಬಾಗೇವಾಡಿ: ಸಮಾಜಕ್ಕೆ ಸಂದೇಶ ಕೊಡುವ ಐತಿಹಾಸಿಕ ಕ್ರಾಂತಿಕಾರಿ ಹಾಗೂ ಭಕ್ತಿ ಪ್ರಧಾನ ನಾಟಕ ಪ್ರದರ್ಶನಗೊಳ್ಳಲು ಪಟ್ಟಣದಲ್ಲಿ ಬಸವ ಸಂಚಾರಿ ಕಲಾತಂಡ ಸ್ಥಾಪಿಸಲಾಗುವುದು ಆದ್ದರಿಂದ ಇದರ ನಿಮಿತ್ತ ಜೂ.21ರಂದು ಪಟ್ಟಣದ ಬಸವೇಶ್ವರ ದೇವಾಲಯದ ಉದ್ಯಾನವನದಲ್ಲಿ ಬೆಳಗ್ಗೆ 10.30ಗಂಟೆಗೆ ಪೂರ್ವಭಾವಿ ಸಭೆ ಕರೆಯಲಾಗಿದೆ. ಈ ಕಲಾ ತಂಡದಲ್ಲಿ ಅಭಿನಯಿಸುವ ಆಸಕ್ತರು ರೇವಣ್ಣ ಐಗಳಿ 9108224174, ಬಸವರಾಜ ಬಿದರಕುಂದಿ 9900400267 ಇವರನ್ನು ಸಂಪರ್ಕಿಸಲು ಪ್ರಕಟಣೆ ಮೂಲಕ ಕೋರಲಾಗಿದೆ.

ಜೂ.23ರಿಂದ ಉಚಿತ ಚಿಕಿತ್ಸಾ ಶಿಬಿರ

ವಿಜಯಪುರ: ನಗರದ ಬಿಎಲ್‌ಡಿಇ ಸಂಸ್ಥೆಯ ಎವ್ಹಿಎಸ್ ಆಯುರ್ವೇದ ಮಹಾವಿದ್ಯಾಲಯ, ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರದ ಕಾಯಚಿಕಿತ್ಸಾ ವಿಭಾಗದ ವತಿಯಿಂದ ಜೂ.23 ಹಾಗೂ ಜೂ.24ರಂದು ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ ಎರಡು ದಿನ ನಡೆಯಲಿದೆ. ಕಿಡ್ನಿ ವೈಫಲ್ಯ ಮತ್ತು ಕಿಡ್ನಿ ಸಂಬಂದಿತ ಸಮಸ್ಯೆಗಳಾದ ಮೂತ್ರ ಕಡಿಮೆ ವಿಸರ್ಜನೆ, ರಕ್ತ ಹೀನತೆ, ರಕ್ತದೊತ್ತಡ, ದೀರ್ಘ ಕಾಲಿನ ಕಿಡ್ನಿ ವೈಫಲ್ಯ, ಹೆೈಕ್ರೀಯಾಟಿನ್ ಲೆವಲ್ಸ್, ವಾಂತಿ, ಪಾದ ಉಜ್ಜುವಿಕೆ, ಸಕ್ಕರೆ ಕಾಯಿಲೆಯಿಂದ ಕಿಡ್ನಿ ವೈಫಲ್ಯ ಈ ರೀತಿಯ ಲಕ್ಷಣಗಳು ಹೊಂದಿರುವವರು ಈ ಶಿಬಿರದ ಸದುಪಯೋಗವನ್ನು ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಆಸ್ಪತ್ರೆಯ 9513397413), ಡಾ.ಅಶ್ವಿನಿ ಸಜ್ಜನ್ನವರ 7406737888) ಸಂಪರ್ಕಿಸಬಹುದಾಗಿದೆ ಎಂದು ಎವಿಎಸ್ ಆಯುರ್ವೇದ ಮಹಾವಿದ್ಯಾಲಯ, ಆಸ್ಪತ್ರೆ ಮತ್ತು ಸಂಶೋಧನೆ ಕೇಂದ್ರದ ಆಡಳಿತಾಧಿಕಾರಿ ಡಾ.ಸಂಜಯ ಕಡ್ಲಿಮಟ್ಟಿ ತಿಳಿಸಿದ್ದಾರೆ.

ಖೊಟ್ಟಿ ಸಹಿ ಮಾಡಿ ವೇತನ ಪಡೆಯುವ ವ್ಯಕ್ತಿ ವಿರುದ್ಧ ಕ್ರಮಕ್ಕೆ ಒತ್ತಾಯ



ವಿಜಯಪುರ: ಜಿಲ್ಲೆಯ ದೇವರಹಿಪ್ಪರಗಿ ತಾಲೂಕಿನ ಚಟ್ನಳ್ಳಿ ಗ್ರಾಮದಲ್ಲಿ ವಾಟರ್ ಮ್ಯಾನ್ ಆಗಿ ನೇಮಕಗೊಂಡ ಮಲ್ಲಣ್ಣ ಗುರುಪಾದ ಸಜ್ಜನ ಅವರ ಬದಲು 20 ವರ್ಷಗಳಿಂದ ಬೇರೊಬ್ಬ ಖೊಟ್ಟಿ ಸಹಿ ಮಾಡಿ ವೇತನ ಪಡೆಯುತ್ತಿರುವ ಸಂಗಣ್ಣ ಗುರಪಾದ ಸಜ್ಜನ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಅಖಿಲ ಭಾರತೀಯ ವಾಲ್ಮೀಕಿ ಸಮಾಜ ಸೇವಾ ಸಂಸ್ಥೆ ವತಿಯಿಂದ ಜಿಲ್ಲಾಧಿಕಾರಿ ಡಾ.ಆನಂದ ಕೆ. ಅವರಿಗೆ ಮನವಿ ಸಲ್ಲಿಸಲಾಯಿತು.

ದೇವರಹಿಪ್ಪರಗಿ ತಾಲೂಕಿನ ಹುಣಶ್ಯಾಳ ಗ್ರಾಮ ಪಮಚಾಯಿತಿ ವ್ಯಾಪ್ತಿಯಲ್ಲಿ ಬರುವ ಚಟ್ನಳ್ಳಿ ಗ್ರಾಮದಲ್ಲಿ ವಾಟರ್‌ಮ್ಯಾನ್ ಆಗಿ 2006 ರಲ್ಲಿ ನೇಮಕಗೊಂಡ ಮಲ್ಲಣ್ಣ ಗುರುಪಾದಪ್ಪ ಸಜ್ಜನ ಅವರು ಈ ಕರ್ತವ್ಯ ನಿರ್ವಹಿಸುತ್ತಿಲ್ಲ. ಅವರ ಬದಲಿಗೆ ಸಂಗಣ್ಣ ಗುರುಪಾದಪ್ಪ ಸಜ್ಜನ ಎಂಬ ವ್ಯಕ್ತಿ ನಕಲಿ ಸಹಿ ಮಾಡುತ್ತ ಕರ್ತವ್ಯ ನಿರ್ವಹಿಸುತ್ತಿದ್ದು, ಈ ವಿಷಯ ಗ್ರಾಮ ಪಂಚಾಯಿತಿ ಅಧಿಕಾರಿಗಳ ಗಮನದಲ್ಲಿದ್ದರೂ ಕೂಡ ನಕಲಿ ವ್ಯಕ್ತಿಗೆ ವೇತನ ಪಾವತಿ ಮಾಡುತ್ತಿರುವುದು ಕಂಡು ಬಂದಿದೆ. ಕೂಡಲೇ ಈ ಕುರಿತು ಪರಿಶೀಲಿಸಿ, ಸಂಬಂಧಿಸಿದ ಅಧಿಕಾರಿ ಹಾಗೂ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ. ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ ಬಟಗಿ, ಜಿಲ್ಲಾಧ್ಯಕ್ಷ ಶರಣುಗೌಡ ಪಾಟೀಲ, ವಿಶ್ವನಾಥ ಬಟಗಿ, ಸಂಜೀವ್ ನಾಯ್ಕೋಡಿ, ಸಿದ್ಲಿಂಗ ನಾಯ್ಕೋಡಿ, ಮಾನಶೆಪ್ಪ ಗಣಜಲಿ ಇದ್ದರು.



ಮುದ್ದೇಬಿಹಾಳ: ಎಂಜಿವಿಸಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ನಡೆದ ಶೈಕ್ಷಣಿಕ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಅಶೋಕ ಹಂಚಲಿ ಭಾಗವಹಿಸಿದ್ದರು. ಸಂಸ್ಥೆಯ ಚೇರ್ಮನ್ ಅಶೋಕ ತಡಸದ, ಪ್ರಾಚಾರ್ಯ ಸಿ.ಎಸ್.ಬಂಡರಗಲ್ಲ ಸಹ ಪ್ರಾಧ್ಯಾಪಕ ಎಚ್.ಡಿ.ನದಾಪ, ಬೋಳಶೆಟ್ಟಿ ಹಾಗೂ ಸುತಾರ ಸೇರಿದಂತೆ ವಿದ್ಯಾರ್ಥಿ ಬಳಗ ಉಪಸ್ಥಿತರಿದ್ದರು.

ರುದ್ರಪ್ಪ ಲಮಾಣಿಗೆ ಸಚಿವ ಸ್ಥಾನ ನೀಡಿ: ಐನಾಪುರ

ವಿಜಯಪುರ: ಬಂಜಾರಾ ಸಮಾಜದ ಕಾಂಗ್ರೆಸ್ ಶಾಸಕ ರುದ್ರಪ್ಪ ಲಮಾಣಿ ಅವರನ್ನು ಸಚಿವ ಸ್ಥಾನ ನೀಡುವ ಜೊತೆಗೆ ಜಿಲ್ಲೆಯವರಿಗೆ ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಸ್ಥಾನ ನೀಡಬೇಕು ಎಂದು ಮಾಜಿ ಶಾಸಕ, ಬಂಜಾರಾ ಸಮಾಜದ ಮುಖಂಡ ಮನೋಹರ ಐನಾಪುರ ಒತ್ತಾಯಿಸಿದರು. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬಂಜಾರಾ ಸಮಾಜ ಲಕ್ಷಾಂತರ ಜನರಿದ್ದಾರೆ, ಬಡತನ ಅನುಭವಿಸಿ ಗುಳೆ ಹೋಗುವ ಸಮುದಾಯ, ಹೀಗಾಗಿ ಸಮುದಾಯದ ಮುಖಂಡರು ಸಚಿವರಾಗುವುದು ಹಾಗೂ ಸಮುದಾಯದ ಧುರೀಣರು ಜನಪ್ರತಿನಿಧಿಗಳಾಗಬೇಕಾಗಿರುವುದು ಅಗತ್ಯವಾಗಿದೆ ಎಂದರು. ಮುಖಂಡ ಡಾ.ಬಾಬು ರಾಜೇಂದ್ರ ನಾಯಕ ಮಾತನಾಡಿ, ಬಂಜಾರಾ ಸಮಾಜ ಸರ್ಕಾರ ರಚನೆಯಲ್ಲಿ ಬಹುಮುಖ್ಯ ಪಾತ್ರ ವಹಿಸಿದ್ದು ನಿರೂಪಿತವಾಗಿದೆ. ಬಂಜಾರಾ ಸಮಾಜದ ಧೋರಣೆಯನ್ನು ಕಾಂಗ್ರೆಸ್ ಕಡೆಗಣಿಸಬಾರದು ಎಂದರು. ಜಿಪಂ ಮಾಜಿ ಸದಸ್ಯ ರಾಜಪಾಲ ಚವ್ಹಾಣ ಮಾತನಾಡಿ, ಸಾಮಾಜಿಕ ನ್ಯಾಯದ ಸೂತ್ರವಾಗಿ ಬಂಜಾರಾ ಸಮಾಜಕ್ಕೆ ಸಚಿವ ಸ್ಥಾನ ನೀಡಬೇಕಿತ್ತು, ಕಡಿಮೆ ಸಂಖ್ಯೆ ಇರುವ ಕ್ರಿಶ್ಚಿಯನ್ ಬಾಂಧವರಿಗೆ ಸಚಿವ ಸ್ಥಾನ ದೊರಕಿದೆ, ಕಾಂಗ್ರೆಸ್ ಬೆನ್ನೆಲುಬಾಗಿ ನಿಂತ ಬಂಜಾರಾ ಸಮಾಜಕ್ಕೆ ಅವಕಾಶ ನೀಡದಿರುವುದು ಯಾವ ನ್ಯಾಯ? ಎಂದರು. ಮುಖಂಡ ಬಿ.ಬಿ. ಚವ್ಹಾಣ ಮಾತನಾಡಿದರು. ಜಿಪಂ ಮಾಜಿ ಸದಸ್ಯೆ ಅನುಸೂಯಾ ಜಾಧವ, ನ್ಯಾಯವಾದಿ ಚಿತ್ರ, ನಟ ರಾಹುಲ್ ಐನಾಪುರ, ರಾಜಕುಮಾರ ಜಾಧವ, ಸುರೇಶ ಬಿಜಾಪೂರ ಪತ್ರಿಕಾಗೋಷ್ಠಿಯಲ್ಲಿ ಇದ್ದರು.



ವಿಜಯಪುರ: ಬಂಜಾರಾ ಸಮಾಜದ ಕಾಂಗ್ರೆಸ್ ಶಾಸಕ ರುದ್ರಪ್ಪ ಲಮಾಣಿ ಅವರನ್ನು ಸಚಿವ ಸ್ಥಾನ ನೀಡುವ ಜೊತೆಗೆ ಜಿಲ್ಲೆಯವರಿಗೆ ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಸ್ಥಾನ ನೀಡಬೇಕು ಎಂದು ಮಾಜಿ ಶಾಸಕ, ಬಂಜಾರಾ ಸಮಾಜದ ಮುಖಂಡ ಮನೋಹರ ಐನಾಪುರ ಒತ್ತಾಯಿಸಿದರು.

ಆಲಮಟ್ಟಿ ಅಣೆಕಟ್ಟು ನೀರಿನ ಮಟ್ಟ ಹೆಚ್ಚಳಕ್ಕಾಗಿ ಸಂಸದರಿಗೆ ಮನವಿ

ವಿಜಯಪುರ: ಜಿಲ್ಲೆಯ ಆಲಮಟ್ಟಿ ಅಣೆಕಟ್ಟೆಯ ನೀರಿನ ಮಟ್ಟ 524.256 ಮೀಟರ್ ವರೆಗೆ ಎತ್ತರ ಹಾಗೂ ಬಳಕೆಗೆ ಸಂಬಂಧಿಸಿದಂತೆ ಕೃಷ್ಣಾ ಕೊಳ್ಳ ಜಲ ಸಂರಕ್ಷಣಾ ಹೋರಾಟ ಸಮಿತಿ ನಿಯೋಗ ತೆರಳಿ ಶುಕ್ರವಾರ ಬಾಗಲಕೋಟೆ ಲೋಕಸಭಾ ಕ್ಷೇತ್ರದ ಸಂಸದ ಪಿ.ಸಿ.ಗದ್ದಿಗೌಡರ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮುಖಂಡರು ಮಾತನಾಡಿ, ಕೃಷ್ಣಾ ನದಿ ತಟದ ಜನರ ಬಹುಕಾಲದ ಮತ್ತು ನ್ಯಾಯಸಮ್ಮತ ಬೇಡಿಕೆಯಾದ ಆಲಮಟ್ಟಿ ಅಣೆಕಟ್ಟಿನ ನೀರಿನ ಸಂಗ್ರಹ ಹಾಗೂ ಬಳಕೆಯ ವಿಚಾರವು ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಅತ್ಯಂತ ಮಹತ್ವದ್ದಾಗಿದೆ. ಕೃಷಿ, ಕುಡಿಯುವ ನೀರು, ಕೈಗಾರಿಕೆ ಹಾಗೂ ಗ್ರಾಮೀಣಾಭಿವೃದ್ಧಿಯ ದೃಷ್ಟಿಯಿಂದ ಈ ಯೋಜನೆ ಲಕ್ಷಾಂತರ ಜನರ ಜೀವನದೊಂದಿಗೆ ನೇರವಾಗಿ ಸಂಬಂಧ ಹೊಂದಿದೆ ಎಂದರು.

ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಮಟ್ಟದಲ್ಲಿ ಅಗತ್ಯ ಕ್ರಮಗಳನ್ನು ಕೈಗೊಂಡು, ಆಲಮಟ್ಟಿ ಅಣೆಕಟ್ಟಿನ 524.256 ಮೀಟರ್ ಮಟ್ಟದವರೆಗೆ ನೀರಿನ ಸಂಗ್ರಹ ಹಾಗೂ ಬಳಕೆಗೆ ಶೀಘ್ರದಲ್ಲೇ ಗೆಜೆಟ್ ಅಧಿಸೂಚನೆ ಹೊರಬರುವಂತೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಜೊತೆಗೆ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರೊಂದಿಗೆ ಸಭೆ ಏರ್ಪಡಿಸಿ, ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರದ ಗಮನಕ್ಕೆ ಈ ವಿಷಯವನ್ನು ತಂದು, ನಿಯೋಗವನ್ನು ಕರೆದುಕೊಂಡು ಹೋಗುವಂತೆ ಸಂಸದರಲ್ಲಿ ಮನವಿ ಮಾಡಲಾಯಿತು.

ಆಲಮಟ್ಟಿ ಅಣೆಕಟ್ಟಿನ ನೀರಿನ ಸಂಗ್ರಹ ಹಾಗೂ ನೀರಿನ ಬಳಕೆಯ ಹಕ್ಕು ಕೇವಲ ಒಂದು ಜಿಲ್ಲೆಯ ಬೇಡಿಕೆಯಲ್ಲ, ಇದು ಇಡೀ ಕೃಷ್ಣಾ ಕೊಳ್ಳ ಪ್ರದೇಶದ ರೈತರು, ಯುವಕರು, ಮಹಿಳೆಯರು ಮತ್ತು ಜನಸಾಮಾನ್ಯರ ಬದುಕಿನ ಪ್ರಶ್ನೆಯಾಗಿದೆ.



▸▸ ಆಲಮಟ್ಟಿ ಅಣೆಕಟ್ಟಿನ 524.256 ಮೀಟರ್ ಮಟ್ಟದವರೆಗೆ ನೀರಿನ ಸಂಗ್ರಹ ಹಾಗೂ ಬಳಕೆಗೆ ಶೀಘ್ರದಲ್ಲೇ ಗೆಜೆಟ್ ಅಧಿಸೂಚನೆ ಹೊರಬರುವಂತೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ನೀರಿನ ನ್ಯಾಯಯುತ ಹಂಚಿಕೆ ಹಾಗೂ ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ನಮ್ಮ ಹೋರಾಟ ನಿರಂತರವಾಗಿ ಮುಂದುವರಿಯಲಿದೆ ಎಂದರು.

ನೀರು ನಮ್ಮ ಹಕ್ಕು, ಆಲಮಟ್ಟಿ ಅಣೆಕಟ್ಟೆಯಲ್ಲಿ 524.256 ಮೀ. ವರೆಗೆ ನೀರಿನ ಸಂಗ್ರಹ ಹಾಗೂ ಬಳಕೆ ನಮ್ಮ ಗುರಿ ಎಂಬ ಘೋಷಣೆಯೊಂದಿಗೆ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸುವುದಾಗಿ ತಿಳಿಸಿದರು.

ಕೃಷ್ಣಾ ಕೊಳ್ಳ ಜಲ ಸಂರಕ್ಷಣಾ ಹೋರಾಟ ಸಮಿತಿ ಸದಸ್ಯರಾದ ಪಂಚಪ್ಪ ಕಲಬುರ್ಗಿ, ಅರವಿಂದ ಕುಲಕರ್ಣಿ, ಬಿ.ಭಗವಾನ್ ರೆಡ್ಡಿ, ಎಸ್.ವಿ.ಪಾಟೀಲ, ಲಲಿತಾ ಬಿಜ್ಜರಗಿ, ಸುರೇಶ ಬಿಜಾಪುರ, ಸಿದ್ದಲಿಂಗ ಬಾಗೇವಾಡಿ, ಭೋಗೇಶ್ ಸೊಲ್ಲಾಪುರ, ಗುರುರಾಜ ಪಡಶೆಟ್ಟಿ ಇದ್ದರು.

ರೇವಣಸಿದ್ಧೇಶ್ವರ ಏತ ನೀರಾವರಿ ಪೂರ್ಣಗೊಂಡರೆ ರೈತರ ಅಭಿವೃದ್ಧಿ: ಶಾಸಕ

ವಿಜಯಪುರ: ಬೆಂಗಳೂರಿನ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ (ಕೆಬಿಜೆಎನ್ ಎಲ್) ವ್ಯವಸ್ಥಾಪಕ ನಿರ್ದೇಶಕರ ಕಚೇರಿಯಲ್ಲಿ ಇಂಡಿ ವಿಧಾನಸಭಾ ಕ್ಷೇತ್ರದ ಶಾಸಕ ಯಶವಂತರಾಯಗೌಡ ಪಾಟೀಲ ಅವರ ಅಧ್ಯಕ್ಷತೆಯಲ್ಲಿ ಶುಕ್ರವಾರ ಹೊರ್ತಿ ರೇವಣಸಿದ್ಧೇಶ್ವರ ಏತ ನೀರಾವರಿ ಯೋಜನೆ ಹಾಗೂ ತಿಡಗುಂದಿ ವಿಸ್ತರಣಾ ಕಾಲುವೆ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆ ನಡೆಯಿತು.

ಸಭೆಯಲ್ಲಿ ನೀರಾವರಿ ಯೋಜನೆಗಳ ಅನುಷ್ಠಾನದ ಪ್ರಗತಿ ಕುರಿತು ಅಧಿಕಾರಿಗಳೊಂದಿಗೆ ಸುದೀರ್ಘ ಚರ್ಚೆ ನಡೆಸಿದರು.

ನೀರಾವರಿ ಯೋಜನೆಗಳ ಕಾಮಗಾರಿಗಳ ಗುಣಮಟ್ಟ, ಕಾರ್ಯಗತಗೊಳಿಸುವ ವೇಗ, ರೈತರಿಗೆ ದೊರೆಯಲಿರುವ ಪ್ರಯೋಜನಗಳು ಹಾಗೂ ಯೋಜನೆಗಳನ್ನು ಶೀಘ್ರ ಪೂರ್ಣಗೊಳಿಸಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಸಮಗ್ರವಾಗಿ ಪರಿಶೀಲಿಸಲಾಯಿತು. ನೀರಾವರಿ ಸೌಲಭ್ಯವನ್ನು ಪರಿಣಾಮಕಾರಿಯಾಗಿ ರೈತರ ಹೊಲಗಳಿಗೆ ತಲುಪಿಸುವ ನಿಟ್ಟಿನಲ್ಲಿ ಯಾವುದೇ ನಿರ್ಲಕ್ಷ್ಯ ವಹಿಸದೆ ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಶಾಸಕ ಯಶವಂತರಾಯಗೌಡ ಪಾಟೀಲ ಸೂಚನೆ ನೀಡಿದರು. ಹೊರ್ತಿ ರೇವಣಸಿದ್ಧೇಶ್ವರ ಏತ ನೀರಾವರಿ ಯೋಜನೆ ಹಾಗೂ ತಿಡಗುಂದಿ ವಿಸ್ತರಣ ಕಾಲುವೆ ಕಾಮಗಾರಿಗಳು ಪೂರ್ಣಗೊಂಡಲ್ಲಿ ಇಂಡಿ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳ ರೈತರಿಗೆ ಮಹತ್ತರ ಅನುಕೂಲವಾಗಲಿದ್ದು, ಕೃಷಿ ಉತ್ಪಾದನೆ ಹೆಚ್ಚಳದೊಂದಿಗೆ ರೈತರ ಆರ್ಥಿಕ ಸ್ಥಿತಿ ಸುಧಾರಣೆಗೆ ಸಹಕಾರಿಯಾಗಲಿದೆ. ಈ ಯೋಜನೆಗಳು ಪ್ರದೇಶದ ಸಮಗ್ರ ಅಭಿವೃದ್ಧಿಗೆ ಹೊಸ ದಿಕ್ಕು ನೀಡಲಿವೆ ಎಂಬ ವಿಶ್ವಾಸವನ್ನೂ ವ್ಯಕ್ತಪಡಿಸಿದರು.

ಸಭೆಯಲ್ಲಿ ಕೆಬಿಜೆಎನ್‌ಎಲ್ ವ್ಯವಸ್ಥಾಪಕ ನಿರ್ದೇಶಕ ಕೃಷ್ಣಮೂರ್ತಿ ಕುಲಕರ್ಣಿ, ಆಲಮಟ್ಟಿ ಮುಖ್ಯ ಅಭಿಯಂತರ ಬಸವರಾಜು, ಅಧೀಕ್ಷಕ ಅಭಿಯಂತರ ಗೋವಿಂದ ರಾಠೋಡ, ಕಾರ್ಯಪಾಲಕ ಅಭಿಯಂತರರು ಹಾಗೂ ಇಲಾಖೆಯ ಹಿರಿಯ ಅಧಿಕಾರಿಗಳು ಇದ್ದರು.



ವಿದ್ಯುತ್ ಖಾಸಗೀಕರಣ ವಿರೋಧಿಸಿ ಮನವಿ

ಕೊಲ್ಹಾರ: ವಿದ್ಯುತ್ ವಲಯದ ಖಾಸಗೀಕರಣ ಕ್ರಮ ತೀವ್ರವಾಗಿ ವಿರೋಧಿಸಿ ಕರ್ನಾಟಕ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ತಹಶೀಲ್ದಾರ್ ಎಸ್.ಎಚ್.ಅರಕೇರಿಗೆ ಮನವಿ ಸಲ್ಲಿಸಿ, ವಿದ್ಯುತ್ ಖಾಸಗೀಕರಣ ಯೋಜನೆ ತಕ್ಷಣ ಕೈಬಿಡುವಂತೆ ಒತ್ತಾಯಿಸಿದರು.

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಕೊಲ್ಹಾರ ತಾಲೂಕು ಅಧ್ಯಕ್ಷ ಸೋಮು ಬಿರಾದಾರ ಅವರ ನೇತೃತ್ವದಲ್ಲಿ ತಾಲೂಕಿನ ರೈತರು ಶುಕ್ರವಾರ ಪಟ್ಟಣದ ಬಸವೇಶ್ವರ ಸರ್ಕಲದಿಂದ ಪಾದಯಾತ್ರೆ ಮೂಲಕ ತಹಶೀಲ್ದಾರರ ಕಚೇರಿವರೆಗೆ ತೆರಳಿದ ರೈತರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ರೈತ ಮುಖಂಡ ಟಿ.ಟಿ.ಹಗೇದಾಳ ಮಾತನಾಡಿ, ವಿದ್ಯುತ್ ಖಾಸಗೀಕರಣ ಜಾರಿಯಾದಲ್ಲಿ ಮುಂಬರುವ ದಿನಗಳಲ್ಲಿ ರೈತರು ಹಾಗೂ ಸಣ್ಣ ಉದ್ಯಮಿಗಳಿಗೆ ಇದು ಮಾರಕವಾಗುವ ಸಾಧ್ಯತೆ ಇದೆ. ಜೊತೆಗೆ ಇಲಾಖೆಯ ಸಿಬ್ಬಂದಿಗಳ ಉದ್ಯೋಗ ಭದ್ರತೆಗೂ ಧಕ್ಕೆಯಾಗುವ ಸಾಧ್ಯತೆ ಇದೆ ಎಂದು ಆತಂಕ ವ್ಯಕ್ತಪಡಿಸಿದರು.

ತಾಲೂಕು ಅಧ್ಯಕ್ಷ ಸೋಮು ಬಿರಾದಾರ ಮಾತನಾಡಿ, ತಾಲೂಕಿನಾದ್ಯಂತ ಕಳಪೆ ಗುಣಮಟ್ಟದ ವಿದ್ಯುತ್ ಪೂರೈಕೆಯಿಂದ ರೈತರು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ. ಹೆಸ್ಕಾಂ ಅಧಿಕಾರಿಗಳು ಸಮಸ್ಯೆಗಳಿಗೆ ಸಮರ್ಪಕವಾಗಿ ಸ್ಪಂದಿಸದಿರುವುದರಿಂದ ರೈತರಿಗೆ ಹೆಚ್ಚಿನ ತೊಂದರೆ ಉಂಟಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಯುವ ರೈತ ಮುಖಂಡ ಮಂಜುನಾಥ ಸೊನ್ನದ ಮಾತನಾಡಿ, ಜನರಿಂದ ಜನರಿಗಾಗಿ ಇರುವ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ಕಾರ ರೈತರ ಬೇಡಿಕೆಗಳಿಗೆ ಸ್ಪಂದಿಸಬೇಕು. ವಿದ್ಯುತ್ ಖಾಸಗೀಕರಣ ಮಾಡುವ ನಿರ್ಧಾರವನ್ನು ತಕ್ಷಣ ಹಿಂಪಡೆಯಬೇಕು. ರೈತರಿಗೆ ಸಮಯಕ್ಕೆ ಸರಿಯಾದ ಹಾಗೂ ನಿರಂತರ ವಿದ್ಯುತ್ ಪೂರೈಕೆ ಒದಗಿಸಬೇಕು ಎಂದು ಆಗ್ರಹಿಸಿದರು. ಪ್ರತಿಯೊಂದು ವಿಧಾನಸಭಾ ಕ್ಷೇತ್ರದ ಹಾಲಿ ಹಾಗೂ ಮಾಜಿ ಜನಪ್ರತಿನಿಧಿಗಳು ರೈತರ ಪರವಾಗಿ ನಿಂತು ವಿದ್ಯುತ್ ಖಾಸಗೀಕರಣವನ್ನು ವಿರೋಧಿಸಬೇಕು ಎಂದು ಒತ್ತಾಯಿಸಿದರು.

ಮುಖಂಡರಾದ ವಿಜಯಮಹಾಂತೇಶ ಗಿಡ್ಡಪ್ಪಗೋಳ, ಕಲ್ಲಪ್ಪ ಗಿಡ್ಡಪ್ಪಗೋಳ, ಮಲ್ಲಪ್ಪ ಗಾಣಿಗೇರ, ಶ್ರೀಶೈಲ ಬಾಡಗಿ, ಪಟ್ಟಣ ಪಂಚಾಯತಿ ಮಾಜಿ ಅಧ್ಯಕ್ಷ ಕಲ್ಲಪ್ಪ ಸೊನ್ನದ, ವಿರೂಪಾಕ್ಷ ಕೊಲಕಾರ, ಶಶಿಕಾಂತ ಬಿರಾದಾರ, ಮುದಕಣ್ಣ ಚಲವಾದಿ, ಶಂಕರಗೌಡ ಪಾಟೀಲ ಉಪಸ್ಥಿತರಿದ್ದರು.



ವಿದ್ಯುತ್ ಖಾಸಗೀಕರಣದಿಂದ ಕೃಷಿ ಚಟುವಟಿಕೆಗಳಿಗೆ ಸಂಕಷ್ಟ: ಬನಸೋಡೆ

ಚಡಚಣ: ಕರ್ನಾಟಕದ ಹೆಸ್ಕಾಂ ಸೇರಿದಂತೆ ವಿದ್ಯುತ್ ವಿತರಣಾ ಸಂಸ್ಥೆಗಳನ್ನು ಖಾಸಗೀಕರಣಗೊಳಿಸುವ ಹಾಗೂ ಟಾಟಾ ಪವರ್ ಕಂಪನಿ ಲಿಮಿಟೆಡ್ ಗೆ ವಿದ್ಯುತ್ ವಿತರಣಾ ಪರವಾನಗಿ ನೀಡುವ ಪ್ರಯತ್ನಗಳನ್ನು ತಕ್ಷಣವೇ ಕೈಬಿಡಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸಂಘಟನೆ ನೇತೃತ್ವದಲ್ಲಿ ನೂರಾರು ರೈತರು ಚಡಚಣದಲ್ಲಿ ಪ್ರತಿಭಟನೆ ನಡೆಸಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಸಂಘಟನೆಯ ಪದಾಧಿಕಾರಿಗಳು ಚಡಚಣ ತಹಶೀಲ್ದಾರ್ ಸಂಜಯ ಇಂಗಳೆ ಹಾಗೂ ಹೆಸ್ಕಾಂ ಎಇಇ ವಿಜಯಕುಮಾರ ಹವಾಲ್ದಾರ ಅವರ ಮೂಲಕ ಶುಕ್ರವಾರ ಪಟ್ಟಣದಲ್ಲಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಮನವಿ ಸಲ್ಲಿಸಿದರು.

ಸಂಘದ ಜಿಲ್ಲಾ ಉಪಾಧ್ಯಕ್ಷ ಮಹಾದೇವ ಬನಸೋಡೆ ಮಾತನಾಡಿ, ರೈತರು ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಹೆಸ್ಕಾಂ ಕಂಪನಿಯನ್ನು ಖಾಸಗೀಕರಣಗೊಳಿಸಬಾರದು ಎಂದು ಒತ್ತಾಯಿಸಿದರು. ವಿದ್ಯುತ್ ಖಾಸಗೀಕರಣವಾದರೆ ಕೃಷಿ ಚಟುವಟಿಕೆ ನಡೆಸುವುದು ಮತ್ತಷ್ಟು ಕಷ್ಟಕರವಾಗಲಿದೆ. ಇದರ ಪರಿಣಾಮ ಆಹಾರ ಉತ್ಪಾದನೆಯ ಮೇಲೂ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಹೇಳಿದರು.

ವಸಂತ ಬೈರಾಮಡಿ ಮಾತನಾಡಿ, ಸರಕಾರ ತನ್ನ ಆರ್ಥಿಕ ಕೊರತೆ ನೀಗಿಸಿಕೊಳ್ಳುವ ಸಲುವಾಗಿ ರೈತರಿಗೆ ಅನ್ಯಾಯ ಮಾಡುತ್ತಿದೆ. ರೈತರು ಸಂಕಷ್ಟದ ಪರಿಸ್ಥಿತಿ ಎದುರಿಸುತ್ತಿದ್ದಾರೆ.ಆದ್ದರಿಂದ ಮತ್ತಷ್ಟು ಸಂಕಷ್ಟ ಎದುರಾಗಲಿದೆ ಎಂದರು.



ದಯಾನಂದ ಕೋಳಿ, ಮುರುಗೇಶ ಶಿಂಪಿ, ನಾಗನಾಥಗೌಡ ಬಿರಾದಾರ, ಪ್ರಕಾಶ ಭತಗುಣಕಿ, ಪ್ರವೀಣ ಬಿರಾದಾರ, ಮಂಜುಳಾ ಪೂಜಾರಿ, ರಮೇಶ ಬೆಳ್ಳೆನವರ, ಗೇನಪ್ಪ ಬಿರಾದಾರ, ಅಣ್ಣಾ ಪೂಜಾರಿ, ದಾನಮ್ಮಗೌಡ್ತಿ ಪಾಟೀಲ, ರಮೇಶ ಭತಗುಣಕಿ, ಮಹಾದೇವ ಕರ್ಲಮಳ ನಿಂಗಪ್ಪ ಝುಳಕಿ, ವಿಠಲ್ ಮಾಳಾಬಾಗಿ, ಮಹೇಶ ವಿಳಗಿ, ಅರ್ಜುನ ಬಿರಾದಾರ, ಮಂಜುಳಾ ಪೂಜಾರಿ, ರವೀಂದ್ರ ಹೂಗಾರ, ಅಬ್ಬಾಸಲಿ ಹಿಂಗಣಿ , ರೈತರು ಉಪಸ್ಥಿತರಿದ್ದರು.

ಶಿಕ್ಷಣದ ಮೂಲಕ ಮಾದರಿ ಗ್ರಾಮವಾಗಲಿ: ಕಣಕಾಲಮಠ

ಮುದ್ದೇಬಿಹಾಳ: ಶಿಕ್ಷಣದ ಮೂಲಕ ಮಾದರಿ ಗ್ರಾಮವಾಗಲಿ, ಶಿಕ್ಷಣದಿಂದ ಸಮೃದ್ಧಿ ಎಲ್ಲೆಲ್ಲೂ ಹರಡಲಿ ಎಂದು ಲೋಟಗೇರಿ ದೇವಿ ಆರಾಧಕ ಡಾ.ಗುರುಮೂರ್ತಿ ಕಣಕಾಲಮಠ ಹೇಳಿದರು.

ತಾಲೂಕಿನ ಮದರಿ ಗ್ರಾಮದ ಶಿಕ್ಷಣ ಪ್ರೇಮಿಗಳ ಬಳಗ ಹಮ್ಮಿಕೊಂಡ 2025-2026ನೇ ಸಾಲಿನಲ್ಲಿ ಅತಿಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಮಾತನಾಡಿದರು. ಗ್ರಾಮೀಣ ಭಾಗದ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಕಾರ್ಯ ಶ್ಲಾಘನೀಯವೇ ಆಗಿದೆ. ಈ ದಿನ ಪ್ರತಿಭಾ ಪುರಸ್ಕಾರಕ್ಕೆ ಒಳಗಾದ ವಿದ್ಯಾರ್ಥಿಗಳು ಇನ್ನೂ ಹೆಚ್ಚಿನ ಸಾಧನೆಯನ್ನು ಮಾಡಿ ಮನೆಯ ಮತ್ತು ಊರಿನ ಸಮಾನಮನಸ್ಕರ ನಿರೀಕ್ಷೆಗೆ ಸಕಾರಾತ್ಮಕ ಬೆಳವಣಿಗೆ ನೀಡಬೇಕು. ಪ್ರತಿಭಾ ಪುರಸ್ಕಾರ ಸಮಾರಂಭ ನಿರಂತರವಾಗಿ ನಡೆಯಲಿ, ಮುಂದೆಯೂ ಸಾಧನೆಮಾಡುವವರಿಗೆ ವೇದಿಕೆಯಾಗಿ ಪರಿಣಮಿಸಲಿ ಎಂದು ನುಡಿದರು.



ವಿಶ್ರಾಂತ ಮುಖ್ಯಗುರುಗಳಾದ ಜಿ.ಎಚ್ .ಪಾಟೀಲ ಆಲೂರ ಮಾತನಾಡಿ, ವಿದ್ಯಾರ್ಥಿಗಳು ಪ್ರಾಮಾಣಿಕವಾಗಿ ಶಿಸ್ತು, ಸಂಯಮದಿಂದ ಅಭ್ಯಾಸ ಮಾಡಬೇಕು. ಶಿಕ್ಷಣದ ಜೊತೆಗೆ ಒಳ್ಳೆಯ ಸಂಸ್ಕಾರ ಪಡೆಯುವುದು ತುಂಬಾ ಅವಶ್ಯಕವಾಗಿದೆ. ಅಬ್ದುಲ್ ಕಲಾಂ ರವರು ಸಂಶೋಧನೆ ಮಾಡುವುದರಲ್ಲಿ ತಲ್ಲೀನರಾಗಿ ಮದುವೆ ಆಗಲಿಲ್ಲ ಹಾಗೆಯೆ ವಿದ್ಯಾರ್ಥಿಗಳು ಅಭ್ಯಾಸದಲ್ಲಿ ತಲ್ಲೀನರಾಗಿ ಜೀವನದಲ್ಲಿ ಯಶಸ್ಸು ಕಾಣಿರಿ ಎಂದು ತಿಳಿಸಿದರು.

ಗ್ರಾಪಂ ಮಾಜಿ ಅಧ್ಯಕ್ಷ ಸಿ.ಎಂ.ನಾಡಗೌಡ ಅಧ್ಯಕ್ಷತೆ ವಹಿಸಿದ್ದರು. ಗಣ್ಯರಾದ ಬಸಪ್ಪ ಕುಂಬಾರ, ಕಾಶಿನಕುಂಟಿ ಮುತ್ಯಾ, ಯಮನಪ್ಪ ಕುರಿ, ಎಚ್.ಎಸ್.ಭಜಂತ್ರಿ, ಜಿ.ಜಿ.ತಿಗಳಿ, ಎಂ.ಬಿ.ಉಗರಗೋಳ, ಯಮನಪ್ಪ ವಡ್ಡರ, ಬೀರಪ್ಪ ಮೇಟಿ, ಶಿವಪ್ಪ ರೂಡಗಿ, ಶರಣು ಗೌಡರ, ಸಂಗಣ್ಣ ಕುಂಟೋಜಿ, ಮೈಬುಸಾ ಮುಲ್ಲಾ, ಗ್ಯಾನಪ್ಪ ಗುರಿಕಾರ, ಚನ್ನಪ್ಪ ವಡ್ಡರ, ಬಸನಗೌಡ ಪಾಟೀಲ, ಶ್ರೀಶೈಲ ಕುಂಬಾರ, ಗಂಗಾಧರ ಕನ್ನೊಳ್ಳಿ, ಶಿವು ಕನ್ನೊಳ್ಳಿ, ಬಸವರಾಜ ಚಂದ್ರಗಿರಿ, ಬೈಲಪ್ಪ ತಿಗಳಿ, ಶರೀಫ್ ನದಾಫ, ಶರಣು ನಾಗೂರ, ಮಂಜುನಾಥ ಪಡದಾಳಿ ಇದ್ದರು.

ವಿದ್ಯುತ್ ಖಾಸಗೀಕರಣ: ರೈತರಿಗೆ ತೊಂದರೆ

ದೇವರ ಹಿಪ್ಪರಗಿ: ರೈತರು ಈಗಾಗಲೇ ಕೃಷಿಯಲ್ಲಿ ನಷ್ಟ ಅನುಭವಿಸುತ್ತಿದ್ದು, ವಿದ್ಯುತ್ ಖಾಸಗೀಕರಣವಾದರೆ ಕೃಷಿ ಭೂಮಿ ಕೈಬಿಟ್ಟು ಅನ್ನಕ್ಕಾಗಿ ಪರದಾಡಬೇಕಾಗುತ್ತದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾಧ್ಯಕ್ಷ ಚುನ್ನಪ್ಪ ಪೂಜೇರಿ ಹೇಳಿದರು.

ವಿದ್ಯುತ್ ಸರಬರಾಜು ಕಂಪನಿಯನ್ನು ಟಾಟಾ ಪವರ್ ಸೇರಿದಂತೆ ಇತರೆ ಖಾಸಗಿ ಸಂಸ್ಥೆಗಳಿಗೆ ಹಸ್ತಾಂತರಿಸುವುದನ್ನು ವಿರೋಧಿಸಿ ಶುಕ್ರವಾರ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಪಟ್ಟಣದ ಹೆಸ್ಕಾಂ ಎಇಇ ಅಧಿಕಾರಿ ಸತೀಶ ಸುಲಾಖೆ ಹಾಗೂ ತಹಶೀಲ್ದಾರ್ ನಿಂಗಪ್ಪ ಬಿರಾದಾರ ಅವರಿಗೆ ಪ್ರತ್ಯೇಕ ಆಕ್ಷೇಪಣಾ ಮನವಿ ಸಲ್ಲಿಸಿ ಮಾತನಾಡಿದರು. ರೈತರು, ಗ್ರಾಹಕರು ಹಾಗೂ ನೌಕರರ ಹಿತದೃಷ್ಟಿಯಿಂದ ಈ ಖಾಸಗೀಕರಣದ ಸಂಚನ್ನು ತಕ್ಷಣ ಕೈಬಿಡಬೇಕು, ಸಾರ್ವಜನಿಕರ ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾದ ವಿದ್ಯುತ್ ಕಂಬ, ಟ್ರಾನ್ಸ್‌ಫಾರ್ಮರ್ ಗಳ ಮೂಲಸೌಕರ್ಯಗಳನ್ನು ಖಾಸಗಿಯವರಿಗೆ ನೀಡುವುದು ಅವರಿಗೆ ಲಾಭ ಮಾಡಿಕೊಟ್ಟಂತಾಗುತ್ತದೆ. ಜೊತೆಗೆ ಜೀವದ ಹಂಗು ತೊರೆದು ದುಡಿಯುತ್ತಿರುವ ಸಾವಿರಾರು ಹೆಸ್ಕಾಂ ಕಾರ್ಮಿಕರ ಬದುಕು ಅತಂತ್ರವಾಗಲಿದೆ. ಬಡವರಿಗೆ ಸಿಗುತ್ತಿರುವ ಉಚಿತ ವಿದ್ಯುತ್, ಗೃಹಜ್ಯೋತಿ, ಭಾಗ್ಯಜ್ಯೋತಿಯಂತಹ ಜನಕಲ್ಯಾಣ ಯೋಜನೆಗಳು ನಿಂತುಹೋಗಲಿವೆ ಹಾಗೂ ಉದ್ಯೋಗಾಕಾಂಕ್ಷಿಗಳಿಗೆ ಸರ್ಕಾರಿ ಕೆಲಸ ಗಗನಕುಸುಮವಾಗಲಿದೆ ಎಂದು ಆತಂಕ ವ್ಯಕ್ತಪಡಿಸದ ಅವರು ಖಾಸಗಿ ಪರವಾನಿಗೆ ಪ್ರಕ್ರಿಯೆ ನಿಲ್ಲಿಸದಿದ್ದರೆ ರಾಜ್ಯದ 31 ಜಿಲ್ಲೆಗಳಲ್ಲಿ ಹೋರಾಟ ಮಾಡಲಾಗುವುದು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಮನಗೌಡ ಪಾಟೀಲ, ಜಿಲ್ಲಾ ಉಪಾಧ್ಯಕ್ಷ ಸಂಪತ್ ಜಮಾದಾರ, ತಾಲೂಕು ಗೌರವಾಧ್ಯಕ್ಷ ಶಿವಾನಂದಯ್ಯ ಹಿರೆಮಠ, ತಾಲೂಕಧ್ಯಕ್ಷ ಈರಪ್ಪ ಕುಳೆಕುಮಟಗಿ, ಉಪಾದಾಯಕ್ಷ ಸಿ.ಎಸ. ಪ್ಯಾಟಿ, ಅಶೋಕ ನಾಯ್ಕೋಡಿ, ಮಹಿಳಾ ಅಧ್ಯಕ್ಷ ಚನ್ನಮ್ಮ ಮೇತ್ರಿ ಇದ್ದರು.



ನೀರಿನ ಸಮಸ್ಯೆ: ಪ್ರತಿಭಟನೆ

ಇಂಡಿ: ತಾಲೂಕಿನ ತೆಗ್ಗೆಳ್ಳಿ ಗ್ರಾಮದ ಹೊಸ ಊರಿನ ಗ್ರಾಮಸ್ಥರು ಮತ್ತು ಮಹಿಳೆಯರು ನೀರಿನ ತೊಂದರೆ ಆಗ್ರಹಿಸಿ ಆಡಳಿತಸೌಧ ಮುಂದೆ ಖಾಲಿ ಕೊಡಗಳ ಪ್ರದರ್ಶನ ಮಾಡಿ ಪ್ರತಿಭಟನೆ ನಡೆಸಿ ತಹಸೀಲ್ದಾರ್ ಅವರಿಗೆ ಮನವಿ ಸಲ್ಲಿಸಿದರು.

ಹೊಸ ಊರಿನಲ್ಲಿ ಸುಮಾರು ಮೂರು ನೂರು ಮನೆಗಳಿರುವ ಬಡಾವಣೆ. ಇಲ್ಲಿ ಕುಡಿಯುವ ನೀರಿಗಾಗಿ ಪ್ರತಿದಿನ ಕೇವಲ ಒಂದು ಬಾರಿ ಹದಿನೈದು ನಿಮಿಷ ಮಾತ್ರ ಬಿಡುತ್ತಾರೆ. ತದನಂತರ ನೀರು ಬೇಕೆಂದರೆ ತೋಟಗಳಿಗೆ ದೂರದ ವರೆಗೆ ಹೋಗಿ ತರಬೇಕು.

ಇದು ಮಹಿಳೆಯರಿಗೆ ಮತ್ತು ವೃದ್ಧರಿಗೆ ತೊಂದರೆಯಾಗುತ್ತಿದೆ. ಈ ವಿಷಯ ಕುರಿತು ಪಿಡಿಓ ಇವರ ಗಮನಕ್ಕೆ ಹಲವಾರು ಬಾರಿ ತಂದರೂ ಪ್ರಯೋಜನವಾಗಿಲ್ಲ. ಹೀಗಾಗಿ ಜೆಡಿ ಎಸ್ ಮುಖಂಡ ಬಿ.ಡಿ.ಪಾಟೀಲ, ಆಯೂಬ ನಾಟಿಕಾರ ಮತ್ತು ಸಿದ್ದು ಡಂಗಾ, ದಂಡಾಬಾಯಿ ಬೀರನಹಳ್ಳಿ, ಕಸ್ತೂರಿ ಬಿರನಹಳ್ಳಿ, ರಾಜಶ್ರೀ ಕೊರೆ, ನಿಂಗವ್ವ ಬಿರನಹಳ್ಳಿ, ದೇವಕಿ ಕೊರೆ, ಡಾ.ರಮೇಶ ರಾಠೋಡ, ಶ್ರೀಶೈಲಗೌಡ ಬಿರಾದಾರ ಆಡಳಿತಸೌಧ ಎದುರು ಪ್ರತಿಭಟನೆ ನಡೆಸಿದರು.



ಕೃಷಿ ಪರಿಕರ ಖರೀದಿಸುವಾಗ ಬಿಲ್ ಪಡೆದುಕೊಳ್ಳಿ

ಸಿಂದಗಿ: ಪರವಾನಗಿ ಇಲ್ಲದ ಕೀಟನಾಶಕಗಳನ್ನು ಮಾರಾಟ ಮಾಡುತ್ತಿರುವುದು ಪತ್ತೆಯಾದರೆ ಸಂಬಂಧಿಸಿದ ವ್ಯಾಪಾರಿಗಳ ಪರವಾನಿಗೆ ರದ್ದುಪಡಿಸಲಾಗುವುದು. ರೈತರು ಯಾವುದೇ ಕೃಷಿ ಪರಿಕರಗಳನ್ನು ಖರೀದಿಸುವಾಗ ಕಡ್ಡಾಯವಾಗಿ ಬಿಲ್ ಪಡೆದುಕೊಳ್ಳಬೇಕು. ರೈತರ ಹಿತದೃಷ್ಟಿಯಿಂದ ಕೃಷಿ ಇಲಾಖೆ ನಿರಂತರವಾಗಿ ಪರಿಶೀಲನೆ ನಡೆಸಲಿದ್ದು, ನಿಯಮ ಉಲ್ಲಂಘಿಸುವವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಬೆಳಗಾವಿ ಕೋಶದ ಜಂಟಿ ಕೃಷಿ ನಿರ್ದೇಶಕ ವಿದ್ಯಾನಂದ ಎಚ್ಚರಿಕೆ ನೀಡಿದ್ದಾರೆ.

ಪರಿಶೀಲನೆ ಬಳಿಕ ಮಾಧ್ಯಮ ಪ್ರತಿನಿಧಿಗಳು ಕೇಳಿದ ರೈತರಿಂದ ಯೂರಿಯಾ ಹಾಗೂ ಡಿಎಪಿ ಗೊಬ್ಬರಖರೀದಿಸುವಸಂದರ್ಭದಲ್ಲಿ ಬೇರೆ ಗೊಬ್ಬರವು ಖರೀದಿಗೆ ಒತ್ತಡ ಹಾಕುತ್ತಾರೆ ಅವರ ವಿರುದ್ಧ ಏನು ಕ್ರಮಕ್ಯಗೊಳ್ಳುತ್ತಿರಿ ಎಂಬ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಇತರೆ ಗೊಬ್ಬರಗಳನ್ನು ಕಡ್ಡಾಯವಾಗಿ ಖರೀದಿಸುವಂತೆ ಒತ್ತಾಯಿಸುವ ಪದ್ಧತಿ ನಿಯಮಬಾಹಿರವಾಗಿದ್ದು, ರೈತರಿಗೆ ಸರ್ಕಾರದಿಂದ ಅನುಮೋದಿತ ಹಾಗೂ ಗುಣಮಟ್ಟದ ಬೀಜ, ರಸಗೊಬ್ಬರ ಮತ್ತು ಕೀಟನಾಶಕಗಳನ್ನು ಮಾತ್ರ ಮಾರಾಟ ಮಾಡಬೇಕು. ಪರವಾನಿಗೆ ಇಲ್ಲದ ಕೀಟನಾಶಕಗಳು ಅಥವಾ ನಕಲಿ ಕೃಷಿ ಪರಿಕರಗಳನ್ನು ಮಾರಾಟ ಮಾಡುತ್ತಿರುವುದು ಕಂಡುಬಂದರೆ ಸಂಬಂಧಿಸಿದ ಅಂಗಡಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು. ಬೆಳಗಾವಿ ಕೋಶದ ಜಂಟಿ ಕೃಷಿ ನಿರ್ದೇಶಕ ವಿದ್ಯಾನಂದ ಮಾತನಾಡಿ, ಬೆಳಗಾವಿ ವಿಭಾಗದ ವ್ಯಾಪ್ತಿಯಲ್ಲಿ ಏಳು ಜಿಲ್ಲೆಗಳು ಒಳಗೊಂಡಿರುವುದರಿಂದ ಪ್ರತಿ ಜಿಲ್ಲೆಯ ಕೃಷಿ ಚಟುವಟಿಕೆಗಳು ಹಾಗೂ ಗೊಬ್ಬರ ವಿತರಣೆಯ ಸ್ಥಿತಿಗತಿಗಳನ್ನು ಪರಿಶೀಲಿಸಲು ತಿಂಗಳಿಗೆ ಒಮ್ಮೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗುತ್ತದೆ ಎಂದರು.

ಇಂಡಿ ಕೃಷಿ ಉಪನಿರ್ದೇಶಕ ಚಂದ್ರಕಾಂತ ಪವಾರ ಸೇರಿದಂತೆ ಕೃಷಿ ಇಲಾಖೆಯ ಅಧಿಕಾರಿಗಳು, ತಂಡದ ಸದಸ್ಯರು ಇದ್ದರು.



ಕಿರುಸುದ್ದಿ

ಶಾಲಾ ವಿದ್ಯಾರ್ಥಿನಿಯರಿಗೆ ಜಾಗೃತಿ ಸಂದೇಶ

ಗಂಗಾವತಿ: ನಗರ ಪೊಲೀಸ್ ಠಾಣೆ ಆವರಣದಲ್ಲಿ ಶುಕ್ರವಾರ 'ತೆರೆದ ಮನೆ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಪಿ.ಎಂ.ಶ್ರೀ ಬಾಲಕಿಯರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ನಗರ ಪೊಲೀಸ್ ಠಾಣೆಯ ಪಿಐ ಪ್ರಕಾಶ್ ಯಾಳವಾರ ಅವರು ವಿದ್ಯಾರ್ಥಿನಿಯರನ್ನು ಉದ್ದೇಶಿಸಿ ಮಾತನಾಡಿ, ಕಾನೂನು ಪಾಲನೆ, ರಸ್ತೆ ಸುರಕ್ಷತೆ, ಮಾದಕ ವಸ್ತುಗಳ ದುಷ್ಪರಿಣಾಮಗಳು, ಸೈಬರ್ ಅಪರಾಧಗಳ ಬಗ್ಗೆ ಜಾಗೃತಿ ಹಾಗೂ ಮಹಿಳಾ ಮತ್ತು ಮಕ್ಕಳ ರಕ್ಷಣೆಗೆ ಸಂಬಂಧಿಸಿದ ಸಹಾಯವಾಣಿ ಸಂಖ್ಯೆಗಳ ಕುರಿತು ಮಾಹಿತಿ ನೀಡಿದರು.

ಪೊಲೀಸ್ ಠಾಣೆಯ ಕಾರ್ಯವೈಖರಿಯನ್ನು ವಿದ್ಯಾರ್ಥಿನಿಯರಿಗೆ ಪರಿಚಯಿಸಿ, ಸಾರ್ವಜನಿಕರೊಂದಿಗೆ ಪೊಲೀಸ್ ಇಲಾಖೆಯ ಸ್ನೇಹಪರ ಸಂಬಂಧವನ್ನು ಬೆಳೆಸುವ ಉದ್ದೇಶದಿಂದ ಇಂತಹ 'ತೆರೆದ ಮನೆ' ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ ಎಂದು ತಿಳಿಸಿದರು. ನಗರ ಪೊಲೀಸ್ ಠಾಣೆ ಎಎಸ್ಐ ಶಿವಶರಣ, ಸುಬ್ರಮಣ್ಯಂ, ಪೊಲೀಸ್ ಸಿಬ್ಬಂದಿ ಮರಿಶಾಂತಗೌಡ, ಫಕೀರಪ್ಪ, ಕರಿಬಸಯ್ಯ ಹಿರೇಮಠ, ಮಹೇಶ, ಶಶಿಕಲಾ, ಈರಮ್ಮ ಹಿರೇಮಠ, ಶಾಲೆಯ ಶಿಕ್ಷಕ ಗಂಗಮ್ಮ, ಶ್ರೀದೇವಿ, ಮಂಜುಳಾ, ರಜೀಯಾಬೇಗಂ, ಪೊಲೀಸ್, ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.

ಪ್ರಧಾನ ಕಾರ್ಯದರ್ಶಿ ಆಗಿ ಮದನ್‌ಕುಮಾರ್ ನೇಮಕ

ಗಂಗಾವತಿ: ಸಂಘ ಪರಿವಾರದ ಸಕ್ರಿಯ ಕಾರ್ಯಕರ್ತರಾಗಿ ಸೇವೆ ಸಲ್ಲಿಸುತ್ತಿರುವ ಮದನ್ ಕುಮಾರ್ ಈಡಿಗೇರ್ ಜಿಲ್ಲಾ ಯುವ ಮೋರ್ಚಾ ಕಾರ್ಯದರ್ಶಿಯಿಂದ ಈಗ ಹಿಂದುಳಿದ ವರ್ಗದ ಮೋರ್ಚಾ ಘಟಕದ ಪ್ರಧಾನ ಕಾರ್ಯದರ್ಶಿಯಾಗಿ ನೇಮಕಗೊಳಿಸಿ ಬಿಜೆಪಿ ಜಿಲ್ಲಾಧ್ಯಕ್ಷ ನವೀನ್ ಕುಮಾರ ಗುಳಗಣ್ಣನವರು ಆದೇಶ ಮಾಡಿದ್ದಾರೆ.



ಮದನ್ ಕುಮಾರ್ ಈಡಿಗೇರ್, ಎಬಿವಿಪಿ ಕಾರ್ಯಕರ್ತನಾಗಿ, ವಿಸ್ತಾರಕನಾಗಿ, ಅಸ್ಸಾಂ, ಅರುಣಾಚಲ ಪ್ರದೇಶ ರಾಜ್ಯಕ್ಕೂ ವಿಸ್ತಾರಕನಾಗಿ ವಿದ್ಯಾರ್ಥಿ ಸಂಘಟನೆಯನ್ನು ಕಟ್ಟಿ ಬೆಳೆಸಿದ್ದು, ಕ್ರಿಯಾಶೀಲ ಯುವಕನಾಗಿದ್ದಾರೆ. ಅವರ ಪಕ್ಷ ಸಂಘಟನೆ, ಕಾರ್ಯಪ್ರವೃತ್ತಿ ಗುರುತಿಸಿ ರಾಜ್ಯ ಹಾಗೂ ಜಿಲ್ಲಾಮಟ್ಟದ ಹಿರಿಯರು ಹಿಂದುಳಿದ ವರ್ಗದ ಪ್ರಧಾನ ಕಾರ್ಯದರ್ಶಿ ಜವಾಬ್ದಾರಿ ನೀಡಿದ್ದಾರೆ.

ಬೋಸರಾಜುಗೆ ಸಚಿವ ಸ್ಥಾನ ನೀಡಲು ಒತ್ತಾಯ



ಮಾನ್ವಿ: ಪಟ್ಟಣದ ಬಸವ ವೃತ್ತದಲ್ಲಿ ಎನ್.ಎಸ್.ಬೋಸರಾಜು ಅಭಿಮಾನಿ ಬಳಗದ ವತಿಯಿಂದ ಜಿಲ್ಲೆಯ ವಿಧಾನ ಪರಿಷತ್ ಸದಸ್ಯರು ಹಾಗೂ ಮಾಜಿ ಸಚಿವ ಎನ್.ಎಸ್.ಬೋಸರಾಜು ರವರನ್ನು ರಾಜ್ಯದ ಸಚಿವ ಸಂಪುಟದಲ್ಲಿ ಮುಂದುವರೆಸಬೇಕು ಹಾಗೂ ರಾಯಚೂರು ಜಿಲ್ಲೆಯ ಉಸ್ತುವಾರಿ ಸಚಿವರನ್ನಾಗಿ ನೇಮಕ ಮಾಡಬೇಕು ಎಂದು ಸಾವಿರಾರು ಅಭಿಮಾನಿಗಳು ಹಾಗೂ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಒತ್ತಾಯಿಸಿದರು. ಬೋಸರಾಜು ಅಭಿಮಾನಿ ಬಳಗದ ಸಂಚಾಲಕ ಮಾಜಿ ಎಪಿಎಂಸಿ ಸದಸ್ಯ ಶಿವರಾಜ ನಾಯಕ ಮಾತನಾಡಿ, ಬೋಸರಾಜು ಅವರು ಶಾಸಕರಾಗಿ, ಕಲ್ಯಾಣ ಕರ್ನಾಟಕ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ, ಸಚಿವರಾಗಿ ಅಭಿವೃದ್ಧಿ ಕಾರ್ಯ ಮಾಡಿದ್ದಾರೆ. ಬೋಸರಾಜುಗೆ ಸಚಿವ ಸ್ಥಾನವನ್ನು ನೀಡಬೇಕು ಹಾಗೂ ರಾಯಚೂರು ಉಸ್ತುವಾರಿಯನ್ನಾಗಿ ನೀಡಬೇಕು ಎಂದು ಒತ್ತಾಯಿಸಿದರು. ಕಾಂಗ್ರೆಸ್ ಹಿರಿಯ ಮುಖಂಡರಾದ ಬಾಲಸ್ವಾಮಿ ಕೊಡ್ಲಿ ಮಾತನಾಡಿ, 2028ರಲ್ಲಿ ಜಿಲ್ಲೆಯ 8 ತಾಲೂಕುಗಳಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ಹಾಗೂ ಈ ಭಾಗದ ಸಮಗ್ರವಾದ ಅಭಿವೃದ್ಧಿಗಾಗಿ ಬೋಸರಾಜುರವರಿಗೆ ಸಚಿವ ಸ್ಥಾನ ನೀಡಬೇಕು ಎಂದರು. ಶರಣಪ್ಪ ಗುಡದಿನ್ನಿ, ಕುರ್ಡಿ ಚಂದ್ರಶೇಖರ, ಖಾಲಿದ್ ಗುರು, ಕೆ.ಬಸವಂತಪ್ಪ, ರಾಜಾ ಸುಭಾಷಚಂದ್ರನಾಯಕ, ತಿಪ್ಪಣ್ಣ ಬಾಗಲವಾಡ, ಅಮ್ಜದ್ ಖಾನ್, ಸುಖಮುನಿ, ಶರಣಗೌಡ, ಮಾನ್ವಿ ವಿಧಾನಸಭಾ ಕ್ಷೇತ್ರದ ಸಾವಿರಾರು ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಭಾಗವಹಿಸಿದ್ದರು.



ಗಂಗಾವತಿ: ನಗರ ಪೊಲೀಸ್ ಠಾಣೆ ಆವರಣದಲ್ಲಿ ಶುಕ್ರವಾರ 'ತೆರೆದ ಮನೆ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಪಿ.ಎಂ.ಶ್ರೀ ಬಾಲಕಿಯರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ಬಿಎಲ್ಎ ತರಬೇತಿ ಕಾರ್ಯಾಗಾರ

ಕುಷ್ಟಗಿ: ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆಡಿಟೋರಿಯಂ ಹಾಲ್‌ನಲ್ಲಿ ಭಾರತ ಚುನಾವಣಾ ಆಯೋಗ, ಮುಖ್ಯ ಚುನಾವಣಾ ಅಧಿಕಾರಿಗಳು ಕರ್ನಾಟಕ, ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾ ಸ್ವೀಪ್ ಸಮಿತಿ ಕೊಪ್ಪಳ ವತಿಯಿಂದ ಶುಕ್ರವಾರ ಬೂತ್ ಲೆವಲ್ ಏಜೆಂಟ್ (ಬಿಎಲ್‌ಎ) ತರಬೇತಿ ಕಾರ್ಯಾಗಾರ ನಡೆಯಿತು.

ಜಿಲ್ಲಾಧಿಕಾರಿ ಡಾ.ಸುರೇಶ ಇಟ್ನಾಳ ಉದ್ಘಾಟಿಸಿ ಮಾತನಾಡಿ, ಯಾವುದೇ ಅರ್ಹ ಮತದಾರರು ಮತದಾರ ಪಟ್ಟಿಯಿಂದ ಹೊರಗೆ ಉಳಿಯದಂತೆ ನೋಡಿಕೊಳ್ಳಬೇಕು. ಅನರ್ಹ ಮತದಾರರು ಮತದಾರ ಪಟ್ಟಿಯಲ್ಲಿ ಉಳಿಯಬಾರದು ಎಂದರು. ಪ್ರತಿಯೊಂದು ಮತದಾರರಿಗೆ ಎನ್ಯೂಮರೇಷನ್ ಫಾರಂ ಕಡ್ಡಾಯವಾಗಿ ತಲುಪಬೇಕು. ಈ ತಾಲೂಕಿನಲ್ಲಿ ನೂರಕ್ಕೆ ನೂರರಷ್ಟು ಆಗಬೇಕು ಎಂದರು. ಎಸಿ ಕ್ಯಾ.ಮಹೇಶ ಮಾಲಗಿತ್ತಿ ಮಾತನಾಡಿ, ತಾಲೂಕಿನಲ್ಲಿ ಮತದಾರ ಪಟ್ಟಿ ಪರಿಷ್ಕರಣೆ ಮಾಡಬೇಕಿದೆ, 268 ಬಿಎಲ್‌ಒಗಳು ಬಿಎಲ್‌ಎಗಳ ಜತೆ ಉತ್ತಮವಾಗಿ ಕಾರ್ಯನಿರ್ವಹಿಸಬೇಕು. ತಾಲೂಕಿನಲ್ಲಿ 6740 ಜನರದು ಪರಿಷ್ಕರಣೆ ಆಗಬೇಕಿದೆ. 530 ಗೈರು, 803 ಮರಣ 432 ಡಬಲ್ (ಎರಡು ಕಡೆ) ಇವೆ ಆದರಿಂದ ನೂರಕ್ಕೆ ನೂರಷ್ಟು ಆಗಬೇಕಿದೆ ಎಂದರು. ಯೋಜನಾಧಿಕಾರಿ ಮಂಜುನಾಥ ಗುಂಡೂರು, ತಹಶೀಲ್ದಾರ್ ಗುರುರಾಜ, ತಾಪಂ ಇಒ ಅಮರೇಶ, ಅಜೀತ್, ಕಿಶನರಾವ್ ಕುಲಕರ್ಣಿ, ಪುರಸಭೆ ಮುಖ್ಯಾಧಿಕಾರಿ ವಿ.ಐ.ಬೇಗ, ಪಪಂ ಮುಖ್ಯಾಧಿಕಾರಿ ಮಹೇಶ ಅಂಗಡಿ ಸೇರಿದಂತೆ ಬಿಎಲ್‌ಒಗಳು ಮತ್ತು ಬಿಎಲ್‌ಎಗಳು ಇದ್ದರು.



ಕುಷ್ಟಗಿ: ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆಡಿಟೋರಿಯಂ ಹಾಲ್‌ನಲ್ಲಿ ಭಾರತ ಚುನಾವಣಾ ಆಯೋಗ, ಮುಖ್ಯ ಚುನಾವಣಾ ಅಧಿಕಾರಿಗಳು ಕರ್ನಾಟಕ, ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾ ಸ್ವೀಪ್ ಸಮಿತಿ ಕೊಪ್ಪಳ ವತಿಯಿಂದ ಶುಕ್ರವಾರ ಬೂತ್ ಲೆವಲ್ ಏಜೆಂಟ್ (ಬಿಎಲ್‌ಎ) ತರಬೇತಿ ಕಾರ್ಯಾಗಾರ ನಡೆಯಿತು. ಈ ವೇಳೆ ಡಿಸಿ ಡಾ.ಸುರೇಶ ಇಟ್ನಾಳ, ಯೋಜನಾಧಿಕಾರಿ ಮಂಜುನಾಥ ಗುಂಡೂರು, ತಹಶೀಲ್ದಾರ್ ಗುರುರಾಜ, ತಾಪಂ ಇಒ ಅಮರೇಶ ಇದ್ದರು,

ಶರಣಬಸವ ವಿವಿ ಉಪಕುಲಪತಿ ಪ್ರೊ.ಬಿಡವೆ ಸಲಹೆ

ಉದ್ಯಮಶೀಲತಾ ಕೌಶಲ್ಯ ಬೆಳೆಸಿಕೊಳ್ಳಿ

ಕಲಬುರಗಿ: ವಿದ್ಯಾರ್ಥಿಗಳು ತಮ್ಮ ಉದ್ಯಮಶೀಲತಾ ಕೌಶಲ್ಯಗಳನ್ನು ವೃದ್ಧಿಪಡಿಸಿಕೊಂಡು, ಕಡಿಮೆ ಬಂಡವಾಳದಲ್ಲಿ ಸ್ವಂತ ಸ್ಟಾರ್ಟ್‌ಅಪ್‌ಗಳನ್ನು ಆರಂಭಿಸಿ ಸ್ವಾವಲಂಬಿಗಳಾಗಬೇಕು ಹಾಗೂ ಇತರರಿಗೆ ಉದ್ಯೋಗ ನೀಡುವ ಮಟ್ಟಕ್ಕೆ ಬೆಳೆಯಬೇಕು ಎಂದು ಶರಣಬಸವ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ.ಅನಿಲಕುಮಾರ ಬಿಡವೆ ಸಲಹೆ ನೀಡಿದರು.

ಶರಣಬಸವ ವಿಶ್ವವಿದ್ಯಾಲಯದ ಆವರಣದಲ್ಲಿರುವ ದೊಡ್ಡಪ್ಪ ಅಪ್ಪಾ ಸಭಾ ಮಂಟಪದಲ್ಲಿ ಶುಕ್ರವಾರ ಆಯೋಜಿಸಿದ್ದ ಪ್ಲೇಸ್ ಮೆಂಟ್ ಡ್ರೈವ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಇಂದು ಉದ್ಯೋಗಗಳ ಕೊರತೆ ಇಲ್ಲ. ಆದರೆ, ಕೈಗಾರಿಕೆಗಳು ತಮ್ಮ ಅವಶ್ಯಕತೆಗೆ ತಕ್ಕ ಕೌಶಲ್ಯ ಹೊಂದಿದ ಅಭ್ಯರ್ಥಿಗಳನ್ನು ಕಂಡುಹಿಡಿಯಲು ಸಾಧ್ಯವಾಗುತ್ತಿಲ್ಲ ಎಂಬುದೇ ಮುಖ್ಯ ಸಮಸ್ಯೆಯಾಗಿದೆ. ವಿಶ್ವವಿದ್ಯಾಲಯಗಳು ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳಿಂದ ಹೊರಬರುವ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸದ ಅವಧಿಯಲ್ಲೇ ಉದ್ಯೋಗದಾತರ ಅಗತ್ಯಗಳಿಗೆ ತಕ್ಕಂತೆ ಕೌಶಲ್ಯಗಳನ್ನು ಅಭಿವೃದ್ಧಿ ಪಡಿಸಿಕೊಳ್ಳಬೇಕು ಎಂದರು.

ವಿಶ್ವವಿದ್ಯಾಲಯಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳು ನಿಮ್ಮ ವಿದ್ಯಾಭ್ಯಾಸದ ಅಂತ್ಯದಲ್ಲಿ ಪದವಿ ಪ್ರಮಾಣಪತ್ರವನ್ನು ಮಾತ್ರ ನೀಡಬಲ್ಲವು. ಆದರೆ, ನಿಮ್ಮ ಕೌಶಲ್ಯಗಳನ್ನು ಹೆಚ್ಚಿಸಿಕೊಳ್ಳಲು ಅಗತ್ಯವಾದ ಅವಕಾಶಗಳನ್ನು ನೀವು ನಿಮ್ಮ ಅಧ್ಯಯನದ ಅವಧಿಯಲ್ಲೇ ಹುಡುಕಿಕೊಳ್ಳಬೇಕು. ಶಿಕ್ಷಣ ಸಂಸ್ಥೆಗಳು ಸಾಮಾನ್ಯ ಶಿಕ್ಷಣದ ಜೊತೆಗೆ ಕೌಶಲ್ಯಾಭಿವೃದ್ಧಿಗೆ ಬೇಕಾದ ಮಾರ್ಗಗಳನ್ನು ಒದಗಿಸುತ್ತವೆ. ಆ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ನಿಮ್ಮನ್ನು ನೀವು ನಿಪುಣ ಕೌಶಲ್ಯವಂತರನ್ನಾಗಿ ರೂಪಿಸಿಕೊಳ್ಳುವುದು ವಿದ್ಯಾರ್ಥಿಗಳ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ನಿಮ್ಮ ಕಠಿಣ ಪರಿಶ್ರಮವು ಕೊನೆಗೆ ಉತ್ತಮ ಫಲಿತಾಂಶಗಳನ್ನು ತಂದುಕೊಡುತ್ತದೆ. ನಾನು ನನ್ನ ವೃತ್ತಿಜೀವನವನ್ನು ಶರಣಬಸವ ವಿಶ್ವವಿದ್ಯಾಲಯದ ಎಂಜಿನಿಯರಿಂಗ್ ಕಾಲೇಜಿನಲ್ಲಿ ಉಪನ್ಯಾಸಕನಾಗಿ ಆರಂಭಿಸಿದ್ದೆ. ನಿರಂತರ ಪರಿಶ್ರಮ ಮತ್ತು ಸಂಸ್ಥೆಯ ನಿರೀಕ್ಷೆಗಳನ್ನು ಪೂರೈಸುವ ಮೂಲಕ ಇಂದು ವಿಶ್ವವಿದ್ಯಾಲಯದ ಉಪಕುಲಪತಿ ಹುದ್ದೆಗೆ ಏರಿದ್ದೇನೆ. ನನ್ನ ಜೀವನವೇ ನಿಮಗೆ ಪಾಠವಾಗಬೇಕು ಎಂದರು.

ಕ್ಯಾಡ್‌ಮ್ಯಾಕ್ಸ್, ಹ್ಯಾಪಿ ಮೈಂಡ್ಸ್ ಎಐ, ಟೆಕ್ ಎಸ್‌ಎಫ್‌ಟಿ, ಸೀಕ್ ನಿಯೋ, ಎಕ್ಸ್‌ನಿಟ್ರಾ, ಎಂಆರ್‌ಎಫ್ ಟೈರ್ಸ್, ಟಿವಿಎಸ್ ಉಪಾಸನಾ ಸೇರಿದಂತೆ ಪ್ರಮುಖ ಸಾಫ್ಟ್‌ವೇರ್ ಮತ್ತು ಕೈಗಾರಿಕಾ ಸಂಸ್ಥೆಗಳು ಈ ಪ್ಲೇಸ್‌ಮೆಂಟ್ ಡ್ರೈವ್‌ನಲ್ಲಿ ಭಾಗವಹಿಸಿದ್ದವು. ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ನಿರ್ದೇಶಕ ಪ್ರೊ.ವಿ.ಡಿ.ಮೈತ್ರಿ, ಕುಲಸಚಿವೆ ಡಾ.ಲಕ್ಷ್ಮೀ ಪಾಟೀಲ ಮಕಾ, ಕುಲಸಚಿವ (ಮೌಲ್ಯಮಾಪನ) ಡಾ.ಎಸ್.ಎಚ್.ಹೊನ್ನಳ್ಳಿ, ಡೀನ್ ಶಿವಕುಮಾರ್ ಜವಳಿಗಿ, ಸಂಶೋಧನಾ ಡೀನ್ ಡಾ. ಸುಜಾತಾ ಮಲ್ಲಾಪುರ ಮತ್ತು ಪ್ಲೇಸ್‌ಮೆಂಟ್ ಡ್ರೈವ್‌ನಲ್ಲಿ ಭಾಗವಹಿಸಿದ್ದ ವಿವಿಧ ಕಂಪನಿಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.ಪ್ರೊ. ಶ್ರುತಿ ನಿರೂಪಿಸಿದರು.ಪ್ರೊ. ಸಾವಿತ್ರಿ ಸ್ವಾಗತಿಸಿದರೆ, ಪ್ರೊ.ಶೋಭನಾ ಪ್ಲೇಸ್ ಮೆಂಟ್ ಡ್ರೈವ್ ಕುರಿತು ಮಾಹಿತಿ ನೀಡಿದರು. ಪ್ರೊ.ನಾಗವೇಣಿ ವಂದಿಸಿದರು.



> **ವಿದ್ಯಾರ್ಥಿಗಳು ನಾಯಕತ್ವ ಗುಣ ಬೆಳೆಸಿಕೊಂಡು ಉದ್ಯಮಿಗಳಾಗುವ ದಿಕ್ಕಿನಲ್ಲಿ ಕಾರ್ಯನಿರ್ವಹಿಸಬೇಕು. ನೀವು ಉದ್ಯೋಗಕ್ಕಾಗಿ ಅಲೆದಾಡುವವರಾಗದೆ, ಇತರರಿಗೆ ಉದ್ಯೋಗ ನೀಡುವ ಉದ್ಯೋಗದಾತರಾಗುವ ಕನಸು ಕಾಣಬೇಕು. ವಿಶ್ವವಿದ್ಯಾಲಯದ ಯುವ ಪದವೀಧರರಿಗೆ ಉದ್ಯೋಗಾವಕಾಶಗಳನ್ನು ಒದಗಿಸುವಲ್ಲಿ ಮಹತ್ವದ ಪಾತ್ರವಹಿಸುವ ಈ ಪ್ಲೇಸ್ ಮೆಂಟ್ ಡ್ರೈವ್ ಆಯೋಜಿಸಿದ್ದಕ್ಕಾಗಿ ವಿಶ್ವವಿದ್ಯಾಲಯದ ಆಡಳಿತ ಮಂಡಳಿಗೆ ಅಭಿನಂದನೆ.**
>
> ■ **ಬಸವರಾಜ ದೇಶಮುಖ, ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ**

ಪಟ್ಟಿಯಿಂದ ಅರ್ಹ ಮತದಾರನ್ನು ಕೈಬಿಡಬೇಡಿ

ಯಲಬುರ್ಗಾ: ಯಾವುದೇ ಅರ್ಹ ಮತದಾರರು ಪಟ್ಟಿಯಿಂದ ಹೊರಗುಳಿಯಬಾರದು ಅನರ್ಹ ಮತದಾರರು ಪಟ್ಟಿಯಲ್ಲಿ ಸೇರಿರಬಾರದು ಎನ್ನುವ ಮೂಲ ಉದ್ದೇಶವೇ ಈ ಎಸ್ ಐಆರ್‌ದ್ದಾಗಿದೆ ಎಂದು ಕೊಪ್ಪಳ ಜಿಲ್ಲಾಧಿಕಾರಿ ಸುರೇಶ ಹಿಟ್ನಾಳ ಹೇಳಿದರು.

ಪಟ್ಟಣದ ಬುದ್ಧ ಬಸವ ಅಂಬೇಡ್ಕರ ಭವನದಲ್ಲಿ ಶುಕ್ರವಾರ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು ಸಹಯೋಗದಲ್ಲಿ ಬೂತ್ ಮಟ್ಟದ ಏಜೆಂಟರ್‌ಗಳಿಗೆ (ಏಎಲ್‌ಎ) ವಿಶೇಷ ಸಮಗ್ರ ಪರಿಷ್ಕರಣೆ ಎಸ್‌ಐಆರ್ –2026 ಮಾಹಿತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು ಇದೇ ಜೂನ್ 30 ರಿಂದ ಜುಲೈ 29ರವರೆಗೆ ನಡೆಯಲ್ಲಿರುವ ಮನೆ-ಮನೆ ಸಮೀಕ್ಷೆ ಹಾಗೂ ಎನ್ಯೂಮರೇಷನ್ ಫಾರ್ಮ್ ವಿತರಣೆ ಮತ್ತು ಸಂಗ್ರಹಣೆ ಕಾರ್ಯದ ಯಶಸ್ವಿಗೆ ತಾಲೂಕಿನ ಎಲ್ಲಾ ರಾಜಕೀಯ ಪಕ್ಷಗಳು ಅಗತ್ಯ ಸಹಕಾರ ನೀಡಬೇಕು ಎಂದರು.

ಮತದಾರರು ಫಾರ್ಮ್‌ಗಳನ್ನು ಭರ್ತಿ ಮಾಡಿ ಕಡ್ಡಾಯವಾಗಿ ಬಿಎಲ್‌ಒಗಳಿಗೆ ಹಿಂತಿರುಗಿಸಬೇಕು.ಫಾರ್ಮ್ ಸಲ್ಲಿಸದಿದ್ದಲ್ಲಿ ಕರಡು ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಯಾಗುವುದಿಲ್ಲ.ಯಾವುದೇ ಅರ್ಹ ಮತದಾರರ ಪಟ್ಟಿಯಿಂದ ಹೊರಗುಳಿಯದಂತೆ ವಿಶೇಷ ಜಾಗೃತಿ ವಹಿಸಲಾಗುವುದು ಸಾರ್ವಜನಿಕರಿಗೆ ಎನ್ಯೂಮರೇಷನ್ ಫಾರ್ಮ್ ಭರ್ತಿ ಸೇರಿದಂತೆ ಮತದಾರರ ಪಟ್ಟಿ ಪರಿಷ್ಕರಣೆ ಕುರಿತು ಯಾವುದೇ ಗೊಂದಲಗಳಿದ್ದರೆ ತಮ್ಮ ಮತಗಟ್ಟೆ ವ್ಯಾಪ್ತಿಯ ಬಿಎಲ್‌ಒಗಳನ್ನು ಸಂಪರ್ಕಿಸಬಹುದು ಎಂದು ಹೇಳಿದರು.



ಈಗಾಗಲೇ ಯಲಬುರ್ಗಾ ವಿಧಾನಸಭಾ ಚುನಾವಣೆಗಳಲ್ಲಿ ಒಟ್ಟು 2,3622 ಇದರ ಪೈಕಿ 2,26641ಮ್ಯಾಪಿಂಗ್ ಮಾಡಲಾಗಿದೆ. ಇನ್ನೂ 5981 ಬಾಕಿ ಮ್ಯಾಪಿಂಗ್ ಆಗಬೇಕಿದೆ.2,2824 ಸ್ಥಳಾಂತರ,ಮರಣ,ಡಬಲ್ ಹೆಸರು ಇದ್ದವರು,3181ಬಾಕಿ ಮ್ಯಾಪಿಂಗ್ ಮಾಡಬೇಕಿದೆ ಎಂದು ಮಾಹಿತಿ ನೀಡಿದರು.

ಬಳಿಕ ಜಿಲ್ಲಾಧಿಕಾರಿ ಸುರೇಶ ಹಿಟ್ನಾಳ ಅವರು ಪಟ್ಟಣದ ಜೆಎಂಎಫ್‌ಸಿ ನ್ಯಾಯಾಲಯ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

ಎಸಿ ಕ್ಯಾ.ಮಹೇಶ ಮಾಲಗಿತ್ತಿ ಬಿಎಲ್ ಎ,ಬಿಎಲ್‌ಒಗಳಿಗೆ ಮಾಹಿತಿ ಕಾರ್ಯಾಗಾರ ನಡೆಸಿಕೊಟ್ಟರು. ಮತದಾರರ ನೋಂದಣಿ, ಆಹಾರ ಮತ್ತು ನಾಗರಿಕ ಸರಬರಾಜ ಇಲಾಖೆ ಉಪನಿರ್ದೇಶಕ ವಿಶ್ವನಾಥಗೌಡ, ತಹಶೀಲ್ದಾರರಾದ ಪ್ರಕಾಶ ನಾಶಿ, ಬಸವರಾಜ ಬೆಣ್ಣೆ, ತಾಪಂ ಇಒಗಳಾದ ನೀಲಗಂಗಾ ಬಬಲಾದ, ಮುಖ್ಯಾಧಿಕಾರಿ ನಾಗೇಶ, ಉಪತಹಶೀಲ್ದಾರ್ ವಿಜಯಕುಮಾರ ಗುಂಡೂರ, ಬಿಇಒ ಅಶೋಕಗೌಡ್ರ, ಲೋಕೋಪಯೋಗಿ ಎಇಇ ಬಿ.ಮಲ್ಲಿಕಾರ್ಜುನ ಮತ್ತಿತರರು ಇದ್ದರು.

ಗಂಗಾದೇವಿ ಉತ್ಸವ ಮೂರ್ತಿ ಮೆರವಣಿಗೆ

ಗಂಗಾವತಿ: ತಾಲೂಕಿನ ಹೊಸಳ್ಳಿ ಗ್ರಾಮದಲ್ಲಿ ಗಂಗಾಮತ ಸಮಾಜದ ವತಿಯಿಂದ ಗಂಗಾದೇವಿ ದೇವಸ್ಥಾನದಲ್ಲಿ ನೂತನ ಗಂಗಾದೇವಿ ಪಾದಗಟ್ಟೆ ಪ್ರತಿಷ್ಠಾಪನೆ ಹಾಗೂ ಗಂಗಾದೇವಿ ಜಯಂತಿ ಅಂಗವಾಗಿ ಶುಕ್ರವಾರ ಗಂಗಾದೇವಿಯ ಉತ್ಸವ ಮೂರ್ತಿ ಮತ್ತು ಪಾದಗಟ್ಟೆಯ ಅದ್ದೂರಿ ಮೆರವಣಿಗೆ ನಡೆಯಿತು.

ಗ್ರಾಮದ ಪ್ರಮುಖ ರಾಜಬೀದಿಗಳಲ್ಲಿ ಕಳಶ, ಕುಂಭಗಳೊಂದಿಗೆ ಗಂಗಾದೇವಿಯ ಉತ್ಸವ ಮೂರ್ತಿ ಹಾಗೂ ಪಾದಗಟ್ಟೆಯನ್ನು ಭಕ್ತರು ಭಕ್ತಿ-ಶ್ರದ್ಧೆಯಿಂದ ಮೆರವಣಿಗೆ ನಡೆಸಿ ದೇವಸ್ಥಾನಕ್ಕೆ ಕರೆತಂದರು. ಮೆರವಣಿಗೆಯಲ್ಲಿ ಮಹಿಳೆಯರು, ಯುವಕರು ಹಾಗೂ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಧಾರ್ಮಿಕ ಉತ್ಸಾಹ ಮೆರೆದರು.

ಮಾತನಾಡಿದ ಗಂಗಾಮತ ಸಮಾಜದ ಅಧ್ಯಕ್ಷ ಸಿದ್ದಪ್ಪ ಕರೆಕುರಿ, ಪ್ರತಿ ವರ್ಷದಂತೆ ಈ ಬಾರಿಯೂ ಗಂಗಾದೇವಿ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲು ಸಮಾಜದಿಂದ ಸಕಲ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ. ಜೂ.23ರಂದು ಗಂಗಾದೇವಿ ದೇವಸ್ಥಾನದಲ್ಲಿ ನೂತನ ಪಾದಗಟ್ಟೆ ಪ್ರತಿಷ್ಠಾಪನೆ ಕಾರ್ಯಕ್ರಮ ನಡೆಯಲಿದ್ದು, ಹೆಬ್ಬಾಳ ಮಠದ ನಾಗಭೂಷಣ ಶಿವಾಚಾರ್ಯ ಮಹಾಸ್ವಾಮೀಜಿ ಹಾಗೂ ಕಲ್ಮಠದ ಕೊಟ್ಟೂರೇಶ್ವರ ಸ್ವಾಮೀಜಿ ಧಾರ್ಮಿಕ ವಿಧಿವಿಧಾನಗಳ ಮೂಲಕ ಪ್ರತಿಷ್ಠಾಪನೆ ನೆರವೇರಿಸಲಿದ್ದಾರೆ ಎಂದರು.

ಜೂ.24ರಂದು 23ನೇ ವರ್ಷದ ಗಂಗಾದೇವಿ ಜಯಂತಿ ಹಾಗೂ ರಥೋತ್ಸವ ಕಾರ್ಯಕ್ರಮ ಜರುಗಲಿದ್ದು, ಮಾಜಿ ಶಾಸಕ ಪರಣ್ಣ ಮುನವಳ್ಳಿ ಧ್ವಜಾರೋಹಣ ನೆರವೇರಿಸಲಿದ್ದಾರೆ. ಶಾಸಕ ಗಾಲಿ ಜನಾರ್ದನ ರೆಡ್ಡಿ ಗಂಗಾದೇವಿ ಪಾದಗಟ್ಟೆ ಉದ್ಘಾಟನೆ ಮಾಡಲಿದ್ದಾರೆ. ಬಳಿಕ ಜಯಂತಿಯ ಅಂಗವಾಗಿ ದೇವಿಯ ಮೂರ್ತಿಗೆ ಪಂಚಾಮೃತ ಅಭಿಷೇಕ, ಕುಂಕುಮಾರ್ಚನೆ, ಹೂವಿನ ಅಲಂಕಾರ, ಮಹಾಮಂಗಳಾರತಿ ಸೇರಿದಂತೆ ವಿವಿಧ ಧಾರ್ಮಿಕ ಪೂಜೆಗಳು ನಡೆಯಲಿವೆ.

ಸಾಮೂಹಿಕ ವಿವಾಹ ಕಾರ್ಯಕ್ರಮವೂ ನಡೆಯಲಿದೆ. ಸಂಜೆ ನಡೆಯಲಿರುವ ಗಂಗಾದೇವಿ ರಥೋತ್ಸವಕ್ಕೆ ಬಿಜೆಪಿ ಮುಖಂಡರಾದ ಜಿ.ಅರುಣಲಕ್ಷ್ಮೀ ಚಾಲನೆ ನೀಡಲಿದ್ದು, ಮಾಜಿ ಶಾಸಕರು, ಮಾಜಿ ಸಚಿವರು, ಮಾಜಿ ಸಂಸದರು ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಗಂಗಾಮತ ಸಮಾಜದ ಮುಖಂಡರಾದ ಯಂಕಪ್ಪ ಭೋಯಾರ್, ಮರಿಯಪ್ಪ ಘಾಣಿ, ಹುಲುಗಪ್ಪ ಮೆಟ್ರಿ, ಚಂದ್ರಪ್ಪ ಕಾಲೇದ, ಹನುಮೇಶ್ ಕುಂಟೋಜಿ, ಕನಕಪ್ಪ ಸೊಂಡೆ, ಸಿದ್ದು ಸೇರಿದಂತೆ ಸಮಾಜದ ಅನೇಕ ಮುಖಂಡರು ಹಾಗೂ ಭಕ್ತರು ಉಪಸ್ಥಿತರಿದ್ದರು.



ಬಿಜೆಪಿ ಗೆಲುವು: ಕಲಬುರಗಿಯಲ್ಲಿ ವಿಜಯೋತ್ಸವ ಸಂಭ್ರಮ

ಕಲಬುರಗಿ: ರಾಜ್ಯ ವಿಧಾನ ಪರಿಷತ್ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷದ ಅಭ್ಯರ್ಥಿಗಳಾದ ರಘು ಕೌಟಿಲ್ಯ ಹಾಗೂ ಲಿಂಗರಾಜ ಪಾಟೀಲ್ ಭರ್ಜರಿ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ನಗರದ ಸರ್ದಾರ್ ವಲ್ಲಭಭಾಯಿ ಪಟೇಲ್ ವೃತ್ತದಲ್ಲಿ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ವಿಜಯೋತ್ಸವ ಆಚರಿಸಿ ಸಂಭ್ರಮಿಸಿದರು.

ಕಾರ್ಯಕರ್ತರು ಪರಸ್ಪರ ಸಿಹಿ ಹಂಚಿಕೊಂಡು, ಪಟಾಕಿ ಸಿಡಿಸಿ ಗೆಲುವಿನ ಸಂಭ್ರಮವನ್ನು ವ್ಯಕ್ತಪಡಿಸಿದರು. ಬಿಜೆಪಿ ಪರ ಘೋಷಣೆಗಳನ್ನು ಕೂಗಿ ಅಭ್ಯರ್ಥಿಗಳ ವಿಜಯವನ್ನು ಹರ್ಷೋದ್ಗಾರದಿಂದ ಸ್ವಾಗತಿಸಿದರು.

ವಿಜಯೋತ್ಸವ ಬಳಿಕ ಮಾತನಾಡಿದ ಬಿಜೆಪಿ ಓಬಿಸಿ ನಗರ ಅಧ್ಯಕ್ಷ ದೇವೀಂದ್ರ ದೇಸಾಯಿ ಕಲ್ಲೂರು, ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳ ಗೆಲುವು ಪಕ್ಷದ ಸಂಘಟನಾ ಶಕ್ತಿ ಹಾಗೂ ಕಾರ್ಯಕರ್ತರ ಪರಿಶ್ರಮಕ್ಕೆ ದೊರೆತ ಫಲವಾಗಿದೆ ಎಂದು ಹೇಳಿದರು. ರಾಜ್ಯದ ಅಭಿವೃದ್ಧಿ, ಜನಪರ ಆಡಳಿತ ಮತ್ತು ಪಕ್ಷದ ಸಿದ್ಧಾಂತಗಳ ಮೇಲಿನ ಜನರ ವಿಶ್ವಾಸಕ್ಕೆ ಈ ಫಲಿತಾಂಶ ಸಾಕ್ಷಿಯಾಗಿದೆ ಎಂದು ಅಭಿಪ್ರಾಯಪಟ್ಟರು. ಮುಂದಿನ ದಿನಗಳಲ್ಲಿಯೂ ಪಕ್ಷವನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಕಾರ್ಯಕರ್ತರು ಒಗ್ಗಟ್ಟಿನಿಂದ ಕೆಲಸ ಮಾಡಬೇಕೆಂದು ಕರೆ ನೀಡಿದರು.



ರಾಜ್ಯ ಒಬಿಸಿ ಪ್ರಧಾನ ಕಾರ್ಯದರ್ಶಿ ಅವ್ವಣ್ಣಾ ಮ್ಯಾಕೇರಿ,ಅಂಬಾರಾಯ ಅಷ್ಟಗಿ, ಅವಿನಾಶ ಮಾಕೇರಿ, ಸಂತೋಷ ಹಾದಿಮನಿ, ಧರ್ಮಣ್ಣ ಇಟಗಾ, ಸೇರಿದಂತೆ ಬಿಜೆಪಿ ಮುಖಂಡರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ: ಜಾಗೃತಿ ಜಾಥಾ

ರಾಯಚೂರು: ಪ್ರಜಾಪ್ರಭುತ್ವ ದೇಶದಲ್ಲಿ ಮತದಾನ ಬಹಳ ಮಹತ್ವದ್ದು. ಈ ವರ್ಷ ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ ಎಸ್‌ಐಆರ್ ಕಾರ್ಯ ನಡೆಯುತ್ತಿದ್ದು, ಈಗಾಗಲೇ ಮ್ಯಾಪಿಂಗ್ ಕಾರ್ಯವನ್ನು ಬಿಎಲ್‌ಒ ಅವರು ನಿರಂತರವಾಗಿ ಮಾಡುತ್ತಿದ್ದು ಎಲ್ಲರೂ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಭಾಗವಹಿಸಿ ಎಲ್ಲರೂ ಮತದಾನದ ಹಕ್ಕನ್ನು ಭದ್ರಪಡಿಸಿಕೊಳ್ಳಬೇಕು ಎಂದು ಸಹಾಯಕ ಆಯುಕ್ತ ಹಂಪಣ್ಣ ಸಜ್ಜನವರ ಹೇಳಿದರು.

ಜಿಲ್ಲಾಡಳಿತ, ಜಿಪಂ, ಮಹಾನಗರ ಪಾಲಿಕೆ, ತಾಲೂಕು ಆಡಳಿತ, ತಾಪಂ ಸ್ವೀಪ್ ಸಮಿತಿ ಸಂಯುಕ್ತ ಆಶ್ರಯದಲ್ಲಿ ನಡೆದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ ಅಂಗವಾಗಿ ಆಯೋಜಿಸಿದ್ದ ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದರು. ಎಸ್‌ಐಆರ್ ಯೋಜನೆ ಯಶಸ್ವಿಯಾದರೆ ಚುನಾವಣೆಗಳು ಇನ್ನಷ್ಟು ಪಾರದರ್ಶಕವಾಗುತ್ತವೆ. ಒಬ್ಬ ಮತದಾರನ ಹೆಸರು ಒಂದಕ್ಕಿಂತ ಹೆಚ್ಚು ಕಡೆಗಳಲ್ಲಿ ಇರುವುದು ಕಾನೂನುಬಾಹಿರವಾದದ್ದು. ಮತಪಟ್ಟಿ ವಿವರಗಳನ್ನು ಸರಿಯಾಗಿ ತುಂಬಿ ನೀಡಿ ಮತದಾನದ ಹಕ್ಕನ್ನು ಉಳಿಸಿಕೊಳ್ಳಬೇಕು. ಪ್ರತಿಯೊಬ್ಬ ಅರ್ಹ ಮತದಾರನು ಮತದಾರರ ಪಟ್ಟಿಯಿಂದ ಯಾವುದೇ ಕಾರಣಕ್ಕೆ ಹೊರಗೆ ಉಳಿಯಬಾರದು ಪ್ರತಿಯೊಬ್ಬರು ಎಸ್‌ಐಆರ್‌ನಲ್ಲಿ ಪಾಲ್ಗೊಳ್ಳಬೇಕು. ಪ್ರಜಾಪ್ರಭುತ್ವ ಆಡಳಿತವನ್ನು ಬಲಪಡಿಸಿ ಮಾದರಿಯ ಶುದ್ಧ ಮತದಾರ ಪಟ್ಟಿ ತಯಾರಿಸುವುದೇ ಎಸ್‌ಐಆರ್ ಕಾರ್ಯಕ್ರಮವಾಗಿದೆ ಎಂದರು.




ಮತದಾರರ ಸಾಕ್ಷರತಾ ಕ್ಲಬ್ ನೋಡಲ್ ಅಧಿಕಾರಿ ಡಾ.ದಂಡಪ್ಪ ಬಿರಾದಾರ ಮಾತನಾಡಿದರು. ಡಾ.ಶಂಕರಗೌಡ, ಚಂದ್ರಶೇಖರ ಪವಾರ, ಡಾ.ಶಂಕರ ಗೌಡ, ಪ್ರಜಾಪಿತ ಬ್ರಹ್ಮಕುಮಾರಿ ಸಂಸ್ಥೆಯ ರಾಜಯೋಗಿಣಿ ಬಿ.ಕೆ.ಸ್ಮಿತಕ್ಕ ಸೇರಿದಂತೆ ಇನ್ನಿತರರಿದ್ದರು.

ಮುಖ್ಯಗುರುಗಳಿಗೆ ಸಿಆರ್‌ಸಿ ಸಭೆಯಲ್ಲಿ ಸನ್ಮಾನ

ಹನುಮಸಾಗರ: ಪಟ್ಟಣದ ಸಿಆರ್‌ಸಿ ವ್ಯಾಪ್ತಿಯ ವಿವಿಧ ಸರ್ಕಾರಿ ಶಾಲೆಗಳಿಗೆ ಪದೋನ್ನತಿ ಹೊಂದಿ ಮುಖ್ಯೋಪಾಧ್ಯಾಯರಾಗಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರನ್ನು ಗುರುವಾರ ನಡೆದ ಸಿಆರ್‌ಸಿ ಸಭೆಯಲ್ಲಿ ಗೌರವಿಸಿ ಸನ್ಮಾನಿಸಲಾಯಿತು.

ಸಮೂಹ ಸಂಪನ್ಮೂಲ ವ್ಯಕ್ತಿ ಲೆಂಕಪ್ಪ ವಾಲಿಕಾರ ಮಾತನಾಡಿ, ಮದ್ನಾಳ, ಮಾವಿನ ಇಟಗಿ, ಕುರುಬಗೇರಿ, ಬಾಲಕಿಯರ ಶಾಲೆ, ಕೆಪಿಎಸ್ ಬಾಲಕರ ಶಾಲೆ, ಹರಿಜನವಾಡ ಹಾಗೂ ಬೀಳಗಿ ಶಾಲೆಗಳಿಗೆ ಮುಖ್ಯೋಪಾಧ್ಯಾಯರಾಗಿ ಪದೋನ್ನತಿ ಹೊಂದಿರುವ ರಾಜಕುಮಾರ ನಾಯಕ್, ವಸಂತ ರಾಜೂರ, ಬಸಪ್ಪ ಬಂಡಿವಡ್ಡರ, ಸಂಗಮ್ಮ ಹೇರೂರ, ಯಮನೂರಪ್ಪ ಲಮಾಣಿ, ಹೊನ್ನಯ್ಯ ಬಿ. ಹಾಗೂ ಮಲ್ಲಮ್ಮ ಚನ್ನಪ್ಪನವರ ಅವರುಗಳು ಸೇವಾ ಹಿರಿತನ ಮತ್ತು ಅಪಾರ ಅನುಭವ ಹೊಂದಿರುವ ಶಿಕ್ಷಕರಾಗಿದ್ದಾರೆ ಎಂದು ಹೇಳಿದರು.



ಮುಖ್ಯೋಪಾಧ್ಯಾಯರು ಇಲಾಖೆಯ ಆದೇಶಾನುಸಾರ ನಿಗದಿತ ಅವಧಿಯಲ್ಲಿ ಶಾಲಾ ಆಡಳಿತ ನಿರ್ವಹಿಸಿ ವರದಿ ಸಲ್ಲಿಸುವ ಜವಾಬ್ದಾರಿ ಹೊಂದಿರುತ್ತಾರೆ. ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಹೆಚ್ಚಿಸುವುದು, ಭಾಷೆ ಹಾಗೂ ಕೋರ್ ವಿಷಯಗಳಲ್ಲಿ ಮಕ್ಕಳ ಕಲಿಕಾ ಮಟ್ಟವನ್ನು ಸುಧಾರಿಸುವುದು, ಕ್ರೀಡೆಯೊಂದಿಗೆ ಮೌಲ್ಯ ಶಿಕ್ಷಣ ನೀಡುವುದು ಹಾಗೂ ಮಕ್ಕಳನ್ನು ಆಧುನಿಕ ಜಗತ್ತಿನ ಸವಾಲುಗಳಿಗೆ ಸಜ್ಜುಗೊಳಿಸಿ ಜವಾಬ್ದಾರಿಯುತ ನಾಗರಿಕರನ್ನಾಗಿ ರೂಪಿಸುವಲ್ಲಿ ಮುಖ್ಯೋಪಾಧ್ಯಾಯರ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಅಭಿಪ್ರಾಯಪಟ್ಟರು.

ಚನ್ನಪ್ಪ ಅಂಬಿಗೇರ, ಶರಣಪ್ಪ ಎಂ., ಸುರೇಶ ವಾಯ್., ಹುಲಿಗೇಂದ್ರಸಾ ತುಳಸಿಕಟ್ಟಿ, ಶರಣಬಸವ ಚಿನಿವಾಲರ, ಸಾವಿತ್ರಿ ನಿಟ್ಟಾಲಿ, ಪಿ.ಜಿ. ಹಿರೇಮಠ, ಸಾರಾಜಿ, ರೆಹಮಾನ್ ಮಾರನಬಸರಿ, ಯಲ್ಲಪ್ಪ ಜಿಗಳೂರು ಸೇರಿದಂತೆ ಅನೇಕ ಶಿಕ್ಷಕರು ಉಪಸ್ಥಿತರಿದ್ದರು. ಮಂಜುನಾಥ ಕೆ. ಸ್ವಾಗತಿಸಿದರು. ಸಾವಿತ್ರಿ ನಿಟ್ಟಾಲಿ ವಂದಿಸಿದರು.

ಕದ್ರಳ್ಳಿಯಲ್ಲಿ ನರೇಗಾ ಕಾರ್ಮಿಕರಿಗೆ ಕಾನೂನು ಅರಿವು

ಕುಕನೂರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಪೊಲೀಸ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಕುಕನೂರು ತಾಲೂಕು ಆಡಳಿತ, ತಾಲೂಕು ಪಂಚಾಯತ್ ಮತ್ತು ಚಿಕ್ಕಬಿಡನಾಳ ಗ್ರಾಮ ಪಂಚಾಯತ್ ಇವರುಗಳ ಸಂಯುಕ್ತಾಶ್ರಯದಲ್ಲಿ ಇತ್ತೀಚೆಗೆ ಕದ್ರಳ್ಳಿ ಗ್ರಾಮದಲ್ಲಿ ಜಾಗೃತಿ ಕಾರ್ಯಕ್ರಮದ ಮೂಲಕ ಮಕ್ಕಳ ಹಕ್ಕುಗಳು, ಕಾನೂನುಗಳು ಮತ್ತು ಮಕ್ಕಳ ಸುರಕ್ಷತೆ ಕುರಿತು ನರೇಗಾ ಕೂಲಿ ಕಾರ್ಮಿಕರಿಗೆ ಅರಿವು ಮೂಡಿಸಲಾಯಿತು.

ಕೊಪ್ಪಳ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ರಕ್ಷಣಾಧಿಕಾರಿ ಅಸಾಂಸ್ಥಿಕ) ರವಿ ಬಡಿಗೇರ ಅವರು ಪೋಷಕತ್ವ ಯೋಜನೆಯ ಕುರಿತು ಮಾತನಾಡಿ, ಪೋಷಕತ್ವ ಯೋಜನೆಗೆ ಅರ್ಹರು ಅರ್ಜಿ ಸಲ್ಲಿಸಬೇಕು. ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ ಮಕ್ಕಳ ನ್ಯಾಯ ಕಾಯ್ದೆ–2015 ಸೆಕ್ಷನ್ 44 ರನ್ವಯ ಪೋಷಕತ್ವ ಯೋಜನೆಯಲ್ಲಿ 6 ರಿಂದ 18 ವರ್ಷದೊಳಗಿನ ಮಕ್ಕಳ ಕಲ್ಯಾಣ ಸಮಿತಿಯ ವತಿಯಿಂದ ದತ್ತು ಮುಕ್ತ ಆದೇಶ ಪಡೆದು ದತ್ತು ಹೋಗಲು ಸಾಧ್ಯವಾಗದಿರುವ (ಅನಾಥ) ಜೈವಿಕ ಪೋಷಕರಿಂದ ಬೇರ್ಪಟ್ಟ ಮಕ್ಕಳು, ಮಾರಣಾಂತಿಕ ಖಾಯಿಲೆಯಿಂದ ಬಳತ್ತಿರುವ ಪೋಷಕರ ಮಕ್ಕಳು, ಸುಮಾರು 6 ತಿಂಗಳಿಂದ 1 ವರ್ಷದವರೆಗೆ ಮಗುವಿನೊಂದಿಗೆ ಕುಟುಂಬದ ಯಾವಿಬ್ಬ ಸದಸ್ಯರು ಸಂಪರ್ಕಕ್ಕೆ ಬಾರದೇ ಇರುವಂತಹ ಮಕ್ಕಳು, ಕೌಟುಂಬಿಕ ಪ್ರೀತಿಯಿಂದ ವಂಚಿತವಾದ ಮಕ್ಕಳಿಗೆ ಪರ್ಯಾಯ ಕುಟುಂಬ ವ್ಯವಸ್ಥೆಯನ್ನು ಕಲ್ಪಿಸುವ ಮೂಲಕ ಹೆತ್ತವರ ಪ್ರೀತಿಯನ್ನು ನೀಡುವ ಅತ್ಯುತ್ತಮ ಯೋಜನೆಯಾಗಿದೆ. ತಂದೆ–ತಾಯಿಯ ಪ್ರೀತಿಯಿಂದ ವಂಚಿತವಾದ ಮಕ್ಕಳಿಗೆ ಕೌಟುಂಬಿಕ ಪ್ರೀತಿಯನ್ನು ನೀಡಿ ಮಗುವಿಗೆ ಉತ್ತಮ ಭವಿಷ್ಯವನ್ನು ರೂಪಿಸುವ ಇಚ್ಛೆಯನ್ನು ಹೊಂದಿರುವ ಯಾವುದೇ ಪೋಷಕರು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗೆ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಮಾಹಿತಿ ನೀಡಿದರು.



ಕಾರ್ಯಕ್ರಮದ ಅಧ್ಯಕ್ಷತೆಯನ್ನು ಉದ್ಯೋಗ ಖಾತ್ರಿ ಮೇಟ್ ವಿಜಯ ಅವರು ವಹಿಸಿದ್ದರು. ಮಂಜುನಾಥ ಬಿ.ಎಫ್.ಟಿ ಅವರು ಕಾರ್ಯಕ್ರಮ ನಿರೂಪಿಸಿ ನೆರವೇರಿಸಿದರು. ಉದ್ಯೋಗ ಖಾತ್ರಿ ಕೂಲಿ ಕಾರ್ಮಿಕರು ಭಾಗವಹಿಸಿದ್ದರು.

ಅಭ್ಯರ್ಥಿಗಳಿಗೆ ಪ್ರಮಾಣ ಪತ್ರ ವಿತರಣೆ

ಕೊಪ್ಪಳ: ಪ್ರವಾಸೋದ್ಯಮ ಇಲಾಖೆಯಿಂದ 2024–25ನೇ ಸಾಲಿನ ಎಸ್ಸಿಪಿ, ಟಿಎಸ್ಪಿ ಯೋಜನೆ ಅಡಿಯಲ್ಲಿ ಪ್ರವಾಸೋದ್ಯಮ ಅತಿಥಿ ಕ್ಷೇತ್ರದಲ್ಲಿ ಕೌಶಲ್ಯ ಅಭಿವೃದ್ಧಿ ತರಬೇತಿ ಪಡೆದ ಅಭ್ಯರ್ಥಿಗಳಿಗೆ ಇತ್ತೀಚೆಗೆ ಪ್ರಮಾಣ ಪತ್ರ ವಿತರಣೆ ಮಾಡಲಾಯಿತು.

ಪ್ರವಾಸೋದ್ಯಮ, ಆತಿಥ್ಯ ಕ್ಷೇತ್ರದಲ್ಲಿ ಫುಡ್ ಕ್ರಾಫ್ಟ್ ಸಂಸ್ಥೆಯಿಂದ ಎಸ್ಸಿಪಿ, ಟಿಎಸ್ಪಿ ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳಿಗೆ ಪ್ರವಾಸೋದ್ಯಮ ಅತಿಥಿ ಕ್ಷೇತ್ರದಲ್ಲಿ ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಜಿಲ್ಲೆಯ ರವಿಕುಮಾರ್ ರಾಥೋಡ್ ಮತ್ತು ರವಿ ಅವರು 2025ರ ಸೆಪ್ಟೆಂಬರ್ 15 ರಿಂದ 2025ರ ಡಿಸೆಂಬರ್ 30ರವರೆಗೆ 'ಮಲ್ಟಿ ಕೂಸಿನ್ ಕುಕ್' ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುತ್ತಾರೆ. ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರಾದ ವಿಠ್ಠಲ್ ಜಾಬಗೌಡರ್ ಅವರು ಅಭ್ಯರ್ಥಿಗಳಿಗೆ ತರಬೇತಿ ಪೂರ್ಣಗೊಳಿಸಿರುವ ಪ್ರಮಾಣ ಪತ್ರ ನೀಡಿ ಶುಭ ಹಾರೈಸಿದರು. ಪ್ರವಾಸೋದ್ಯಮ ಇಲಾಖೆಯ ಸಿಬ್ಬಂದಿ ಇದೇ ವೇಳೆ ಉಪಸ್ಥಿತರಿದ್ದರು.



ಕಿರುಸುದ್ದಿ

ಪತ್ರಕರ್ತರ ಸಂಘಕ್ಕೆ ಬಾಲಪ್ಪ ಕುಪ್ಪಿ ಆಯ್ಕೆ


ಹುಣಸಗಿ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಹುಣಸಗಿ ತಾಲೂಕು ಘಟಕದ ನೂತನ ಅಧ್ಯಕ್ಷರಾಗಿ ಪತ್ರಕರ್ತ ಬಾಲಪ್ಪ ಕುಪ್ಪಿ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಶಾಂತಿನಾಥ ವಕಾಟುರಿ ಅವರನ್ನು ಅವಿರೋಧವಾಗಿ ಆಯ್ಕೆ ಗೊಳಿಸಲಾಯಿತು.





ಪಟ್ಟಣದಲ್ಲಿ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಒಬ್ಬರು ಮತ್ತು ಪ್ರಧಾನ ಕಾರ್ಯದರ್ಶಿಗೆ ಒಬ್ಬರು ಮಾತ್ರ ನಾಮಪತ್ರ ಸಲ್ಲಿಸಿದ್ದರಿಂದ ಅವರನ್ನ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ಡಿ.ಸಿ.ಪಾಟೀಲ ಹಾಗೂ ಸಹಾಯಕ ಚುನಾವಣಾಧಿಕಾರಿ ಪವನ ಕುಲಕರ್ಣಿ ಅಧಿಕೃತವಾಗಿ ಫಲಿತಾಂಶ ಪ್ರಕಟಿಸಿದರು. ನಂತರ ನೂತನ ಅಧ್ಯಕ್ಷ-ಪ್ರಧಾನ ಕಾರ್ಯದರ್ಶಿಗೆ ಹಿರಿಯ ಪತ್ರಕರ್ತ ರಾಘವೇಂದ್ರ ಕಾಮನಟಗಿ ಸನ್ಮಾನಿಸಿ ಮಾತನಾಡಿದರು. ಈ ವೇಳೆ ಸಂಘದ ಸದಸ್ಯರಾದ ವೆಂಕಟಗಿರಿ ದೇಶಪಾಂಡೆ, ಭೀಮಶೇನರಾವ್ ಕುಲಕರ್ಣಿ, ಬಸವರಾಜ ಅಂಗಡಿ, ಪವನ ದೇಶಪಾಂಡೆ, ಬಸವರಾಜ ಶಾರದಳ್ಳಿ, ಚಂದ್ರಶೇಖರ, ಮಲ್ಹಾರಾವ್ ಕುಲಕರ್ಣಿ, ಬಸವರಾಜ ಕಟ್ಟಿಮನಿ, ಅನಿಲಕುಮಾರ, ಶರಣಬಸವ ಪಾಟೀಲ, ಶ್ರೀಹರಿ ಕುಲಕರ್ಣಿ, ಭೀಮನಗೌಡ ಬಿರಾದಾರ, ಬಾಪುಗೌಡ, ಪ್ರೀತಿ ರಾಠಿ, ಶಿವಣ್ಣ, ಮಲ್ಲಿಕಾರ್ಜುನ ಗುತ್ತೇದಾರ, ಸಿದ್ದನಗೌಡ ಬಿರಾದಾರ, ಪ್ರಾಣೇಶ ದೇಶಪಾಂಡೆ, ಅಯ್ಯಪ್ಪ ಹೂಗಾರ, ಶ್ರೀಕಾಂತ ಇದ್ದರು.

ಭವನ ಕಾಮಗಾರಿಗೆ ಬಾಕಿ ಅನುದಾನಕ್ಕೆ ಮನವಿ



ಬಳ್ಳಾರಿ: ರಾಜ್ಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿಗಳನ್ನು ಬಳ್ಳಾರಿ ಜಿಲ್ಲಾ ಕುರುಬರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಮೋಹನ್ ಭೇಟಿ ಮಾಡಿ, ಬಳ್ಳಾರಿ ಜಿಲ್ಲಾ ಕುರುಬರ ಸಂಘದ ವತಿಯಿಂದ ಹಮ್ಮಿಕೊಂಡಿರುವ ಸಮುದಾಯ ಭವನ (ಕನಕ ಕಲ್ಯಾಣ ಮಂಟಪ) ಕಟ್ಟಡ ನಿರ್ಮಾಣಕ್ಕಾಗಿ ಅಂತಿಮ ಕಂತಿನ ಅನುದಾನ 50 ಲಕ್ಷ ರೂ. ಬಿಡುಗಡೆ ಮಾಡಬೇಕು ಎಂದು ಮನವಿ ಮಾಡಿದರು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚಿಸಿ ಬಾಕಿ ಅನುದಾನವನ್ನು ಬಿಡುಗಡೆ ಮಾಡಬೇಕು ಎಂದು ಮನವಿ ಮಾಡಿದರು. ಶೀಘ್ರವೇ ಮಂಜೂರು ಮಾಡಲಾಗುವುದು ಎಂದು ಅಧಿಕಾರಿಗಳು ಭರವಸೆ ನೀಡಿದರು. ಸಂಘದ ಮುಖಂಡರು ಇತರರಿದ್ದರು.

ನೂತನ ಖಜಾಂಚಿಯಾಗಿ ಅಭಿಲಾಷ್ ಗೌಡ ಆಯ್ಕೆ

ಕುರುಗೋಡು: ಬಿಜೆಪಿ ಪಕ್ಷವು ಪ್ರಾರಂಭದಲ್ಲಿ ಕಾರ್ಯಕರ್ತದ ಹಿನ್ನೆಲೆಯ ಗುರುತಿಸಿ ಬಿಜೆಪಿ ಪಕ್ಷದ ಬಳ್ಳಾರಿ ಜಿಲ್ಲಾ ನೂತನ ಖಜಾಂಚಿಯಾಗಿ ನೇಮಿಸಿದೆ. ಎಂದು ಗುತ್ತಿಗನೂರು ಗ್ರಾಮದ ಅಭಿಲಾಷ್ ಗೌಡ ಹೇಳಿದರು.



ಅವರು ಮಾತನಾಡಿ, ಪಕ್ಷದ ಸೂಚಿರುವ ಪಕ್ಷ ಬಲವರ್ತನೆಗಾಗಿ ಸಂಘಟಿಸುತ್ತೇನೆ. ಯಾವುದೇ ಬೇಧ-ಭಾವವಿಲ್ಲದೆ ಪಕ್ಷವನ್ನು ಮುನ್ನಡೆಸಿಕೊಂಡು ಹೋಗುತ್ತೇನೆ ಎಂದ ವಿಶ್ವಾಸ ಹಾಗೂ ಪಕ್ಷದ ಕೆಳಮಟ್ಟದಿಂದ ಪದಾಧಿಕಾರಿಗಳು ಸೇರಿ ವಿಶ್ವಾಸವಿಟ್ಟು ನನ್ನನ್ನು ಆಯ್ಕೆ ಮಾಡಿದ್ದಾರೆ. ಜಿಲ್ಲೆಯಲ್ಲಿ ಪಕ್ಷ ಸಂಘಟಿಸುವ ಮತ್ತು ಪಕ್ಷ ನೀಡಿದ ಜವಾಬ್ದಾರಿ ಎಲ್ಲಾರ ಸಹಕಾರದೊಂದಿಗೆ ಹಾಗೂ ಪಕ್ಷ ನನ್ನ ಮೇಲಿಟ್ಟುರುವ ನಂಬಿಕೆಯನ್ನು ಉಳಿಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು. ಈ ವೇಳೆ ಬಿಜೆಪಿ ಪಕ್ಷದ ಮುಖಂಡರು, ಕಾರ್ಯಕರ್ತರು ಇದ್ದರು.

ಸಂವಾದ ಸಭೆ ಇಂದು

ವಿಜಯನಗರ: ಹೊಸಪೇಟೆ ತಾಲೂಕಿನ ಗ್ರಾಮೀಣ ಉಪ ವಿಭಾಗದಲ್ಲಿ ಜೂ.20ರಂದು ಬೆಳಗ್ಗೆ 11ಕ್ಕೆ ಗ್ರಾಹಕರ ಸಂವಾದ ಸಭೆ ಏರ್ಪಡಿಸಲಾಗಿದೆ. ತಾಲೂಕಿನ ವಿದ್ಯುತ್ ಗ್ರಾಹಕರು ಸಭೆಗೆ ಭಾಗವಹಿಸಿ ವಿದ್ಯುತ್ ಸಮಸ್ಯೆ ಇದ್ದಲ್ಲಿ ತಮ್ಮ ಅಹವಾಲುಗಳನ್ನು ಸಲ್ಲಿಸಿ ಪರಿಹರಿಸಿಕೊಳ್ಳಬಹುದು ಎಂದು ಜೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಇಂಜಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹಗರಿಬೊಮ್ಮನಹಳ್ಳಿ: ಅರ್ಸೆಲರ್ ಮಿತ್ತಲ್ ಬ್ರಾಹ್ಮಿಣಿ ವಿಜಯನಗರ ಸ್ಟೀಲ್ ಇಂಡಸ್ಟ್ರೀಸ್ ಗಾಗಿ ಭೂಸ್ವಾಧೀನ ಪಡಿಸಿಕೊಂಡ ಕುಟುಂಬಗಳಿಗೆ ಸೂಕ್ತ ನ್ಯಾಯ ಒದಗಿಸುವಂತೆ ಒತ್ತಾಯಿಸಿ ಭಾರತೀಯ ಕಮ್ಯುನಿಸ್ಟ್ ಪಕ್ಷ (ಮಾರ್ಕ್ ವಾದಿ) ಯ ಕಾರ್ಯಕರ್ತರು ತಹಶೀಲ್ದಾರ್ ಆರ್ ಕವಿತಾ ಅವರಿಗೆ ಮನವಿ ಸಲ್ಲಿಸಿದರು. ಭಾರತೀಯ ಕಮ್ಯುನಿಸ್ಟ್ ಪಕ್ಷದ ಆರ್.ಎಸ್. ಬಸವರಾಜ, ಎಸ್.ಜಗನ್ನಾಥ, ಬಿ.ಮಾಳಮ್ಮ, ಆನಂದ್, ರಾಮಣ್ಣ ಚಾಂದ್ ಬಿ ಉಸ್ಮಾನ್ ಭಾಷಾ, ರಮೇಶ್ ಸೇರಿದಂತೆ ಇತರರಿದ್ದರು.

ಗ್ಯಾಸ್ ಏಜೆನ್ಸಿ ವಿರುದ್ಧ ಕ್ರಮಕ್ಕೆ ಕರವೇ ಆಗ್ರಹ

ಸುರಪುರ: ಫನ್ ಫ್ಲೇಮ್ ಇಂಡೇನ್ ಗ್ಯಾಸ್ ಏಜೆನ್ಸಿ ವಿರುದ್ಧ ಕ್ರಮ ಜರುಗಿಸುವ ಕುರಿತು ಕರ್ನಾಟಕ ರಕ್ಷಣಾ ವೇದಿಕೆ ಸುರಪುರ ತಾಲೂಕು ಘಟಕದ ವತಿಯಿಂದ ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು.

ಈ ವೇಳೆ ತಾಲೂಕು ಅಧ್ಯಕ್ಷ ವೆಂಕಟೇಶ ನಾಯಕ ಬೈರಿಮಡ್ಡಿ ಮಾತನಾಡಿ, ನಗರದ ಫನ್ ಫ್ಲೇಮ್ ಇಂಡೇನ್ ಗ್ಯಾಸ್ ವಿತರಕ ಏಜೆನ್ಸಿಯವರು ಆರಂಭವಾದಾಗಿನಿಂದ ಜನನಿಬಿಡ ಪ್ರದೇಶದಲ್ಲಿ ಕಾರ್ಯನಿರ್ವಹಿಸಿಕೊಂಡು ಬರುತ್ತಿದೆ. ಆದರೆ ಸದರಿ ಏಜೆನ್ಸಿಯವರು MLA ನಿಯಮಗಳನ್ನು ಉಲ್ಲಂಘನೆ ಮಾಡಿ ಗ್ಯಾಸ್ ಏಜೆನ್ಸಿ ನಡೆಸುತ್ತಿದ್ದಾರೆ. ಗ್ರಾಹಕರು ಗ್ಯಾಸ್ ಫಿಲ್ ಬುಕ್ಕಿಂಗ್ ಮಾಡಿದರೂ ಹೋಮ್ ಡೆಲಿವರಿ ಮಾಡುವುದಿಲ್ಲ. ಗ್ರಾಮಗಳಿಗೆ ಕಿಲೋ ಮೀಟರ್ ಆಧಾರದಲ್ಲಿ ಶುಲ್ಕ ವಿಧಿಸಿ ಗ್ಯಾಸ್ ಪೂರೈಸಬೇಕು. ಪೂರೈಕೆ ಮಾಡಿಲ್ಲ ಎಂದು ಆರೋಪಿಸಿದರು.

ಜಿಲ್ಲಾಧಿಕಾರಿಗಳು ಯಾದಗಿರಿ ಜಿಲ್ಲೆಯಲ್ಲಿ ಗ್ಯಾಸ್ ಕೊರತೆ ಇಲ್ಲ ಎನ್ನುತ್ತಾರೆ. ಗ್ಯಾಸ್ ಏಜೆನ್ಸಿ ಮುಂದೆ ನಿತ್ಯ ಸರದಿ ಸಾಲಿನಲ್ಲಿ ನಿಲ್ಲುತ್ತಾರೆ. ಸಂಜೆ ಗ್ಯಾಸ್ ಕೊಡದೆ ಗ್ರಾಹಕರನ್ನು ವಾಪಸ್ ಕಳಿಸಿಕೊಡುತ್ತಾರೆ ಎಂದರು.

ತಾಲೂಕ ಪದಾಧಿಕಾರಿಗಳಾದ ನಾಗೇಂದ್ರ ದೊರೆ ಚಂದಲಾಪುರ, ನಾಗರಾಜ ಡೊಣ್ಣಿಗೇರಿ, ಲಾರಿ ಘಟಕದ ಅವಿನಾಶ ಹಸನಾಪುರ, ಭೀಮಣ್ಣಗೌಡ, ಅಂಬ್ರೇಶ, ಯುವ ಘಟಕದ ವಿಜಯಕುಮಾರ ನರಸಿಂಗಂಪೇಟ, ಬಲಭೀಮ ಬೊಮ್ಮನಹಳ್ಳಿ, ಮಹಾರಾಜ ಹೆಮ್ಮಡಗಿ ಸೇರಿದಂತೆ ಹಲವರು ಇದ್ದರು.



ಸುರಪುರ: ಫನ್ ಫ್ಲೇಮ್ ಇಂಡೇನ್ ಗ್ಯಾಸ್ ಏಜೆನ್ಸಿ ವಿರುದ್ಧ ಕ್ರಮ ಜರುಗಿಸುವ ಕುರಿತು ಕರ್ನಾಟಕ ರಕ್ಷಣಾ ವೇದಿಕೆ ಸುರಪುರ ತಾಲೂಕು ಘಟಕದ ವತಿಯಿಂದ ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು. ತಾಲೂಕ ಪದಾಧಿಕಾರಿಗಳಾದ ನಾಗೇಂದ್ರ ದೊರೆ ಚಂದಲಾಪುರ, ನಾಗರಾಜ ಡೊಣ್ಣಿಗೇರಿ, ಲಾರಿ ಘಟಕದ ಅವಿನಾಶ ಹಸನಾಪುರ, ಭೀಮಣ್ಣಗೌಡ, ಅಂಬ್ರೇಶ, ಯುವ ಘಟಕದ ವಿಜಯಕುಮಾರ ನರಸಿಂಗಂಪೇಟ, ಬಲಬೀಮ ಬೊಮ್ಮನಹಳ್ಳಿ, ಮಹಾರಾಜ ಹೆಮ್ಮಡಗಿ ಸೇರಿದಂತೆ ಹಲವರರಿದ್ದರು.

ಕೇಂದ್ರ ಸರ್ಕಾರದ 12 ವರ್ಷಗಳ ಸಾಧನೆಗಳ ಮಾಧ್ಯಮ ಸಂವಾದ | ನಮೋಶಿ ಹೇಳಿಕೆ

ಪ್ರಧಾನಿ ಮೋದಿ ಸಾಧನೆ ಗಮನಾರ್ಹ

ಯಾದಗಿರಿ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಕಳೆದ 12 ವರ್ಷಗಳಲ್ಲಿ ವಿಶ್ವಾಸಾರ್ಹ ಆಡಳಿತ, ಜನಕಲ್ಯಾಣ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಜಾಗತಿಕ ಮಟ್ಟದಲ್ಲಿ ಭಾರತದ ಪ್ರತಿಷ್ಠೆಯನ್ನು ಹೆಚ್ಚಿಸುವಲ್ಲಿ ಗಮನಾರ್ಹ ಸಾಧನೆ ಮಾಡಿದೆ ಎಂದು ವಿಪ ಸದಸ್ಯ ಶಶೀಲ್ ಜಿ.ನಮೋಶಿ ಹೇಳಿದರು.

ಶುಕ್ರವಾರ ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ 12 ವರ್ಷಗಳ ಸಾಧನೆಗಳ ಕುರಿತು ಮಾಧ್ಯಮ ಸಂವಾದ ನಡೆಸಿ ಮಾತನಾಡಿ, ಮೋದಿ ಸರ್ಕಾರದ 12 ವರ್ಷಗಳ ಆಡಳಿತವನ್ನು ನಾಲ್ಕು ಪ್ರಮುಖ ಅಂಶಗಳಾದ ವಿಶ್ವಾಸ, ಸುಶಾಸನ, ಅಭಿವೃದ್ಧಿ ಮತ್ತು ಅಂತಾರಾಷ್ಟ್ರೀಯ ನಾಯಕತ್ವ ಎಂಬ ನೆಲೆಗಟ್ಟಿನಲ್ಲಿ ವಿವರಿಸಿದ ಅವರು, ಕರ್ನಾಟಕ ಸೇರಿದಂತೆ ದೇಶದ ಜನರು ನಿರಂತರವಾಗಿ ಮೋದಿ ಸರ್ಕಾರದ ಮೇಲೆ ವಿಶ್ವಾಸ ವ್ಯಕ್ತಪಡಿಸಿರುವುದಾಗಿ ಹೇಳಿದರು.

2014ರಲ್ಲಿ ಕರ್ನಾಟಕದಲ್ಲಿ ಬಿಜೆಪಿ 17 ಲೋಕಸಭಾ ಸ್ಥಾನಗಳನ್ನು ಗೆದ್ದಿದ್ದು, 2019ರಲ್ಲಿ 25 ಸ್ಥಾನಗಳ ಐತಿಹಾಸಿಕ ಜಯ ಸಾಧಿಸಿತು. 2024ರ ಲೋಕಸಭಾ ಚುನಾವಣೆಯಲ್ಲೂ ಬಿಜೆಪಿ-ಜೆಡಿಎಸ್ ಮೈತ್ರಿಕೂಟ 19 ಸ್ಥಾನಗಳನ್ನು ಗೆದ್ದು ಶೇ.51.66 ಮತ ಹಂಚಿಕೆ ಪಡೆದಿರುವುದು ಜನರ ವಿಶ್ವಾಸದ ಪ್ರತೀಕ ಎಂದರು.

ಅಭಿವೃದ್ಧಿ ಕ್ಷೇತ್ರದಲ್ಲಿ ರಾಷ್ಟ್ರೀಯ ಹೆದ್ದಾರಿಗಳ ವಿಸ್ತರಣೆ, ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ವೇ, ಬೆಂಗಳೂರು ಮೆಟ್ರೋ ವಿಸ್ತರಣೆ, ರೈಲ್ವೆ ವಿದ್ಯುದೀಕರಣ, ಕೈಗಾರಿಕಾ ಕಾರಿಡಾರ್ ಹಾಗೂ ಕಲಬುರಗಿ ಪಿಎಂ ಮಿತ್ರ ಮೆಗಾ ಟೆಕ್ಸ್‌ಟೈಲ್ ಪಾರ್ಕ್ ಮುಂತಾದ ಯೋಜನೆಗಳು ಕರ್ನಾಟಕದ ಆರ್ಥಿಕ ಬೆಳವಣಿಗೆಗೆ ಉತ್ತೇಜನ ನೀಡಿವೆ ಎಂದು ತಿಳಿಸಿದರು.



> ಜನಧನ್ ಖಾತೆಗಳು, ಉಜ್ವಲ ಯೋಜನೆ, ಆಯುಷ್ಮಾನ್ ಭಾರತ್, ಮುದ್ರಾ ಸಾಲ, ಕಿಸಾನ್ ಕ್ರೆಡಿಟ್ ಕಾರ್ಡ್, ಪಿಎಂ ಸ್ವನಿಧಿ ಸೇರಿದಂತೆ ವಿವಿಧ ಯೋಜನೆಗಳ ಮೂಲಕ ಕೋಟ್ಯಂತರ ಜನರಿಗೆ ನೇರ ಲಾಭ ತಲುಪಿಸಲಾಗಿದೆ.
> ■ ಶಶೀಲ್ ಜಿ.ನಮೋಶಿ, ವಿಧಾನ ಪರಿಷತ್ ಸದಸ್ಯ

ವಿದೇಶಾಂಗ ನೀತಿಯಲ್ಲಿ ಭಾರತವು ಜಿ20 ಅಧ್ಯಕ್ಷತೆ, ಕ್ವಾಡ್ ಸಹಭಾಗಿತ್ವ, ವ್ಯಾಕ್ಸಿನ್ ಮೈತ್ರಿ, ಅಂತರರಾಷ್ಟ್ರೀಯಸೌರಒಕ್ಕೂಟ, ಚಂದ್ರಯಾನ-3 ಯಶಸ್ಸು ಹಾಗೂ ಯುಪಿಐ ಸೇರಿದಂತೆ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯಗಳ ಮೂಲಕ ಜಾಗತಿಕ ಮಟ್ಟದಲ್ಲಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಂಡಿದೆ ಎಂದು ಹೇಳಿದರು.

ಮೋದಿ ಸರ್ಕಾರದ 12 ವರ್ಷಗಳು ಭಾರತವನ್ನು ಆತ್ಮನಿರ್ಭರ, ಅಭಿವೃದ್ಧಿ ಹೊಂದಿದ ಹಾಗೂ ವಿಶ್ವವೇದಿಕೆಯಲ್ಲಿ ಪ್ರಭಾವಿ ರಾಷ್ಟ್ರವನ್ನಾಗಿ ರೂಪಿಸುವ ದಿಕ್ಕಿನಲ್ಲಿ ಮಹತ್ವದ ಮೈಲಿಗಲ್ಲಾಗಿವೆ ಎಂದು ಶಶಿಲ್ ನಮೋಶಿ ಅಭಿಪ್ರಾಯಪಟ್ಟರು.

ಬಿಜೆಪಿರಾಜ್ಯಕಾರ್ಯಕಾರಿಸದಸ್ಯ ಮಹೇಶರೆಡ್ಡಿ ಮುದ್ನಾಳ, ಮಾಜಿ ಜಿಲ್ಲಾಧ್ಯಕ್ಷ ಚಂದ್ರಶೇಖರ ಗೌಡ ಮಾಗನೂರ, ಡಾ.ಶರಣಭೂಪಾಲರೆಡ್ಡಿ ನಾಯ್ಕಲ್, ಮುಖಂಡರಾದ ದೇವೇಂದ್ರನಾಥ ನಾದ್, ಪ್ರಧಾನ ಕಾರ್ಯದರ್ಶಿ ಪರಶುರಾಮ ಕುರಕುಂದಾ, ಶಿವರಾಜ ದೇಶಮುಖ, ಮುಖಂಡರಾದ ಸಿದ್ರಾಮರೆಡ್ಡಿ ಬಲಕಲ್, ವೆಂಕಟರೆಡ್ಡಿ ಅಬ್ಬೆತುಮಕೂರು, ಲಿಂಗಪ್ಪ ಹತ್ತಿಮನಿ ಸೇರಿದಂತೆ ಇತರರಿದ್ದರು.

ಟೌನ್‌ಶಿಪ್ ನಿರ್ಮಾಣ ಖಂಡಿಸಿ ಪ್ರತಿಭಟನೆ

ಬಳ್ಳಾರಿ: ಬೆಂಗಳೂರಿನ ಬಿಡದಿ ಹಾಗೂ ಹಾರೋಹಳ್ಳಿ ಹೋಬಳಿಗಳಲ್ಲಿ ಟೌನ್‌ಶಿಪ್ ನಿರ್ಮಾಣ ಮಾಡಲು ಮುಂದಾದ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಇಲ್ಲಿನ ಜೆಡಿಎಸ್ ಕಾರ್ಯಕರ್ತರು ಶುಕ್ರವಾರ ನಗರದಲ್ಲಿ ಬೃಹತ ಪ್ರತಿಭಟನೆ ನಡೆಸಿದರು.

ಜೆಡಿಎಸ್ ಜಿಲ್ಲಾಧ್ಯಕ್ಷ ಮೀನಳ್ಳಿ ತಾಯಣ್ಣ ಅವರ ನೇತೃತ್ವದಲ್ಲಿ ನಡೆದ ಪ್ರತಿಭಟನಾ ಮೆರವಣಿಗೆ, ನಗರದ ಜೆಡಿಎಸ್ ಜಿಲ್ಲಾ ಕಚೇರಿ ಮೂಲಕ, ನಗರದ ಹೃದಯ ಭಾಗ ರಾಯಲ್ ವೃತ್ತದ ಬಳಿ ಜಮಾಯಿಸಿ, ಕೆಲಕಾಲ ರಸ್ತೆ ತಡೆ ನಡೆಸಿ, ಸರ್ಕಾರದ ವಿರುದ್ಧ ನಾನಾ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಸರ್ಕಾರ ಕೂಡಲೇ ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಬಿಡುವಂತೆ ಆಗ್ರಹಿಸಿದರು.

ನಂತರ ಜೆಡಿಎಸ್ ಜಿಲ್ಲಾಧ್ಯಕ್ಷ ಮೀನಳ್ಳಿ ತಾಯಣ್ಣ ಅವರು ಮಾತನಾಡಿ, ಬೆಂಗಳೂರಿನ ಬಿಡದಿ ಮತ್ತು ಹಾರೋಹಳ್ಳಿ ಹೋಬಳಿ ವ್ಯಾಪ್ತಿಯಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ಟೌನ್‌ಶಿಪ್ ನಿರ್ಮಾಣ ಮಾಡಲು ಮುಂದಾಗಿದ್ದು, ಇದು ದೇಶಕ್ಕೆ ಅನ್ನ ನೀಡುವ ರೈತರ ನೆಮ್ಮದಿ ಜೀವನಕ್ಕೆ ಅಡ್ಡಿಯಾಗಲಿದೆ. ಅತ್ಯಂತ ಫಲವತ್ತಾದ ಕೃಷಿ ಭೂಮಿಯನ್ನು ರೈತರಿಂದ ಸರ್ಕಾರ ಬಲವಂತವಾಗಿ ವಶಪಡಿಸಿಕೊಳ್ಳಲು ಮುಂದಾಗಿದ್ದು, ಈ ಕುರಿತು ಸರ್ಕಾರ ಅಂತಿಮ ಅಧಿಸೂಚನೆ ಹೊರಡಿಸಿದ್ದು, ಕೂಡಲೇ ಈ ರೈತ ವಿರೋಧಿ ಪದ್ಧತಿ ಸರ್ಕಾರ ಕೈಬಿಡಬೇಕು ಎಂದು ವಾಗ್ದಾಳಿ ನಡೆಸಿದರು.

ಸರ್ಕಾರ ಸ್ಮಾರ್ಟ್ ಸಿಟಿ ಹಾಗೂ ಇಂಟಿಗ್ರೇಟೆಡ್ ಟೌನ್‌ಶಿಪ್ ಹೆಸರಿನಲ್ಲಿ ರಿಯಲ್ ಎಸ್ಟೇಟ್ ಯೋಜನೆ ಜಾರಿಗೊಳಿಸಲು ಮುಂದಾಗಿದ್ದು, ಇದರಿಂದ ಸಾವಿರಾರು ಕೋಟಿ ರೂ. ಮೌಲ್ಯದ ಭೂಮಿ ವಾಣಿಜ್ಯ ಉದ್ದೇಶಗಳಿಗೆ ಬಳಸಿಕೊಳ್ಳುವ ಸಾಧ್ಯತೆ ಇದೆ, ಕೂಡಲೇ ಸರ್ಕಾರ ಈ ಯೋಜನೆಯನ್ನು ಕೈಬಿಡಬೇಕು ಎಂದು ಒತ್ತಾಯಿಸಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯಲ್ಲನಗೌಡ, ರೈತ ವಿಭಾಗದ ಜಿಲ್ಲಾಧ್ಯಕ್ಷ ಲಕ್ಷ್ಮಿಕಾಂತ್ ರೆಡ್ಡಿ, ಪ್ರಧಾನ ಕಾರ್ಯದರ್ಶಿ ಮಧುರೈ ವಿಜಯ್ ಕುಮಾರ್, ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪ, ಬಳ್ಳಾರಿ ನಗರ ಅಧ್ಯಕ್ಷ ಹೊನ್ನೂರು ಸ್ವಾಮಿ ,ಕಂಪ್ಲಿ ಅಧ್ಯಕ್ಷ ಮೇಘರಾಜ್, ಬಳ್ಳಾರಿ ಗ್ರಾಮಾಂತರ ಅಧ್ಯಕ್ಷ ರಾಜ ಹೊನ್ನಳ್ಳಿ, ಶಿವನಾರಾಯಣ, ಅಶೋಕ್ ಸಂಗನಕಲ್ಲು, ಅದ್ದಿಗೇರಿ ರಾಮಣ್ಣ, ವಸಂತ್ ಕುಮಾರ್, ಮುತ್ತು, ಹೊನ್ನೂರು, ಅಲಿ ವಿಜಯ, ಲಕ್ಷ್ಮಿ,ಜಯಲಕ್ಷ್ಮಿ, ರಾಜೇಶ್ವರಿ ಇತರರು ಭಾಗವಹಿಸಿದ್ದರು.



5 ವರ್ಷದೊಳಗಿನ ಪ್ರತಿ ಮಗುವಿಗೂ ಲಸಿಕೆ ತಲುಪಲಿ: ಡಿಸಿ ಮನ್ನಿಕೇರಿ

ವಿಜಯನಗರ: ಜೂ.28ರಿಂದ ಜು.1ರವರೆಗೆ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮ ನಡೆಯಲಿದ್ದು, 0-5 ವರ್ಷದೊಳಗಿನ ಎಲ್ಲ ಮಕ್ಕಳಿಗೆ ಪೋಲಿಯೋ ಲಸಿಕೆ ನೀಡಬೇಕು. ಇದರಿಂದ ಯಾವೊಬ್ಬ ಮಗುವೂ ಲಸಿಕೆಯಿಂದ ವಂಚಿತವಾಗಬಾರದು ಎಂದು ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದಲ್ಲಿ ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ಅಂಗವಾಗಿ ಜಿಲ್ಲಾ ಮಟ್ಟದ ಅಂತರ್ ಇಲಾಖಾ ಸಮನ್ವಯ ಸಮಿತಿ ಸಭೆಯಲ್ಲಿ ಮಾತನಾಡಿ, ಜಿಲ್ಲೆಯಲ್ಲಿ ಇತ್ತೀಚೆಗೆ ಯಾವುದೇ ಪೋಲಿಯೋ ಪ್ರಕರಣ ಕಂಡುಬಂದಿಲ್ಲವಾದರೂ ನಿರ್ಲಕ್ಷ್ಯ ವಹಿಸುವಂತಿಲ್ಲ, ಪ್ರತಿಯೊಬ್ಬರೂ ತಪ್ಪದೇ ಕಡ್ಡಾಯವಾಗಿ ಲಸಿಕೆ ಹಾಕಿಸಬೇಕು. ಎಂದರು.

ಈ ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಎಲ್. ಆರ್.ಶಂಕರ್ ನಾಯ್ಕ, ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಜಂಬಯ್ಯ, ತಂಬಾಕು ನಿಯಂತ್ರಣ ಕೋಶ ಹಾಗೂ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಷಣ್ಮುಖ ನಾಯ್ಕ, ಕುಟುಂಬ ಕಲ್ಯಾಣಾಧಿಕಾರಿ ಡಾ.ವಿನಯ್ ಸೇರಿದಂತೆ ಎಲ್ಲಾ ಜಿಲ್ಲಾ ಹಾಗೂ ತಾಲೂಕು ಮಟ್ಟದ ಆರೋಗ್ಯ ಇಲಾಖೆ ಅಧಿಕಾರಿಗಳು ಇದ್ದರು.

ಪೋಲಿಯೋ ಬೂತ್ ಮಾಹಿತಿ ನೀಡುವ ಕ್ಯೂ-ಆರ್‌ಕೋಡ್

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ವಿನೂತನ ಕ್ಯೂ-ಆರ್ ಕೋಡ್ ಸಿದ್ಧಪಡಿಸಲಾದ ಈ ಭಾರಿ ವಿಶೇಷವಾಗಿ ಮತ್ತು ವಿನೂತನವಾಗಿ ಸಿದ್ಧಪಡಿಸಲಾದ ಈ ಕ್ಯೂ-ಆರ್ ಕೋಡ್ ಸ್ಕ್ಯಾನ್‌ನ್ನು ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಉದ್ಘಾಟಿಸಿದರು. ಈ ಕೋಡ್‌ನ್ನು ಸ್ಕ್ಯಾನ್ ಮಾಡಿದ ಕೂಡಲೇ ಜಿಲ್ಲೆಯಲ್ಲಿನ ಪೋಲಿಯೋ ಲಸಿಕಾ ಕೇಂದ್ರಗಳ ಸಂಪೂರ್ಣ ಮಾಹಿತಿ ಸಿಗಲಿದ್ದು, ಸಾರ್ವಜನಿಕರು ಇದರ ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.



ಸಾವಿನಂಚಿನಲ್ಲಿದ್ದ ನರಿ ರಕ್ಷಿಸಿದ ಹೆದ್ದಾರಿ ಸೈನಿಕರು

ಕಾನಹೊಸಹಳ್ಳಿ: ಅಪರಿಚಿತ ವಾಹನವೊಂದು ಡಿಕ್ಕಿ ಹೊಡೆದ ಪರಿಣಾಮ ರಸ್ತೆ ದಾಟುತ್ತಿದ್ದ ನರಿ ಗಾಯಗೊಂಡಿರುವ ಘಟನೆ ಗ್ರಾಮದ ಹೊರವಲಯದ ಕಾನಹೊಸಹಳ್ಳಿ-ಹುಲಿಕೆರೆ ಮಧ್ಯದಲ್ಲಿ ವಿಜಯನಗರ ಡಾಬಾ ಬಳಿ ರಾಷ್ಟ್ರೀಯ ಹೆದ್ದಾರಿ-50ರಲ್ಲಿ ಶುಕ್ರವಾರ ನಡೆದಿದೆ.

ಹೆದ್ದಾರಿ ಸೈನಿಕರ ತಂಡದ ಅದನ್ನು ಗಮನಿಸಿ ನರಿಯನ್ನು ರಕ್ಷಿಸಿ ಮಾನವೀಯತೆ ಮೆರೆದಿದ್ದಾರೆ.

ನರಿ ರಸ್ತೆ ದಾಟುವ ಸಂದರ್ಭದಲ್ಲಿ ಯಾವುದೋ ಅಪರಿಚಿ ವಾಹನವೊಂದು ಡಿಕ್ಕಿ ಹೊಡದಿದೆ. ಅದೇ ಮಾರ್ಗದಲ್ಲಿ ಹೋಗುತ್ತಿದ್ದ ಹೆದ್ದಾರಿ ಸೈನಿಕ ವಾಟ್ಸಪ್ ಗ್ರೂಪ್‌ನ ಸದಸ್ಯರು ಗಮನಿಸಿ ಕೂಡಲೇ ಅರಣ್ಯ ಇಲಾಖೆ, ಪಶು ವೈದ್ಯಾಧಿಕಾರಿ, ಸ್ಥಳೀಯ ಪೊಲೀಸರಿಗೆ ಮಾಹಿತಿ ತಿಳಿಸಿದ್ದಾರೆ.



ಕೂಡಲೇ ಸ್ಥಳಕ್ಕೆ ಬಂದ ಹೆದ್ದಾರಿ ಪೆಟ್ರೋಲ್, ಅರಣ್ಯ ಇಲಾಖಾಧಿಕಾರಿಗಳು, ಸ್ಥಳೀಯ ಪೊಲೀಸರು ಹಾಗು ಸ್ಥಳೀಯರ ನೆರವಿನಿಂದ ನರಿಯನ್ನು ರಕ್ಷಿಸಿ, ಪಶು ವೈದ್ಯಾಧಿಕಾರಿಗಳಿಂದ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗೆ ಕಮಲಾಪುರ ಜೂಗೆ ಅರಣ್ಯಾಧಿಕಾರಿಗಳು ಕೊಂಡೊಯ್ದರು.

ಹೆದ್ದಾರಿ ಸೈನಿಕರಾದ ಮಹೇಶ್, ದಯಾನಂದ್ ಸಜ್ಜನ್, ಪೊಲೀಸ್ ಇಲಾಖೆಯ ಕೊಟ್ರೇಶ್, ಅರಣ್ಯ ಇಲಾಖೆ ಜಡಿಯಪ್ಪ ಅವರು ಗಾಯಗೊಂಡ ನರಿಯನ್ನು ರಕ್ಷಿಸಿದರು.

ಈ ಸಂದರ್ಭದಲ್ಲಿ ಎಎಸ್‌ಐ ಮಲ್ಲೇಶಪ್ಪ, ಶ್ರೀಕಾಂತ್ ಬಾಬು, ಸಿಬಂದ್ದಿ ಹೊನ್ನೂರಪ್ಪ, ಅರಣ್ಯ ಇಲಾಖೆ ದಾಸಪ್ಪ, ಕೃಷ್ಣ, ಟೋಲ್ ಸಿಬಂದ್ದಿ ಸಿಹ್ಮಾದ್ರಿ, ಸಂಗಯ್ಯ ಸ್ವಾಮಿ, ಬೀರಪ್ಪ, ಸ್ಥಳೀಯರಾದ ದಾನೇಶ್, ಹುಲಿಕೆರೆ ಬಾಬು, ದುರ್ಗೇಶ್, ಪಶು ಇಲಾಕೆ ಕುಮಾರ್ ನೆರವಿಗೆ ಧಾವಿಸಿದರು.

ಮತದಾರರ ಪಟ್ಟಿ ಪರಿಷ್ಕರಣೆ ಜೂ.30ರಿಂದ ಆರಂಭ

ಹೂವಿನಹಡಗಲಿ: ರಾಜ್ಯದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಜೂ.30ರಿಂದ ಆರಂಭವಾಗಲಿದೆ. ಪ್ರತಿಯೊಂದು ಮತವೂ ಅಮೂಲ್ಯ ಕಾರ್ಯವಾಗಿದ್ದು, ಪಕ್ಷದ ಬೂತ್ ಮಟ್ಟದ ಕಾರ್ಯಕರ್ತರು ಎಚ್ಚರಿಕೆ ವಹಿಸಬೇಕಿದೆ ಎಂದು ಮಾಜಿ ಸಚಿವ ಪಿ.ಟಿ.ಪರಮೇಶ್ವರ ನಾಯಕ ಹೇಳಿದರು.

ಪಟ್ಟಣದ ದ್ರಾಕ್ಷಿಯಣಿ ಕಲ್ಯಾಣ ಮಂಟಪದಲ್ಲಿ ಇತ್ತೀಚಿಗೆ ಕಾಂಗ್ರೆಸ್ ಪಕ್ಷದಿಂದ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಕುರಿತು ನಡೆದ ಬಿಎಲ್‌ಎ-2 ತರಬೇತಿ ಶಿಬಿರದಲ್ಲಿ ಮಾತನಾಡಿ, ಮುಂಬರುವ ಗ್ರಾಮ ಪಂಚಾಯಿತಿ, ತಾಲೂಕು ಹಾಗೂ ಜಿಲ್ಲಾ ಪಂಚಾಯಿತಿ ಚುನಾವಣೆ ಹಿನ್ನೆಲೆಯಲ್ಲಿ ಮತದಾರರ ಪರಿಷ್ಕರಣೆ ಅತ್ಯಂತ ಸೂಕ್ಷ್ಮವಿಚಾರವಾಗಿದ್ದು, ಸಂವಿಧಾನವು ಪ್ರತಿಯೊಬ್ಬ ಪ್ರಜೆಗೂ ಮತದಾನದ ಹಕ್ಕನ್ನು ನೀಡಿದೆ. ಬೂತ್ ಮಟ್ಟದ ಆಬೆಎ2 ಮತ್ತು ಕಾಂಗ್ರೆಸ್ ಪಕ್ಷದ ಮುಖಂಡರು ಪ್ರತಿ ಮತದಾರರ ಹೆಸರನ್ನು ಸೇರಿಸಲು, ಪರಿಶೀಲಿಸಲು ಬೇಕಾಗುವ ದಾಖಲೆಗಳನ್ನು ಒದಗಿಸಲು ಕಾರ್ಯ ನಿರ್ವಹಿಸಿ ಬೂತ್ ಮಟ್ಟದಲ್ಲಿ ಕೆಲಸ ಮಾಡಬೇಕೆಂದು ನೀಡಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಿ.ವಿ.ಶಿವಯೋಗಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಆಟವಾಳಗಿ ಕೊಟ್ರೇಶ, ಬಿ.ಹನುಮಂತಪ್ಪ ಮಾತನಾಡಿದರು.



ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಗೌಸ್ ಮೊಹಿದ್ದೀನ್, ಪಂಚ ಗ್ಯಾರಂಟಿ ಜಿಲ್ಲಾ ಉಪಾಧ್ಯಕ್ಷ ಕೆ.ಎಸ್.ಶಾಂತನಗೌಡ, ಸದಸ್ಯ ಗುರುವಿನ ರಾಜಣ್ಣ, ಪ್ರಚಾರ ಸಮಿತಿ ಅಧ್ಯಕ್ಷ ಹಾಲೇಶ ಸೋಗಿ, ಮುಖಂಡರಾದ ಬಸವನಗೌಡ ಪಾಟೀಲ್, ಜ್ಯೋತಿ ಮಲ್ಲಣ್ಣ, ಚಂದ್ರನಾಯ್ಕ, ವಸಂತ, ದೂದನಾಯ್ಕ, ಸೊನ್ನದ ಮಹೇಶ್, ಯುವ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ ದೇಸಾಯಿ, ಶಿವಕುಮಾರ, ಹಕ್ಕಂಡಿ ಮಂಜುನಾಥ ಸೇರಿದಂತೆ ತಾಲೂಕಿನ ಪಕ್ಷದ ಕಾರ್ಯಕರ್ತರು ತರಬೇತಿಯಲ್ಲಿ ಭಾಗವಹಿದ್ದರು. ಇದೇ ವೇಳೆ ಬಿಜೆಪಿ ಗಡಿಗಿ ಕೃಷ್ಣ ಕಾಂಗ್ರೆಸ್ ಸೇರ್ಪಡೆಯಾದರು.

ಬಲಶೆಟ್ಟಿಹಾಳ ವಿರಕ್ತಮಠಕ್ಕೆ ಸಿದ್ಧಲಿಂಗ ಶ್ರೀಗಳ ಪಟ್ಟಾಧಿಕಾರ

ಹುಣಸಗಿ: ತಾಲೂಕಿನ ಬಲಶೆಟ್ಟಿಹಾಳ ಗ್ರಾಮದ ಶ್ರೀಬಸವಲಿಂಗ ಶಿವಯೋಗಿಗಳವರ ವಿರಕ್ತಮಠದಲ್ಲಿ ಭವ್ಯ ನಿರಂಜನ ಪಟ್ಟಾಧಿಕಾರ ಮಹೋತ್ಸವ, ಶೂನ್ಯ ಪೀಠಾರೋಹಣ ಹಾಗೂ ಧರ್ಮಸಭೆ ಕಾರ್ಯಕ್ರಮ ವೈಭವದಿಂದ ನಡೆಯಿತು.

ಸುರಪುರದ ನಿಷ್ಠಿ ಕಡ್ಲಪ್ಪನವರ ವಿರಕ್ತಮಠದ ಶ್ರೀಮನ್ ನಿರಂಜನ ಪ್ರಣವ ಸ್ವರೂಪಿಗಳಾದ ಪ್ರಭುಲಿಂಗ ಶ್ರೀಗಳು ಶ್ರೀ ಸಿದ್ಧಲಿಂಗ ದೇವರಿಗೆ ಷಟಸ್ಥಳ ಬ್ರಹೋಪದೇಶ ಹಾಗೂ ಅನುಗ್ರಹ ದೀಕ್ಷೆ ನೀಡಿದರು.

ಬಳಿಕ ಧಾರ್ಮಿಕ ವಿಧಿ-ವಿಧಾನಗಳ ಮಧ್ಯೆ ಧರ್ಮದಂಡ, ಧರ್ಮಗ್ರಂಥ, ಕ್ರಿಯಾಪ್ರಸಾದ ಬಟ್ಟಲು ಹಾಗೂ ಜೋಳಿಗೆಗಳನ್ನು ಅನುಗ್ರಹಿಸಿ, ಶ್ರೀಮನ್ ನಿರಂಜನ ಪ್ರಣವ ಸ್ವರೂಪಿ ಸಿದ್ಧಲಿಂಗ ಶ್ರೀಗಳು, ಬಸವಲಿಂಗ ಶಿವಯೋಗಿಗಳ ವಿರಕ್ತಮಠ, ಬಲಶೆಟ್ಟಿಹಾಳ ಎಂಬ ನೂತನ ಅಭಿಧಾನದೊಂದಿಗೆ ಅಧಿಕಾರ ಪ್ರದಾನ ಮಾಡಿ ಶೂನ್ಯ ಪೀಠಾರೋಹಣ ನೆರವೇರಿಸಲಾಯಿತು.

ಪಟ್ಟಾಧಿಕಾರ ಸ್ವೀಕರಿಸಿದ ನೂತನ ಪೀಠಾಧಿಪತಿ ಸಿದ್ಧಲಿಂಗ ಶ್ರೀಗಳು ಮಾತನಾಡಿ, ಗುರುಗಳ ಆಶೀರ್ವಾದ ಹಾಗೂ ಭಕ್ತರ ಸಹಕಾರದೊಂದಿಗೆ ಶ್ರೀಮಠದ ಧಾರ್ಮಿಕ, ಸಾಮಾಜಿಕ ಸೇವೆ ಮತ್ತಷ್ಟು ವಿಸ್ತರಿಸಲಾಗುವುದು ಎಂದರು.

ಮಾಜಿ ಸಚಿವ ಹಾಗೂ ರಾಜ್ಯ ಬಿಜೆಪಿ ಉಪಾಧ್ಯಕ್ಷ ನರಸಿಂಹ ನಾಯಕ(ರಾಜುಗೌಡ) ಮಾತನಾಡಿ, ಧರ್ಮ-ಸಂಸ್ಕೃತಿ ಹಾಗೂ ಸಂಪ್ರದಾಯಗಳನ್ನು ಉಳಿಸಿ ಬೆಳೆಸುವಲ್ಲಿ ಶ್ರೀಮಠಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಮಠಗಳು ಸಮಾಜಕ್ಕೆ ನೈತಿಕ ಮೌಲ್ಯಗಳೊಂದಿಗೆ ಆಧ್ಯಾತ್ಮಿಕ ಮಾರ್ಗದರ್ಶನ ನೀಡುವ ಕೇಂದ್ರಗಳಾಗಿವೆ ಎಂದರು.



ಯಡ್ರಾಮಿಯ ಸಿದ್ಧಲಿಂಗ ಶ್ರೀಗಳು ಧಾರ್ಮಿಕ ಕಾರ್ಯಕ್ರಮಗಳ ವಿಧಿ-ವಿಧಾನಗಳನ್ನು ನಡೆಸಿಕೊಟ್ಟರು.

ಪಡೇಕನೂರದ ಚನ್ನಮಲ್ಲಿಕಾರ್ಜುನ ಶ್ರೀಗಳು, ಶಿವಪೂರದ ಶಿವಲಿಂಗ ಶ್ರೀಗಳು, ವಡವಡಗಿ ವೀರಸಿದ್ಧ ಶ್ರೀಗಳು, ಚಡಚಣದ ಷಡಕ್ಷರ ಶ್ರೀಗಳು ಸೇರಿದಂತೆ ವಿವಿಧ ಮಠಗಳ ಶ್ರೀಗಳು, ಪ್ರಮುಖರಾದ ಶಾಂತಗೌಡ ಚನ್ನಪಟ್ಟಣ, ನಾಗರತ್ನ ಕುಪ್ಪಿ, ರಾಜಶೇಖರಗೌಡ ಪಾಟೀಲ ವಜ್ಜಲ, ಸಿದ್ದನಗೌಡ ಕರಿಭಾವಿ, ಶರಣಪ್ಪ ಕುಂಬಾರ, ಚಂದ್ರಶೇಖರ ದಂಡಿನ್, ಎಚ್.ಸಿ.ಪಾಟೀಲ, ಬಸನಗೌಡ ಅಳ್ಳಿಕೋಟೆ, ಸಂಗಣ್ಣ ಸಾಹುಕಾರ ವೈಲಿ, ಮಹಾದೇವಪ್ಪ ಚಂದಾ, ಚನ್ನಕುಮಾರ ಚಿಂಚೋಳಿ ಇತರರಿದ್ದರು. ಅಮರಯ್ಯಸ್ವಾಮಿ ಜಾಲಿಬೆಂಚಿ ನಿರೂಪಿಸಿದರು. ರಘುನಂದನ ಶಾಸ್ತ್ರಿ ಸ್ವಾಗತಿಸಿದರು. ಬಸವರಾಜ ಭದ್ರಗೋಳ ವಂದಿಸಿದರು.

ಸಿದಗಂಗಾ ಮಠಕ್ಕೆ 150 ಚೀಲ ಅಕ್ಕಿ ದಾನ

ಕರೂರು: ಹಾಗಲೂರು ಗ್ರಾಮದ ಶ್ರೀ ಸಿದ್ಧಗಂಗಾ ಮಠದ ಹಳೆಯ ವಿದ್ಯಾರ್ಥಿಗಳು ಹಾಗೂ ಶ್ರೀಮಠದ ಭಕ್ತಾದಿಗಳು ಮತ್ತು ಹಿತೈಷಿಗಳು ಹಾಗಲೂರು ಗ್ರಾಮದಿಂದ ಸುಮಾರು 60ಕೆಜಿ ತೂಕದ 150 ಚೀಲ ಅಕ್ಕಿಯನ್ನು ದಾನವಾಗಿ ನೀಡಿದರು.

ಅಕ್ಕಿಯನ್ನು ಸ್ವೀಕರಿಸಿ ಮಾತನಾಡಿದ ಮಠದ ಶ್ರೀಗಳು, ಉತ್ತಮ ಕಾರ್ಯಕ್ಕೆ ಅಕ್ಕಿಯನ್ನು ನೀಡಿದ ಪ್ರತಿಯೊಬ್ಬರಿಗೂ ಹಾಗೂ ಅಕ್ಕಿಯನ್ನು ಸಾಗಿಸಲು ಉಚಿತ ಲಾರಿಯನ್ನು ನೀಡಿದ ಕುಟುಂಬದವರಿಗೆ ಹಾಗೂ ಪ್ರತ್ಯೇಕವಾಗಿ ಹಾಗೂ ಪರೋಕ್ಷವಾಗಿ ಸಹಾಯ ಸಹಕಾರ ನೀಡಿದ ಎಲ್ಲರಿಗೂ ಅಭಿನಂದನೆ ಸಲ್ಲಿಸಿದ್ದಾರೆ.



ಅಂಜನಾದ್ರಿ ದೇವಸ್ಥಾನಕ್ಕೆ ಭಕ್ತರ ಪಾದಯಾತ್ರೆ



ಕುರುಗೋಡು: ನಾಡಿನಾದ್ಯಂತ ಉತ್ತಮ ಮಳೆಯಾಗಿ ಜಲಾಶಯಗಳು ತುಂಬಿ ಅನ್ನದಾತರಿಗೆ ಒಳಿತಿಗಾಗಿ ತಾಲೂಕಿನ ಚಾನಳು ಗ್ರಾಮದ ಯುವಕರು ಹಾಗೂ ಗ್ರಾಮದವರು ಕೊಪ್ಪಳ ಜಿಲ್ಲೆಯ ಐತಿಹಾಸಿಕ ಆಂಜನೇಯ ಸ್ವಾಮಿ ಜನ್ಮಸ್ಥಳ ಅಂಜನಾದ್ರಿಯ ದೇಗುಲದವರೆಗೆ ಪಾದಯಾತ್ರೆ ಕೈಗೊಂಡಿದ್ದಾರೆ.

ಈ ವೇಳೆ ಮಾತನಾಡಿದ ಪಾದಯಾತ್ರೆ ಭಕ್ತರು ಮಾತನಾಡಿ, ನಾಡಿನಾದ್ಯಂತ ಉತ್ತಮ ಮಳೆಯಾಗಿ ಜಲಾಶಯಗಳು ತುಂಬಿ ಅನ್ನದಾತರಿಗೆ ಒಳಿತಗಿ ಒಳ್ಳೆಯ ಫಸಲು ಕೈಗೆ ಬರಲಿ ಎಂದು ದೇವರಲ್ಲಿ ಪ್ರಾರ್ಥನೆ ಸಲ್ಲಿಸುತ್ತೇವೆ. ನಮ್ಮ ಗ್ರಾಮದಿಂದ ಸಾಕಷ್ಟು ಸಂಖ್ಯೆಯಲ್ಲಿ ಅಂಜನಾದ್ರಿ ಬೆಟ್ಟಕ್ಕೆ ಕುರುಗೋಡು ಕಂಪ್ಲಿ ಗಂಗಾವತಿ ಮಾರ್ಗವಾಗಿ ನಡೆದುಕೊಂಡು ಹೋಗುತ್ತೇವೆ ಎಂದರು.

ಶಾಸಕರಿಂದ ಸರ್ಕಾರಿ ಶಾಲೆಗಳ ದತ್ತು

ಬಳ್ಳಾರಿ: ಗ್ರಾಮೀಣ ಭಾಗದ ಸರ್ಕಾರಿ ಶಾಲೆಗಳ ಮೂಲ ಸೌಕರ್ಯವನ್ನು ಮೇಲ್ದರ್ಜೆಗೇರಿಸಿ, ಖಾಸಗಿ ಶಾಲೆಗಳಿಗೆ ಪೈಪೋಟಿ ನೀಡುವ ಗುಣಮಟ್ಟದ ಶಿಕ್ಷಣವನ್ನು ನೀಡುವ ಉದ್ದೇಶದಿಂದ ಬಳ್ಳಾರಿ ಗ್ರಾಮೀಣ ವಿಧಾನಸಭಾ ಕ್ಷೇತ್ರದ ಶಾಸಕ ಬಿ. ನಾಗೇಂದ್ರ ಅವರು ವಿಶೇಷ ಹೆಜ್ಜೆ ಇಟ್ಟಿದ್ದಾರೆ.

ಈ ಹಿನ್ನೆಲೆಯಲ್ಲಿ ತಮ್ಮ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಿಂದ ಕ್ಷೇತ್ರದ ಬಂಡಿಹಟ್ಟಿ ಮತ್ತು ಎತ್ತಿನ ಬೂದಿಹಾಳ್ ಗ್ರಾಮದ ಸರ್ಕಾರಿ ಶಾಲೆಗಳ ಸಂಪೂರ್ಣ ಅಭಿವೃದ್ಧಿಗಾಗಿ ತಲಾ 10 ಲಕ್ಷ ರೂ. ವಿಶೇಷ ಅನುದಾನವನ್ನು ಬಿಡುಗಡೆಗೊಳಿಸಿದ್ದು, ಶುಕ್ರವಾರ ಈ ಶಾಲೆಗಳನ್ನು ದತ್ತು ಪಡೆದುಕೊಂಡರು.

ಆಯ್ಕೆಯಾದ ಎರಡು ಶಾಲೆಗಳ ಅಭಿವೃದ್ಧಿಗೆ ತಲಾ 10 ಲಕ್ಷ ರೂ. ಗಳಂತೆ ಒಟ್ಟು 20 ಲಕ್ಷ ರೂ. ಅನುದಾನ ಬಿಡುಗಡೆಗೊಳಿಸಿದ್ದಾರೆ. ಸರ್ಕಾರಿ ಶಾಲೆಗಳಲ್ಲಿನ ಮೂಲಸೌಕರ್ಯ ಕೊರತೆ ನೀಗಿಸುವುದು, ಡಿಜಿಟಲ್ ಕಲಿಕೆಗೆ ಉತ್ತೇಜನ ಮತ್ತು ಆಕರ್ಷಕ ಶಾಲಾ ವಾತಾವರಣ ನಿರ್ಮಾಣ ಮಾಡುವುದಾಗಿದೆ.



ಜನರಿಂದ ಶ್ಲಾಘನೆ: ಶಾಸಕರ ಈ ಜನಪರ ನಿರ್ಧಾರಕ್ಕೆ ಕ್ಷೇತ್ರದ ಸಾರ್ವಜನಿಕರು ಮತ್ತು ಪೋಷಕರಿಂದ ವ್ಯಾಪಕ ಶ್ಲಾಘನೆ ವ್ಯಕ್ತವಾಗಿದೆ. ಖಾಸಗಿ ಶಾಲೆಗಳ ವ್ಯಾಮೋಹದ ನಡುವೆ, ಸರ್ಕಾರಿ ಶಾಲೆಗಳನ್ನು ದತ್ತು ಪಡೆದು ಈ ಮಟ್ಟದ ಅನುದಾನ ನೀಡಿರುವುದು ಗ್ರಾಮೀಣ ಭಾಗದ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಪೂರಕವಾಗಲಿದೆ ಎಂದು ಸ್ಥಳೀಯರು ಹರ್ಷ ವ್ಯಕ್ತಪಡಿಸಿದರು.